ಶನಿವಾರ, ಫೆಬ್ರುವರಿ 25, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಲ್ಪಾ ಬೆಡಗು
ಮುಂಬೈನಲ್ಲಿ ಶುಕ್ರವಾರ ನಡೆದ 'ಬಿಗ್ ಇಂಪ್ಯಾಕ್ಟ್' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಪಾಲ್ಗೊಂಡಿದ್ದರು

080 4568 3008

RERA Registered: Karnataka RERA Registration Numbers:
Parkwest - Cedar - Tower 8: PRM/KA/RERA/1251/310/PR/180122/004645
Parkwest - Pine - Tower 9: PRM/KA/RERA/1251/310/PR/210216/003899
Parkwest - Oak - Tower 10: PRM/KA/RERA/1251/310/PR/210216/00390
For more details, visit: https://rera.karnataka.gov.in

Shapoorji Pallonji
Real Estate

#WHATSYOURREASON

40+ REASONS TO CHOOSE A LUXURIOUS LIFE AT PARKWEST 2.0.

Surrounded by nature and equipped with a host of superior amenities. The keys to your home at Parkwest 2.0 come with everything you need for a good life, right at your doorstep.

Stock image

BINNYPET, NEAR RAJAJI NAGAR

Book by 19th March, 2023 to avail exclusive benefits.

BOOK AT
5% PAYMENT. NO PRE-EMI
TILL SEPTEMBER 2026#

2.5 BHK ₹1.65CR.* 3 BHK ₹1.99CR.*
onwards

Shapoorji Pallonji
PARKWEST 2.0
Binnypet, Bengaluru

ಪಾರ್ಕ್‌ವೆಸ್ಟ್ 2.0
CREDAI BENGALURU

Note: The project development and marketing is managed by Shapoorji Pallonji Development Managers Pvt. Ltd. (RERA Karnataka Registration Number PRM/KA/RERA/1251/310/PR/180122/004645) in collaboration with the promoter, Relationship Properties Pvt. Ltd. Please note that the project is being developed in phases and hence a few of the common amenities and facilities, will be completed along with the completion of all phases in the project. *The starting price mentioned is for a 2.5 BHK Series 3 on the 19th floor and 3 BHK – Series 1 on the first floor of Cedar Tower (T8) and is based on the Construction Linked Payment plan. Other charges like clubhouse development, advance building maintenance charges, corpus fund building maintenance, campus maintenance corpus fund, clubhouse corpus fund towards association, reimbursement of legal expenses incurred and Government levies/taxes are extra. #This is a flexi pay and construction linked Bank Subvention Scheme offered by Yes Bank having Pre-EMI holiday till 30th September 2026. This scheme is for select units in Cedar Tower (T8) for a limited period and is subject to eligibility. The customer contribution of 20% in addition to the initial contribution of 5% will be payable based on payment schedule/plan. Other Terms & Conditions apply. Please contact us to know more. The projects herein are financed by and mortgaged to HDFC Ltd. The requisite NOC from HDFC Ltd., for sale of flats, shall be provided.

ಶನಿವಾರ, ಫೆಬ್ರುವರಿ 25, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 56 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ವನ್ಯಜೀವಿಗಳ ಜಾಡು ಹಿಡಿದು ಅವುಗಳನ್ನು ಕ್ಯಾಮೆರಾ ಕಣ್ಣಿನಲ್ಲಿ ಸೆರೆ ಹಿಡಿಯುವ ಹೆಂಗಳೆಯರ ಕಥನ ಇಲ್ಲಿದೆ...



ಪ್ರಜಾ ಮತ – ಜನತಂತ್ರದ ಹಬ್ಬ
'ಚುನಾವಣೆ ಘೋಷಣೆಗೂ ಮುನ್ನ ಆಮಿಷ ತಡೆ ಕಷ್ಟ'

ಬಿಬಿಎಂಪಿ: ಎಲ್ಲ ಸ್ವತ್ತುಗಳಿಗೆ ಖಾತಾ 4
'ಮನೆ- ಮಠ ಬಿಟ್ಟು ಪಕ್ಷ ಕಟ್ಟಿದ ಬಿಎಸ್‌ವೈ' 8

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,463	17,466	₹57,820 (ಬೆಂಗಳೂರು)	₹66,500 (ಬೆಂಗಳೂರು)	82.75

ರಾಜಕೀಯ ಮೇಲಾಟಕ್ಕೆ ಕಾರಣವಾದ 5 ವರ್ಷಗಳು • 3 ಮುಖ್ಯಮಂತ್ರಿಗಳನ್ನು ಕಂಡ ರಾಜ್ಯ

15ನೇ ವಿಧಾನಸಭೆ: ಮುಗಿದ ಅಧ್ಯಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಹಲವು ನಾಟಕೀಯ ಏಳುಬೀಳುಗಳನ್ನು ಕಂಡ 15ನೇ ವಿಧಾನಸಭೆಯ ಕೊನೆಯ ಅಧಿವೇಶನಕ್ಕೆ ಶುಕ್ರವಾರ ತೆರೆಬಿದ್ದಿತು.

ವಿಧಾನಸಭೆಯ ಸಾರ್ವತ್ರಿಕ ಚುನಾವಣೆಗೆ ಇನ್ನು ಒಂದು ತಿಂಗಳಲ್ಲಿ ಮುಹೂರ್ತ ನಿಗದಿಯಾಗಲಿದ್ದು, ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದ ಕೊನೆಯ ಅಧಿವೇಶನ ಇದಾಗಿದೆ. ಚುನಾವಣೆ ನಡೆದು, ಹೊಸ ಶಾಸಕರು ಚುನಾಯಿತರು ಪ್ರಮಾಣ ವಚನ ಸ್ವೀಕರಿಸಿದ ಬಳಿಕ 16ನೇ ವಿಧಾನಸಭೆ ಅಸ್ತಿತ್ವಕ್ಕೆ ಬರಲಿದೆ. ಅಲ್ಲಿಯವರೆಗೆ ಕಲಾಪ ನಡೆಯುವುದಿಲ್ಲ. ಅಂತಿಮ ದಿನದ ಕಲಾಪವು ನಾಲ್ಕು ಮುಕ್ಕಾಲು ವರ್ಷಗಳ ಇತಿಹಾಸವನ್ನು ಮೆಲುಕು ಹಾಕಲು ವೇದಿಕೆಯಾಯಿತು. ಹಲವರಿಗೆ ಇದು ಕೊನೆಯ ಕಲಾಪವಾಗಿದ್ದು, ಭಾವುಕ ಕ್ಷಣಗಳಿಗೂ ಸಾಕ್ಷಿಯಾಯಿತು.

ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಬಿಜೆಪಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ವಿರೋಧ ಪಕ್ಷದ ಉಪನಾಯಕ ಯು.ಟಿ. ಖಾದರ್, ಜೆಡಿಎಸ್ ಉಪ ನಾಯಕ ಬಂಡೆಪ್ಪ ಕಾಶೆಂಪೂರ ಸೇರಿ ಹಲವರು ಮಾತನಾಡುತ್ತಲೇ, ಭಾವುಕತೆಗೆ ಒಳಗಾಗಿ ಕೆಲಹೊತ್ತು ಮೌನಕ್ಕೆ ಶರಣಾದದ್ದು ನಡೆಯಿತು.

ಕಲಾಪದ ಬಳಿಕ ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಅವರು ವಿಧಾನಸೌಧದಿಂದ ಹೊರಬಂದರು. ಲಾಲಾಜಿ ಮೆಂಡನ್, ಕೆ.ಜಿ.ಬೋಪಯ್ಯ, ಆರಗ ಜ್ಞಾನೇಂದ್ರ, ಮಾಡಾಳ್ ವಿರೂಪಾಕ್ಷಪ್ಪ, ಮುರುಗೇಶ ನಿರಾಣಿ, ಪ್ರೀತಂಗೌಡ ಇದ್ದರು

ಬಿಜೆಪಿ ಶಾಸಕರಾದ ಬಿ.ಎಸ್. ಯಡಿಯೂರಪ್ಪ ಮತ್ತು ಮಾಡಾಳು ವಿರೂಪಾಕ್ಷಪ್ಪ ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಅವರು ಈಗಾಗಲೇ ಪ್ರಕಟಿಸಿದ್ದಾರೆ.

8ನೇ ಪುಟ ನೋಡಿ

ದೇವೇಗೌಡ, ಸಿದ್ದರಾಮಯ್ಯ ಹೊಗಳಿದ ಬಿಎಸ್‌ವೈ

ಬೆಂಗಳೂರು: ತಮ್ಮ ರಾಜಕೀಯ ಜೀವನದ ಕೊನೆಯ ಅಧಿವೇಶನದ ಕೊನೆಯ ದಿನ ಬಿಜೆಪಿಯ ಬಿ.ಎಸ್.ಯಡಿಯೂರಪ್ಪ ಭಾವುಕರಾಗಿ ಮಾತನಾಡಿದರು. 'ಸುದೀರ್ಘ ರಾಜಕಾರಣ, ಹೋರಾಟಗಾರನಾಗಿ, ಮುಖ್ಯಮಂತ್ರಿಯಾಗಿ ಮಾಡಿದ ಕೆಲಸ ತೃಪ್ತಿ ನೀಡಿದೆ' ಎಂದು ಹೇಳಿದರು.

ರಾಜಕೀಯವನ್ನು ಬದಿಗಿಟ್ಟು ಮಾತನಾಡಿದ ಅವರು ಎಚ್.ಡಿ.ದೇವೇಗೌಡ, ಸಿದ್ದರಾಮಯ್ಯ ಮತ್ತು ಬಸವರಾಜ ಬೊಮ್ಮಾಯಿ ಅವರ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದರು.

2018ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರೂ ಬಹುಮತ ಸಾಬೀತು ಮಾಡಲಾಗದೇ ರಾಜೀನಾಮೆ ನೀಡುವ ಪರಿಸ್ಥಿತಿ ಸೃಷ್ಟಿಯಾಗಿತ್ತು. ರಾಜೀನಾಮೆಗೆ ಮುನ್ನ ಸದನದಲ್ಲಿ ಮಾತನಾಡಿದ್ದ ಯಡಿಯೂರಪ್ಪ, 'ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸಲು ಮುಂದಿನ ದಿನಗಳನ್ನು ಮೀಸಲಿಡುತ್ತೇನೆ' ಎಂದು ಅಬ್ಬರಿಸಿದ್ದರು.

ಕೊನೆಯ ದಿನದ ಕಲಾಪದಲ್ಲಿ ಮಾತನಾಡುವಾಗ ಆ ಸಿಟ್ಟನ್ನು ಮರೆತಿದ್ದ ಯಡಿಯೂರಪ್ಪ, 'ಮಾಜಿ ಪ್ರಧಾನಿ ದೇವೇಗೌಡರು ಸದನದಲ್ಲಿರುವ ಪ್ರತಿಯೊಬ್ಬರಿಗೂ ಆದರ್ಶಪ್ರಾಯ ರಾಜಕಾರಣಿ. ಇಂತಹ ಇಳಿ ವಯಸ್ಸಿನಲ್ಲೂ ಅವರು ನಾಡಿನ ನೆಲ, ಜಲ, ಭಾಷೆ ಮತ್ತು ರೈತರ ಬಗ್ಗೆ ಚಿಂತನೆ ನಡೆಸುತ್ತಾ, ಮಾರ್ಗದರ್ಶನ ನೀಡುತ್ತಲೇ ಬಂದಿದ್ದಾರೆ' ಎಂದು ಬಣ್ಣಿಸಿದರು.

ಸಿದ್ದರಾಮಯ್ಯ ಅವರು ವಿರೋಧ ಪಕ್ಷದ ನಾಯಕರಾಗಿ ಸರ್ಕಾರವನ್ನು ಎಚ್ಚರಿಸುವ ಕೆಲಸವನ್ನು ಸಮರ್ಥವಾಗಿ ಮಾಡಿದ್ದಾರೆ ಎಂದರು.

'ಈ ಬಾರಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಆದರೆ, ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಶ್ರಮಿಸುತ್ತೇನೆ. ಇದಕ್ಕಾಗಿ ಒಂದು ಕ್ಷಣವೂ ವ್ಯರ್ಥ ಮಾಡದೇ ರಾಜ್ಯದ ಉದ್ದಗಲಕ್ಕೂ ಪ್ರವಾಸ ಮಾಡುತ್ತೇನೆ. ಬಿಜೆಪಿ ಅಧಿಕಾರಕ್ಕೆ ಬರುವುದು ನಿಶ್ಚಿತ' ಎಂದು ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು. 'ಬಸವರಾಜ ಬೊಮ್ಮಾಯಿ ಅವರೂ ಸಾಕಷ್ಟು ಒಳ್ಳೆಯ ಕೆಲಸ ಮಾಡಿದ್ದಾರೆ' ಎಂದು ಯಡಿಯೂರಪ್ಪ ಹೇಳಿದರು.

ನೃತ್ಯ ಪ್ರದರ್ಶನ – ಕಲ್ಯಾಣ ಕರ್ನಾಟಕ ಉತ್ಸವದ ಪ್ರಯುಕ್ತ ಕಲಬುರಗಿಯ ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ ಒಡಿಶಾದ ಪ್ರಿನ್ಸ್ ಡ್ಯಾನ್ಸ್ ತಂಡದ ಕಲಾವಿದರು ನೃತ್ಯ ಪ್ರದರ್ಶಿಸಿದರು
–ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಹಗರಣಗಳನ್ನು ಮುಚ್ಚಿಕೊಳ್ಳಲು ಯತ್ನ: ಸಿದ್ದರಾಮಯ್ಯ

'ಬೊಮ್ಮಾಯಿಯಿಂದ ಸುಳ್ಳು ಆರೋಪ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸರ್ಕಾರದ ವಿರುದ್ಧದ ಶೇಕಡಾ 40ರಷ್ಟು ಕಮಿಷನ್ ಆರೋಪ ಹಾಗೂ ಸಾಲು ಸಾಲಾಗಿ ಹೊರಬರುತ್ತಿರುವ ಹಗರಣಗಳನ್ನು ಮುಚ್ಚಿಕೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಮ್ಮ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅರ್ಕಾವತಿ ಬಡಾವಣೆ ನಿರ್ಮಾಣ ಪ್ರಾರಂಭವಾದದ್ದು 2003ರಲ್ಲಿ. ನಾನು ಅಧಿಕಾರಕ್ಕೆ ಬರುವ ಮೊದಲೇ 2,750 ಎಕರೆ ಜಮೀನು ಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಲಾಗಿತ್ತು. ನಂತರ 1,919 ಎಕರೆ 13 ಗುಂಟೆ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಅದನ್ನು ಪ್ರಶ್ನಿಸಿ ಕೆಲವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಜಗದೀಶ ಶೆಟ್ಟರ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲೇ ಹೈಕೋರ್ಟ್ ಆದೇಶದಂತೆ ಭೂಸ್ವಾಧೀನ ಪ್ರಕ್ರಿಯೆ ಕುರಿತು ಪರಿಶೀಲನೆಗೆ ಅಧಿಕಾರಿಗಳ ತಂಡ ರಚಿಸಲಾಗಿತ್ತು' ಎಂದರು.

6ನೇ ಪುಟ ನೋಡಿ

ಒಳ ಪುಟ

ಜೀ: ದಿವಾಳಿ ಪ್ರಕ್ರಿಯೆಗೆ ತಡೆ 14

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅನ್ನಭಾಗ್ಯದಡಿ ತಲಾ 10 ಕೆ.ಜಿ ಅಕ್ಕಿ: ಕಾಂಗ್ರೆಸ್ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳ ಪ್ರತೀ ಸದಸ್ಯರಿಗೆ ತಿಂಗಳಿಗೆ ತಲಾ 10 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು ಎಂದು ಕಾಂಗ್ರೆಸ್ ಘೋಷಿಸಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಈ ಘೋಷಣೆ ಮಾಡಿದರು.

ಗೃಹಲಕ್ಷ್ಮಿ ಯೋಜನೆಯಡಿ ಕುಟುಂಬದ ಯಜಮಾನಿಗೆ ಮಾಸಿಕ ₹ 2,000 ನೆರವು ಹಾಗೂ 200 ಯುನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಸುವ ಗೃಹಜ್ಯೋತಿ ಹೆಸರಿನಲ್ಲಿ 'ಗ್ಯಾರಂಟಿ' ಭರವಸೆಗಳನ್ನು ಕಾಂಗ್ರೆಸ್ ಈ ಹಿಂದೆ ಪ್ರಕಟಿಸಿತ್ತು. ಮೂರನೇ 'ಗ್ಯಾರಂಟಿ' ಭರವಸೆಯಾಗಿ ತಲಾ 10 ಕೆ.ಜಿ ಅಕ್ಕಿ ವಿತರಣೆಯನ್ನು ಪ್ರಕಟಿಸಿದೆ.

ಸಿದ್ದರಾಮಯ್ಯ ಮಾತನಾಡಿ, 'ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಜಾರಿಗೊಳಿಸಿದ ಆಹಾರ ಭದ್ರತಾ ಕಾಯ್ದೆಯ ಅಡಿಯಲ್ಲಿ ಕೇಂದ್ರ ಸರ್ಕಾರವು ಪ್ರತೀ ಕೆ.ಜಿ.ಗೆ ₹ 3ರ ದರದಲ್ಲಿ ಅಕ್ಕಿ ಒದಗಿಸುತ್ತಿತ್ತು. 2013ರಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಬಿಪಿಎಲ್ ಕುಟುಂಬಗಳಿಗೆ ಪ್ರತೀ ಕೆ.ಜಿ.ಗೆ ₹ 1ರ ದರದಲ್ಲಿ 30 ಕೆ.ಜಿ ಅಕ್ಕಿ ವಿತರಿಸಲಾಗುತ್ತಿತ್ತು. ನಂತರ ಉಚಿತವಾಗಿ ಪ್ರತಿ ಸದಸ್ಯರಿಗೆ ತಲಾ 7 ಕೆ.ಜಿ ವಿತರಿಸಲಾಗುತ್ತಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ಅದನ್ನು 5 ಕೆ.ಜಿಗೆ ಇಳಿಸಿದೆ' ಎಂದರು.

'ಈಗ ಅಕ್ಕಿ ವಿತರಣೆಗೆ ₹ 4,000 ಕೋಟಿಯಿಂದ ₹ 5,000 ಕೋಟಿಯವರೆಗೆ ವೆಚ್ಚವಾಗುತ್ತಿದೆ. ತಲಾ 10 ಕೆ.ಜಿ ವಿತರಿಸಿದರೆ ಇನ್ನೂ ₹ 4,000 ಕೋಟಿ ಹೆಚ್ಚಿನ ವೆಚ್ಚವಾಗಬಹುದು. ರಾಜ್ಯದಲ್ಲಿ ಯಾರೂ ಹಸಿವಿನಿಂದ ಬಳಲಬಾರದು ಎಂಬುದು ಕಾಂಗ್ರೆಸ್ ಪಕ್ಷದ ಉದ್ದೇಶ' ಎಂದು ಹೇಳಿದರು.

ಡಿ.ಕೆ. ಶಿವಕುಮಾರ್ ಮಾತನಾಡಿ, 'ನಾವು ಸದನದಲ್ಲಿ ಇಲ್ಲದ ಸಮಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸುಳ್ಳು ಆರೋಪ ಮಾಡಿದ್ದಾರೆ. ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆದಿದ್ದರೆ ವಿರೋಧ ಪಕ್ಷದಲ್ಲಿದ್ದ ಇವರು ಆಗ ಕಡಲೆಪುರಿ ತಿನ್ನುತ್ತಿದ್ದರೆ? ಅಧಿಕಾರಕ್ಕೆ ಬಂದು ಮೂರು ವರ್ಷಗಳಾದರೂ ಏಕೆ ಕ್ರಮ ಜರುಗಿಸಿಲ್ಲ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಪಕ್ಷದಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರ ನಡುವೆ ಜಗಳವಾಗುತ್ತಿದೆ, ಕಾಂಗ್ರೆಸ್‌ಗೆ ಮತ ಹಾಕಿದರೆ ಹೈಕಮಾಂಡ್‌ಗೆ ಎಟಿಎಂ ಕೊಟ್ಟಂತೆ' ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, 'ಜಗಳವಾಡಲು ನಾವೇನು ಕುಸ್ತಿ ಅಖಾಡದಲ್ಲಿದ್ದೇವಾ? ಇವರ ಪಕ್ಷದಲ್ಲಿ ಏನೇನು ನಡೆದಿದೆ ಎಂದು ಬಿಜೆಪಿ ಶಾಸಕರೇ ಹೇಳಿಲ್ಲವೆ' ಎಂದು ಕೇಳಿದರು.

ಪ್ರಮುಖ ಆರ್ಥಿಕ ಕ್ಷೇತ್ರಗಳಿಗೆ ಪೆಟ್ಟು ನೀಡಲು ಸಿದ್ಧತೆ

ರಷ್ಯಾ ಮೇಲೆ ಹೊಸ ನಿರ್ಬಂಧ: ಸಜ್ಜಾದ ಜಿ–7

ಬೆಂಗಳೂರು (ರಾಯಿಟರ್ಸ್): ಉಕ್ರೇನ್ ಮೇಲಿನ ಆಕ್ರಮಣಕ್ಕೆ ವರ್ಷ ತುಂಬಿದ ಬೆನ್ನಲ್ಲೇ ರಷ್ಯಾವನ್ನು ಗುರಿಯಾಗಿಸಿಕೊಂಡು ಮತ್ತಷ್ಟು ದೂರಗಾಮಿ ಮತ್ತು ಹೊಸ ನಿರ್ಬಂಧಗಳನ್ನು ಹೇರಲು ಜಿ–7 ರಾಷ್ಟ್ರಗಳು ಸಿದ್ಧತೆ ಮಾಡಿಕೊಂಡಿವೆ.

ರಷ್ಯಾದ ಯುದ್ಧಕ್ಕೆ ನೆರವು ನೀಡುವ ಇತರ ದೇಶಗಳು ಮತ್ತು ಸಂಸ್ಥೆಗಳನ್ನು ಗುರಿಯಾಗಿಸಿಯೂ ಪ್ರಮುಖ ಆರ್ಥಿಕ ಕ್ಷೇತ್ರಗಳಿಗೆ ಪೆಟ್ಟು ನೀಡಲು ಹೊಸ ನಿರ್ಬಂಧಗಳನ್ನು ಹೆಣೆದಿವೆ.

ಆಕ್ರಮಣಕ್ಕೆ ವರ್ಷ ತುಂಬಿದ ನಿಮಿತ್ತ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ವರ್ಚುವಲ್ ಮೂಲಕ ಭೇಟಿಯಾಗಲಿರುವ ಸಿರಿವಂತ ರಾಷ್ಟ್ರಗಳ ಗುಂಪಿನ ನಾಯಕರು ಹೊಸ ನಿರ್ಬಂಧಗಳ ಪ್ಯಾಕೇಜ್ ಘೋಷಿಸುವ ನಿರೀಕ್ಷೆ ಇದೆ.

ಈ ಬಗ್ಗೆ ಹೆಚ್ಚಿನ ವಿವರ ನೀಡಲು ನಿರಾಕರಿಸಿದ ಜಿ 7 ರಾಷ್ಟ್ರಗಳ ಅಧ್ಯಕ್ಷ ಜಪಾನ್ ಪ್ರಧಾನಿ ಫ್ಯೂಮಿಯೊ ಕಿಷಿದಾ ಅವರು 'ರಷ್ಯಾ ತನ್ನ ಕಠಿಣ ನಿಲುವು ಬದಲಾಯಿಸಲು ನಿರಾಕರಿಸುತ್ತಿದೆ. ರಷ್ಯಾದ ವಿರುದ್ಧ ಹೊಸ ನಿರ್ಬಂಧಗಳನ್ನು ಒಟ್ಟಿಗೆ ಹೇರುತ್ತೇವೆ. ನಮ್ಮ ಒಗ್ಗಟ್ಟು ತೋರಿಸುತ್ತೇವೆ' ಎಂದು ಹೇಳಿದರು.

ಭಾರತದ ಅಧ್ಯಕ್ಷತೆಯಲ್ಲಿ ನಡೆಯುತ್ತಿರುವ ಜಿ 20 ರಾಷ್ಟ್ರಗಳ ಸಭೆಯಲ್ಲೂ ಜಿ 7 ರಾಷ್ಟ್ರಗಳ ಹಣಕಾಸು ಸಚಿವರು, ರಷ್ಯಾ ವಿರುದ್ಧ ಕಠಿಣ ನಿರ್ಬಂಧಗಳನ್ನು ಹೇರುವಂತೆ ಮತ್ತು ಯುದ್ಧ ಪೀಡಿತ ಉಕ್ರೇನ್‌ಗೆ ಹೆಚ್ಚಿನ ಆರ್ಥಿಕ ನೆರವು ನೀಡುವಂತೆ ಒತ್ತಾಯಿಸಿದ್ದಾರೆ.

ವಿಶ್ವಸಂಸ್ಥೆಯ ಕಾರ್ಯಸಾಧಕತೆ ಪ್ರಶ್ನಿಸಿದ ಭಾರತ

ನವದೆಹಲಿ: ವರ್ಷ ಪೂರೈಸಿದ ಉಕ್ರೇನ್ ಯುದ್ಧ ಕೊನೆಗೊಳಿಸುವ ಸಲುವಾಗಿ ಸೇನೆ ಹಿಂಪಡೆಯಲು ರಷ್ಯಾದ ಮೇಲೆ ಒತ್ತಡ ಹೇರುವ ವಿಶ್ವಸಂಸ್ಥೆಯ ನಿರ್ಣಯದಿಂದ ಭಾರತ ಹೊರಗುಳಿಯಿತು. ಉಭಯ ರಾಷ್ಟ್ರಗಳ ಸಂಘರ್ಷದಲ್ಲಿ ಭಾರತ ಮತ್ತೊಮ್ಮೆ ತಟಸ್ಥ ನಿಲುವು ತೆಗೆದುಕೊಂಡಿತು. ಜಾಗತಿಕ ಶಾಂತಿ ಕಾಪಾಡುವಲ್ಲಿ ವಿಶ್ವಸಂಸ್ಥೆಯ ಕಾರ್ಯಸಾಧಕತೆಯನ್ನೂ ಭಾರತ ಪ್ರಶ್ನಿಸಿತು.

ಆದಾಗ್ಯೂ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಶುಕ್ರವಾರ 'ಉಕ್ರೇನ್‌ನಲ್ಲಿ ಸಮಗ್ರ, ನ್ಯಾಯಸಮ್ಮತ ಮತ್ತು ಶಾಶ್ವತ ಶಾಂತಿ' ಆದಷ್ಟು ಶೀಘ್ರ ಸ್ಥಾಪಿಸಬೇಕೆಂದು ಉಕ್ರೇನ್ ಮತ್ತು ಅದರ ಮಿತ್ರ ರಾಷ್ಟ್ರಗಳು ನಿರ್ಣಯ ಮಂಡಿಸಿದವು. 193 ಸದಸ್ಯ ಬಲದ ವಿಶ್ವಸಂಸ್ಥೆಯಲ್ಲಿ 141 ರಾಷ್ಟ್ರಗಳ ಬೆಂಬಲದೊಂದಿಗೆ ನಿರ್ಣಯ ಅಂಗೀಕಾರವಾಯಿತು. ನಿರ್ಣಯದ ವಿರುದ್ಧ ಏಳು ರಾಷ್ಟ್ರಗಳು ಮಾತ್ರ ಮತ ಚಲಾಯಿಸಿದವು.

ಮತದಾನದಿಂದ ಹೊರಗುಳಿದ ಭಾರತದ ನಿಲುವನ್ನೇ ಪಾಕಿಸ್ತಾನ, ಚೀನಾ ಮತ್ತು ಇತರ 29 ರಾಷ್ಟ್ರಗಳು ಅನುಸರಿಸಿದವು. ಉಕ್ರೇನ್ ಅಷ್ಟೇ ಅಲ್ಲ, ಫ್ರಾನ್ಸ್, ಜರ್ಮನಿ ಮತ್ತು ಇತರ ಪಾಶ್ಚಿಮಾತ್ಯ ರಾಷ್ಟ್ರಗಳು ಹಾಗೂ ಐರೋಪ್ಯ ಒಕ್ಕೂಟವು ನಿರ್ಣಯ ಬೆಂಬಲಿಸುವಂತೆ ಭಾರತಕ್ಕೆ ಮನವಿ ಮಾಡಿಕೊಂಡಿದ್ದವು.

ಭಾರತದ ನಿರ್ಧಾರಕ್ಕೆ ವಿವರಣೆ ನೀಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ರಾಯಭಾರಿ ರುಚಿರಾ ಕಾಂಬೋಜ್ ಅವರು, 'ವಿಶ್ವಸಂಸ್ಥೆಯ ವ್ಯವಸ್ಥೆ ಮತ್ತು ಅದರ ಪ್ರಮುಖ ಅಂಗವೆನಿಸಿರುವ ಭದ್ರತಾ ಮಂಡಳಿಯು 1945ರ ವಿಶ್ವ ನಿರ್ಮಾಣ ಆಧಾರದ ಮೇಲೆ ರಚಿತವಾಗಿದೆ. ಸಮಕಾಲೀನ ಸವಾಲುಗಳನ್ನು ಎದುರಿಸಲು, ಜಾಗತಿಕ ಶಾಂತಿ ಮತ್ತು ಸುರಕ್ಷತೆ ಕಾಪಾಡಲು ಇದು ನಿಷ್ಪರಿಣಾಮಕಾರಿಯಾಗಿಲ್ಲವೇ? ರಷ್ಯಾ– ಉಕ್ರೇನ್ ಸಂಘರ್ಷ ಕೊನೆಗಾಣಿಸಲು ಉಭಯತ್ರರು ಒಪ್ಪುವ ಪರಿಹಾರ ಮಾರ್ಗದ ಹತ್ತಿರ ನಾವು ತಲುಪಿದ್ದೀವಾ' ಎಂದು ಪ್ರಶ್ನಿಸಿದರು.

ಸಂಕಷ್ಟದ ನಡುವೆಯೂ ರವಿಕುಮಾರ್ ಸೇವೆ

ಸೈನಿಕರಿಗೆ ನಿತ್ಯ ಉಚಿತ ಊಟ

● ಆದಿತ್ಯ ಕೆ.ಎ.

ಬೆಂಗಳೂರು: ಜೀವನ ನಿರ್ವಹಣೆಗೆ ಫಾಸ್ಟ್‌ಫುಡ್ ನಡೆಸುವ ರವಿಕುಮಾರ್ ಅವರು ದಿನದಲ್ಲಿ ಎರಡು ಹೊತ್ತು ಯೋಧರಿಗೆ ಉಚಿತವಾಗಿ ತಿಂಡಿ ಹಾಗೂ ಊಟ ನೀಡುವ ಮೂಲಕ ಸಾಮಾಜಿಕ ಕಳಕಳಿಯ ಕಾರ್ಯ ನಡೆಸುತ್ತಿದ್ದಾರೆ.

ದೇವನಹಳ್ಳಿ ರಸ್ತೆಯ ಬೇಗೂರು ಹಾಗೂ ಯಲಹಂಕದಲ್ಲಿ 'ಧನ್ವಿತ್ ಫಾಸ್ಟ್ ಫುಡ್' ನಡೆಸುತ್ತಿರುವ ರವಿಕುಮಾರ್, ಯೋಧರಿಗೆ ಅನ್ನದಾಸೋಹ ನಡೆಸುತ್ತಿದ್ದಾರೆ. ವಾಹನದ ಮೇಲೂ ದೊಡ್ಡದಾಗಿ ದೇಶ ಕಾಯುವ ಯೋಧರಿಗೆ ಉಚಿತ ಊಟ ಎಂದೇ ಬರೆಸಿಕೊಂಡಿದ್ದಾರೆ.

ರವಿಕುಮಾರ್ ಅವರದ್ದು ದೊಡ್ಡಬಳ್ಳಾಪುರದ ಚಿಕ್ಕಮಧುರೆ ಗ್ರಾಮ. ಬದುಕು ಅರಸಿ ರಾಜಧಾನಿಗೆ ಬಂದಿದ್ದ ಅವರು, ಆರಂಭದಲ್ಲಿ ಹೂವಿನ ವ್ಯಾಪಾರ ನಡೆಸುತ್ತಿದ್ದರು. ಅದು ಕೈಹಿಡಿಯಲಿಲ್ಲ; ನಷ್ಟ ಅನುಭವಿಸಿದ್ದರು. ಬಳಿಕ ಆಯ್ಕೆ ಮಾಡಿಕೊಂಡಿದ್ದು ಫಾಸ್ಟ್‌ಫುಡ್ ವ್ಯಾಪಾರ.

ಬೆಂಗಳೂರಿನಲ್ಲಿ ಸೇನೆಗೆ ಸಂಬಂಧಿಸಿದಂತೆ ಸಾಕಷ್ಟು ತರಬೇತಿ ಕೇಂದ್ರಗಳಿವೆ. ಅಲ್ಲಿ ಹೊರ ರಾಜ್ಯ ಹಾಗೂ ಜಿಲ್ಲೆಗಳ ಯೋಧರು ಕೆಲಸ ಮಾಡುತ್ತಿದ್ದಾರೆ. ಕಚೇರಿ ಕೆಲಸಕ್ಕೆ ಸಂಬಂಧಿಸಿದಂತೆಯೂ ಸೈನಿಕರು ನಗರಕ್ಕೆ ಬರುತ್ತಾರೆ. ಅವರು ನಮ್ಮ ಹೋಟೆಲ್ ಹಾಗೂ ವಾಹನದ ಬಳಿಗೆ ಬಂದರೆ ಬೆಳಿಗ್ಗೆ ಸಮಯದಲ್ಲಿ ಇಡ್ಲಿ, ಪುಲಾವ್, ಚಿತ್ರಾನ್ನ, ಪೂರಿ ಹಾಗೂ ಮಧ್ಯಾಹ್ನ ಅನ್ನ-ಸಾಂಬಾರ್, ಹಪ್ಪಳ ಉಚಿತವಾಗಿ ಸಿಗಲಿದೆ. ಊಟ ಮಾಡಿದ ಯೋಧರು ಹಣ ತೆಗೆದುಕೊಳ್ಳುವಂತೆ ಬಲವಂತ ಮಾಡುತ್ತಾರೆ. ಅವರಿಗೆ ಕೈಮುಗಿದು ಹಣ ಪಡೆಯದೇ ಕಳುಹಿಸುತ್ತೇನೆ. ಸೈನಿಕರು ಜೀವ, ಜೀವನ ಎರಡನ್ನೂ ಲೆಕ್ಕಿಸದೇ ಗಡಿ ಕಾಯುತ್ತಾರೆ. ಅವರಿಗಾಗಿ ಇದು ಪುಟ್ಟ ಸೇವೆ' ಎಂದು ರವಿಕುಮಾರ್ 'ಪ್ರಜಾವಾಣಿ'ಗೆ ಹೇಳಿದರು.

ರವಿಕುಮಾರ್ ಅವರ ಫಾಸ್ಟ್‌ಫುಡ್ ವಾಹನ

ತಿಂಗಳಿಗೆ ಒಮ್ಮೆಯಾದರೂ ಬಿಎಂಟಿಸಿ ಬಸ್ ಚಾಲಕರಿಗೂ ಉಚಿತ ಊಟ, ತಿಂಡಿ ನೀಡುವ ಇಚ್ಛೆಯಿದೆ. ಆದರೆ, ಆರ್ಥಿಕ ಸಂಕಷ್ಟದಿಂದ ಅದು ಸದ್ಯಕ್ಕೆ ಸಾಧ್ಯವಾಗಿಲ್ಲ.

ರವಿಕುಮಾರ್, ಫಾಸ್ಟ್‌ಫುಡ್ ವ್ಯಾಪಾರಿ

ಸೈನಿಕರ ಮೇಲೆ ಕಳಕಳಿ: 'ಚಿಕ್ಕಂದಿನಿಂದಲೂ ಯೋಧರ ಮೇಲೆ ನನಗೆ ಅತೀವ ಪ್ರೀತಿ. ಕುಟುಂಬ ತೊರೆದು ವರ್ಷಗಟ್ಟಲೇ ಚಳಿ, ಬಿಸಿಲು ಲೆಕ್ಕಿಸದೆ ಮಾಡುವ ಸೇವೆಯ ಬಗ್ಗೆಯೂ ಅರಿವಿದೆ. ನಾನೂ 1999ರಲ್ಲಿ ಸೇನೆಗೆ ಆಯ್ಕೆಯಾಗಿದ್ದೆ. ಆದರೆ, ಅಜ್ಜಿ ನನ್ನನ್ನು ಜಮ್ಮು-ಕಾಶ್ಮೀರಕ್ಕೆ ತೆರಳಲು ಬಿಡಲಿಲ್ಲ. ಈಗ ಪ್ರತಿನಿತ್ಯ ಎಷ್ಟು ಸೈನಿಕರು ಬಂದರೂ ಊಟದ ವ್ಯವಸ್ಥೆ ಮಾಡುತ್ತೇನೆ' ಎಂದರು.

ಬೇಗೂರು ಬಳಿ ನಡೆಸುತ್ತಿರುವ ಹೋಟೆಲ್‌ಗೆ ನಿತ್ಯ ₹ 700 ಬಾಡಿಗೆ ಪಾವತಿಸುತ್ತಿರುವ ಅವರು, ₹ 3.80 ಲಕ್ಷದಲ್ಲಿ ವಾಹನ ಖರೀದಿಸಿದ್ದಾರೆ.

ಡಿ.ಕೆ.ಶಿವಕುಮಾರ್ ವಿರುದ್ಧದ ಆದಾಯ ಮೀರಿ ಆಸ್ತಿ ಗಳಿಕೆ ಪ್ರಕರಣ

ತಡೆಯಾಜ್ಞೆ ತೆರವಿಗೆ ಸಿಬಿಐ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಕನಕಪುರ ಶಾಸಕ ಡಿ.ಕೆ. ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಗೆ ನೀಡಲಾಗಿರುವ ಮಧ್ಯಂತರ ತಡೆಯಾಜ್ಞೆ ತೆರವುಗೊಳಿಸಬೇಕು' ಎಂದು ಕೋರಿ ಸಿಬಿಐ ಹೈಕೋರ್ಟ್‌ಗೆ ಮನವಿ ಮಾಡಿದೆ.

ಸಿಬಿಐ ಪರ ವಕೀಲ ಪಿ.ಪ್ರಸನ್ನಕುಮಾರ್ ಈ ಕುರಿತಂತೆ ಶುಕ್ರವಾರ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಚಾರಣೆ ನಡೆಸುವ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿಗೆ ತಡೆ ಆದೇಶ ತೆರವು ಕೋರಿದ ಮನವಿಯನ್ನು ಸಲ್ಲಿಸಿದರು. ಅಂತೆಯೇ, ತನಿಖೆಯ ಪ್ರಗತಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ನ್ಯಾಯಪೀಠಕ್ಕೆ ಸಲ್ಲಿಸಿದರು. ಆದರೆ, ತನಿಖೆಯ ಪ್ರಗತಿ ವರದಿ ಸ್ವೀಕರಿಸಲು ನಿರಾಕರಿಸಿದ ನ್ಯಾಯಪೀಠ ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿ ಆದೇಶಿಸಿತು.

ಮನವಿಯಲ್ಲಿ ಏನಿದೆ?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 19 (3) (ಸಿ) ಅನ್ನು 2018ರಲ್ಲಿ ತಿದ್ದುಪಡಿ ಮಾಡಲಾಗಿದೆ. ಇದರ ಅನುಸಾರ ತನಿಖೆಯನ್ನು ಯಾವುದೇ ಕೋರ್ಟ್ ತಡೆಯುವಂತಿಲ್ಲ. ಆದ್ದರಿಂದ, ಹೈಕೋರ್ಟ್ ನೀಡಿರುವ ತಡೆ ಆದೇಶವನ್ನು ತೆರವುಗೊಳಿಸಬೇಕು' ಎಂದು ಮನವಿಯಲ್ಲಿ ತಿಳಿಸಲಾಗಿದೆ.

'ಅರ್ಜಿದಾರರು ಎಫ್ಐಆರ್‌ನಲ್ಲಿ ಕುಟುಂಬದ ಸದಸ್ಯರ ಹೆಸರುಗಳು ಇಲ್ಲ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಕಲಂ 13 (ಎ) (ಇ) ಅನ್ವಯ ಕುಟುಂಬದ ಸದಸ್ಯರೂ ನಿಶ್ಚಿತವಾಗಿ ಈ ಕಾಯ್ದೆಯ ಅಡಿ ತನಿಖಾ ವ್ಯಾಪ್ತಿಗೆ ಒಳಪಡುತ್ತಾರೆ. ಮೇಲಾಗಿ ತನಿಖೆಯ ವ್ಯಾಪ್ತಿಯನ್ನು ಇಂತಿಷ್ಟೇ ಮತ್ತು ಹೀಗೇ ಇರಬೇಕು ಎಂಬುದನ್ನು ಆರೋಪಿ ನಿಶ್ಚಯಿಸುವುದು ಸಮಂಜಸವಲ್ಲ' ಎಂದು ಸಿಬಿಐ ಪ್ರತಿಪಾದಿಸಿದೆ.

'ಸಿಬಿಐ ಎಫ್ಐಆರ್ ದಾಖಲು ಮಾಡಿ ಈಗಾಗಲೇ ಎರಡು ವರ್ಷಗಳಾಗಿವೆ. ಆದರೆ, ಅರ್ಜಿದಾರರು ಈಗ ಹೈಕೋರ್ಟ್‌ನಲ್ಲಿ ಆದೇಶವನ್ನು ಪ್ರಶ್ನಿಸುತ್ತಿದ್ದಾರೆ. ಅರ್ಜಿದಾರ ಆರೋಪಿ ಡಿ.ಕೆ. ಶಿವಕುಮಾರ್ ಸಂಬಂಧಿಯಾದ ಶಶಿಕುಮಾರ್ ಶಿವಣ್ಣ ಎಂಬುವರೂ ಈ ಹಿಂದೆ ಇದೇ ರೀತಿಯಲ್ಲಿ ಸರ್ಕಾರ ಸಿಬಿಐ ತನಿಖೆಗೆ ಆದೇಶಿಸಿದ್ದನ್ನು ಪ್ರಶ್ನಿಸಿದ್ದರು. ಆದರೆ, ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ, ಈ ಅರ್ಜಿಯನ್ನು 2022ರ ಜುಲೈ 22ರಂದು ವಜಾಗೊಳಿಸಿತ್ತು. ನಂತರ ವಿಭಾಗೀಯ ನ್ಯಾಯಪೀಠ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಎತ್ತಿ ಹಿಡಿದಿತ್ತು' ಎಂಬ ಅಂಶವನ್ನು ಮನವಿಯಲ್ಲಿ ಕಾಣಿಸಲಾಗಿದೆ.

ಪ್ರಕರಣವೇನು?: 'ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಕಲಂ 13 (2), 13 (1)(ಇ) ಅಡಿಯಲ್ಲಿ ಸಿಬಿಐ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ. 'ಸಿಬಿಐ ದಾಖಲಿಸಿರುವ ಈ ಎಫ್ಐಆರ್ ಕಾನೂನು ಬಾಹಿರವಾಗಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಕೋರಿ ಡಿ.ಕೆ.ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಇದೇ 11ರಂದು ವಿಚಾರಣೆ ನಡೆಸಿ ತನಿಖೆಗೆ ಮಧ್ಯಂತರ ತಡೆಯಾಜ್ಞೆ ನೀಡಿತ್ತು. ಈ ತಡೆ ಆದೇಶವನ್ನು ತೆರವುಗೊಳಿಸುವಂತೆ ಕೋರಿ ಸಿಬಿಐ ಈ ಮನವಿ ಸಲ್ಲಿಸಿದೆ.

ಮಕ್ಕಳಿಗೂ ಹೆಲ್ಮೆಟ್: ಪೊಲೀಸರ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಸಿಐಸಿಐ ಲೊಂಬಾರ್ಡ್ ವಿಮಾ ಕಂಪನಿ ಸಹಯೋಗದಲ್ಲಿ ಮಾಕಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ರಸ್ತೆ ಸುರಕ್ಷತೆ ಕುರಿತು ಅರಿವು ಮೂಡಿಸಲಾಯಿತು.

ನೆಲಮಂಗಲ ಸಂಚಾರ ಪೊಲೀಸ್ ವಿಭಾಗದ ಇನ್‌ಸ್ಪೆಕ್ಟರ್ ನರಸಿಂಹಮೂರ್ತಿ ಅವರು, 'ಹೆಲ್ಮೆಟ್ ಇಲ್ಲದೆ ದ್ವಿಚಕ್ರ ವಾಹನ ಚಲಾಯಿಸುವುದು ಅತ್ಯಂತ ಅಪಾಯಕಾರಿ. ಅಪಘಾತಗಳಲ್ಲಿ ಇಂಥ ಚಾಲಕರು ಬದುಕಿ ಉಳಿಯುವ ಸಾಧ್ಯತೆ ಬಹಳ ಕಡಿಮೆ' ಎಂದು ಎಚ್ಚರಿಸಿದರು.

ಪೋಷಕರು ಮಕ್ಕಳನ್ನು ಅಪಾಯಕಾರಿ ರೀತಿಯಲ್ಲಿ ದ್ವಿಚಕ್ರವಾಹನಗಳಲ್ಲಿ ಕರೆದುಕೊಂಡು ಹೋಗುತ್ತಾರೆ. ಕಾನೂನಿನ ಭಯದಿಂದ ತಾವು ಹೆಲ್ಮೆಟ್ ಧರಿಸಿದ್ದರೂ ಮಕ್ಕಳ ಸುರಕ್ಷತೆಯ ಬಗ್ಗೆ ಕುರುಡಾಗುತ್ತಾರೆ. ಮಕ್ಕಳಿಗೂ ಹೆಲ್ಮೆಟ್ ತೊಡಿಸಬೇಕು ಎಂದು ಎಚ್ಚರಿಸಿದರು.

ಮಾಕಳಿಯ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ರಸ್ತೆ ಸುರಕ್ಷತೆ ಕುರಿತ ಬೈಕ್ ರ‍್ಯಾಲಿಗೆ ಚಾಲನೆ ನೀಡಲಾಯಿತು

300 ಮಂದಿ ಮಕ್ಕಳು ಪಾಲ್ಗೊಂಡಿದ್ದರು. ಕಂಪನಿಯ ಉಪಾಧ್ಯಕ್ಷ ವಿನಾಯಕ ನಾಯಕ್ ಹಾಜರಿದ್ದರು.

ಫ್ಲೆಕ್ಸ್, ಬ್ಯಾನರ್ ಅಳವಡಿಕೆ: ದೂರು

ಬೆಂಗಳೂರು: ಕೆಂಗೇರಿ ಉಪನಗರದ ಮುಖ್ಯರಸ್ತೆಯಲ್ಲಿ ಫ್ಲೆಕ್ಸ್, ಬ್ಯಾನರ್ ಹಾಗೂ ಜಾಹೀರಾತು ಫಲಕ ಅಳವಡಿಸಿ ನಗರದ ಸೌಂದರ್ಯಕ್ಕೆ ಧಕ್ಕೆ ತಂದಿದ್ದಾರೆ ಎಂದು ಆರೋಪಿಸಿ ಬಿಬಿಎಂಪಿ ಕೆಂಗೇರಿ ಉಪ ವಲಯದ ಸಹಾಯಕ ಕಂದಾಯ ಅಧಿಕಾರಿ ಎಂ.ಆರ್.ಅಶೋಕ್ ಅವರು ಕೆಂಗೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಅಪರಿಚಿತರು ಫ್ಲೆಕ್ಸ್ ಅಳವಡಿಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಅನಧಿಕೃತವಾಗಿ ಫ್ಲೆಕ್ಸ್, ಬ್ಯಾನರ್ ಅಳವಡಿಸಿರುವುದರಿಂದ ವಾಹನ ಸವಾರರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಜತೆಗೆ, ಸೌಂದರ್ಯಕ್ಕೂ ಧಕ್ಕೆಯಾಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಎಂ.ಆರ್.ಅಶೋಕ್ ಕೋರಿದ್ದಾರೆ.

ಖಾಸಗಿ ಸಹಭಾಗಿತ್ವದಡಿ 'ಟೆಲಿ ಮನಸ್' ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೋರೋಗಕ್ಕೆ ಸಂಬಂಧಿಸಿದಂತೆ ದೂರವಾಣಿ ಮೂಲಕ ಸಮಾಲೋಚನೆ ನಡೆಸುವ 'ಟೆಲಿ ಮನಸ್' ಸಹಾಯವಾಣಿ ಸೇವೆ ವಿಸ್ತರಣೆಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಆದಿತ್ಯ ಬಿರ್ಲಾ ಎಜುಕೇಷನ್ ಟ್ರಸ್ಟ್ ಜತೆಗೆ ಒಪ್ಪಂದ ಮಾಡಿಕೊಂಡಿದೆ.

ನಗರದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಹಾಗೂ ಆದಿತ್ಯ ಬಿರ್ಲಾ ಎಜುಕೇಷನ್ ಟ್ರಸ್ಟ್ ಅಧ್ಯಕ್ಷೆ ನೀರಜಾ ಬಿರ್ಲಾ ಒಪ್ಪಂದಕ್ಕೆ ಸಹಿ ಹಾಕಿದರು. ಈ ಮೂಲಕ ಖಾಸಗಿ ಸಹಭಾಗಿತ್ವದಡಿ 'ಟೆಲಿ ಮನಸ್' ಸೇವೆ ವಿಸ್ತರಿಸಲಾಗುತ್ತಿದೆ.

'ಟೆಲಿ ಮನಸ್ ಯೋಜನೆ ಆರಂಭಕ್ಕೆ ಕರ್ನಾಟಕದ ಇ-ಮನಸ್ ಸೇವೆ ಪ್ರೇರಣೆ. ಕೋವಿಡ್ ಸಂಕಷ್ಟದ ವೇಳೆ ಮಕ್ಕಳೂ ಸೇರಿ ಎಲ್ಲ ವಯಸ್ಸಿನವರು ಮಾನಸಿಕ ಅನಾರೋಗ್ಯ ಸಮಸ್ಯೆಯಿಂದ ಬಳಲಿದ್ದರು. ಈ ವೇಳೆ ಟೆಲಿ ಮನಸ್ ಯೋಜನೆ ಪ್ರಾರಂಭಿಸಿ, ಸಾವಿರಾರು ಮಂದಿಗೆ ದೂರವಾಣಿ ಮೂಲಕ ಸಲಹೆ ನೀಡಲಾಯಿತು' ಎಂದು ಡಾ. ಪ್ರತಿಮಾ ಮೂರ್ತಿ ಅವರು ತಿಳಿಸಿದರು.

ಟೆಲಿ ಮನಸ್ ಸೇವೆಗೆ ಸಂಬಂಧಿಸಿದಂತೆ ನೀರಜಾ ಬಿರ್ಲಾ ಹಾಗೂ ಡಾ. ಪ್ರತಿಮಾ ಮೂರ್ತಿ ಒಪ್ಪಂದಕ್ಕೆ ಸಹಿ ಹಾಕಿದರು

'ಎಲ್ಲ ರೀತಿಯ ಮಾನಸಿಕ ಸಮಸ್ಯೆಗಳಿಗೆ 'ಟೆಲಿ ಮನಸ್' ಸಹಾಯವಾಣಿ ಮೂಲಕ 20 ಭಾಷೆಗಳಲ್ಲಿ ಸೇವೆ ಒದಗಿಸಲಾಗುತ್ತಿದೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಟೆಲಿ ಮನಸ್ ಸೆಲ್ ಸ್ಥಾಪಿಸಿ, ಅದರ ಮೂಲಕ ಆಪ್ತ ಸಮಾಲೋಚನೆ ಸೇವೆ ನೀಡಲಾಗುವುದು. ಮಾನಸಿಕ ತಜ್ಞರ ಕೊರತೆ ನೀಗಿಸಲು ಈ ಯೋಜನೆ ಸಹಕಾರಿಯಾಗಿದೆ' ಎಂದು ಅವರು ಹೇಳಿದರು.

2,400 ಕರೆಗಳು: 'ಸಂಸ್ಥೆಯ ಬೆಂಗಳೂರು ಹಾಗೂ ಧಾರವಾಡದ ಕೇಂದ್ರದಲ್ಲಿ ಟೆಲಿ ಮನಸ್ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ದೂರವಾಣಿ ಕರೆಗಳನ್ನು ಸ್ವೀಕರಿಸಲಾಗುತ್ತಿದೆ. ಈವರೆಗೂ ಸುಮಾರು 2,400 ಕರೆಗಳು ಬಂದಿವೆ. ಖಿನ್ನತೆ, ಮಾನಸಿಕ ಒತ್ತಡ ಹಾಗೂ ನಿದ್ದೆ ಬಾರದಿರುವ ಬಗ್ಗೆ ಹೆಚ್ಚಿನ ಕರೆಗಳು ಬರುತ್ತಿವೆ' ಎಂದು ಡಾ. ಪ್ರತಿಮಾ ಮೂರ್ತಿ ಅವರು ತಿಳಿಸಿದರು.

ಕರ್ನಾಟಕ ಸಿಎಂಎ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ವೆಚ್ಚ ಲೆಕ್ಕಿಗರ ಸಂಸ್ಥೆಯ ಬೆಂಗಳೂರು, ಮೈಸೂರು ಮತ್ತು ಮಂಗಳೂರು ಘಟಕಗಳ ಸಹಯೋಗದಲ್ಲಿ ಆಯೋಜಿಸಿರುವ ಕರ್ನಾಟಕ ಸಿಎಂಎ ಸಮ್ಮೇಳನ ಫೆ. 25 ಮತ್ತು 26ರಂದು ಬೆಂಗಳೂರಿನ ಎಫ್‌ಕೆಸಿಸಿಐ ಕಚೇರಿಯ ಸರ್. ಎಂ. ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ನಡೆಯಲಿದೆ.

ಈ ಸಮ್ಮೇಳನವು ಫೆ. 25ರಂದು ಬೆಳಿಗ್ಗೆ 10ಕ್ಕೆ ಉದ್ಘಾಟನೆಯಾಗಲಿದ್ದು, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್, ಮಾಜಿ ಸಂಸದ ಜನಾರ್ದನ ಸ್ವಾಮಿ, ನಿವೃತ್ತ ಐಆರ್‌ಎಸ್ ಅಧಿಕಾರಿ ಶ್ರೀನಿವಾಸ್ ಬಿದರಿ ಭಾಗವಹಿಸಲಿದ್ದಾರೆ.

ತಂತ್ರಜ್ಞಾನ, ಆರೋಗ್ಯ, ಸ್ಟಾರ್ಟ್‌ಅಪ್ ವಾತಾವರಣದಲ್ಲಿ ವೃತ್ತಿಪರರ ಪಾತ್ರ, ಆರ್ಥಿಕ ಅಭಿವೃದ್ಧಿಯಲ್ಲಿ ಮಾಧ್ಯಮದ ಪಾತ್ರ ವಿಷಯಗಳ ಕುರಿತು ಎರಡೂ ದಿನ ಗೋಷ್ಠಿಗಳು ನಡೆಯಲಿವೆ. ಪರಿಣತರಾದ ನರಸಿಂಹನ್ ಇಳಂಗೋವನ್, ಪಿ. ತಿರುವೆಂಕಟಂ, ಅಭಿಷೇಕ್ ರತ್ಕಲ್, ಕಲ್ಮಂಜೆ ಗುರುರಾಜ ಆಚಾರ್ಯ, ಅದ್ವೈತ್ ಕುಲಕರ್ಣಿ, ಶ್ರೀಕಾಂತ್, ಕೆ.ಗೋಪಿನಾಥ್, ಮೋಹನ್ ಕುಮಾರ್ ಬಿ.ಎನ್, ರೂಪಾ ಡಿ, ವೆಂಕಟರಾಮನ್ ಅವರು ಗೋಷ್ಠಿಗಳಲ್ಲಿ ವಿಷಯಗಳನ್ನು ಮಂಡಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನೇಮಕಾತಿ ಕಾರ್ಯಕ್ರಮ
04-03-2023 ಶನಿವಾರ | 10:00 am – 4:00 pm

ಉದ್ಯೋಗ ಶೀರ್ಷಿಕೆ 1 – ಫೀಲ್ಡ್ ಸೇಲ್ಸ್ (ಬೆಂಗಳೂರು)
ಅರ್ಹತೆ: ಕನಿಷ್ಠ ಪದವೀಧರ.
ಮಾರಾಟದಲ್ಲಿ 1+ ವರ್ಷದ ಅನುಭವ
ದ್ವಿಚಕ್ರ ವಾಹನ ಕಡ್ಡಾಯ
ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಉತ್ತಮ ಭಾಷಾ ಪರಿಣಿತಿ

ಉದ್ಯೋಗ ಶೀರ್ಷಿಕೆ 2 – ಪ್ರೊಡಕ್ಷನ್ ಟ್ರೈನಿಗಳು (ಕುಂಬಳಗೋಡು ಮುದ್ರಣ ಘಟಕ, ಬೆಂಗಳೂರು)
ಅರ್ಹತೆ: ಡಿಪ್ಲೊಮಾ (ಮೆಕ್ಯಾನಿಕಲ್ / ಎಲೆಕ್ಟ್ರಿಕಲ್)
2021 ರಿಂದ 2023 ರೊಳಗೆ ಉತ್ತೀರ್ಣರಾಗಿ
ಹೊಸಬರು ಮಾತ್ರ ಅನ್ವಯಿಸುತ್ತಾರೆ
ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಉತ್ತಮ ಭಾಷಾ ಪರಿಣಿತಿ

ವಾಕ್-ಇನ್-ಇಂಟರ್‌ವ್ಯೂ
#75, ಎಂಜಿ ರಸ್ತೆ, ಬೆಂಗಳೂರು 01




ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ


ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯ ಮಂತ್ರಿಗಳು

ವೈದ್ಯಕೀಯ ಸೌಲಭ್ಯಗಳು
ನೋಂದಾಯಿತ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ, ಮಂಡಳಿಯ ವತಿಯಿಂದ "ಕಾರ್ಮಿಕ ಚಿಕಿತ್ಸಾ ಭಾಗ್ಯ" ಮತ್ತು "ಕಾರ್ಮಿಕ ಆರೋಗ್ಯ ಭಾಗ್ಯ" ಯೋಜನೆಗಳಡಿಯಲ್ಲಿ ವೈದ್ಯಕೀಯ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಕಾರ್ಮಿಕ ಚಿಕಿತ್ಸಾ ಭಾಗ್ಯ: ಹೃದ್ರೋಗ, ಕಿಡ್ನಿ ಜೋಡಣೆ, ಕ್ಯಾನ್ಸರ್ ಶಸ್ತ್ರ ಚಿಕಿತ್ಸೆ, ಕಣ್ಣಿನ ಶಸ್ತ್ರಚಿಕಿತ್ಸೆ ಮುಂತಾದ ಪ್ರಮುಖ ಖಾಯಿಲೆಗಳ ಚಿಕಿತ್ಸೆಗೆ ರೂ. 2,00,000/-ದವರೆಗೆ ಸಹಾಯಧನ.
ಕಾರ್ಮಿಕ ಆರೋಗ್ಯ ಭಾಗ್ಯ: ನೋಂದಾಯಿತ ಫಲಾನುಭವಿ ಹಾಗೂ ಅವರ ಅವಲಂಭಿತರಿಗೆ ರೂ. 300/- ರಿಂದ ರೂ. 20,000/-ದವರೆಗೆ ಸಹಾಯಧನ.

ಅರ್ಜಿ ಸಲ್ಲಿಸಬೇಕಾದ ವೆಬ್‌ಸೈಟ್ ವಿಳಾಸ
https://sevasindhuservices.karnataka.gov.in/

ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರಾದ ಶ್ರೀ. ಅರಬೈಲ್ ಶಿವರಾಮ ಹೆಬ್ಬಾರ್ ಅವರು ಶ್ರಮಿಕ ಸಂಜೀವಿನಿ ಸಂಚಾರಿ ಆರೋಗ್ಯ ಚಿಕಿತ್ಸಾಲಯಗಳನ್ನು ಉದ್ಘಾಟಿಸಿದರು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಕಾರ್ಮಿಕ ಸಹಾಯವಾಣಿ 155214, ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು/ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ.

ಅರ್ಹತೆ ಮತ್ತು ವಿಧಾನ
- ಮಂಡಳಿಯಲ್ಲಿ ನೋಂದಾಯಿತರಾಗಿರಬೇಕು ಹಾಗೂ ನೋಂದಣಿ ಚಾಲ್ತಿಯಲ್ಲಿರಬೇಕು.
- ಫಲಾನುಭವಿಯು ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಆಸ್ಪತ್ರೆಗಳಲ್ಲಿ (ಶೆಡ್ಯೂಲ್ 1 ಗೆ ಸೇರಿದ) ಕನಿಷ್ಠ 2 ದಿನ ಒಳರೋಗಿಯಾಗಿ ದಾಖಲಾಗಿರುವ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು.
- ಆಸ್ಪತ್ರೆಯಿಂದ ಬಿಡುಗಡೆಯಾದ ದಿನಾಂಕದಿಂದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು (ಕಾರ್ಮಿಕ ಚಿಕಿತ್ಸಾ ಭಾಗ್ಯ).
- ಆಸ್ಪತ್ರೆಗೆ ದಾಖಲಾದ ದಿನಾಂಕದಿಂದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಬೇಕು (ಕಾರ್ಮಿಕ ಆರೋಗ್ಯ ಭಾಗ್ಯ).

ಅರ್ಜಿ ಸಲ್ಲಿಸಲು ಅವಶ್ಯಕ ದಾಖಲೆಗಳು
- ಮಂಡಳಿಯಿಂದ ನೀಡಲಾದ ನೋಂದಣಿ ಕಾರ್ಡ್(ಲೇಬರ್ ಕಾರ್ಡ್).
- ರೇಷನ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ.
- ಉದ್ಯೋಗ ದೃಢೀಕರಣ ಪತ್ರ/ಸ್ವಯಂ ದೃಢೀಕರಣ ಪತ್ರ.
- ಆಸ್ಪತ್ರೆಯ ಬಿಲ್ಲುಗಳು(ದಾಖಲಾತಿ ಮತ್ತು ಡಿಸ್ಚಾರ್ಜ್ ದಿನಾಂಕ ಹಾಗೂ ಚಿಕಿತ್ಸಾ ವಿವರಗಳನ್ನು ಒಳಗೊಂಡಿರಬೇಕು).
- ಬಿಡುಗಡೆ ಪ್ರಮಾಣ ಪತ್ರ (ಡಿಸ್ಚಾರ್ಜ್ ಸಾರಾಂಶ).
- ನಮೂನೆ 22ಎ ರಲ್ಲಿ ಆಸ್ಪತ್ರೆಯಿಂದ ಭರ್ತಿ ಮಾಡಿದ ಅರ್ಜಿ (ಕಾರ್ಮಿಕ ಚಿಕಿತ್ಸಾ ಭಾಗ್ಯ).

ಡಾ. ಎನ್.ವಿ ಪ್ರಸಾದ್, ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

ಅಕ್ರಂ ಪಾಷ, ಭಾ.ಆ.ಸೇ
ಕಾರ್ಮಿಕ ಆಯುಕ್ತರು ಮತ್ತು ಸಿ.ಇ.ಓ
ಕ.ಕ ಮತ್ತು ಇ.ನಿ.ಕಾ.ಕ ಮಂಡಳಿ

ಕಟ್ಟಡ ಅಥವಾ ಇತರೆ ನಿರ್ಮಾಣ ಕಾರ್ಮಿಕರಲ್ಲದವರು ನಕಲಿ ದಾಖಲೆಗಳನ್ನು ನೀಡಿ ನೋಂದಣಿಯಾಗುವುದು ಮತ್ತು ಸೌಲಭ್ಯಗಳನ್ನು ಪಡೆಯುವುದು ಶಿಕ್ಷಾರ್ಹ ಅಪರಾಧ!

ಇಂದು, ನಾಳೆ 'ಬಿಐಸಿ ಹಬ್ಬ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತ, ನೃತ್ಯ, ಬೆಂಗಳೂರಿನ ಕಥೆ ಹೇಳುವ ವಿಶಿಷ್ಟ ಕಾರ್ಯಕ್ರಮಗಳು, ರಾಜಧಾನಿಯ ಜೀವನಮಟ್ಟ ಸುಧಾರಣೆಗೆ ರೂಪಿಸಬೇಕಾದ ಯೋಜನೆಗಳಿಗೆ ಚೌಕಟ್ಟು ಹಾಕಿಕೊಡುವ ಚಿಂತನಾಗೋಷ್ಠಿಗಳನ್ನು ಒಳಗೊಂಡ 'ಬಿಐಸಿ ಹಬ್ಬ'ದ ಸಡಗರಕ್ಕೆ ಮತ್ತೊಮ್ಮೆ ವೇದಿಕೆ ಅಣಿಗೊಂಡಿದೆ.

'ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್' ಆಯೋಜಿಸಿರುವ ಐದನೇ ಆವೃತ್ತಿಯ 'ಬಿಐಸಿ ಹಬ್ಬ' ಈ ಬಾರಿ ಫೆ. 25 ಮತ್ತು 26ರಂದು ನಡೆಯಲಿದೆ. ಪ್ರತಿಯೊಬ್ಬರ ಮನಸೂರೆಗೊಳ್ಳಲಿರುವ ವಿವಿಧ ಚಟುವಟಿಕೆಗಳು ಹಬ್ಬದಲ್ಲಿ ಮೇಳೈಸಲಿವೆ.

ಬೆಂಗಳೂರಿನ ಇತಿಹಾಸದ ವೈಭವ ಮತ್ತು ಪ್ರಸ್ತುತ ಸ್ಥಿತಿಗತಿಗಳನ್ನು ಬಿಂಬಿಸುವ 'ನಮ್ಮ ಬೆಂಗಳೂರು ಕಥೆಗಳು' ಎನ್ನುವ ವಿಶಿಷ್ಟ ಕಾರ್ಯಕ್ರಮವನ್ನು ಈ ಬಾರಿ ಆಯೋಜಿಸಲಾಗಿದೆ. ನಗರದ ಪರಂಪರೆ, ಧೋಬಿ ಘಾಟ್, ಉದ್ಯಾನಗಳು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ತಜ್ಞರು ಚರ್ಚಿಸಲಿದ್ದಾರೆ. ಜತೆಗೆ, 20 ಮಂದಿ ದೃಶ್ಯಾವಳಿಗಳನ್ನು ಪ್ರದರ್ಶಿಸಲಿದ್ದಾರೆ.

'ಬಿ ಹರ್ಡ್' ಎನ್ನುವ ಕಾರ್ಯಕ್ರಮ ವಿಭಿನ್ನವಾಗಿದೆ. ಯಾವುದೇ ವ್ಯಕ್ತಿಯು ಯಾವುದೇ ವಿಷಯದ ಬಗ್ಗೆ ಮಾತನಾಡಲು ವೇದಿಕೆ ಕಲ್ಪಿಸಲಾಗಿದೆ. ತಮ್ಮ ಕಲ್ಪನೆಗಳು, ಚಿಂತನೆಗಳನ್ನು ಇಲ್ಲಿ ಅನಾವರಣಗೊಳಿಸಬಹುದಾಗಿದೆ. ಈ ಮೂಲಕ ಪ್ರತಿಯೊಬ್ಬರಿಗೂ ಮಾತನಾಡುವ ಅವಕಾಶ ಒದಗಿಸಲಾಗಿದೆ ಎಂದು ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನ ಗೌರವ ನಿರ್ದೇಶಕ ವಿ. ರವಿಚಂದರ್ ಅವರು ಶುಕ್ರವಾರ ತಿಳಿಸಿದರು.

ಶಾಸ್ತ್ರೀಯ ನೃತ್ಯ, ಭರತನಾಟ್ಯ ಹಾಗೂ ಸಂಗೀತ ಕಾರ್ಯಕ್ರಮಗಳು ಪ್ರೇಕ್ಷಕರನ್ನು ರಂಜಿಸಲಿವೆ. ಕ್ರೈಸ್ಟ್ ಕಾಲೇಜಿನ ವತಿಯಿಂದ ಬ್ಯಾಂಡ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಮುಖ್ಯಾಂಶಗಳು
- ಎಲ್ಲಿ: ದೊಮ್ಮಲೂರಿನ ಬಿಐಸಿ ಆವರಣ
- ಸಮಯ: ಎರಡು ದಿನವೂ ಬೆಳಿಗ್ಗೆ 10ರಿಂದ ರಾತ್ರಿ 8ರವರೆಗೆ
- ಏನೇನು: 75 ವೈವಿಧ್ಯಮಯ ಕಾರ್ಯಕ್ರಮಗಳು

ಎಲ್ಲ ವಯೋಮಾನದ ಮಕ್ಕಳಿಗಾಗಿ 'ಮಕ್ಕಳ ಕೂಟ' ಕಾರ್ಯಕ್ರಮ ನಡೆಯಲಿದೆ. ಮಣ್ಣಿನಲ್ಲಿ ಕಲೆ ಅರಳಿಸುವ ಅವಕಾಶ ಮಕ್ಕಳಿಗೆ ಇರಲಿದೆ. ಚೌಕಾಬಾರಾ, ಗಿಲ್ಲಿದಾಂಡು, ಮುಂತಾದ ಸಾಂಪ್ರದಾಯಿಕ ಕ್ರೀಡೆಗಳಲ್ಲಿ ಪಾಲ್ಗೊಳ್ಳಬಹುದು.

ಪೋಕ್ಸೊ ಕಾಯ್ದೆ, ಭಾರತ–ಚೀನಾ ಸಂಬಂಧಗಳು, 2023ರಲ್ಲಿ ಜಾಗತಿಕ ಸವಾಲುಗಳು, ಕನ್ನಡ ವಿಷಯದ ಕುರಿತು ಚರ್ಚೆ ನಡೆಯಲಿದೆ.

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದ ನಿರ್ವಹಣೆಯಲ್ಲಿ ನೀವು ಭಾಗಿಯಾದರೆ ಏನು ಮಾಡಬಹುದು ಎನ್ನುವ ಬಗ್ಗೆಯೂ ಸಲಹೆಗಳನ್ನು ನೀಡಬಹುದು. ಇಂತಹ ಸಂಸ್ಥೆಗೆ ಹೊಸ ವಿಷಯಗಳ ಬಗ್ಗೆ ಹೇಳಿಕೊಳ್ಳಬಹುದು. ನಿರ್ದೇಶಕರ ಕುರ್ಚಿಯಲ್ಲಿ ಕುಳಿತು ಬಿಐಸಿ ನಿರ್ವಹಣೆ ಕುರಿತು ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು.

ಕೆಲವು 'ತಲೆಹರಟೆ ಚರ್ಚೆ'ಗಳನ್ನು ಸಹ ಪ್ರಸ್ತುತ ಪಡಿಸಲಾಗುತ್ತಿದೆ. ವಿವಿಧ ಚಟುವಟಿಕೆಗಳು ಮತ್ತು ಪ್ರದರ್ಶನಕ್ಕಾಗಿ 'ಊರು ಹಬ್ಬ' ಕಾರ್ಯಕ್ರಮ ಆಯೋಜಿಸಲಾಗಿದೆ.

ವಿವರಗಳಿಗೆ: http://bit.ly/3StuJFA

ಆಸ್ತಿಗಳ ದಾಖಲೆ ಪ್ರಕಾರ 'ಎ', 'ಬಿ' ವಹಿಗಳಲ್ಲಿ ದಾಖಲು, ಅವಧಿಯೊಳಗೆ ಅನುಮೋದನೆ

ಬಿಬಿಎಂಪಿ: ಎಲ್ಲ ಸ್ವತ್ತುಗಳಿಗೆ ಖಾತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ಸ್ವತ್ತುಗಳನ್ನು ಪಾಲಿಕೆ ವಹಿಗಳಲ್ಲಿ ದಾಖಲಿಸಿಕೊಂಡು ತೆರಿಗೆ ವ್ಯಾಪ್ತಿಗೆ ತರಲು 'ಖಾತಾ ಆಂದೋಲನ'ವನ್ನು ಫೆ.27ರಿಂದ ಆಯೋಜಿಸಲಾಗುತ್ತಿದೆ.

'ಖಾತಾ ಆಂದೋಲನ'ದಲ್ಲಿ ನಾಗರಿಕರಿಗೆ ಸಂಪೂರ್ಣ ಮಾಹಿತಿ ನೀಡಿ, ಅರ್ಹರಿಗೆ 'ಎ' ಅಥವಾ 'ಬಿ' ಖಾತಾಗಳನ್ನು ನೀಡಲಾಗುತ್ತದೆ. ಇದಕ್ಕಾಗಿ ಎಲ್ಲ ವಲಯಗಳ ಸಹಾಯಕ ಕಂದಾಯ ಅಧಿಕಾರಿ ಕಚೇರಿಗಳಲ್ಲಿ 'ಹೆಲ್ಪ್ ಡೆಸ್ಕ್' ಸ್ಥಾಪಿಸಲಾಗುತ್ತಿದ್ದು, ಆಸ್ತಿಗಳ ದಾಖಲೆಗಳನ್ನು ಪರಿಶೀಲಿಸಿಕೊಂಡು ಮಾಲೀಕರು ಅರ್ಜಿ ಸಲ್ಲಿಸಬಹುದು ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಡಾ. ಆರ್.ಎಲ್. ದೀಪಕ್ ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

'ಎ' ವಹಿಯಲ್ಲಿ (ಎ ಖಾತೆ) ನೋಂದಾಯಿಸಲು ನೋಂದಣಿ ಶುಲ್ಕದ ಶೇ 2ರಷ್ಟು ಅಥವಾ ಕನಿಷ್ಠ ₹500 (ಎರಡರಲ್ಲಿ ಹೆಚ್ಚಿರುವ ಮೊತ್ತ) ಪಾವತಿಸಬೇಕು. 'ಬಿ' ವಹಿಯಲ್ಲಿ (ಬಿ ಖಾತೆ) ನಮೂದಿಸಲು ಯಾವುದೇ ಶುಲ್ಕ ಇಲ್ಲ ಎಂದು ಹೇಳಿದರು.

ನಾಲ್ಕು ಸಾವಿರ ಚದರ ಅಡಿ ವಿಸ್ತೀರ್ಣದ ಸ್ವತ್ತಿಗೆ ಕಂದಾಯ ಅಧಿಕಾರಿ ಏಳು ದಿನಗಳಲ್ಲಿ ಖಾತಾ ನೀಡಬೇಕು. 4 ಸಾವಿರ ಚ.ಅಡಿಯಿಂದ 6 ಸಾವಿರ ಚ. ಅಡಿವರೆಗೆ ವಲಯ ಉಪ ಆಯುಕ್ತರು 10 ದಿನ, 6 ಸಾವಿರ ಚ. ಅಡಿಗೂ ಮೇಲ್ಪಟ್ಟ ಆಸ್ತಿಗಳಿಗೆ ವಲಯ ಜಂಟಿ ಆಯುಕ್ತರು 15 ದಿನಗಳಲ್ಲಿ ಖಾತಾ ಒದಗಿಸಲು ಗಡುವು ನಿಗದಿ ಮಾಡಲಾಗಿದೆ. ನಾಗರಿಕರು 1533 ಅಥವಾ 080-2222 1188ಗೆ ಕರೆ ಮಾಡಿ ಅಥವಾ https://bbmp.gov.in/ ನಲ್ಲಿ ಅರ್ಜಿಗಳಿಗೆ ಸಂಬಂಧಿಸಿದಂತೆ ದೂರು ನೀಡಬಹುದು ಎಂದರು.

ಶೇ 25ರಷ್ಟು ಹೆಚ್ಚು ತೆರಿಗೆ ಸಂಗ್ರಹ: 'ಕಳೆದ ವರ್ಷ ಮಾರ್ಚ್ ಅಂತ್ಯಕ್ಕೆ ₹3 ಸಾವಿರ ಕೋಟಿ ಆಸ್ತಿ ತೆರಿಗೆಯನ್ನು ಸಂಗ್ರಹಿಸಲಾಗಿತ್ತು. ಈ ಬಾರಿ ಫೆ.23ರ ವೇಳೆಗೆ ₹3,100 ಕೋಟಿ ಸಂಗ್ರಹಿಸಿ ದಾಖಲೆ ಮಾಡಲಾಗಿದೆ. ಬೆಂಗಳೂರಿನ ಆಸ್ತಿ ತೆರಿಗೆದಾರರಿಗೆ ಧನ್ಯವಾದ ತಿಳಿಸುತ್ತೇವೆ. ಇನ್ನುಳಿದ ಒಂದು ತಿಂಗಳಲ್ಲಿ ನಮ್ಮ ಗುರಿಯಾಗಿರುವ ₹4,100 ಕೋಟಿಯ ಸಮೀಪದ ಸಂಗ್ರಹ ಮಾಡಲಾಗುತ್ತದೆ' ಎಂದು ದೀಪಕ್ ಹೇಳಿದರು.

'ಈ ವರ್ಷ ಆಸ್ತಿ ತೆರಿಗೆ ಪರಿಷ್ಕರಿಸುವ ಯೋಜನೆ ಇಲ್ಲ. ಮುಂದಿನ ವರ್ಷಗಳಲ್ಲಿ 'ಕ್ಯಾಪಿಟಲ್ ವ್ಯಾಲ್ಯೂ' ಆಧಾರದಲ್ಲಿ ಆಸ್ತಿ ತೆರಿಗೆ ನಿಗದಿಪಡಿಸುವ ಬಗ್ಗೆ ಆಲೋಚನೆ ನಡೆದಿದೆ' ಎಂದರು.

'ಖಾತಾ ಆಂದೋಲನದ ಮೂಲಕ ಸುಮಾರು ₹150 ಕೋಟಿ ಹೆಚ್ಚು ಸಂಗ್ರಹವಾಗುವ ನಿರೀಕ್ಷೆ ಇದೆ. ಇನ್ನು, ಬೆಸ್ಕಾಂ ಬಿಲ್ ಆಧಾರದಲ್ಲಿ ವಾಣಿಜ್ಯ ಸಂಪರ್ಕ ಪಡೆದು, ವಸತಿ ಆಸ್ತಿ ತೆರಿಗೆ ಪಾವತಿಸುತ್ತಿರುವ 24 ಸಾವಿರ ಆಸ್ತಿಗಳನ್ನು ಗುರುತಿಸಲಾಗಿದ್ದು, ಶೇ 30ರಷ್ಟು ಆಸ್ತಿಗಳಿಗೆ ನೋಟಿಸ್ ನೀಡಲಾಗಿದೆ. ಇದೆಲ್ಲದರಿಂದ ನಿಖರ ತೆರಿಗೆ ಬಂದರೆ ಸುಮಾರು ₹150 ಕೋಟಿ ಆಸ್ತಿ ತೆರಿಗೆ ಸಂಗ್ರಹ ಹೆಚ್ಚಾಗಲಿದೆ' ಎಂದು ಮಾಹಿತಿ ನೀಡಿದರು.

ಖಾತಾ ಯಾರು ಪಡೆಯಬಹುದು?

ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸ್ವತ್ತುಗಳ ವಿವರಗಳನ್ನು ಪಾಲಿಕೆಯಲ್ಲಿ ದಾಖಲಿಸಿಕೊಳ್ಳದೇ ಇರುವ ಸ್ವತ್ತಿನ ಮಾಲೀಕರು / ಅನುಭವದಾರರು ಕೆಳಕಂಡ ದಾಖಲೆಗಳಿದ್ದರೆ ಖಾತೆಗೆ ಅರ್ಜಿ ಸಲ್ಲಿಸಬಹುದು.

ಕಂದಾಯ ಪ್ರದೇಶ: ಸ್ವತ್ತಿನ ಹಕ್ಕು ನಿರೂಪಿಸುವ ದಾಖಲೆಗಳು. ಭೂಪರಿವರ್ತನೆ ಆದೇಶ ಮತ್ತು ಸರ್ವೆ ನಕ್ಷೆ, ಹಾಲಿ ಪಹಣಿ, ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ನಮೂನೆ-15), ಸ್ವತ್ತಿನ ವಿಸ್ತೀರ್ಣ ಮತ್ತು ಪ್ರದೇಶ ಗುರುತಿಸಿರುವ ಸ್ವಯಂ ದೃಢೀಕೃತ ನಕ್ಷೆ.

ಗ್ರಾಮಠಾಣ: ಸ್ವತ್ತಿನ ಹಕ್ಕು ನಿರೂಪಿಸುವ ದಾಖಲೆಗಳು, ಹಿಂದಿನ ಸ್ಥಳೀಯ ಸಂಸ್ಥೆಯು ವಿತರಿಸಿರುವ ನಮೂನೆ-9, ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ನಮೂನೆ-15), ತಹಶೀಲ್ದಾರ್ /ಭೂಮಾಪಕರು ನೀಡಿರುವ ಸರ್ವೆ ನಕ್ಷೆ, ವಿಸ್ತೀರ್ಣ ಮತ್ತು ಪ್ರದೇಶ ಗುರುತಿಸಿರುವ ಸ್ವಯಂ ದೃಢೀಕೃತ ನಕ್ಷೆ.

ಬಿಡಿಎ, ಕೆಎಚ್‌ಬಿ, ಇತರೆ ಪ್ರಾಧಿಕಾರದಿಂದ ಹಂಚಿಕೆಯಾಗಿರುವ ಸ್ವತ್ತು: ಹಂಚಿಕೆ ಮಾಡಿರುವ ಸ್ವಾಧೀನ ಪತ್ರ, ಗುತ್ತಿಗೆ ಕರಾರು ಪತ್ರ / ಕ್ರಯಪತ್ರ, ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ನಮೂನೆ-15).

ಬಿಡಿಎ ಅನುಮೋದಿತ ಬಡಾವಣೆ: ಸ್ವತ್ತಿನ ಹಕ್ಕು ನಿರೂಪಿಸುವ ದಾಖಲೆಗಳು (ಹಿಂದಿನ ಮತ್ತು ಪ್ರಸ್ತುತ ಮಾಲೀಕತ್ವ), ಅನುಮೋದಿತ ಬಡಾವಣೆ ನಕ್ಷೆ, ಬಿಡಿಎಯಿಂದ ಬಿಡುಗಡೆ ಆದೇಶ ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ನಮೂನೆ-15), ವಿಸ್ತೀರ್ಣ ಮತ್ತು ಪ್ರದೇಶ ಗುರುತಿಸಿರುವ ಸ್ವಯಂ ದೃಢೀಕೃತ ನಕ್ಷೆ.

ಬಿಡಿಎ ರೀಕನ್ವೆ ಪ್ರದೇಶ: ಸ್ವತ್ತಿನ ಹಕ್ಕು ವರ್ಗಾವಣೆ ದಾಖಲೆಗಳು (ರಿಕನ್ವೆ ಕ್ರಯಪತ್ರ). ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರ (ನಮೂನೆ-15), ವಿಸ್ತೀರ್ಣ ಮತ್ತು ಪ್ರದೇಶ ಗುರುತಿಸಿರುವ ಸ್ವಯಂ ದೃಢೀಕೃತ ನಕ್ಷೆ. ಸುಧಾರಣಾ ವೆಚ್ಚ ಪಾವತಿಸಿರುವ ರಸೀದಿ ಪ್ರತಿ.

ಈ ಐದು ನಮೂನೆಯಲ್ಲಿರುವ ದಾಖಲೆಗಳು ಲಭ್ಯವಿಲ್ಲದೆ ಇದ್ದರೆ ಸ್ವತ್ತುಗಳ ವಿವರಗಳನ್ನು 'ಬಿ' ವಹಿಯಲ್ಲಿ (ಬಿ ಖಾತೆ) ದಾಖಲಿಸಲಾಗುತ್ತದೆ.

ಫ್ಲೆಕ್ಸ್: 40 ಎಫ್‌ಐಆರ್

ನಗರದಲ್ಲಿ ಫ್ಲೆಕ್ಸ್ ಹಾಕುವುದು ಕಾನೂನು ಪ್ರಕಾರ ಅಪರಾಧವಾಗಿದೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಬಿಬಿಎಂಪಿಯ ಎಂಟು ವಲಯಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದ್ದು, 64 ದೂರುಗಳನ್ನು ಸಲ್ಲಿಸಲಾಗಿದೆ. 40 ಎಫ್‌ಐಆರ್ ದಾಖಲಿಸಲಾಗಿದೆ. ರಾಜಕೀಯ ಪಕ್ಷಗಳು ವಾಹನಗಳಲ್ಲಿ ನಡೆಸುತ್ತಿರುವ ಸಾಧನೆ ಜಾಹೀರಾತು ಪ್ರದರ್ಶನಕ್ಕೆ ಬಿಬಿಎಂಪಿಯಿಂದ ಯಾವುದೇ ಅನುಮತಿ ಪಡೆದಿಲ್ಲ. ಚುನಾವಣೆ ವಿಭಾಗ ಅದರ ಮೇಲ್ವಿಚಾರಣೆ ನಡೆಸಲಿದೆ ಎಂದು ದೀಪಕ್ ಮಾಹಿತಿ ನೀಡಿದರು.

ಐಐಎಸ್‌ಸಿಯಲ್ಲಿ ನಡೆದ 2ನೇ ಸೆಮಿಕಾನ್ ಇಂಡಿಯಾ ಫ್ಯೂಚರ್ ಡಿಸೈನ್ ರೋಡ್‌ಶೋದಲ್ಲಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಮಾತನಾಡಿದರು

'ಶೀಘ್ರವೇ ಸೆಮಿಕಂಡಕ್ಟರ್ ಸಂಶೋಧನಾ ಕೇಂದ್ರ ಆರಂಭ'

ಬೆಂಗಳೂರು: ಐಐಎಸ್‌ಸಿಯಲ್ಲಿ ನಡೆದ 2ನೇ ಸೆಮಿಕಾನ್ ಇಂಡಿಯಾ ಫ್ಯೂಚರ್ ಡಿಸೈನ್ ರೋಡ್‌ಶೋಗೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಚಾಲನೆ ನೀಡಿದರು.

ಭಾರತವು ಡಿಜಿಟಲೀಕರಣ ಕ್ಷೇತ್ರದಲ್ಲಿ ಕ್ಷಿಪ್ರವಾಗಿ ಪ್ರಗತಿ ಸಾಧಿಸುತ್ತಿದೆ. ಭಾರತವು ಎಲೆಕ್ಟ್ರಾನಿಕ್ಸ್ ವಲಯದಲ್ಲಿ ಹೊಸ ಅವಕಾಶ ಸೃಜಿಸುತ್ತಿದೆ ಎಂದು ಅವರು ಹೇಳಿದರು.

ವಿಶ್ವಕ್ಕೆ ಅತ್ಯುತ್ತಮ ಪ್ರತಿಭೆ, ಜಾಗತಿಕ ಉತ್ಪನ್ನ, ಡಿಜಿಟಲ್ ಉತ್ಪನ್ನ ಮತ್ತು ಉತ್ತಮ ಸೇವೆಗಳನ್ನು ತಲುಪಿಸುವ ನಿಟ್ಟಿನಲ್ಲಿ ನವ ಭಾರತವು ವಿಶ್ವಾಸಾರ್ಹ ಪಾಲುದಾರನಾಗಿ ಹೊರಹೊಮ್ಮಿದೆ ಎಂದು ಬಣ್ಣಿಸಿದರು.

ಭಾರತದ ಯುವ ಜನರಿಗೆ ವಿಪುಲವಾದ ಅವಕಾಶ ಒದಗಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ಶ್ರಮಿಸುತ್ತಿದ್ದಾರೆ ಎಂದು ಹೇಳಿದರು.

'ಭಾರತದಲ್ಲಿ ಸೆಮಿಕಂಡಕ್ಟರ್ ಕ್ಷೇತ್ರದಲ್ಲಿನ ಆವಿಷ್ಕಾರಗಳನ್ನು ಕೈಗೊಳ್ಳಲು ಬೆಂಬಲ ನೀಡುವ ಕ್ರಮಗಳನ್ನು ಕೈಗೊಂಡಿದೆ. ಭಾರತೀಯ ಸೆಮಿಕಂಡಕ್ಟರ್ ಸಂಶೋಧನಾ ಕೇಂದ್ರವು ಖಾಸಗಿಯಾಗಿ ಶೀಘ್ರವಾಗಿ ಆರಂಭವಾಗಲಿದೆ. ಜತೆಗೆ, ಸೆಮಿಕಂಡಕ್ಟರ್ ಪ್ರಯೋಗಾಲಯವನ್ನು ಸಹ ಆಧುನೀಕರಣಗೊಳಿಸಲಾಗುವುದು' ಎಂದು ಹೇಳಿದರು.

ಭವಿಷ್ಯದ ಕೌಶಲದ ಭಾಗವಾಗಿ ಪಠ್ಯಕ್ರಮ ರಚಿಸಲು ಸರ್ಕಾರ ಯೋಚಿಸಿದೆ. ಉದ್ಯಮ ತಜ್ಞರು ಮತ್ತು ಶಿಕ್ಷಣ ತಜ್ಞರ ಜತೆಗೂ ಚರ್ಚಿಸಲಾಗಿದೆ. ಹೊಸ ಪದವಿಗಳು, ಹೊಸ ಆಯ್ಕೆಗಳು ಇರಲಿವೆ. ವಿದ್ಯಾರ್ಥಿಗಳ ಕೌಶಲ ವೃದ್ಧಿ ಹಾಗೂ ತರಬೇತಿಗೆ ಸಂಬಂಧಿಸಿದಂತೆ ಕಂಪನಿಗಳ ಜತೆಗೆ ಚರ್ಚಿಸಲಾಗಿದೆ ಎಂದು ಹೇಳಿದರು.

ಬಳಿಕ ಸಚಿವರು ವಿದ್ಯಾರ್ಥಿಗಳ ಜತೆಗೆ ಸಂವಾದ ನಡೆಸಿದರು. ಡಾ.ಸೈಲೇಶ್ ಚಿಟ್ಟಿಪೆಡ್ಡಿ, ಆನಂದ್ ರಾಮಮೂರ್ತಿ ಹಾಜರಿದ್ದರು.

ವೈಟ್‌ಫೀಲ್ಡ್‌ವರೆಗೆ ಮೆಟ್ರೊ ಸುರಕ್ಷತೆ ಪರಿಶೀಲನೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್–ಕೆ.ಆರ್.ಪುರ ನಡುವೆ ಮೆಟ್ರೊ ರೈಲು ಸುರಕ್ಷತಾ ಆಯುಕ್ತರು(ಸಿಎಂಆರ್‌ಎಸ್) ನಡೆಸಿದ ಪರಿಶೀಲನೆ ಪೂರ್ಣಗೊಂಡಿದೆ.

ಮೆಟ್ರೊ ರೈಲು ಸುರಕ್ಷತೆ ಆಯುಕ್ತ ಅಭಯ್‌ಕುಮಾರ್ ರೈ ನೇತೃತ್ವದ ತಂಡ, ಬುಧವಾರ ಪರಿಶೀಲನೆ ಆರಂಭಿಸಿತ್ತು. ಮೂರು ದಿನ ನಿರಂತರವಾಗಿ ಪರಿಶೀಲನೆ ನಡೆಸಿ ಪ್ರಯಾಣಿಕರ ಸುರಕ್ಷತೆಗೆ ಕೈಗೊಂಡಿರುವ ಕ್ರಮಗಳು, ಅಳವಡಿಕೆಯಾಗಿರುವ ಎಸ್ಕಲೇಟರ್‌ಗಳು, ಎಲಿವೇಟರ್‌ಗಳು, ಅಗ್ನಿಶಾಮಕ ವ್ಯವಸ್ಥೆಯನ್ನು ಕೂಲಂಕಷವಾಗಿ ಪರಿಶೀಲಿಸಿತು.

ಕಾರ್ಯಾಚರಣೆಯ ಸುರಕ್ಷತೆಗಾಗಿ ಟ್ರಾಕ್ಷನ್ ಮತ್ತು ವಿದ್ಯುತ್ ಸರಬರಾಜು ವ್ಯವಸ್ಥೆ, ಸಿಗ್ನಲಿಂಗ್ ವ್ಯವಸ್ಥೆ, ವಯಾಡಕ್ಟ್‌ಗಳು, ವಾಕ್‌ವೇಗಳು, ಟ್ರ್ಯಾಕ್ ಮತ್ತು ತಿರುವುಗಳ ನಿಯತಾಂಕಗಳು, ರೈಲಿನ ವೇಗದ ಪರೀಕ್ಷೆ ನಡೆಸಿದರು.

ತಪಾಸಣೆ ಕಾರ್ಯ ಪೂರ್ಣಗೊಂಡಿದ್ದು, ವಾರದಲ್ಲಿ ಪ್ರಮಾಣಪತ್ರ ದೊರೆಯುವ ಸಾಧ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ವೈಟ್‌ಫೀಲ್ಡ್‌ನಿಂದ ಕೆ.ಆರ್.ಪುರ ತನಕ 13.71 ಕಿಲೋ ಮೀಟರ್ ಉದ್ದದ ವಿಸ್ತರಣಾ ಮಾರ್ಗವು ವೈಟ್‌ಫೀಲ್ಡ್, ಚನ್ನಸಂದ್ರ, ಕಾಡುಗೋಡಿ, ಪಟ್ಟಂದೂರು ಅಗ್ರಹಾರ, ಶ್ರೀ ಸತ್ಯಸಾಯಿ ಆಸ್ಪತ್ರೆ, ನಲ್ಲೂರುಹಳ್ಳಿ, ಕುಂದಲಹಳ್ಳಿ, ಸೀತಾರಾಮ ಪಾಳ್ಯ, ಹೂಡಿ ಜಂಕ್ಷನ್, ಗರುಡಾಚಾರ್ ಪಾಳ್ಯ, ಮಹಾದೇವಪುರ ಮತ್ತು ಕೆ.ಆರ್.ಪುರ ಸೇರಿ 12 ನಿಲ್ದಾಣಗಳನ್ನು ಹೊಂದಿದೆ. ಈ ಮಾರ್ಗವು ಸದ್ಯದಲ್ಲೇ ಸಾರ್ವಜನಿಕರಿಗೆ ಮುಕ್ತವಾಗಲಿದೆ.

ನಿಲ್ದಾಣಗಳಲ್ಲಿ ಸೀಮಿತ ದ್ವಿಚಕ್ರ ವಾಹನ ನಿಲುಗಡೆ, ಕೆ.ಆರ್.ಪುರ ಮತ್ತು ವೈಟ್‌ಫೀಲ್ಡ್ ನಿಲ್ದಾಣಗಳಲ್ಲಿ ಕಾರು ಮತ್ತು ದ್ವಿಚಕ್ರ ವಾಹನಗಳ ನಿಲುಗಡೆಗೆ ಹೆಚ್ಚುವರಿ ಸೌಲಭ್ಯ ಕಲ್ಪಿಸಲಾಗಿದೆ. ಈ ಎರಡೂ ನಿಲ್ದಾಣಗಳಿಂದ ನೇರವಾಗಿ ರೈಲ್ವೆ ನಿಲ್ದಾಣಗಳಿಗೆ ಸಂಪರ್ಕಿಸಲು ಮೇಲ್ಸೇತುವೆಗಳನ್ನೂ ನಿರ್ಮಿಸಲಾಗಿದೆ. ಪಟ್ಟಂದೂರು ಅಗ್ರಹಾರ ನಿಲ್ದಾಣದಲ್ಲಿ ಐಟಿಪಿಬಿಗೆ ನೇರವಾಗಿ ಮೇಲ್ಸೇತುವೆ ಸಂಪರ್ಕ ಒದಗಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಬೆನ್ನಿಗಾನಹಳ್ಳಿ ಬಳಿ ಕಾಮಗಾರಿ ಇನ್ನೂ ಪ್ರಗತಿಯಲ್ಲಿದ್ದು, ಬೈಯಪ್ಪನಹಳ್ಳಿ ಮತ್ತು ಕೆ.ಆರ್.ಪುರ ನಡುವೆ ರೈಲು ಕಾರ್ಯಾಚರಣೆಗೆ ಇನ್ನೂ ಮೂರು ತಿಂಗಳು ಬೇಕಾಗಬಹುದು. ಅಲ್ಲಿಯ ತನಕ ಈ ನಿಲ್ದಾಣಗಳ ನಡುವೆ ಬಿಎಂಟಿಸಿ ಬಸ್‌ಗಳನ್ನು ಫೀಡರ್ ಸೇವೆಯಾಗಿ ಬಳಸಿಕೊಳ್ಳಲು ಬಿಎಂಆರ್‌ಸಿಎಲ್ ಆಲೋಚನೆ ನಡೆಸಿದೆ.

ಸುರಂಗದಿಂದ ಹೊರಬಂದ 'ವಿಂಧ್ಯಾ'

ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದ ಸುರಂಗ ಕೊರೆಯುವ ಕಾರ್ಯ ಬಹುತೇಕ ಅಂತಿಮ ಹಂತಕ್ಕೆ ಬಂದಿದ್ದು, ಮತ್ತೊಂದು ಟಿಬಿಎಂ(ಟನಲ್ ಬೋರಿಂಗ್ ಮಷಿನ್) 'ವಿಂಧ್ಯಾ' ಶಾದಿಮಹಲ್ ಬಳಿ ಹೊರಬಂದಿದೆ.

ಕಂಟೋನ್ಮೆಂಟ್ ನಿಲ್ದಾಣದಿಂದ ಹೊರಟು 855 ಮೀಟರ್ ಸುರಂಗ ಕೊರೆದಿದ್ದ ವಿಂಧ್ಯಾ ಟಿಬಿಎಂ, 2022ರ ಆಗಸ್ಟ್ 18ರಂದು ಹೊರಬಂದಿತ್ತು. ಮುಂದುವರಿದು 680 ಮೀಟರ್ ಸುರಂಗ ಕೊರೆದು ಶಾದಿ ಮಹಲ್ ಬಳಿ ಶುಕ್ರವಾರ ಹೊರ ಬಂದಿದೆ. ಈ ಯಂತ್ರವು ಒಟ್ಟಾರೆ 2394 ಮೀಟರ್ ಸುರಂಗವನ್ನು ಯಶಸ್ವಿಯಾಗಿ ಕೊರೆದಿದೆ ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.

ನಾಳೆ ನೀರು ಪೂರೈಕೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ 1, 2ನೇ ಮತ್ತು ಮೂರನೇ ಹಂತದಿಂದ ನೀರು ಪೂರೈಕೆಯಾಗುವ ಪ್ರದೇಶಗಳಲ್ಲಿ ಫೆ.26ರಂದು ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ತಿಳಿಸಿದೆ.

ಟಿ.ಕೆ. ಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿನ ಕಾವೇರಿ 1, 2 ಮತ್ತು 3ನೇ ಹಂತದ ಯಂತ್ರಾಗಾರಗಳ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ. ಜತೆಗೆ, ಟಿ.ಕೆ. ಹಳ್ಳಿಯಲ್ಲಿ ಕೆಪಿಟಿಸಿಎಲ್ ವತಿಯಿಂದ ವಿದ್ಯುತ್ ಸ್ಥಾವರಗಳ ತುರ್ತು ನಿರ್ವಹಣೆ ಕಾರ್ಯಗಳನ್ನು ಕೈಗೊಳ್ಳುವುದರಿಂದ ಫೆ.26ರಂದು ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ನೇತಾಜಿ ನಗರ, ಆನಂದಪುರ, ಚಾಮರಾಜಪೇಟೆ, ವಾಲ್ಮೀಕಿ ನಗರ, ಶ್ರೀನಿವಾಸ ನಗರ, ವಿದ್ಯಾಪೀಠ, ಐಟಿಐ ಲೇಔಟ್, ವಿವೇಕಾನಂದ ನಗರ, ತ್ಯಾಗರಾಜ ನಗರ, ಬಸವನಗುಡಿ, ಎನ್.ಆರ್. ಕಾಲೊನಿ, ಅಶೋಕ್ ನಗರ, ಶ್ರೀನಗರ, ಬೃಂದಾವನನಗರ, ಸುಂಕೇನಹಳ್ಳಿ, ಶಾಂತಲಾ ನಗರ, ಅಂಬೇಡ್ಕರ್ ನಗರ, ನೀಲಸಂದ್ರ, ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ದೊಮ್ಮಲೂರು, ಚಂದ್ರಪ್ಪ ನಗರ, ಜೋಗಿ ಕಾಲೋಜಿ, ಕಸ್ತೂರಬಾ ನಗರ, ವಿ.ವಿ.ಪುರಂ, ಕಲಾಸಿಪಾಳ್ಯ, ಸುಧಾಮನಗರ, ಆದರ್ಶನಗರ, ಟಿಪ್ಪು ನಗರ, ವಿನಾಯಕ ನಗರ, ದ್ವಾರಕ ನಗರ, ರಾಮಂಜನೇಯ ನಗರ, ಆರ್‌ಬಿಐ ಕಾಲೋನಿ, ವಿಲ್ಸನ್ ಗಾರ್ಡನ್, ಎಸ್.ಆರ್. ನಗರ, ಶಾಂತಿ ನಗರ, ಸಂಪಂಗಿ ರಾಮನಗರ, ಗಾಂಧಿನಗರ, ಚಿಕ್ಕಪೇಟೆ, ಶಿವಾಜಿ ನಗರ, ಆರ್.ಟಿ. ನಗರ, ಜೆ.ಸಿ. ನಗರ, ಸದಾಶಿವನಗರ, ಮಲ್ಲೇಶ್ವರ ಸೇರಿ ವಿವಿಧ ಸ್ಥಳಗಳಲ್ಲಿ ವ್ಯತ್ಯಯವಾಗಲಿದೆ.

ರಾಜ್ಯ ದಂತ ಪರಿಷತ್ ಚುನಾವಣೆ: ಫಲಿತಾಂಶ ಪ್ರಕಟಣೆಗೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ರಾಜ್ಯ ದಂತ ಪರಿಷತ್ ಕಾರ್ಯಕಾರಿ ಮಂಡಳಿಯ ವಿವಿಧ ಪದಾಧಿಕಾರಿಗಳ ಹುದ್ದೆಗೆ ನಡೆಸಿರುವ ಚುನಾವಣೆಗೆ ಸಂಬಂಧಿಸಿದಂತೆ ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟಿಸದಂತೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಚುನಾವಣಾ ಅಧಿಸೂಚನೆ ಪ್ರಶ್ನಿಸಿ ಪರಿಷತ್ ಸದಸ್ಯೆಯೂ ಆದ ಕೋರಮಂಗಲದ ಡಾ.ರೋಹಿಣಿ ರೆಹಿನಾ ಮಲಿಕ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿ ಗಂಭೀರ ಲೋಪ ಉಂಟಾಗಿದೆ. ದಂತವೈದ್ಯರಾಗಿರುವ ಪರಿಷತ್ತಿನ ಸಾವಿರಾರು ಸದಸ್ಯರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಇಲ್ಲ. ದಂತವೈದ್ಯ ವೃತ್ತಿಯನ್ನು ತೊರೆದಿರುವ ಹಲವರ ಹೆಸರೂ ಈ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ. ಆದ್ದರಿಂದ, ರಿಟ್ ಅರ್ಜಿಯ ಮುಂದಿನ ವಿಚಾರಣೆವರೆಗೆ ಮತ ಎಣಿಕೆ ಕಾರ್ಯ ನಡೆಸಬಾರದು' ಎಂದು ನ್ಯಾಯಪೀಠ ನಿರ್ದೇಶಿಸಿದ್ದು, ವಿಚಾರಣೆಯನ್ನು ಮಾರ್ಚ್ 3ಕ್ಕೆ ಮುಂದೂಡಿದೆ.

ಕೋರಿಕೆ ಏನಿತ್ತು?: 'ಪರಿಷತ್‌ನಲ್ಲಿ 55 ಸಾವಿರ ಸದಸ್ಯರಿದ್ದು, ಮತದಾರರ ಪಟ್ಟಿಯಲ್ಲಿ ಕೇವಲ 14,623 ಸದಸ್ಯರ ಹೆಸರುಗಳಿವೆ. ಚುನಾವಣೆ ಪ್ರಕ್ರಿಯೆ ನಿಯಮಕ್ಕೆ ಅನುಗುಣವಾಗಿ ಇಲ್ಲ. ಹಾಗಾಗಿ, ಚುನಾವಣಾ ಅಧಿಸೂಚನೆ ರದ್ದುಪಡಿಸಬೇಕು. ಅರ್ಜಿ ಇತ್ಯರ್ಥವಾಗುವರೆಗೆ ಮತ ಎಣಿಕೆ ಮತ್ತು ಫಲಿತಾಂಶ ಪ್ರಕಟಿಸದಂತೆ ಮಧ್ಯಂತರ ಆದೇಶ ಹೊರಡಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.

ಚುನಾವಣೆ ನಡೆಸಲು 2023ರ ಜನವರಿ 2ರಂದು ಪರಿಷತ್ತಿನ ರಿಜಿಸ್ಟ್ರಾರ್ ಅಧಿಸೂಚನೆ ಹೊರಡಿಸಿದ್ದರು. ಚುನಾವಣಾಧಿಕಾರಿಯು ಜನವರಿ 4ರಂದು ಅಂತಿಮ ಮತದಾರರ ಪಟ್ಟಿ ಮತ್ತು ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದರು. ಅದರಂತೆ ಅಂಚೆ ಮತದಾನದ ಮೂಲಕ 2023ರ ಜನವರಿ 23ರಿಂದ ಇದೇ 22ರವರೆಗೆ ಮತದಾನ ನಡೆಸಲಾಗಿತ್ತು. ಇದೇ 24ರಂದು ಮತ ಎಣಿಕೆ ನಡೆಯಬೇಕಿತ್ತು.

ಚಿತ್ರಾವಳಿ


ಅಗ್ಲಿ ಇಂಡಿಯನ್ ಮತ್ತು ಬಿಬಿಎಂಪಿ ಪಾಲುದಾರಿಕೆಯೊಂದಿಗೆ ಬ್ರಿಗೇಡ್ ಗ್ರೂಪ್ ನಗರಕ್ಕೆ ಮಾರ್ಗಸೂಚಕವಾದ ಮೊದಲ 'ಕ್ರಾಸ್ ಓವರ್ ಪಾರ್ಕ್' ಅನ್ನು ನಾಗಶೆಟ್ಟಿಹಳ್ಳಿ ಬಳಿಯ ಮೇಲ್ಸೇತುವೆ ಕೆಳಗೆ ನಿರ್ಮಿಸಿದೆ


ಭಾರತೀಯ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯ ದಕ್ಷಿಣ ಭಾರತ ಪ್ರಾಂತೀಯ ಮಂಡಳಿ ಬೆಂಗಳೂರು ಶಾಖೆಯ 54ನೇ ಅಧ್ಯಕ್ಷರಾಗಿ ದಿವ್ಯಾ ರಾಘವೇಂದ್ರ ಅವರು ನಿರ್ಗಮಿತ ಅಧ್ಯಕ್ಷ ಟಿ. ಶ್ರೀನಿವಾಸ್ ಅವರಿಂದ ಅಧಿಕಾರ ಸ್ವೀಕರಿಸಿದರು

ಮಾಂಸ ತಿಂದು ದೇವಸ್ಥಾನಕ್ಕೆ ಹೋಗುವುದರ ಮೂಲಕ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದಿರುವ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರನ್ನು ಇನ್ನು ಮುಂದೆ ಯಾವುದೇ ದೇವಸ್ಥಾನಗಳಿಗೆ ಪ್ರವೇಶಿಸದಂತೆ ಮುಜರಾಯಿ ಇಲಾಖೆ ನಿಷೇಧಿಸಬೇಕು ಎಂದು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದರು

ಭಾರತ ಸರ್ಕಾರ – ರಕ್ಷಣಾ ಸಚಿವಾಲಯ
ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ
ವೈಮಾನಿಕ ವ್ಯವಸ್ಥೆಗಳ ಕೇಂದ್ರ
ಎಎಸ್ 9100ಡಿ & ಐಎಸ್‌ಒ 9001:2015 ಪ್ರಮಾಣೀಕೃತ ಸಂಸ್ಥೆ
ಬೇಲೂರ್, ಯಮಲೂರು ಅಂಚೆ, ಬೆಂಗಳೂರು – 560 037, ಭಾರತ

ಜಾಹೀರಾತು ಸಂ. ಸಿಎಬಿಎಸ್/ಅಡ್ಮಿನ್/ಎಫ್/6024/ಜೆಆರ್‌ಎಫ್–ರಿಕ್ರೂಟ್ಮ್–2/2022

ವೈಮಾನಿಕ ವ್ಯವಸ್ಥೆಗಳ ಕೇಂದ್ರ (ಸೆಂಟರ್ ಫಾರ್ ಏರ್‌ಬೋರ್ನ್ ಸಿಸ್ಟಮ್ಸ್–ಸಿಎಬಿಎಸ್) ಎಂಬ ಸಂಸ್ಥೆಯು, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಲ್ಲಿನ ಒಂದು ಪ್ರಮುಖ ಸಂಸ್ಥೆಯಾಗಿದ್ದು, ವೈಮಾನಿಕ ಕಣ್ಗಾವಲು ಕ್ಷೇತ್ರದಲ್ಲಿನ ವೈಮಾನಿಕ ತ್ವರಿತ ಎಚ್ಚರಿಕೆ ಮತ್ತು ನಿಯಂತ್ರಣ ವ್ಯವಸ್ಥೆಗಳು (ಏರ್‌ಬೋರ್ನ್ ಅರ್ಲಿ ವಾರ್ನಿಂಗ್ & ಕಂಟ್ರೋಲ್ ಸಿಸ್ಟಮ್ಸ್–ಎಇಡಬ್ಲ್ಯು&ಸಿ) ಮತ್ತು ಇನ್ನಿತರ ಯೋಜನೆಗಳ ವಿನ್ಯಾಸ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ.

ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್) ನೀಡಲಿಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಫೆಲೋಶಿಪ್ ಖಾಲಿಹುದ್ದೆಗಳು: (18)

ಭವಿಷ್ಯದ ಖಾಲಿಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ನಿಟ್ಟಿನಲ್ಲಿ, ಮೆರಿಟ್/ಡಿಸಿಪ್ಲಿನ್ ಆಧಾರದಲ್ಲಿ ಅಭ್ಯರ್ಥಿಗಳ ಒಂದು ಪ್ಯಾನೆಲ್ ರೂಪಿಸಲು ಉದ್ದೇಶಿಸಿದ್ದು, ಸದರಿ ಪ್ಯಾನೆಲ್ ಘೋಷಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಈ ಪ್ಯಾನೆಲ್ ಇರುತ್ತದೆ. ಡಿಸಿಪ್ಲಿನ್‌ವಾರು ಖಾಲಿಹುದ್ದೆಗಳು (ಹೆಚ್ಚಿನ ಖಾಲಿಹುದ್ದೆಗಳೂ ಸೇರಿದಂತೆ) ಈ ಕೆಳಗಿನಂತಿರುತ್ತವೆ:–

ಕ್ರ.ಸಂ.	ಡಿಸಿಪ್ಲಿನ್ಸ್	ಖಾಲಿ ಹುದ್ದೆಗಳು	ಅವಶ್ಯಕ ಪದವಿ ವಿದ್ಯಾರ್ಹತೆಯಲ್ಲಿ ಸ್ವೀಕಾರಾರ್ಹ ತತ್ಸಮಾನ ವಿಷಯಗಳು
1	ಏರೋನಾಟಿಕಲ್ ಇಂಜಿನಿಯರಿಂಗ್	01	ಏರೋನಾಟಿಕಲ್ ಇಂಜಿನಿಯರಿಂಗ್/ ಏರೋಸ್ಪೇಸ್ ಇಂಜಿನಿಯರಿಂಗ್/ ಏರೋಸ್ಪೇಸ್ ಇಂಜಿನಿಯರಿಂಗ್ (ಏವಿಯಾನಿಕ್ಸ್)
2	ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್	10	ಕಂಪ್ಯೂಟರ್ ಸೈನ್ಸ್/ಇಂಜಿನಿಯರಿಂಗ್/ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ / ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್/ಇಂಜಿನಿಯರಿಂಗ್ & ಐಟಿ, ಸಾಫ್ಟ್‌ವೇರ್ ಇಂಜಿನಿಯರಿಂಗ್/ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್ & ಆಟೋಮೇಶನ್ ಇಂಜಿನಿಯರಿಂಗ್/ಟೆಕ್, ಇನ್‌ಫಾರ್ಮೇಶನ್ ಟೆಕ್ನಾಲಜಿ, ಕಂಪ್ಯೂಟರ್ ಸೈನ್ಸ್/ಟೆಕ್ನಾಲಜಿ & ಇನ್‌ಫಾರ್ಮಾಟಿಕ್ಸ್ ಇಂಜಿನಿಯರಿಂಗ್/ಟೆಕ್, ಇನ್‌ಫಾರ್ಮೇಶನ್ ಸೈನ್ಸ್ & ಇಂಜಿನಿಯರಿಂಗ್/ಟೆಕ್ನಾಲಜಿ, ಕಂಪ್ಯೂಟರ್ & ಕಮ್ಯುನಿಕೇಶನ್ ಇಂಜಿನಿಯರಿಂಗ್, ಕಂಪ್ಯೂಟರ್ ನೆಟ್‌ವರ್ಕಿಂಗ್.
3	ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್	07	ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಕಂಪ್ಯೂಟರ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಕಂಟ್ರೋಲ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಸಿಸ್ಟಮ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಇನ್‌ಸ್ಟ್ರುಮೆಂಟೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಟೆಲಿ–ಕಮ್ಯುನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಟೆಲಿಮಾಟಿಕ್ಸ್ ಇಂಜಿನಿಯರಿಂಗ್, ಇಂಡಸ್ಟ್ರಿಯಲ್ ಇಲೆಕ್ಟ್ರಾನಿಕ್ ಇಂಜಿನಿಯರಿಂಗ್, ಟೆಲಿ–ಕಮ್ಯುನಿಕೇಶನ್ ಇಂಜಿನಿಯರಿಂಗ್, ಟೆಲಿಕಮ್ಯುನಿಕೇಶನ್ & ಇನ್‌ಫಾರ್ಮೇಶನ್ ಟೆಕ್ನಾಲಜಿ, ಅಪ್ಲೈಡ್ ಇಲೆಕ್ಟ್ರಾನಿಕ್ಸ್ & ಇನ್‌ಸ್ಟ್ರುಮೆಂಟೇಶನ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಇಲೆಕ್ಟ್ರಿಕಲ್ ಕಮ್ಯುನಿಕೇಶನ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ & ಕಮ್ಯುನಿಕೇಶನ್ ಇಂಜಿನಿಯರಿಂಗ್, ರೇಡಿಯೊ ಫಿಸಿಕ್ಸ್ & ಇಲೆಕ್ಟ್ರಾನಿಕ್ಸ್, ಇಲೆಕ್ಟ್ರಿಕಲ್ ಇಂಜಿನಿಯರಿಂಗ್, ಇಲೆಕ್ಟ್ರಿಕಲ್ & ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್ (ಏವಿಯಾನಿಕ್ಸ್).

ಸಂಶೋಧನಾ ಕ್ಷೇತ್ರ: ಏರೋಡೈನಾಮಿಕ್ಸ್, ಸ್ಟ್ರಕ್ಚರಲ್ ಡಿಸೈನ್ ಅನಾಲೈಸಿಸ್, ರಡಾರ್ ಇಂಜಿನಿಯರಿಂಗ್, ಕಮ್ಯುನಿಕೇಶನ್ ಇಂಜಿನಿಯರಿಂಗ್, ನೆಟ್‌ವರ್ಕಿಂಗ್ ಅಂಡ್ ಡಿಸ್‌ಪ್ಲೇ ಸಿಸ್ಟಮ್, ಮಿಷನ್ ಕಂಪ್ಯೂಟರ್, ಥರ್ಮಲ್ ಮ್ಯಾನೇಜ್‌ಮೆಂಟ್, ಎಐ/ಎಂಎಲ್.

ಸಂಶೋಧನಾ ಫೆಲೋಶಿಪ್ ಸ್ಥಳ: ಸೆಂಟರ್ ಫಾರ್ ಏರ್‌ಬೋರ್ನ್ ಸಿಸ್ಟಮ್ಸ್ (ಸಿಎಬಿಎಸ್), ಡಿಆರ್‌ಡಿಒ, ರಕ್ಷಣಾ ಸಚಿವಾಲಯ, ಬೇಲೂರ್, ಯಮಲೂರು ಅಂಚೆ, ಬೆಂಗಳೂರು – 560037.

ಕಾಲಾವಧಿ: ಆರಂಭದಲ್ಲಿ ಈ ಹುದ್ದೆಯು ಎರಡು ವರ್ಷಗಳ ಅವಧಿಯದಾಗಿದ್ದು, ಪರಿಶೀಲನಾ ಸಮಿತಿಯ ಮೌಲ್ಯಮಾಪನದ ಪ್ರಕಾರ ತೃಪ್ತಿಕರ ಸಾಧನೆಯ ನಿಬಂಧನೆಯ ಮೇರೆಗೆ ಎರಡು ವರ್ಷಗಳ ಅವಧಿಗೆ ವಿಸ್ತರಿಸಬಹುದಾಗಿರುತ್ತದೆ (ಒಂದು ಬಾರಿಗೆ ಒಂದು ವರ್ಷ ವಿಸ್ತರಣೆ).

ಸಂಭಾವನೆ: ಮಾಸಿಕ ಸಂಭಾವನೆ ರೂ. 31,000/– + ಹೌಸ್ ರೆಂಟ್ ಅಲೋವನ್ಸ್ (ಹೆಚ್‌ಆರ್‌ಎ) ಅನ್ವಯಿಸುತ್ತದೆ.

ಶೈಕ್ಷಣಿಕ ವಿದ್ಯಾರ್ಹತೆ: ಅಧಿಕೃತ ಗೇಟ್ ಸ್ಕೋರ್ ಜೊತೆಗೆ ಪ್ರಥಮ ದರ್ಜೆ ಬಿಇ/ಬಿ.ಟೆಕ್.

ಅಥವಾ

ಗ್ರಾಜುಯೇಟ್ ಮತ್ತು ಪೋಸ್ಟ್–ಗ್ರಾಜುಯೇಟ್, ಎರಡೂ ಹಂತದಲ್ಲಿ ಮೇಲಿನ ಡಿಸಿಪ್ಲಿನ್‌ಗಳಲ್ಲಿ ಎಂಇ/ಎಂ.ಟೆಕ್.
ಕೇವಲ ಗೇಟ್ ಸ್ಕೋರ್ 2021 ಮತ್ತು ಗೇಟ್ ಸ್ಕೋರ್ 2022 ಮಾತ್ರ ಪರಿಗಣಿಸಲಾಗುತ್ತದೆ.

ಗರಿಷ್ಠ ವಯೋಮಿತಿ: ಜಾಹೀರಾತಿನ ಕ್ಲೋಸಿಂಗ್ ದಿನಾಂಕದಂದು 28 ಮೀರಕೂಡದು. ಪ.ಜಾ/ಪ.ಪಂ ಅಭ್ಯರ್ಥಿಗಳಿಗೆ 5 ವರ್ಷಗಳ, ಒಬಿಸಿ (ನಾನ್–ಕ್ರೀಮಿ ಲೇಯರ್) ಅಭ್ಯರ್ಥಿಗಳಿಗೆ 3 ವರ್ಷಗಳ ಸಡಿಲಿಕೆ. ಅನ್ವಯವಾಗುವಂತಿದ್ದಲ್ಲಿ, ಅರ್ಜಿಯ ಜೊತೆಗೆ ಜಾತಿ ಪ್ರಮಾಣಪತ್ರ ಲಗತ್ತಿಸತಕ್ಕದ್ದು.

ಆಯ್ಕೆ ಪ್ರಕ್ರಿಯೆ: ಅಧಿಕೃತ ಗೇಟ್ ಸ್ಕೋರ್ ಮತ್ತು ಡಿಗ್ರಿ/ಪೋಸ್ಟ್ ಗ್ರಾಜುಯೇಟ್ ಡಿಗ್ರಿಯಲ್ಲಿ ಪಡೆದಿರುವ ಅಂಕಗಳ ಆಧಾರದಲ್ಲಿ ಅಭ್ಯರ್ಥಿಗಳ ಆಯ್ಕೆ ಮಾಡಲಾಗುತ್ತದೆ. ಅಭ್ಯರ್ಥಿಗಳು ಒಂದು ಚಾಲ್ತಿಯಲ್ಲಿರುವ ಇಮೇಲ್ ಐಡಿ ಹೊಂದಿರಬೇಕು. ಪರಿಶೀಲನಾ ಸಮಿತಿಯಿಂದ ಆಯ್ಕೆಗೊಳ್ಳುವ ಅಭ್ಯರ್ಥಿಗಳಿಗೆ, ಮುಂದಿನ ಆಯ್ಕೆ ಪ್ರಕ್ರಿಯೆಯನ್ನು ತಿಳಿಸಲಾಗುತ್ತದೆ. ಅದೇ ರೀತಿಯಲ್ಲಿ ಆನ್‌ಲೈನ್ ಸಂದರ್ಶನ/ನೇರ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ಕೂಡ ತಿಳಿಸಲಾಗುತ್ತದೆ. ಪ್ರಸ್ತುತ ಖಾಲಿಹುದ್ದೆಗಳಿಗೆ ಆಯ್ಕೆಗೊಂಡ ಯಶಸ್ವಿ ಅಭ್ಯರ್ಥಿಗಳ ಮತ್ತು ಭವಿಷ್ಯದ ಖಾಲಿಹುದ್ದೆಗಳ ಪ್ಯಾನೆಲ್ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು ಡಿಆರ್‌ಡಿಒ ವೆಬ್‌ಸೈಟ್‌ನಲ್ಲಿ (www.drdo.gov.in) ಅಪ್‌ಲೋಡ್ ಮಾಡಲಾಗುತ್ತದೆ.

ಅರ್ಜಿ ಸಲ್ಲಿಸುವ ವಿಧಾನ: ಕೆಳಗೆ ನೀಡಲಾಗಿರುವ ನಮೂನೆಯಲ್ಲಿ ಸಂಪೂರ್ಣ ಭರ್ತಿ ಮಾಡಿದ ಅರ್ಜಿಯನ್ನು ಕಡ್ಡಾಯವಾಗಿ jrf.rectt.cabs@gov.in ಇಮೇಲ್ ವಿಳಾಸಕ್ಕೆ ರವಾನಿಸತಕ್ಕದ್ದು. ಅರ್ಜಿ ನಮೂನೆಯನ್ನು ಡಿಆರ್‌ಡಿಒ ಸಂಸ್ಥೆಯ (www.drdo.gov.in) ವೆಬ್‌ಸೈಟ್‌ನಲ್ಲಿರುವ ವಾಟ್ಸ್ ನ್ಯೂ ಸೆಕ್ಷನ್‌ನಿಂದ ಕೂಡ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿರ್ದಿಷ್ಟ ನಮೂನೆಯಲ್ಲಿ ಭರ್ತಿ ಮಾಡಿ ಸಹಿ ಹಾಕಿದ ಅರ್ಜಿಯನ್ನು ಇಮೇಲ್ ಮಾಡುವಾಗ, ಅದರ ಜೊತೆಗೆ ಸ್ವಯಂದೃಢೀಕರಿಸಿದ ಮತ್ತು ಸ್ಕ್ಯಾನ್ ಮಾಡಿದ ಅಗತ್ಯ ಪ್ರಮಾಣಪತ್ರಗಳ ಅಥವಾ ಡಿಗ್ರಿ ಪ್ರಮಾಣಪತ್ರಗಳ ಪ್ರತಿಗಳನ್ನು ಕೂಡ ಸಲ್ಲಿಸತಕ್ಕದ್ದು. ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ, 21ನೇ ದಿನ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವಾಗಿರುತ್ತದೆ. ಅಪೂರ್ಣ/ನಿಗದಿತ ದಿನಾಂಕದ ಬಳಿಕ ಸಂದಾಯವಾಗುವ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.

ಸಾಮಾನ್ಯ ಸೂಚನೆಗಳು:
1. ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಮತ್ತು ಇನ್ನಿತರ ಎಲ್ಲಾ ದಾಖಲಾತಿಗಳನ್ನು ಒಂದೇ ಪಿಡಿಎಫ್ ಫೈಲ್‌ನಲ್ಲಿ ಸ್ಕ್ಯಾನ್ ಮಾಡಬೇಕು ಮತ್ತು ಸದರಿ ಫೈಲ್‌ನ ಗಾತ್ರ 10 ಎಂ.ಬಿ.ಗಿಂತ ಹೆಚ್ಚು ಆಗಿರಕೂಡದು. (ಫೈಲ್ ನೇಮ್ ಹೀಗಿರಬೇಕು: ಡಿಸಿಪ್ಲಿನ್_ಅಭ್ಯರ್ಥಿಯ ಸಂಪೂರ್ಣ ಹೆಸರು).
2. ಅರ್ಹತಾ ಪರೀಕ್ಷೆಯಲ್ಲಿ ಪಡೆದಿರುವ ಅಂಕಗಳನ್ನು ಶೇಕಡವಾರು ಮಾದರಿಯಲ್ಲಿ ಉಲ್ಲೇಖಿಸಬೇಕು. ಸಿಜಿಪಿಎ ಆಗಿದ್ದಲ್ಲಿ, ತಮ್ಮ ವಿಶ್ವವಿದ್ಯಾಲಯದ ನಿಯಮಗಳ ಅನುಸಾರ ಸಿಜಿಪಿಎ ಅನ್ನು ಶೇಕಡವಾರು ಮಾದರಿಗೆ ಪರಿವರ್ತಿಸಬೇಕೆಂದು ಅಭ್ಯರ್ಥಿಗಳನ್ನು ಕೋರಲಾಗಿದೆ.
3. ಸರ್ಕಾರಿ ಇಲಾಖೆ/ಪಿಎಸ್‌ಯು/ಸ್ವಾಯುತ್ತ ಅಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು, ಕಡ್ಡಾಯವಾಗಿ ಸೂಕ್ತ ಮಾದರಿಯಲ್ಲಿ ಅರ್ಜಿ ಸಲ್ಲಿಸುವುದು. ಸಂದರ್ಶನಕ್ಕೆ ಆಯ್ಕೆಗೊಂಡ ಅಭ್ಯರ್ಥಿಗಳು, ಸಂದರ್ಶನಕ್ಕೆ ಮುಂಚಿತವಾಗಿಯೇ ಮೇಲ್ಕಂಡ ಇಮೇಲ್ ವಿಳಾಸಕ್ಕೆ **'ನಿರಾಕ್ಷೇಪಣಾ ಪ್ರಮಾಣಪತ್ರ'** ಸಲ್ಲಿಸುವುದು/ಅಪ್‌ಲೋಡ್ ಮಾಡುವುದು ಕಡ್ಡಾಯ.
4. ಆನ್‌ಲೈನ್ ಸಂದರ್ಶನದ ಸಂದರ್ಭದಲ್ಲಿ, ಅಭ್ಯರ್ಥಿಗಳು ಆನ್‌ಲೈನ್ ಸಂದರ್ಶನಕ್ಕೆ ಹಾಜರಾಗಲು (ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ) ತಮ್ಮದೇ ಸ್ವಂತದ ಇಂಟರ್‌ನೆಟ್ ಕನೆಕ್ಟಿವಿಟಿ, ವೆಬ್‌ಕ್ಯಾಮ್ ಮತ್ತು ಅಗತ್ಯ ಸಾಫ್ಟ್‌ವೇರ್‌ಗಳನ್ನು ಸಜ್ಜುಗೊಳಿಸಿಕೊಳ್ಳಬೇಕು. ಸಂದರ್ಶನದ ಸಮಯದಲ್ಲಿ ಎದುರಾಗಬಹುದಾದ ಯಾವುದೇ ಕನೆಕ್ಟಿವಿಟಿ ವೈಫಲ್ಯತೆಗೆ ಅಥವಾ ಕಮ್ಯುನಿಕೇಶನ್ ದೋಷಗಳಿಗೆ ಸಿಎಬಿಎಸ್/ಡಿಆರ್‌ಡಿಒ ಹೊಣೆಯಾಗಿರುವುದಿಲ್ಲ.
5. ಸದರಿ ಫೆಲೋಶಿಪ್‌ನ ಆಫರ್‌ನಿಂದಾಗಿ, ಫೆಲೋಶಿಪ್‌ನ ಮೇಲೆ ಅಥವಾ ಡಿಆರ್‌ಡಿಒ ಸಂಸ್ಥೆಯಲ್ಲಿ ಸೇರಿಸಿಕೊಳ್ಳುವ/ಉದ್ಯೋಗದ ಯಾವುದೇ ಹಕ್ಕು ಸೃಷ್ಟಿಯಾಗುವುದಿಲ್ಲ ಎಂಬುದು ಗಮನದಲ್ಲಿರಲಿ.
6. ಜಾಯ್ನಿಂಗ್ ಸಮಯದಲ್ಲಿ ಆಯ್ಕೆಗೊಂಡ ಅಭ್ಯರ್ಥಿಗಳ ಪೂರ್ವಾಪರಗಳನ್ನು ಪರಿಶೀಲಿಸಲಾಗುತ್ತದೆ. ಒಂದು ವೇಳೆ, ದಾಖಲಾತಿಗಳಲ್ಲಿ ಯಾವುದೇ ರೀತಿಯ ಕೊರತೆ ಕಂಡುಬಂದಲ್ಲಿ, ಸ್ವಯಂಚಾಲಿತವಾಗಿ ಅಭ್ಯರ್ಥಿತನವು ರದ್ದುಗೊಳ್ಳುತ್ತದೆ.
7. ಪ್ಯಾನೆಲ್ ಘೋಷಣೆಯಾದ ಮಾತ್ರಕ್ಕೆ ಜೆಆರ್‌ಎಫ್ ಲಭಿಸಿತು ಎಂದು ಭಾವಿಸುವಂತಿಲ್ಲ. ಮೆರಿಟ್ ಆಧಾರದ ಮೇರೆಗೆ ಪ್ಯಾನೆಲ್‌ನಲ್ಲಿನ ಭವಿಷ್ಯದ ಖಾಲಿಹುದ್ದೆಗಳ ಆಧಾರದಲ್ಲಿ ಔಪಚಾರಿಕ ಪತ್ರ ರವಾನಿಸಲಾಗುತ್ತದೆ.
8. ಅಭ್ಯರ್ಥಿಗಳಿಗೆ ಇ–ಮೇಲ್ ಮುಖಾಂತರ ಮಾಹಿತಿ ನೀಡಲಾಗುತ್ತದೆ, ಆದ್ದರಿಂದ ಆಗಾಗ್ಗೆ ನಿಮ್ಮ ಇಮೇಲ್ ವಿಳಾಸಗಳನ್ನು ಪರಿಶೀಲಿಸಿಕೊಳ್ಳುತ್ತಿರಬೇಕು ಎಂದು ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.

ನಿರ್ದೇಶಕರು, ಸಿಎಬಿಎಸ್

ಸಿಎಬಿಎಸ್ (ಡಿಆರ್‌ಡಿಒ), ಬೆಂಗಳೂರು ಇಲ್ಲಿನ ಜೂನಿಯರ್ ರಿಸರ್ಚ್ ಫೆಲೋಶಿಪ್‌ಗಾಗಿ ಅರ್ಜಿ ನಮೂನೆ

(ಅಭ್ಯರ್ಥಿಗಳು ತಮ್ಮ ಸ್ವಂತ ಕೈಬರದಿಂದ ಭರ್ತಿ ಮಾಡುವುದು)

ಹೆಸರು/ಫೆಲೋಶಿಪ್ ಮಾದರಿ .... ಜಾಹೀರಾತು ಸಂ. ....

ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರ ಅಂಟಿಸಿ

01. ಪೂರ್ಣ ಹೆಸರು ಬ್ಲಾಕ್ ಅಕ್ಷರಗಳಲ್ಲಿ :
02. (1) ತಂದೆಯ ಹೆಸರು :
(2) ತಾಯಿಯ ಹೆಸರು :
(3) ಜೀವನ ಸಂಗಾತಿ ಹೆಸರು (ಅನ್ವಯವಾದಲ್ಲಿ) (ಬ್ಲಾಕ್ ಅಕ್ಷರಗಳಲ್ಲಿ) :
03. (ಎ) ಲಿಂಗ: ಪುರುಷ/ಮಹಿಳೆ/ತೃತೀಯ ಲಿಂಗ 3(ಬಿ) ಪ್ರವರ್ಗ: ಸಾಮಾನ್ಯ ಪ.ಜಾ. ಪ.ಪಂ. ಒಬಿಸಿ
3(ಸಿ) ಜನ್ಮದಿನಾಂಕ: ಡಿಡಿ/ ಎಂಎಂ/ ವೈವೈವೈವೈ 3(ಡಿ) ವಯಸ್ಸು ವರ್ಷ ತಿಂಗಳು
04. ಪತ್ರವ್ಯವಹಾರಕ್ಕೆ ವಿಳಾಸ : ಪಿನ್ ಕ್ರಮಾಂಕ:
05. ಶಾಶ್ವತ ವಿಳಾಸ : ಪಿನ್ ಕ್ರಮಾಂಕ:
06 ಸಂಪರ್ಕ ವಿವರ: ಫೋನ್ (ಎಸ್‌ಟಿಡಿ ಕೋಡ್ ಸಮೇತ): ಮೊಬೈಲ್: +91
ಪರ್ಯಾಯ ಸಂಖ್ಯೆ ಇದ್ದಲ್ಲಿ:
07. (1) ಇ–ಮೇಲ್ ಐಡಿ :
(2) ಪರ್ಯಾಯ ಇ–ಮೇಲ್ ಐಡಿ :
08. ಶೈಕ್ಷಣಿಕ ವಿದ್ಯಾರ್ಹತೆ (ಮೆಟ್ರಿಕ್/10ನೇ/ಹೆಚ್‌ಎಸ್‌ಸಿ ಇಂದ, ಸ್ವಯಂದೃಢೀಕೃತ ಪ್ರತಿಗಳನ್ನು ಲಗತ್ತಿಸುವುದು)

ಉತ್ತೀರ್ಣಗೊಂಡ ಪರೀಕ್ಷೆ	ವಿಷಯಗಳು	ಮಂಡಳಿ/ವಿಶ್ವವಿದ್ಯಾಲಯ	ಉತ್ತೀರ್ಣಗೊಂಡ ತಿಂಗಳು & ವರ್ಷ	ದರ್ಜೆ/ಕ್ಲಾಸ್/ಗ್ರೇಡ್	ಶೇಕಡವಾರು (%)/ಸಿಜಿಪಿಎ

09. ಅನುಭವ (ಲಭ್ಯವಿದ್ದಲ್ಲಿ) ಸೂಚನೆ: ಸೇವೆ ಮಾಡಿದ ಉದ್ಯೋಗದ ವಿವರಗಳಿಗೆ (ಸಂಕ್ಷಿಪ್ತ ವಿವರ) ಹೆಚ್ಚಿನ ಕಾಗದ ಅವಶ್ಯವಿದ್ದರೆ, ಹೆಚ್ಚುವರಿ ಕಾಗದ ಲಗತ್ತಿಸುವುದು.

ಹುದೆಯ ಹೆಸರು/ಪದನಾಮ	ಸಂಸ್ಥೆ/ಇಲಾಖೆಯ ಹೆಸರು	ಇಂದ	ವರೆಗೆ

10. ಯುಜಿಸಿ/ಸಿಎಸ್‌ಐಆರ್/ಎನ್‌ಇಟಿ/ಗೇಟ್ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದೀರಾ: ಹೌದು ಇಲ್ಲ
ಹೌದು ಎಂದಾದಲ್ಲಿ, ಎನ್‌ರೋಲ್‌ಮೆಂಟ್/ರೋಲ್ ನಂ. .... ವರ್ಷ........... ಸ್ಕೋರ್.......... ವ್ಯಾಲಿಡಿಟಿ........... ವಿವರಗಳನ್ನು ನೀಡಿ (ಪುರಾವೆ ಲಗತ್ತಿಸುವುದು)
11. ನೀವು ಯಾವತ್ತಾದರೂ ನೇಮಕಾತಿ ಪರೀಕ್ಷೆಯಲ್ಲಿ ಸರ್ಕಾರಿ ಸಂಸ್ಥೆಗಳಿಂದ ಡಿಬಾರ್ ಆಗಿದ್ದೀರಾ?: ಹೌದು ಇಲ್ಲ ಹೌದು ಎಂದಾದಲ್ಲಿ ವಿವರಗಳನ್ನು ನೀಡಿ:
12. ಘೋಷಣೆ: ನಾನು ಈ ಮೂಲಕ ಘೋಷಿಸುವುದು ಏನೆಂದರೆ, ನನಗೆ ತಿಳಿದಿರುವಂತೆ ಇಲ್ಲಿ ಮೇಲೆ ತಿಳಿಸಲಾಗಿರುವ ವಿವರಗಳು ಸರಿಯಾಗಿರುತ್ತವೆ ಮತ್ತು ಯಾವುದೇ ಮಾಹಿತಿಯನ್ನು ಮರೆಮಾಚಲಾಗಿಲ್ಲ. ಒಂದು ವೇಳೆ ಯಾವುದೇ ಸಮಯದಲ್ಲಾದರೂ ಸರಿ, ನಾನು ನೀಡಿರುವ ಮಾಹಿತಿ ತಪ್ಪಾಗಿದೆ/ಮರೆಮಾಚಲಾಗಿದೆ ಎಂದು ಕಂಡುಬಂದಲ್ಲಿ, ಯಾವುದೇ ಪೂರ್ವ ಸೂಚನೆ ನೀಡದೆಯೆ ನನ್ನ ಫೆಲೋಶಿಪ್‌ನ್ನು ರದ್ದುಪಡಿಸಬಹುದಾಗಿರುತ್ತದೆ. ಸಮಯ ಸಂದರ್ಭಕ್ಕೆ ಅನುಸಾರವಾಗಿ, ಭಾರತದಲ್ಲಿ ಎಲ್ಲಿಯಾದರೂ ಸರಿ, ನೀಡಿದ ಕರ್ತವ್ಯ ನಿಭಾಯಿಸಲು ಸಿದ್ಧನಾಗಿರುತ್ತೇನೆ.

ಸ್ಥಳ:
ದಿನಾಂಕ:
ಅಭ್ಯರ್ಥಿಯ ಸಹಿ

CBC 10301/11/0186/2223

ಅತಿ ಪ್ರೀತಿ ಅಧೋಗತಿ!?

ಅತಿಯಾದ ಪ್ರೀತಿಯೂ ಮುಳುವಾದೀತೇ? ಹೌದೆನ್ನುವ ಕಥೆ ಹೇಳುತ್ತಾ ಬರುತ್ತಿದೆ 'ಬಾ ನಲ್ಲೆ ಮದುವೆಗೆ'. ಚಿತ್ರ ತಂಡ ಹೇಳುವ ಪ್ರಕಾರ ಅತಿಯಾಗಿ ಪ್ರೀತಿಸುವುದೂ ಒಳ್ಳೆಯದಲ್ಲವಂತೆ! ಅದಕ್ಕಾಗಿಯೇ 'ಹುಡುಗಿ ನೋಡಿ ಹುಚ್ಚರಾಗಬೇಡಿ' ಎಂದು ಚಿತ್ರದ ಶೀರ್ಷಿಕೆಗೆ ಅಡಿಬರಹ ಇಡಲಾಗಿದೆ.

ಎಂ.ಯೋಗೇಶ್ ನಂದನ್ ಸಿನಿಮಾಕ್ಕೆ ರಚನೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ, ನಿರ್ದೇಶನ ಜತೆಗೆ ಭುಜಂಗೇಶ್ವರ ಉರುಕಾತೇಶ್ವರಿ ಮೂವೀಸ್ ಅಡಿಯಲ್ಲಿ ನಿರ್ಮಾಣ ಮಾಡಿದ್ದಾರೆ. ಹೊಸಬರ ಚಿತ್ರತಂಡವಿದು. ಇತ್ತೀಚೆಗೆ ಲವ್ಲಿ ಸ್ಟಾರ್ ಪ್ರೇಮ್ ಚಿತ್ರದ ಪೋಸ್ಟರ್ ಬಿಡುಗಡೆಗೊಳಿಸಿದರು.

ಹಳ್ಳಿ ಹುಡುಗನಾಗಿ ಅರ್ಜುನ್ ನಾಯಕ. ಮುಗ್ಧ ಹುಡುಗಿಯಾಗಿ ಶೋಭಾ ನಾಯಕಿ. ಇವರೊಂದಿಗೆ ಮೀಸೆ ಆಂಜನಪ್ಪ, ನಾಗೇಶ್ ಮಯ್ಯ, ಮೈಸೂರು ಮಂಜುಳಾ ಜೊತೆಗೆ ಹಲವು ಹೊಸ ಪ್ರತಿಭೆಗಳು ಈ ಚಿತ್ರದಲ್ಲಿವೆ. ಐದು ಹಾಡುಗಳಿಗೆ ದಿನೇಶ್‌ಕುಮಾರ್ ಸಂಗೀತ ಸಂಯೋಜಿಸಿದ್ದಾರೆ. ಛಾಯಾಗ್ರಹಣ ಪ್ರಸನ್ನಕುಮಾರ್, ಸಂಕಲನ ರಘು, ಸಾಹಸ ಕೌರವ ವೆಂಕಟೇಶ್, ನೃತ್ಯ ರಾಜ್‌ದೇವು ಅವರದ್ದು.

ಇಂದು 'ತಂತಿಯಲ್ಲಿ ತೋಂ.. ತನನ'

ವೀಣಾ ವಾರುಣಿ ಸಾರಥ್ಯದಲ್ಲಿ ಗಾಯನ ರಸಸಂಜೆ

ಕಲೆ

ಖ್ಯಾತ ವೀಣಾ ವಾದಕಿ ವೀಣಾ ವಾರುಣಿ ಅವರ ಸಾರಥ್ಯದಲ್ಲಿ ಇಂದು (ಶನಿವಾರ) ಸಂಜೆ 5ಕ್ಕೆ ಎನ್.ಆರ್. ಕಾಲೊನಿಯ ಪತ್ತಿ ಸಭಾಂಗಣದಲ್ಲಿ 'ತಂತಿಯಲ್ಲಿ ತೋಂ.. ತನನ' – ಜನಪ್ರಿಯ ಚಿತ್ರಗೀತೆಗಳ ವಾದನ–ಗಾಯನ ರಸಸಂಜೆ ಹಾಗೂ ವೀಣಾ ವಾದನ ಕಾರ್ಯಕ್ರಮ ಆಯೋಜಿಸಲಾಗಿದೆ.

ವೀಣಾ ವಾರುಣಿ ಅವರು ಸಂಗೀತ ಕ್ಷೇತ್ರ ಪ್ರವೇಶಿಸಿ 50 ವರ್ಷಗಳು ಸಂದಿರುವ ಹಿನ್ನೆಲೆಯಲ್ಲಿ ಹಾಗೂ ಅವರ ತಂದೆಯ ಸ್ಮರಣಾರ್ಥ ಈ ಗಾಯನ ರಸಸಂಜೆ ಹಾಗೂ ವೀಣಾ ವಾದನ ಕಾರ್ಯಕ್ರಮ ಆಯೋಜಿಸಲಾಗಿದೆ.

ಖ್ಯಾತ ವೈದ್ಯರು ಹಾಗೂ 'ಥಟ್ ಅಂತ ಹೇಳಿ' ಕಾರ್ಯಕ್ರಮದ ರೂವಾರಿಗಳಾದ ಡಾ. ನಾ. ಸೋಮೇಶ್ವರ, ಸಂಗೀತ ನಿರ್ದೇಶಕ ವಿ. ಮನೋಹರ್, ಅಧ್ಯಾತ್ಮ ಚಿಂತಕಿ ಶಾರದಾ ಶ್ರೀಧರ್, ಹಿರಿಯ ಸಾಹಿತಿ ಡಾ. ವಿ.ವಿ. ಗೋಪಾಲ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ವೈದ್ಯೆ ಹಾಗೂ ಸುಗಮ ಸಂಗೀತ ಗಾಯಕಿ ಡಾ. ರೋಹಿಣಿ ಮೋಹನ್, ಜ್ಯೋತಿಷಿ ಭಾಗ್ಯಶ್ರೀ ಚಂದ್ರಶೇಖರ್, ಜಂಕಾರ್ ಆಡಿಯೋಸ್‌ನ ಭರತ್ ಜೈನ್, ಸಂಗೀತ ಕಲಾಭಿಮಾನಿಗಳಾದ ಜಯಂತಿ ಮುನಿರಾಜು ಮತ್ತು ಉದಯ ಶಂಕರ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುತ್ತಾರೆ.

ಗಾಯನ ರಸಸಂಜೆ.....

ಗಾಯನ ರಸಸಂಜೆಯಲ್ಲಿ ವೀಣಾ ವಾರುಣಿಯವರೊಂದಿಗೆ, ಗಾಯಕ ಮೋಹನ್ ಕೃಷ್ಣ, ಗಾಯಕಿಯರಾದ ಜೋಗಿ ಸುನಿತಾ, ಭೂಮಿಕಾ ಮಧುಸೂದನ್ ಭಾಗವಹಿಸುತ್ತಿದ್ದಾರೆ.

ಪಕ್ಕವಾದ್ಯದಲ್ಲಿ ಜಯಚಂದ್ರ ಆಚಾರ್ ಹಾಗೂ ಶಿವಶಂಕರ್ – ತಬಲ, ನಟರಾಜ್ –ಡೋಲಕ್, ಪ್ರಿಯಾ – ಡ್ರಮ್ಸ್, ಸುದರ್ಶನ್ – ಕೊಳಲು, ದೀಪಕ್ – ಕೀಬೋರ್ಡ್.

ವೀಣಾ ವಾರುಣಿ

ವೀಣಾ ವಾರುಣಿ

ಸಂಗೀತ ವಿದ್ವಾನ್ ದಿವಂಗತ ಟಿ.ಪಿ. ಕೃಷ್ಣಮೂರ್ತಿ ಹಾಗೂ ಲತಾ ಮೂರ್ತಿ ಅವರ ಪುತ್ರಿ ವೀಣಾ ವಾರುಣಿ. ಬೆಂಗಳೂರಿನ ಜಯನಗರದ ನಿವಾಸಿ ವೀಣಾ ಅವರಿಗೆ ಬಾಲ್ಯದಿಂದಲೇ ಸಂಗೀತದಲ್ಲಿ ಒಲವು. ಎಂಟರ ಕಿಶೋರಿಯಾಗಿದ್ದಾಗಿನಿಂದ ಈವರೆಗೆ ವೇದಿಕೆಯಲ್ಲಿ ಗಾಯಕಿ, ವೀಣಾವಾದಕಿ ಹಾಗೂ ಸಂಗೀತ ನಿರ್ದೇಶಕಿಯಾಗಿ ಮಿಂಚುತ್ತಿದ್ದಾರೆ. ಶಾಸ್ತ್ರೀಯ, ಲಘು ಸಂಗೀತ, ಸಿನಿಮಾ ಹಾಡುಗಳಿಗೆ ವೀಣೆ ನುಡಿಸಿದ್ದಾರೆ. ಗಾಯನದಲ್ಲೂ ಹೆಸರು ಮಾಡಿದ್ದಾರೆ. ಹೆಸರಾಂತ ಸಂಗೀತ ನಿರ್ದೇಶಕರ ಜೊತೆ ಕೆಲಸ ಮಾಡಿರುವ ವೀಣಾ ವಾರುಣಿ ಅವರು ಈವರೆಗೂ 140ಕ್ಕೂ ಹೆಚ್ಚು ಚಿತ್ರಗಳ ಹಾಡುಗಳಿಗೆ ವೀಣಾ ವಾದನ ನೀಡಿರುವುದು ಬಹಳ ವಿಶೇಷ.

ಮೈಸೂರು ದಸರಾ, ಉದಯರಂಗ, ಕನ್ನಡ ಸಂಸ್ಕೃತಿ ವಿಭಾಗದ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವೀಣಾವಾದನವನ್ನು ಮಾಡಿದ್ದಾರೆ. ಗಾನಕಲಾ ಪರಿಷತ್, ರಾಮ ಸೇವಾ ಮಂಡಳಿ, ಮಲ್ಲೇಶ್ವರಂ ಸಂಗೀತ ಸಭಾದಲ್ಲಿ ಇವರ ಕಛೇರಿಗಳು ನಿರಂತರವಾಗಿ ನಡೆಯುತ್ತಿರುತ್ತವೆ.

ವೀಣಾ ಅವರ ಸಂಗೀತ ಸೇವೆಯನ್ನು ಗೌರವಿಸಿ, ಪೇಜಾವರ ಶ್ರೀಗಳು 'ವೀಣಾ ವಾರುಣಿ' ಎಂಬ ಬಿರುದು ನೀಡಿದ್ದಾರೆ. ಜ್ಯೋತಿ ಕಲಾ ಸಂಘ 'ವೈಣಿಕ ವಿದ್ವಾನ್ ಮಣಿ', ಸಂಗೀತ ಸುಧಾ ರತ್ನ, ವೀಣಾ ಮಯೂರಿ ಸೇರಿದಂತೆ ಹಲವು ಬಿರುದುಗಳ ಗೌರವ ದೊರೆತಿದೆ.

ಆರೋಗ್ಯ ಸಂಜೀವಿನಿ

ಸರ್ವಜ್ಞ ಹೆಲ್ತ್ ಕೇರ್ ಇನ್ಸ್ಟಿಟ್ಯೂಟ್

ಶಾಸಕ ಕೆ. ಜೆ. ಜಾರ್ಜ್ ಅವರು ಸರ್ವಜ್ಞ ನಗರದಲ್ಲಿ ಸ್ಥಾಪಿಸಿರುವ ಸರ್ವಜ್ಞ ಹೆಲ್ತ್ ಕೇರ್ ಇನ್ಸ್ಟಿಟ್ಯೂಟ್ ಜನರಿಗೆ ಅಗತ್ಯವಾದ ಎಲ್ಲ ರೀತಿಯ ಆರೋಗ್ಯ ಸೌಲಭ್ಯಗಳನ್ನು ಒದಗಿಸುತ್ತದೆ. ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ನೀಡುವ ಜೊತೆಗೆ ಗುಣಮಟ್ಟವನ್ನೂ ಕಾಯ್ದುಕೊಂಡಿದೆ.

ಆರೋಗ್ಯ ಭಾಗ್ಯ ಮಹಾ ಭಾಗ್ಯ ಎಂದು ನಮ್ಮ ಹಿರೀಕರು ಹೇಳುತ್ತಾರೆ. ಪ್ರಸ್ತುತ ಬದಲಾಗುತ್ತಿರುವ ಜೀವನ ಶೈಲಿಯಿಂದಾಗಿ ಆರೋಗ್ಯವನ್ನ ಕಾಪಾಡಿಕೊಳ್ಳುವುದು ಮತ್ತು ಸದೃಢರಾಗಿರುವುದು ಕೂಡ ಸವಾಲೇ ಸರಿ. ನಾವು ಸೇವಿಸುವ ಆಹಾರ, ಕೆಲಸದಲ್ಲಿ ಒತ್ತಡ ಹಾಗೂ ದೇಹ ದಂಡಿಸದಿರುವುದು ಮುಂತಾದ ಕಾರಣಗಳಿಂದಾಗಿ ಮಧುಮೇಹ, ರಕ್ತದೊತ್ತಡದಂತಹ ಖಾಯಿಲೆಗಳಿಗೆ ತುತ್ತಾಗುವ ನಾಗರಿಕರು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗುವುದು ಮಾಮೂಲು. ದುಬಾರಿ ಶುಲ್ಕ ಕಟ್ಟುವ ಮೂಲಕ ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದು ನಗರಗಳಲ್ಲಿ ಸರ್ವೇ ಸಾಮಾನ್ಯ ಎನಿಸಿಬಿಟ್ಟಿದೆ. ಈ ಎಲ್ಲಾ ಸಮಸ್ಯೆಗಳ ಅರಿವಿದ್ದ ಶಾಸಕರಾದ ಕೆ.ಜೆ. ಜಾರ್ಜ್ ಅವರು. ಸರ್ವಜ್ಞ ಹೆಲ್ತ್‌ಕೇರ್ ಇನ್ಸ್ಟಿಟ್ಯೂಟ್ ತೆರೆದು ಬಡವರು ಹಾಗೂ ಎಲ್ಲ ವರ್ಗದ ನಾಗರಿಕರಿಗೆ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಯಶ ಕಂಡಿದ್ದಾರೆ.

ಶಾಸಕ ಕೆ.ಜೆ.ಜಾರ್ಜ್ ಅವರ ಕಲ್ಪನೆಯ ಕೂಸು ಸರ್ವಜ್ಞ ಹೆಲ್ತ್ ಕೇರ್ ಇನ್ಸ್ಟಿಟ್ಯೂಟ್

2014 ರಲ್ಲಿ ಸ್ಥಾಪಿಸಲಾಗಿರುವ ಇದು ಲಾಭರಹಿತ ಆರೋಗ್ಯ ಸಂಸ್ಥೆಯಾಗಿದೆ. ಸಮಾಜದಲ್ಲಿ ಗಂಭೀರ ವಾಗಿ ತಲೆ ಎತ್ತುತ್ತಿರುವ, ಮಧುಮೇಹ, ಅಧಿಕ ರಕ್ತದೊತ್ತಡ, ಇತ್ಯಾದಿ ಜೀವ ಮಾನವಿಡೀ ವಾಸಿಯಾಗದಂತಹ ಖಾಯಿಲೆಗಳ ಜೊತೆ ಜೀವಿಸಬೇಕಾದ ವರಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯ ಮತ್ತು ಔಷಧಿ ಪಡೆಯ ಬೇಕಾದ ಅವಶ್ಯಕತೆಯಿದೆ. ಆದರೆ ಸಾಕಷ್ಟು ಜನ ಚಿಕಿತ್ಸೆ ಪಡೆಯಲು ಅಶಕ್ತರಾಗಿರುವುದರಿಂದ ಖಾಯಿಲೆ ಗಳು ಉಲ್ಬಣಗೊಂಡು ಜೀವಹಾನಿಗೂ ಕಾರಣವಾಗಬಹು ದಾಗಿದೆ. ಹಾಗಾಗಿ ಈ ಎಲ್ಲದರ ಅರಿವಿದ್ದ ಜಾರ್ಜ್ ರವರು ಬಡವರಿಗೆ ಹಾಗೂ ದುರ್ಬಲ ವರ್ಗದವರಿಗೆ ಉಚಿತವಾಗಿ ಚಿಕಿತ್ಸೆ ಹಾಗೂ ಔಷಧಗಳು ದೊರೆಯಲಿ ಎಂಬ ಸದಾಶಯದೊಂದಿಗೆ ಈ ಸಂಸ್ಥೆಯನ್ನ ಸ್ಥಾಪಿಸಿದ್ದಾರೆ, ಇದರಲ್ಲಿ ಉಚಿತ ಡಯಾಲಿಸಿಸ್ ಘಟಕವೂ ಒಳಗೊಂಡು ಅತ್ಯಾಧುನಿಕ ಸೌಲಭ್ಯಗಳಿವೆ, ಕೆಲ ವರ್ಷಗಳಲ್ಲಿಯೇ ಸರ್ವಜ್ಞ ಹೆಲ್ತ್ ಕೇರ್ ಇನ್ಸ್ಟಿಟ್ಯೂಟ್ ಜನ ಸಾಮಾನ್ಯರ ಮೆಚ್ಚಿನ ಆರೋಗ್ಯ ಕೇಂದ್ರವಾಗಿ ಬೆಳೆದಿದೆ. ಆರ್ಥಿಕವಾಗಿ ಶಕ್ತರಲ್ಲದ ದುರ್ಬಲ ವರ್ಗಗಳ ಹೆಚ್ಚಿನ ಸಂಖ್ಯೆಯ ರೋಗಿಗಳು ಉಚಿತ ಆರೋಗ್ಯ ಸೌಲಭ್ಯವನ್ನು ಪಡೆಯುತ್ತಿದ್ದು, ಇತರೆ ಸಾರ್ವಜನಿಕರಿಗೂ ಸಬ್ಸಿಡಿ ದರದಲ್ಲಿ ಸೌಲಭ್ಯ ದೊರಕುತ್ತಿದೆ.

'ಇದು ನನ್ನ ಕನಸಿನ ಯೋಜನೆ'

ಉಚಿತ ಡಯಾಲಿಸಿಸ್ ನೀಡುವ ಮೂಲಕ ಕಿಡ್ನಿ ವೈಫಲ್ಯದ ರೋಗಿಗಳಿಗೆ ದೀರ್ಘ ಮತ್ತು ಆರೋಗ್ಯಕರ ಜೀವನಕ್ಕೆ ಸಹಾಯವಾಗುವಂತ ವ್ಯವಸ್ಥೆ ಇಲ್ಲಿದೆ. ಇದರಿಂದ ಅವರ ಕುಟುಂಬದ ಆರ್ಥಿಕ ಹೊರೆಯೂ ಕಡಿಮೆಯಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ, ನಾವು 6,455 ಡಯಾಲಿಸಿಸ್‌ನ್ನು ಮಾಡಿದ್ದೇವೆ, ಅವುಗಳಲ್ಲಿ ಸರಿ ಸುಮಾರು 5,400 ಕ್ಕೂ ಹೆಚ್ಚು ಡಯಾಲಿಸಿಸ್ ಅನ್ನು ಉಚಿತವಾಗಿಯೇ ಮಾಡಿದ್ದೇವೆ ಎಂದು ಜಾರ್ಜ್ ಹೇಳುತ್ತಾರೆ.

ವಿಶೇಷವಾಗಿ ಎಸ್‌ಎಚ್‌ಸಿಐನಲ್ಲಿ ಇದುವರೆಗೆ ಸುಮಾರು 13,000 ಸಾವಿರ ಪ್ರಕರಣಗಳು ದಾಖಲಾಗಿವೆ. ಡಯಾಲಿಸಿಸ್ ಮಾಡಿಸಿ ಮತ್ತು ಜೀವ ಉಳಿಸಲಾಗಿದೆ. ಕಿಡ್ನಿ ವೈಪಲ್ಯದಿಂದ ಬಳಲುತ್ತಿರುವವರಿಗೆ ಡಯಾಲಿಸಿಸ್ ಅತ್ಯಗತ್ಯ.

ಕಿಡ್ನಿ ವೈಪಲ್ಯಕ್ಕೆ ಒಳಗಾದ ರೋಗಿ ಗಳು ಡಯಲಿಸಿಸ್ ಮತ್ತು ಚಿಕಿತ್ಸೆಗಾಗಿ, ಖಾಸಗಿ ಆಸ್ಪತ್ರೆಗಳಿಗೆ ಹೋಗುವುದು ಅನಿವಾರ್ಯ. ಇದರಿಂದ ದುರ್ಬಲ ವರ್ಗದವರೂ ಹಾಗೂ ಅಶಕ್ತರು ಆರ್ಥಿಕ ಸಮಸ್ಯೆಯನ್ನು ಎದುರಿಸುವ ಮೂಲಕ ಕುಟುಂಬವನ್ನು ಸಂಕಷ್ಟಕ್ಕೆ ತಳ್ಳುತ್ತಾರೆ. ಹಾಗಾಗಿಯೇ ಇಂತಹವರಿಗೆ ವರದಾನ ಎಂಬಂತೆ ಸರ್ವಜ್ಞ ಹೆಲ್ತ್ ಕೇರ್ ಇನ್ಸ್ಟಿಟ್ಯೂಟ್ ಸಹಾಯ ಹಸ್ತ ಚಾಚಿದೆ. ಇಲ್ಲಿ ನೀಡುವ ಉಚಿತ ಡಯಾಲಿಸಿಸ್ ಅಶಕ್ತ ರೋಗಿಗಳಿಗೆ ಸಂಜೀವಿನಿಯಾಗುವ ಮುಖೇನ, ಇದು ರೋಗಿಗಳ ಜೀವಿತಾವಧಿಯನ್ನು ಹೆಚ್ಚುಗೊಳಿಸುವುದಲ್ಲದೆ, ಅವರ ಜೀವನದ ಗುಣಮಟ್ಟವನ್ನು ಹೆಚ್ಚಿಸು ತ್ತದೆ. ಅವರು ಕೆಲಸ ಮಾಡುವಷ್ಟು ಶಕ್ತರನ್ನಾಗಿಸುತ್ತದೆ ಮತ್ತು ಅವರ ಮಕ್ಕಳ ಶಿಕ್ಷಣದಂತಹ ಇತರ ಅಗತ್ಯ ಗಳಿಗೆ ಬೇಕಾದ ಅಮೂಲ್ಯ ಹಣವನ್ನು ಉಳಿಸುತ್ತದೆ.

ಆಧುನಿಕ ಸೌಲಭ್ಯಗಳ ಸಾಮರ್ಥ್ಯ ವನ್ನು ಹೊಂದಿರುವ ಸರ್ವಜ್ಞ ಹೆಲ್ತ್ ಕೇರ್ ಇನ್ಸ್ಟಿಟ್ಯೂಟ್ ನಲ್ಲಿ 10 ಡಯಾಲಿಸಿಸ್ ಯಂತ್ರಗಳು. ಅತ್ಯಾಧುನಿಕ ಉಪಕರಣಗಳು ಮತ್ತು ತರಬೇತಿ ಪಡೆದ ಸಿಬ್ಬಂದಿ ಇದ್ದಾರೆ.

ನಗರದಲ್ಲಿನ ಯಾವುದೇ ಆಸ್ಪತ್ರೆಯ ಸೌಲಭ್ಯಗಳಿಗೆ ಹೋಲಿಸಬಹುದಾದ ಗುಣಮಟ್ಟದ ಚಿಕಿತ್ಸೆ ಮತ್ತು ಆರೈಕೆಯನ್ನು ನೀಡಲಾಗುತ್ತಿದೆ. ಏಪ್ರಿಲ್ 2014 ರಲ್ಲಿ ಪ್ರಾರಂಭವಾದಾಗಿನಿಂದ ಜನವರಿ 2023 ರವರೆಗೆ, ಸಂಸ್ಥೆಯಲ್ಲಿ 24,555 ಕ್ಕೂ ಹೆಚ್ಚು ಡಯಾಲಿಸಿಸ್ ಮಾಡಲಾಗಿದೆ, ಇದರಿಂದ ಹಲವಾರು ಕುಟುಂಬಗಳಿಗೆ ಲಾಭವಾಗಿದೆ. 'ಡಯಾ ಲಿಸಿಸ್ ಎನ್ನುವುದು ರೋಗಿಗ ಳಿಗೆ ನಿರಂತರವಾಗಿ ಚಿಕಿತ್ಸೆ ನೀಡುವ ಪ್ರಕ್ರಿಯೆಯಾಗಿದೆ. ಈ ಮೂಲಕ ರೋಗಿ ಗಳ ಕುಟುಂಬಗಳು ಚಿಕಿತ್ಸೆಗೆ ಸಾಲ ಮಾಡಿ ಆರ್ಥಿಕ ಸಂಕಷ್ಟಕ್ಕೆ ಸಿಲುಕು ವುದನ್ನು ತಪ್ಪಿಸಿದಂತಾಗಿದೆ. ಈ ಸಂಸ್ಥೆಯು ಗುಣಮಟ್ಟದ ಆರೈಕೆ ಮತ್ತು ಆರ್ಥಿಕ ಪರಿಹಾರ ಎರಡನ್ನೂ ಖಾತ್ರಿಗೊಳಿಸುತ್ತದೆ' ಎಂದು ಜಾರ್ಜ್ ವಿವರಿಸುತ್ತಾರೆ.

ಮೆಡಿಕೇರ್ ಸೆಂಟರ್


ಸರ್ವಜ್ಞ ಹೆಲ್ತ್ ಕೇರ್ ಇನ್ಸ್ಟಿಟ್ಯೂಟ್ ನಲ್ಲಿ ಚಿಕಿತ್ಸೆ ಪಡೆಯುತ್ತಿರುವವರಿಗೆ ಶಾಸಕರಾದ ಜಾರ್ಜ್ ಅವರ ಕಾಳಜಿಯ ಮಾತು

ಮಧುಮೇಹ ಮತ್ತು ಅಧಿಕ ರಕ್ತದೊತ್ತಡದಂತಹ ಸಾಂಕ್ರಾಮಿಕ ವಲ್ಲದ ರೋಗಗಳು ತೀವ್ರಗಾಮಿಯಾಗಿ ಬೆಳೆಯುತ್ತಿದ್ದು, ಅವುಗಳನ್ನು ತೀವ್ರಗತಿ ಯಲ್ಲಿ ಕಡಿಮೆಗೊಳಿಸಬೇಕಿದೆ, ಚಿಕಿತ್ಸೆ ಮತ್ತು ಆರೈಕೆಯಿಂದ ಮಾತ್ರ ಅದನ್ನು ತಡೆಗಟ್ಟಲು ಸಾಧ್ಯವಾಗುತ್ತದೆ.

ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆಯ ಸಹಯೋಗದೊಂದಿಗೆ ಪ್ರಾರಂಭಿಸ ಲಾದ ಈ ಸಮಗ್ರ ಪ್ರಾಥಮಿಕ ಆರೈಕೆ ಕೇಂದ್ರವು SHCI ಯ ಹೊರರೋಗಿ ವಿಭಾಗವಾಗಿದೆ. 'ಅಗತ್ಯವಿರು ವವರು ಇಲ್ಲಿ ಉಚಿತ ಚಿಕಿತ್ಸೆಯನ್ನು ಪಡೆಯುತ್ತಾರೆ ಮತ್ತು ವೈದ್ಯಕೀಯ ವೆಚ್ಚವನ್ನು ಭರಿಸುವವರಿಗೆ ಸಬ್ಸಿಡಿ ಯನ್ನು ನೀಡಲಾಗುತ್ತದೆ'. ವೈದ್ಯರಿಂದ ರೋಗನಿರ್ಣಯ ಮತ್ತು ಸಲಹೆಯ ಸಿಗುತ್ತದೆ. ಸೋಂಕುಗಳು ಮತ್ತು ಇತರೆ ರೋಗಗಳಿಗೆ ಚಿಕಿತ್ಸೆ ನೀಡುವುದರ ಹೊರತಾಗಿ ಮಧುಮೇಹ, ಅಧಿಕ ರಕ್ತದೊತ್ತಡ ಇತ್ಯಾದಿ ರೋಗಿಗಳಿಗೆ, ವೈದ್ಯಕೀಯ ಆರೈಕೆಯನ್ನು ನೀಡುವುದು ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ. ಪರಿಣಾಮಕಾರಿ ಆರೋಗ್ಯ ರಕ್ಷಣೆಯ ಪ್ರಮುಖ ಅಂಶವೆಂದರೆ ಆರಂಭಿಕ ರೋಗನಿರ್ಣಯ.

ಇಲ್ಲಿ ಹೈಟೆಕ್ ಪ್ರಯೋಗಾಲಯ ಮತ್ತು ಸುಸಜ್ಜಿತ ಔಷಧಾಲಯವಿದೆ. SHCI ಯ ಪ್ರಾಥಮಿಕ ಆರೋಗ್ಯ ಕೇಂದ್ರವು ಆಧುನಿಕ ಸೌಲಭ್ಯಗಳಿಂದ ಕೂಡಿದೆ.

ವೈದ್ಯರಿಂದ ಪರೀಕ್ಷೆ, ಲ್ಯಾಬ್ ಪರೀಕ್ಷೆಗಳು ಮತ್ತು ಔಷಧಿ ಸೇರಿದಂತೆ ಎಲ್ಲ ಆರೋಗ್ಯ ಸೌಲಭ್ಯಗಳನ್ನು ಒಂದೇ ಸೂರಿನಡಿ ಪಡೆಯಬಹುದು. ದುಬಾರಿ ವೈದ್ಯಕೀಯ ಪರೀಕ್ಷೆಗಳಿಗಾಗಿ ಅವರು ಎಲ್ಲಿಯೂ ಹೋಗಬೇಕಾಗಿಲ್ಲ. ಇದು ಗುಣಮಟ್ಟ ಮತ್ತು ಸಮಯೋಚಿತ ಆರೈಕೆಯನ್ನು ಖಚಿತಪಡಿಸುತ್ತದೆ ಎಂದು ಶಾಸಕ ಕೆ.ಜೆ ಜಾರ್ಜ್ ವಿವರಿಸುತ್ತಾರೆ.

ನವೆಂಬರ್ 2014 ಮತ್ತು ಜನವರಿ 2023ರ ನಡುವೆ, 25,000 ಕ್ಕೂ ಹೆಚ್ಚು ವ್ಯಕ್ತಿಗಳು SHCI ಯ ಹೊರರೋಗಿ ಕೇಂದ್ರದಲ್ಲಿ ನೋಂದಾಯಿಸಿಕೊಂಡಿ ದ್ದಾರೆ ಮತ್ತು 87,680 ಕ್ಕೂ ಹೆಚ್ಚು ಸಮಾಲೋಚನೆಗಳನ್ನು ಒದಗಿಸ ಲಾಗಿದೆ. ಸರ್ವಜ್ಞ ನಗರದಲ್ಲಿ ಇಂತಹ ಸೌಲಭ್ಯದ ಅಗತ್ಯ ಇತ್ತು ಎನ್ನುವುದು ಜನರಿಗೂ ಮನವರಿಕೆ ಯಾಗಿದೆ. ಸ್ಥಳೀಯರ ಒಟ್ಟಾರೆ ಯೋಗಕ್ಷೇಮದ ಪ್ರತೀಕ ಇದಾಗಿದೆ. ಜನಸಾಮಾನ್ಯರು ಮೆಡಿಕೇರ್ ನತ್ತ ವಾಲುತ್ತಿದ್ದಾರೆ.

ಎಸ್‌ಎಚ್‌ಸಿಐ ಒಂದು ಔಟ್‌ರೀಚ್ ಕಾರ್ಯಕ್ರಮವನ್ನು ಹೊಂದಿದೆ, ಆರೋಗ್ಯ ಸೌಲಭ್ಯಗಳು ಅಗತ್ಯವಿರುವ ತಳಮಟ್ಟದ ಜನರನ್ನೂ ತಲುಪುತ್ತಿದೆ. ರೋಗಗಳನ್ನ ತಡೆಗಟ್ಟುವ, ಆರೈಕೆಗಾಗಿ ಸ್ಕ್ರೀನಿಂಗ್, ರೋಗಿಯನ್ನು ಕೇಂದ್ರಕ್ಕೆ ಕರೆತರದೇ ಸ್ಥಳದಲ್ಲೇ ಚಿಕಿತ್ಸೆ ಮತ್ತು ಜಾಗೃತಿ ಮೂಡಿಸುವ ಕಾರ್ಯವನ್ನೂ ಮಾಡುತ್ತಿದೆ.

ಮನೆ ಮನೆ ಭೇಟಿ: ಆರೋಗ್ಯ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ಸಮುದಾಯ ಆರೋಗ್ಯ ಕಾರ್ಯಕರ್ತರು (CHWs) ಆರ್ಥಿಕವಾಗಿರದ ದುರ್ಬಲ ವರ್ಗಗಳ ಮನೆಗಳಿಗೆ ನಿಯಮಿತವಾಗಿ ಭೇಟಿ ನೀಡುತ್ತಾರೆ. ಅವರು ಪಡೆಯಬಹುದಾದ ಸರ್ಕಾರದ ಯೋಜನೆಗಳು ಮತ್ತು ಅವರಿಗೆ ಸಿಗಬಹುದಾದ ವಿಮಾ ಪ್ಯಾಕೇಜ್‌ಗಳ ಬಗ್ಗೆ ಮಾಹಿತಿ ನೀಡುತ್ತಾರೆ. ಆರೋಗ್ಯಕರ ಜೀವನವನ್ನು ನಡೆಸಲು ಜನರು ತಮ್ಮನ್ನು ತಾವು ಉತ್ತಮವಾಗಿ ಸಜ್ಜುಗೊಳಿಸಲು ಇದು ಸಹಾಯ ಮಾಡುತ್ತದೆ. ಜನವರಿ 2021ರಿಂದ CHW ಗಳು ಸುಮಾರು 21,500 ಮನೆಗಳಿಗೆ ಭೇಟಿ ನೀಡಿದ್ದಾರೆ. ಈ ಭೇಟಿಗಳು ಜನರಿಗೆ ಸೂಕ್ತ ಪರಿಹಾರ ಮತ್ತು ಮಾಹಿತಿಯನ್ನು ನೀಡುತ್ತವೆ.

ತಪಾಸಣೆ - ತಡೆಗಟ್ಟುವ ಆರೈಕೆ

ಇತ್ತೀಚಿನ ದಿನಗಳಲ್ಲಿ, ಮಧುಮೇಹ ಮತ್ತು ಅಧಿಕ ರಕ್ತದೊತ್ತಡವನ್ನು ಪತ್ತೆಹಚ್ಚಲು 30 ಕ್ಕೂ ಹೆಚ್ಚು ಶಿಬಿರಗಳನ್ನು ನಡೆಸಲಾಗಿದೆ. ಈ ಶಿಬಿರಗಳಲ್ಲಿ ಸುಮಾರು 5,000 ಜನರನ್ನು ತಪಾಸಣೆಗೆ ಒಳಪಡಿಸಲಾಗಿದೆ. ಜನರು ಹಾಜರಾಗಲು ಅನುಕೂಲವಾಗುವಂತೆ ಸರ್ವಜ್ಞನಗರ ಮತ್ತು ಸುತ್ತಮುತ್ತಲಿನ ವಿವಿಧ ಸ್ಥಳಗಳಲ್ಲಿ ಶಿಬಿರಗಳನ್ನು ನಡೆಸಲಾಗಿದೆ. ಇದಲ್ಲದೆ, ಐದು ವಿಭಿನ್ನ ಶಿಬಿರಗಳಲ್ಲಿ 250 ಮಹಿಳೆಯರಿಗೆ ಗರ್ಭಕಂಠದ ಕ್ಯಾನ್ಸರ್ ತಪಾಸಣೆ ಮಾಡಲಾಗಿದೆ.

ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆ

ಶಸ್ತ್ರಚಿಕಿತ್ಸೆ ಯನ್ನ ಮಾಡಿಸಿಕೊಳ್ಳಲು ಆಗದ ಆರ್ಥಿಕವಾಗಿ ಅಶಕ್ತರಾದ ದುರ್ಬಲ ವರ್ಗಗಳಿಗೆ ಇದು ಗಂಭೀರ ಸಮಸ್ಯೆಯಾಗಿದೆ. ಕಣ್ಣಿನ ಸಮಸ್ಯೆಯಿದ್ದ ಜನರು ಚಿಕಿತ್ಸೆ ಮಾಡಿಸಿಕೊಳ್ಳದೆ ಕಣ್ಣನ್ನ ಕಳೆದುಕೊಳ್ಳುವ ಹಂತಕ್ಕೆ ತಲುಪುತ್ತಾರೆ. ಹಾಗಾಗಿ ಈ ಸಂಬಂಧ ,ಎಂಟು ನೇತ್ರ ಶಿಬಿರಗಳನ್ನು ನಡೆಸುವ ಮುಖೇನ ಅವಶ್ಯಕತೆಯಿರುವ ಜನರಿಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ

ಶ್ರೀ ಸತ್ಯ ಸಾಯಿ ಇನ್ಸ್ಟಿಟ್ಯೂಟ್ ಆಫ್ ಹೈಯರ್ ಮೆಡಿಕಲ್ ಸೈನ್ಸಸ್ ಆಸ್ಪತ್ರೆಯ ಸಹಯೋಗದಲ್ಲಿ 1,750 ರೋಗಿಗಳನ್ನು ಕಣ್ಣಿನ ಪೊರೆ ಮತ್ತು ದೃಷ್ಟಿ ದೋಷಕ್ಕಾಗಿ ಪರೀಕ್ಷಿಸಲಾಯಿತು. ಉಚಿತವಾಗಿ ಓದುವ ಕನ್ನಡಕವನ್ನು ನೀಡಲಾಯಿತು. ಶಿಬಿರಗಳಲ್ಲಿ 546 ಹಿರಿಯ ನಾಗರಿಕರಿಗೆ ಮತ್ತು 127 ಜನರಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಬೆಂಬಲ ನೀಡಲಾಯಿತು.

ಸಮಾಜ ಕಲ್ಯಾಣ ಯೋಜನೆಗಳು

ಸರ್ಕಾರದ ಸಮಾಜ ಕಲ್ಯಾಣ ಯೋಜನೆಗಳ ಅರ್ಜಿಗಳನ್ನು ಸಂಗ್ರಹಿ ಸಲು ಐದು ಶಿಬಿರಗಳನ್ನು ನಡೆಸಲಾ ಯಿತು. 659 ಅರ್ಹರು ಇದರ ಪ್ರಯೋ ಜನ ಪಡೆದಿದ್ದಾರೆ. ಈ ಶಿಬಿರಗಳು ಅಗತ್ಯವಿರುವವರಿಗೆ ಲಭ್ಯವಿರುವ ಯೋಜನೆಗಳ ಬಗ್ಗೆ ಅರಿವು ಮೂಡಿಸಿ ದವು. ಜನರ ಮನೆ ಬಾಗಿಲಿಗೆ ಪರಿಹಾರವನ್ನು ಒದಗಿಸಲು ನಿಯಮಿತವಾಗಿ ನಡೆಸಲಾಗುತ್ತದೆ.

ಕೆ ಜೆ ಜಾರ್ಜ್ ನೇತ್ರ ಶಿಬಿರದಲ್ಲಿ ಉಚಿತವಾಗಿ ಓದುವ ಕನ್ನಡಕ ವಿತರಿಸಿದರು

ಸುಕ್ಕಿಗೆ ಹೇಳೋಣ ಗುಡ್‌ಬೈ

ಶುಭಾ ಕೆ.ಬಿ.

ಕಾಳಜಿ

ಇತ್ತೀಚಿನ ದಿನಗಳಲ್ಲಿನ ಜೀವನ ಕ್ರಮ, ಆಹಾರ ಕ್ರಮ ಮತ್ತು ಒತ್ತಡದ ಜೀವನದಿಂದ ಬಹುಬೇಗನೆ ಚರ್ಮದಲ್ಲಿ ಸುಕ್ಕು ಕಾಣಿಸಿಕೊಳ್ಳಬಹುದು. ಸ್ವಲ್ಪ ಆರೈಕೆ ಕೈಗೊಂಡರೆ, ಚರ್ಮದ ಸುಕ್ಕನ್ನು ನಿವಾರಿಸಿಕೊಳ್ಳಬಹುದು. ವಯೋಸಹಜವಾಗಿ ಮೂಡುವ ಈ ಸುಕ್ಕನ್ನು ಮರೆಮಾಚಲು ಸಾಕಷ್ಟು ತಂತ್ರಜ್ಞಾನಗಳೇನೋ ಇವೆ. ಆದರೆ ಅದರಿಂದ ಅಡ್ಡಪರಿಣಾಮಗಳ ಸಾಧ್ಯತೆಯೂ ಹೆಚ್ಚಿರುವ ಕಾರಣ, ನಾವು ಮನೆಮದ್ದಿನ ಕಡೆ ಗಮನ ಹರಿಸೋಣ. ಅದಕ್ಕೆ ಮುನ್ನ ಚರ್ಮ ಸುಕ್ಕಾಗಲು ಏನೇನು ಕಾರಣಗಳಿವೆ, ಎನ್ನುವುದನ್ನು ಅರಿಯೋಣ.

ಸುಕ್ಕಿಗೆ ಕಾರಣಗಳು:

- ಒತ್ತಡದ ಜೀವನ, ಅನಾರೋಗ್ಯಕರ ಆಹಾರ ಹಾಗೂ ಜೀವನಕ್ರಮ
- ನಿದ್ದೆಯ ಕೊರತೆ
- ಅತಿಯಾದ ಸೌಂದರ್ಯವರ್ಧಕಗಳ ಬಳಕೆ
- ಮಾಲಿನ್ಯ
- ಬಿಸಿಲಿನಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುವುದು
- ನೀರು ಅಥವಾ ಹಣ್ಣಿನ ಪಾನೀಯ ಸೇವನೆ ಕಡಿಮೆ ಇರುವುದು.
- ಚರ್ಮದ ಆರೈಕೆ ಮಾಡಿಕೊಳ್ಳದಿರುವುದು
- ಅತಿಯಾದ ಧೂಮಪಾನ
- ಮಲಗುವ ಕ್ರಮದ ಜ್ಞಾನದ ಕೊರತೆ
- ಮುಖದ ಮಸಾಜ್ ಮಾಡುವಾಗ ಸರಿಯಾದ ಕ್ರಮ ಪಾಲಿಸದೇ ಇರುವುದು. ಇನ್ನೂ ಹಲವು.

ಸುಕ್ಕು ದೂರ ಮಾಡುವ ಕ್ರಮ

- ತೀವ್ರವಾದ ಬಿಸಿಲಿನಿಂದ ಚರ್ಮ ರಕ್ಷಣೆ ಮಾಡಿಕೊಳ್ಳಿ. ಸನ್‌ಸ್ಕ್ರೀನ್ ಕ್ರೀಮ್, ಲೋಷನ್‌ಗಳನ್ನು ಬಳಕೆ ಮಾಡುವುದರಿಂದಲೂ ಸುಕ್ಕನ್ನು ದೂರ ಇಡಬಹುದು.
- ದೇಹದ ಎಲ್ಲಾ ಭಾಗಕ್ಕೂ ನೀರಿನ ಅತ್ಯವಶ್ಯಕತೆ ಇದೆ. ಅಲ್ಲದೇ ದೇಹದಲ್ಲಿನ ಟಾಕ್ಸಿನ್ ಅನ್ನು ಹೊರ ಹಾಕಿ ದೇಹದ ಉಷ್ಣತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುವುದರಿಂದ ಕ್ರಮವಾದ ನೀರಿನ ಸೇವನೆ ಅವಶ್ಯ. ದೇಹಕ್ಕೆ ನೀರು ಕಡಿಮೆ ಆದಾಗ ಚರ್ಮ ಬಿರಿಯಲು ಆರಂಭಿಸಿ ಬೇಗ ಸುಕ್ಕು ಆವರಿಸುತ್ತದೆ.
- ಇತ್ತೀಚಿನ ದಿನಗಳಲ್ಲಿ ಕೆಲವರು ಸಪೂರ ದೇಹ (ಜೀರೊ ಫಿಗರ್) ಹೊಂದುವುದಕ್ಕಾಗಿ ಸರಿಯಾಗಿ ಆಹಾರ ಸೇವಿಸದಿರುವುದನ್ನೇ ಅಭ್ಯಾಸ ಮಾಡುತ್ತಿದ್ದಾರೆ.

ಆದರೆ ಇದು ಅನಾರೋಗ್ಯಕ್ಕೆ ಎಡೆಮಾಡಿಕೊಡುತ್ತಿದೆ ಎಂಬ ಅಂಶವನ್ನು ಮರೆಯುತ್ತಿದ್ದೇವೆ. ವಿಟಮಿನ್‌ಯುಕ್ತ ಆಹಾರ ಸೇವನೆಯಿಂದ ಸುಕ್ಕನ್ನು ದೂರಮಾಡುವುದರ ಜೊತೆಗೆ ಆರೋಗ್ಯ ಸಂರಕ್ಷಣೆಗೂ ದಾರಿಯಾಗಿದೆ.

- ತರಕಾರಿಗಳಲ್ಲಿ ಕ್ಯಾರೆಟ್, ಕುಂಬಳಕಾಯಿ, ಬ್ರೊಕೊಲಿ, ಸೊಪ್ಪು, ದೊಣಮೆಣಸು/ ದಪ್ಪಮೆಣಸು (ಬೆಲ್ ಪೆಪ್ಪರ್ಸ್)ಗಳನ್ನು ಹೆಚ್ಚಾಗಿ ಸೇವಿಸಬೇಕು. ಇದರ ಜತೆಗೆ ಗ್ರೀನ್ ಟೀ, ಆಲೀವ್ ಎಣ್ಣೆ, ದಾಳಿಂಬೆ, ಚೆರ್ರಿ, ಪೇರಲೆ/ ಸೀಬೆ, ಲಿಂಬು ಜಾತಿಯ ಹಣ್ಣು, ಮೀನು, ಮೊಟ್ಟೆಯ ಬಿಳಿಭಾಗ, ಅವಕಾಡೊ/ ಬಟರ್‌ಫ್ರೂಟ್, ವಾಲ್‌ನಟ್ಸ್, ಅಗಸೆ ಬೀಜಗಳು ಉಪಯುಕ್ತ.
- ಕ್ರಮಬದ್ಧವಾದ ಯೋಗ, ಧ್ಯಾನ, ದೀರ್ಘ ಉಸಿರಾಟದ ವ್ಯಾಯಾಮಗಳನ್ನು ಮಾಡುವುದರಿಂದಲೂ ಚರ್ಮದ ಸುಕ್ಕನ್ನು ದೂರ ಮಾಡಬಹುದು.

ಸ್ಪೋರ್ಟ್ಸ್ ಮೋಡ್ ಹೊಸ ಸ್ಮಾರ್ಟ್‌ವಾಚ್

ತಂತ್ರಜ್ಞಾನ

ಭಾರತದ ಸ್ಮಾರ್ಟ್‌ವಾಚ್ ಮತ್ತು ಫಿಟ್ನೆಸ್ ಗ್ಯಾಜೆಟ್ ಮಾರುಕಟ್ಟೆಯಲ್ಲಿ ಫೈರ್ ಬೋಲ್ಟ್ ಮಾದರಿಗಳು ಹೆಚ್ಚು ಜನಪ್ರಿಯತೆಗಳಿಸಿವೆ. ಬಜೆಟ್ ದರಕ್ಕೆ ಹೆಚ್ಚಿನ ಫೀಚರ್‌ಗಳನ್ನು ಬಳಕೆದಾರರಿಗೆ ಫೈರ್ ಬೋಲ್ಟ್ ಒದಗಿಸುತ್ತದೆ.

ಈ ಬಾರಿ ಭಾರತದ ಫಿಟ್ನೆಸ್ ಮತ್ತು ಗ್ಯಾಜೆಟ್ ಮಾರುಕಟ್ಟೆಗೆ ಫೈರ್ ಬೋಲ್ಟ್, ಟಾಕ್ ಅಲ್ಟ್ರಾ ಎನ್ನುವ ನೂತನ ಸ್ಮಾರ್ಟ್‌ವಾಚ್ ಅನ್ನು ಬಿಡುಗಡೆ ಮಾಡಿದೆ.

ಹೊಸ ಫೈರ್ ಬೋಲ್ಟ್ ಟಾಕ್ ಅಲ್ಟ್ರಾ, 1.39 ಇಂಚಿನ ಎಲ್‌ಸಿಡಿ ಡಿಸ್‌ಪ್ಲೇ, ಬ್ಲೂಟೂತ್ ಕಾಲಿಂಗ್ ಬೆಂಬಲ ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಜತೆಗೆ, 123 ವಿವಿಧ ಬಗೆಯ ಫಿಟ್ನೆಸ್ ಮತ್ತು ಸ್ಪೋರ್ಟ್ಸ್ ಮೋಡ್ ಟ್ರ್ಯಾಕಿಂಗ್, ಹೃದಯ ಬಡಿತ ಮಾಪನ ಮತ್ತು ರಕ್ತದಲ್ಲಿ ಆಮ್ಲಜನಕದ ಪ್ರಮಾಣವನ್ನು ಅಳೆಯುವ ಸೆನ್ಸರ್‌ಗಳನ್ನು ಹೊಂದಿದೆ. IP68 ವಾಟರ್ ಮತ್ತು ಡಸ್ಟ್ ರೆಸಿಸ್ಟೆನ್ಸ್ ರೇಟಿಂಗ್ ಫೈರ್ ಬೋಲ್ಟ್ ಸ್ಮಾರ್ಟ್‌ವಾಚ್‌ನ ವಿಶೇಷತೆಯಾಗಿದೆ.

ಫೈರ್ ಬೋಲ್ಟ್ ಟಾಕ್ ಅಲ್ಟ್ರಾ ಸ್ಮಾರ್ಟ್‌ವಾಚ್, ಕಂಪನಿಯ ಅಧಿಕೃತ ವೆಬ್‌ಸೈಟ್ ಮತ್ತು ಫ್ಲಿಪ್‌ಕಾರ್ಟ್ ಇಂಡಿಯಾ ಮೂಲಕ ದೊರೆಯುತ್ತದೆ ಎಂದು ಕಂಪನಿ ತಿಳಿಸಿದೆ.

ನೂತನ ಸ್ಮಾರ್ಟ್‌ವಾಚ್ ಕಪ್ಪು, ನೀಲಿ, ಕೆಂಪು, ಗ್ರೇ, ಪಿಂಕ್ ಮತ್ತು ಟೀಲ್ ಎಂಬ 6 ಆಕರ್ಷಕ ಬಣ್ಣಗಳಲ್ಲಿ ದೊರೆಯಲಿದೆ ಎಂದು ಫೈರ್ ಬೋಲ್ಟ್ ಹೇಳಿದ್ದು, ₹1,999 ದರಕ್ಕೆ ಲಭ್ಯವಾಗಲಿದೆ.

ಸಿನಿ ಹನಿ

'ರಾನಿ'ಯಾದ ಕಿರಣ್ ರಾಜ್

'ಬಡ್ಡೀಸ್' ಸಿನಿಮಾ ಮೂಲಕ ಬೆಳ್ಳಿತೆರೆಯಲ್ಲಿ ಮಿಂಚಿದ ನಟ ಕಿರಣ್ ರಾಜ್, 'ಕನ್ನಡತಿ' ಧಾರಾವಾಹಿ ನಂತರ ಏನು ಮಾಡಲಿದ್ದಾರೆ ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಗುರುತೇಜ್ ಶೆಟ್ಟಿ ನಿರ್ದೇಶಿಸುತ್ತಿರುವ ಹೊಸ ಚಿತ್ರ 'ರಾನಿ'ಯಲ್ಲಿ ಕಿರಣ್ ರಾಜ್ ನಾಯಕರಾಗಿ ನಟಿಸುತ್ತಿದ್ದಾರೆ.

ಸಾಮಾನ್ಯವಾಗಿ ನಾಯಕ ನಟನೊಬ್ಬ ಸಿನಿಮಾದಲ್ಲಿ ಬರುವ ಸಾಹಸ ಸನ್ನಿವೇಶಗಳಲ್ಲಿ ಅಪಾಯವನ್ನು ಮೈಗೆಳೆದುಕೊಳ್ಳುವುದನ್ನು ನೋಡಿದ್ದೇವೆ. ಆದರೆ ಇಲ್ಲಿ ಕಿರಣ್ ರಾಜ್, ಚಿತ್ರದ ಶೀರ್ಷಿಕೆಯನ್ನು ಘೋಷಿಸಲೆಂದೇ ಸಾಹಸಕ್ಕೆ ಕೈ ಹಾಕಿದ್ದಾರೆ. ದುಬೈಗೆ ತೆರಳಿ ಸುಮಾರು ಹದಿಮೂರು ಸಾವಿರ ಅಡಿ ಮೇಲಿಂದ ಸ್ಕೈ ಡ್ರೈವ್ ಮಾಡಿ ತಮ್ಮ ನೂತನ ಚಿತ್ರದ ಶೀರ್ಷಿಕೆ ಅನಾವರಣ ಮಾಡಿದ್ದಾರೆ.

'ನನಗೆ ಸಿನಿಮಾ ಎಂದರೆ ಕನಸು. ಹಾಗಾಗಿ ಚಿತ್ರ ಆರಂಭದಿಂದಲೂ ಸ್ವಲ್ಪ ವಿಶೇಷವಾಗಿರಬೇಕು ಎಂದು ಬಯಸುತ್ತೇನೆ. 'ರಾನಿ' ಈ ಚಿತ್ರದ ಹೆಸರು. ನನ್ನ ಈ ಸಾಹಸಕ್ಕೆ ಮನೆಯವರಿಂದ, ಸ್ನೇಹಿತರಿಂದ ವಿರೋಧ ವ್ಯಕ್ತವಾಯಿತು. ಆದರೂ ನಾನು ಅಲ್ಲಿನ ಪರಿಣಿತರಿಂದ ತರಬೇತಿ ಪಡೆದು ಈ ಸಾಹಸಕ್ಕೆ ಮುಂದಾದೆ. ಇದು ಸಾಹಸ ಪ್ರಧಾನ ಚಿತ್ರವಾಗಿದೆ' ಎನ್ನುತ್ತಾರೆ ಕಿರಣ್. 'ಬಡ್ಡೀಸ್' ನಂತರ ಗುರುತೇಜ್–ಕಿರಣ್ ಕಾಂಬಿನೇಷನ್‌ನಲ್ಲಿ ಈ ಚಿತ್ರ ಬರುತ್ತಿದೆ. ಚಂದ್ರಕಾಂತ್ ಪೂಜಾರಿ ಹಾಗೂ ಉಮೇಶ್ ಹೆಗಡೆ ಜಂಟಿಯಾಗಿ ಈ ಸಿನಿಮಾ ನಿರ್ಮಾಣ ಮಾಡಲಿದ್ದಾರೆ.

ನೋಡ ಬನ್ನಿ 'ಮಣ್ಣುರಹಿತ ಕೃಷಿ'

ತೋಟಗಾರಿಕಾ ಮೇಳಕ್ಕೆ ಇಂದು ತೆರೆ

ನಗರದ ಹೆಸರಘಟ್ಟದಲ್ಲಿನ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ ನಡೆಯುತ್ತಿರುವ ನಾಲ್ಕು ದಿನಗಳ 'ರಾಷ್ಟ್ರೀಯ ತೋಟಗಾರಿಕೆ ಮೇಳ'ಕ್ಕೆ ಇಂದು ತೆರೆಬೀಳಲಿದೆ.

'ಸ್ವಾವಲಂಬನೆಗೆ ನವೀನ ತೋಟಗಾರಿಕೆ' ವಿಷಯದಡಿ ಫೆ. 22ರಿಂದ ಆರಂಭವಾದ ಮೇಳದಲ್ಲಿ ತೋಟಗಾರಿಕೆ ವಿಜ್ಞಾನಿಗಳ ಪ್ರಯೋಗಗಳು, ಕೃಷಿಯ ಹೊಸ ಅವಕಾಶಗಳನ್ನು ಪರಿಚಯಿಸುತ್ತಿವೆ.

ಮನೆಗಳ ತಾರಸಿ ಹಾಗೂ ಮನೆಯಂಗಳದಂತಹ ಚಿಕ್ಕ ಜಾಗದಲ್ಲೂ ತರಕಾರಿ, ಹೂವು, ಹಣ್ಣು ಬೆಳೆಯಬಹುದಾದ ಮಣ್ಣುರಹಿತ ಕೃಷಿ ಪದ್ಧತಿಯು ಮೇಳದಲ್ಲಿ ಗಮನ ಸೆಳೆಯುತ್ತಿದೆ. ನಗರವಾಸಿಗಳು, ತಮ್ಮ ಮನೆಗಳಲ್ಲಿ ಸಣ್ಣ ಪ್ರಮಾಣದಲ್ಲಿ ಕೃಷಿ ಕೈಗೊಳ್ಳುವ ಕುರಿತು ವಿಜ್ಞಾನಿಗಳು ಸಲಹೆ ನೀಡುತ್ತಿದ್ದಾರೆ.

ಗ್ರೋ ಬ್ಯಾಗ್ ಹಾಗೂ ಟ್ರೇ ಗಳಲ್ಲಿ ಮಣ್ಣಿಲ್ಲದೇ, ಕೇವಲ ಕೊಕೊಪಿತ್ (ತೆಂಗಿನ ನಾರಿನ ಹುಡಿ)ನಲ್ಲೇ ಸೊಪ್ಪು, ತರಕಾರಿ, ಹಣ್ಣಿನ ಗಿಡಗಳನ್ನು ಬೆಳೆಸುವ 'ಕೊಕೊಪೋನಿಕ್ಸ್' ವಿಧಾನವನ್ನು ಮೇಳದಲ್ಲಿ ಪರಿಚಯಿಸಲಾಗುತ್ತಿದೆ. ಈ ವಿಧಾನದಲ್ಲಿ ಕೊತ್ತಂಬರಿ, ಪಾಲಕ್ ಸೇರಿದಂತೆ ದಿನಬಳಕೆ ಸೊಪ್ಪುಗಳನ್ನು ಬೆಳೆಯುವ ಪ್ರಾತ್ಯಕ್ಷಿಕೆಯ ಪರಿಚಯ ಮೇಳದಲ್ಲಿದೆ.

ಕಣ್ಮನ ಸೆಳೆಯುತ್ತಿದೆ ಹೂವಿನ ಲೋಕ: ಗುಲಾಬಿ, ಚೆಂಡು ಹೂವು, ಜರ್ಬೇರಾ, ಗ್ಲ್ಯಾಡಿಯಸ್ ಸೇರಿ ಹಲವು ಹೂವುಗಳ ತಾಕುಗಳು, ಮೇಳದ ಪ್ರಮುಖ ಆಕರ್ಷಣೆ. ಈ ತಾಕುಗಳು ರೈತರಿಗೆ ಪುಷ್ಪಕೃಷಿಯ ಮಾಹಿತಿ ನೀಡಿದರೆ, ಸಾಮಾನ್ಯ ಜನರಿಗೆ ಇದೊಂದು ಸೆಲ್ಫಿ ಕ್ಲಿಕ್ಕಿಸುವ, ಫೋಟೊಗ್ರಫಿ ತಾಣವಾಗಿದೆ.

ವಿಶ್ವಸಂಸ್ಥೆ 2023ಅನ್ನು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿ ಘೋಷಿಸಿರುವ ಹಿನ್ನೆಲೆಯಲ್ಲಿ, ತೋಟಗಾರಿಕಾ ಬೆಳೆಗಳ ಜೊತೆಗೆ, ನವಣೆ, ಸಾಮೆಯಂತಹ ಸಿರಿಧಾನ್ಯಗಳನ್ನು ಸೇರಿಸಿ, ತಯಾರಿಸುವ ಮೌಲ್ಯವರ್ಧಿತ ಉತ್ಪನ್ನಗಳೂ ಮೇಳದಲ್ಲಿವೆ.

ಹಣ್ಣಿನ ಬೆಳೆ ಪ್ರಾತ್ಯಕ್ಷಿಕೆ: ದ್ರಾಕ್ಷಿ, ಮಾವು, ದಾಳಿಂಬೆ, ಕಮಲ ಹಣ್ಣು (ಡ್ರ್ಯಾಗನ್ ಫ್ರೂಟ್), ಖರ್ಬೂಜ ತಳಿಗಳ ಪ್ರಾತ್ಯಕ್ಷಿಕೆ ಇದೆ. ಮೆಣಸಿನಕಾಯಿ, ಬದನೆಕಾಯಿ, ಕ್ಯಾರೆಟ್, ಈರುಳ್ಳಿ, ಟೊಮೆಟೊ ಹಾಗೂ ಇತರೆ ತರಕಾರಿಯನ್ನು ಲಾಭದಾಯಕ ರೀತಿಯಲ್ಲಿ ಬೆಳೆಯುವುದು ಹೇಗೆ? ಎಂಬ ಬಗ್ಗೆ ವಿಜ್ಞಾನಿಗಳು ಮಾಹಿತಿ ನೀಡುತ್ತಿದ್ದಾರೆ.

ತಾರಸಿ ಕೃಷಿ ಪರಿಕರಗಳು: ಮೇಳದಲ್ಲಿ ಮಳಿಗೆಗಳನ್ನು ತೆರೆಯಲಾಗಿದೆ. ಬೀಜ, ಸಸಿಗಳು, ಗೊಬ್ಬರ, ಕೃಷಿ ಉಪಕರಣ, ದಿನೋಪಯೋಗಿ ಸೇರಿದಂತೆ ಎಲ್ಲ ಬಗೆಯ ವಸ್ತುಗಳ ಮಳಿಗೆಯಲ್ಲಿ ಲಭ್ಯ ಇವೆ. ಮೇಳಕ್ಕೆ ಬರುವವರಿಗೆ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಅಚ್ಚುಕಟ್ಟಾಗಿ ಮಾಡಲಾಗಿದೆ. ಆಹಾರ ಮಳಿಗೆಗಳನ್ನೂ ತೆರೆಯಲಾಗಿದ್ದು, ಬಗೆ ಬಗೆಯ ತಿಂಡಿ–ತಿನಿಸು–ಊಟ ಲಭ್ಯವಿದೆ.

ಯಶವಂತಪುರ ಹಾಗೂ ಮೆಜೆಸ್ಟಿಕ್ ಬಸ್ ನಿಲ್ದಾಣಗಳಿಂದ ಹೆಸರಘಟ್ಟಕ್ಕೆ ಬಿಎಂಟಿಸಿ ಬಸ್‌ಗಳ ವ್ಯವಸ್ಥೆ ಇದೆ. ಜೊತೆಗೆ, ಖಾಸಗಿ ವಾಹನಗಳಿಗೆ ಸಂಸ್ಥೆಯ ಆವರಣದಲ್ಲಿ ಪಾರ್ಕಿಂಗ್ ವ್ಯವಸ್ಥೆ ಸಹ ಮಾಡಲಾಗಿದೆ.

ಪ್ರಜಾವಾಣಿ
ಶನಿವಾರ • ಫೆಬ್ರುವರಿ 25, 2023

ವಿವಿಧ ಕ್ಷೇತ್ರಗಳ 23 ಮಂದಿಗೆ 'ಪ್ರಜಾವಾಣಿ ಸಾಧಕರು–2023' ಪುರಸ್ಕಾರ

ಸಾಧಕರ ಸಿರಿ, ಗೌರವದ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಲಿ ಸೇರಿದ್ದವರ ಮೊಗದಲ್ಲಿ ಹೊಸ ಉಲ್ಲಾಸ, ಹೃದಯದಲ್ಲಿ ಧನ್ಯತಾ ಭಾವ ಮೂಡಿತ್ತು. ಎಲೆಮರೆ ಕಾಯಿಯಾಗಿ ಸಾಮಾಜಿಕ ಕೈಂಕರ್ಯದಲ್ಲಿ ತೊಡಗಿರುವ ಸಾಧಕರು ಸ್ಫೂರ್ತಿಯ ಚಿಲುಮೆಯಾಗಿದ್ದರು.

ಕ್ರೀಡೆ, ಆಡಳಿತ, ನವೋದ್ಯಮ, ಸಮಾಜ ಸೇವೆ, ವಿಜ್ಞಾನ, ಪರಿಸರ ಸಂರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ತಮ್ಮನ್ನು ಗುರುತಿಸಿದ್ದಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು.

ನಗರದ ಕಬ್ಬನ್ ಉದ್ಯಾನದಲ್ಲಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಶುಕ್ರವಾರ ನಡೆದ ವಿಶಿಷ್ಟ ಸಮಾರಂಭದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಅನನ್ಯ ಸಾಧನೆಗೈದಿರುವ 23 ಮಂದಿಗೆ 'ಪ್ರಜಾವಾಣಿ ಸಾಧಕರು–2023' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ (ಮೈಸೂರು ಸ್ಯಾಂಡಲ್), ಕರ್ನಾಟಕ ಹಾಲು ಮಹಾಮಂಡಳಿ (ಕೆಎಂಎಫ್) ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಸಹಯೋಗದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ರಾಮನಗರ ಜಿಲ್ಲೆಯ ಸಾಧಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಸಮಾಜಕ್ಕೆ ವಿಶಿಷ್ಟ ಕೊಡುಗೆ ನೀಡಿದ ಇವರ ಮಾತುಗಳು ಸಹ ಸ್ಫೂರ್ತಿಯ ಸೆಲೆಯಾಗಿದ್ದವು.

ಬೆನ್ನುಹುರಿ ಸಮಸ್ಯೆ ಮೀರಿಯೂ ಶಿಕ್ಷಣ–ಕ್ರೀಡಾಕ್ಷೇತ್ರದಲ್ಲಿ ಛಾಪು ಮೂಡಿಸಿರುವ ಒ.ಸಿ. ಅನುಷಾ ವ್ಹೀಲ್ ಚೇರ್‌ನಲ್ಲಿ ಬಂದಿದ್ದರು. ಪ್ಯಾರಾ ಬ್ಯಾಡ್ಮಿಂಟನ್, ಬ್ಯಾಸ್ಕೆಟ್‌ಬಾಲ್ ಆಟಗಾರ್ತಿಯಾಗಿ ರಾಷ್ಟ್ರೀಯ ಹಾಗೂ ರಾಜ್ಯಮಟ್ಟದಲ್ಲಿ ಮಿಂಚುತ್ತಿರುವ ಅನುಷಾ ಅವರನ್ನು ಗಣ್ಯರು ವೇದಿಕೆಯಿಂದ ಕೆಳಗಿಳಿದು ಬಂದು ಗೌರವಿಸಿದರು. ಸಭಿಕರು ಎದ್ದು ನಿಂತು ಚಪ್ಪಾಳೆ ತಟ್ಟಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ, ಧಾರಾವಾಹಿ ಹಾಗೂ ಸಿನಿಮಾ ನಿರ್ದೇಶಕ ಟಿ.ಎನ್. ಸೀತಾರಾಂ, ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ಪ್ರಧಾನ ವ್ಯವಸ್ಥಾಪಕ ಉಮಾಶಂಕರ್ ಅಪಾಲಿ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ. ಎಸ್. ಷಡಾಕ್ಷರಿ, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಅವರು ಸಾಧಕರನ್ನು ಗೌರವಿಸಿದರು.

ನಿರ್ದೇಶಕ ಮಂಸೋರೆ ಅವರನ್ನು ಸನ್ಮಾನಿಸಲಾಯಿತು. ಧಾರಾವಾಹಿ ನಿರ್ದೇಶಕ ಟಿ.ಎನ್. ಸೀತಾರಾಂ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ. ಎಸ್. ಷಡಾಕ್ಷರಿ, ಪ್ರಜಾವಾಣಿ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಕೆಎಸ್‌ಡಿಎಲ್ ಅಧ್ಯಕ್ಷ ಮತ್ತು ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಹಾಗೂ ಕೆಎಸ್‌ಡಿಎಲ್ ಪ್ರಧಾನ ವ್ಯವಸ್ಥಾಪಕ ಉಮಾಶಂಕರ್ ಅಪಾಲಿ ಇದ್ದರು

ಬೆಂಗಳೂರಿನಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಪ್ರಜಾವಾಣಿ ಸಾಧಕರು–2023' ಪ್ರಶಸ್ತಿಯನ್ನು ಸಾಧಕರಿಗೆ ಪ್ರದಾನ ಮಾಡಿ ಗೌರವಿಸಲಾಯಿತು. (ನಿಂತವರಲ್ಲಿ ಎಡದಿಂದ) ರೂಮಿ ಹರೀಶ್, ಬಿ.ಎನ್. ವಿಸ್ಮಯಾ, ಪ್ರಾರ್ಥನಾ ಭಟ್, ಸಿ.ಎಸ್. ಷಡಾಕ್ಷರಿ, ಟಿ.ಎನ್. ಸೀತಾರಾಂ, ರವೀಂದ್ರ ಭಟ್ಟ, ಉಮಾಶಂಕರ್ ಅಪಾಲಿ, ಅನೀಶ್ ಗೌಡ, ರವಿಕುಮಾರ್ ಕಂಚನಹಳ್ಳಿ, ಮಾಲಾ ರಂಗಸ್ವಾಮಿ, ರಾಧಾಮಣಿ ಎಂ.ವಿ. (ಹಿಂದಿನ ಸಾಲಿನಲ್ಲಿ ಕುಳಿತವರು ಎಡದಿಂದ) ಪಲ್ಲವಿ ಗೋಪಿನಾಥ್, ಮಂಜಮ್ಮ ಎಸ್.ಬಾಲಯ್ಯ, ನಹಿದಾ ಜಮ ಜಮ್, ಎಲ್.ವೈ.ರಾಜೇಶ್, ರಂಜನಿ ರಾಘವನ್, ಎಚ್.ಸಿ.ಚಂದ್ರಶೇಖರ್, ಮುರಳಿ ಮೋಹನ್, (ಮುಂದಿನ ಸಾಲಿನಲ್ಲಿ ಕುಳಿತವರು) ಕೆ.ವಿ. ಗುರುರಾಜ್, ದಾದಾಪೀರ್ ಜೈಮನ್, ರಂಗಸ್ವಾಮಿ ಸಿ. ಅರುಣ್‌ಕುಮಾರ್, ಮಂಸೋರೆ, ಶಿವಲಿಂಗಶೆಟ್ಟಿ, (ಮುಂದಿನ ಸಾಲಿನಲ್ಲಿ ಒಬ್ಬರೇ ಕುಳಿತವರು) ಒ.ಸಿ.ಅನುಷಾ –ಪ್ರಜಾವಾಣಿ ಚಿತ್ರ

ಸಾಧನೆಯ ಹಾದಿಯಲ್ಲಿ 'ಕೆಎಸ್‌ಡಿಎಲ್'

'ಸರ್ಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮ ಈಗ ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಈ ವರ್ಷ ₹170 ಕೋಟಿ ನಿವ್ವಳ ಲಾಭವಾಗಲಿದೆ' ಎಂದು ಕಂಪನಿಯ ಪ್ರಧಾನ ವ್ಯವಸ್ಥಾಪಕ ಉಮಾಶಂಕರ್ ಅಪಾಲಿ ಹೇಳಿದರು.

'ಕೇವಲ ಒಂಬತ್ತು ತಿಂಗಳಲ್ಲಿ ಒಂದು ಸಾವಿರ ಕೋಟಿಗೂ ಹೆಚ್ಚು ವಹಿವಾಟು ನಡೆಸಿದೆ. ಈಗಾಗಲೇ ಜನವರಿ ತಿಂಗಳ ಹೊತ್ತಿಗೆ ₹1,140 ಕೋಟಿ ವಹಿವಾಟು ನಡೆಸಿದ್ದು, ಮಾರ್ಚ್ 31ರ ವೇಳೆಗೆ ₹1,350 ಕೋಟಿಗೆ ತಲುಪಲಿದೆ' ಎಂದು ಸಂಸ್ಥೆಯ ಸಾಧನೆಯನ್ನು ಬಿಚ್ಚಿಟ್ಟರು. ಸಾಧಕರ ಕೆಲಸಗಳನ್ನು ಶ್ಲಾಘಿಸಿದರು.

'ಉತ್ತಮ ಕಥೆ ಇದ್ದರೆ ಸಿನಿಮಾ'

'ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಂ ಅವರು ವಿಭಿನ್ನ ಧಾರಾವಾಹಿಗಳ ಮೂಲಕ ಜನಪ್ರಿಯರಾಗಿದ್ದಾರೆ. ಅವರು ಅಚ್ಚುಮೆಚ್ಚಿನ ನಿರ್ದೇಶಕರಾಗಿದ್ದು, ಅವರ ನಿರ್ದೇಶನದ ಧಾರಾವಾಹಿಗಳನ್ನು ನೋಡುತ್ತಾ ಬಂದಿದ್ದೇನೆ. ಅವರ ಧಾರಾವಾಹಿಯಲ್ಲಿ ಗಟ್ಟಿಯಾದ ವಸ್ತುವಿಷಯ ಇರುತ್ತದೆ. ಹೀಗಾಗಿ, ಅವರ ಜತೆಗೆ ಚಲನಚಿತ್ರ ಮಾಡುವ ಬಗ್ಗೆ ಮಾತಾಡಿದ್ದು, ನಾನು ನಿರ್ಮಾಣ ಮಾಡುವುದಾಗಿ ಹೇಳಿದ್ದೇನೆ. 'ಕಾಂತಾರ' ಚಿತ್ರದ ರೀತಿಯ ಕಥೆಯನ್ನು ಮಾಡಿಕೊಂಡು ಬರುವಂತೆ ತಿಳಿಸಿದ್ದೇನೆ. ಅವರು ಆ ರೀತಿಯ ಕಥೆ ಮಾಡಿಕೊಂಡು ಬಂದಲ್ಲಿ ಖಂಡಿತವಾಗಿಯೂ ಚಲನಚಿತ್ರ ಮಾಡುತ್ತೇನೆ' ಎಂದು ಕೆ. ಮಾಡಾಳ್ ವಿರೂಪಾಕ್ಷಪ್ಪ ಹೇಳಿದರು.

'ಮಹಿಳೆಯರನ್ನು ಗೌರವಿಸುವುದು ಧರ್ಮ'

'ದೇಶದಲ್ಲಿ ಪುರಷರಿಗೆ ಸರಿಸಮಾನ ಸಂಖ್ಯೆಯಲ್ಲಿ ಮಹಿಳೆಯರಿದ್ದಾರೆ. ಅವರನ್ನು ಗೌರವಿಸಬೇಕಾದದ್ದು ನಮ್ಮ ಧರ್ಮ. ಪ್ರಧಾನಿ ನರೇಂದ್ರ ಮೋದಿ ಅವರು ಜನಸಂಖ್ಯೆಯನ್ನು ವರವಾಗಿ ತೆಗೆದುಕೊಂಡಿದ್ದಾರೆ. ಅವರು ದುಡಿಯುವ ಮಹಿಳೆಯರಿಗೆ ಅವಕಾಶ ಕಲ್ಪಿಸುತ್ತಿದ್ದಾರೆ. ಸ್ತ್ರೀಶಕ್ತಿ ಸಂಘಗಳ ಮೂಲಕ ಮಹಿಳೆಯರ ಸಬಲೀಕರಣ ಸಾಕಾರಗೊಳಿಸಲು ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದಾರೆ. ಇದರಿಂದಾಗಿ ಮಹಿಳೆಯರು ಕೇವಲ ಅಡುಗೆಮನೆಗೆ ಸೀಮಿತರಾಗದೆ, ಹೊರ ಪ್ರಪಂಚಕ್ಕೆ ಬಂದು ಸಾಧನೆ ಮಾಡುತ್ತಿದ್ದಾರೆ' ಎಂದು ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷರೂ ಆಗಿರುವ ಚನ್ನಗಿರಿ ಶಾಸಕ ಕೆ. ಮಾಡಾಳ್ ವಿರೂಪಾಕ್ಷಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

'ನಮ್ಮಲ್ಲಿ ಕ್ರೀಡೆ, ಸಂಗೀತ, ಚಿತ್ರರಂಗ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧಕರಿದ್ದಾರೆ. ಅವರನ್ನು ಗುರುತಿಸಿ, ಗೌರವಿಸಬೇಕು. 'ಪ್ರಜಾವಾಣಿ'ಯು ಅಂತಹ ಉತ್ತಮ ಕೆಲಸ ಮಾಡುತ್ತಿದೆ. ಇಂತಹ ಕಾರ್ಯಕ್ಕೆ ಸದಾ ನಮ್ಮ ಸಹಕಾರ ಇರಲಿದೆ' ಎಂದು ಹೇಳಿದರು.

ಸನ್ಮಾನಿತ ಸಾಧಕರು

ಬೆಂಗಳೂರಿನ ಮಂಸೋರೆ (ಸಿನಿಮಾ), ಬಿ.ಎನ್. ವಿಸ್ಮಯಾ, ಪಲ್ಲವಿ ಗೋಪಿನಾಥ್, ಪ್ರಾರ್ಥನಾ ಭಟ್ (ನವೋದ್ಯಮ), ಮಾಲಾ ರಂಗಸ್ವಾಮಿ (ಕ್ರೀಡೆ), ಒ.ಸಿ. ಅನುಷಾ (ಕ್ರೀಡೆ), ಎಲ್.ವೈ. ರಾಜೇಶ್ (ಸಮಾಜಸೇವೆ), ಕೆ.ವಿ.ಗುರುರಾಜ್ (ವಿಜ್ಞಾನ), ರೂಮಿ ಹರೀಶ್ (ಸಾಮಾಜಿಕ ಹೋರಾಟ), ರಂಜನಿ ರಾಘವನ್ (ಕಿರುತೆರೆ), ದಾದಾಪೀರ್ ಜೈಮನ್ (ಸಾಹಿತ್ಯ), ಅನೀಶ್ ಗೌಡ (ಕ್ರೀಡೆ), ಕೀರ್ತಿ ರಂಗಸ್ವಾಮಿ ಸಿ. (ಕ್ರೀಡೆ) ಹಾಗೂ ಮುರಳಿ ಮೋಹನ್ (ಉದ್ಯಮ) ಅವರನ್ನು ಸನ್ಮಾನಿಸಲಾಯಿತು.

ತುಮಕೂರಿನ ನಹಿದಾ ಜಮ ಜಮ್ (ಆಡಳಿತ), ಮಂಜಮ್ಮ ಎಸ್. ಬಾಲಯ್ಯ (ಮಹಿಳಾ ಸಬಲೀಕರಣ), ಕೋಲಾರದ ರಾಧಾಮಣಿ ಎಂ.ವಿ. (ಸಮಾಜಸೇವೆ), ಬೆಂಗಳೂರು ಗ್ರಾಮಾಂತರದ ಅರುಣ್ ಕುಮಾರ್ (ಕಲೆ), ರಾಮನಗರದ ಎಚ್.ಸಿ. ಚಂದ್ರಶೇಖರ್ (ಪರಿಸರ ಸಂರಕ್ಷಣೆ), ಶಿವಲಿಂಗ ಶೆಟ್ಟಿ (ಸಮಾಜಸೇವೆ) ಹಾಗೂ ರವಿಕುಮಾರ್ ಕಂಚನಹಳ್ಳಿ (ಮಾಹಿತಿಹಕ್ಕು ಹೋರಾಟ) ಅವರನ್ನು ಗೌರವಿಸಲಾಯಿತು.

'ಸಾಧಕರನ್ನು ಗುರುತಿಸುವುದು ಸವಾಲು'

ಸಿ.ಎಸ್. ಷಡಾಕ್ಷರಿ

'ಇತ್ತೀಚಿನ ದಿನಗಳಲ್ಲಿ ಪ್ರಶಸ್ತಿಗಾಗಿ ಶಿಫಾರಸು ಮಾಡುವಂತೆ ಕೆಲವರು ದುಂಬಾಲು ಬೀಳುತ್ತಾರೆ. ಇಂತಹ ಅವಧಿಯಲ್ಲಿ ಎಲ್ಲ ಕ್ಷೇತ್ರದ ತೆರೆಮರೆಯ ಸಾಧಕರನ್ನು ಗುರುತಿಸಿ, ಗೌರವಿಸುತ್ತಿರುವುದು ಉತ್ತಮ ಕೆಲಸ. ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಅಧಿಕಾರಿಗಳನ್ನೂ ಗುರುತಿಸಲಾಗಿದೆ. ಇದು ಶ್ಲಾಘನೀಯ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮೆಚ್ಚುಗೆ ವ್ಯಕ್ತಪಡಿಸಿದರು.

'ಪ್ರಶಸ್ತಿಗೆ ಸಾಧಕರನ್ನು ಗುರುತಿಸುವುದು ದೊಡ್ಡ ಸವಾಲು. 'ಪ್ರಜಾವಾಣಿ'ಯಲ್ಲಿ ಯಾವುದೇ ಆಮಿಷಗಳಿಗೆ ಅವಕಾಶವಿಲ್ಲ. ಎಲ್ಲಿಯೂ ಒಪ್ಪಂದ ಮಾಡಿಕೊಳ್ಳದೆ, ವಸ್ತುನಿಷ್ಠ ವರದಿಯನ್ನು ಪತ್ರಿಕೆ ಪ್ರಕಟಿಸುತ್ತಿದೆ. ವಾಸ್ತವದ ನೆಲೆಗಟ್ಟಿನಲ್ಲಿ ವಿಷಯವನ್ನು ತಿಳಿಸಲಾಗುತ್ತಿದೆ' ಎಂದು ತಿಳಿಸಿದರು.

'ಸ್ಫೂರ್ತಿ ಮೂಡಿಸಿದ ಸಾಧಕರ ಸಾಧನೆ'

'ಪ್ರಜಾವಾಣಿ ಗುರುತಿಸಿರುವ ಎಲ್ಲ ಸಾಧಕರ ಸಾಧನೆ ದೊಡ್ಡದು. ಇವರು ಸಾವಿರಾರು ಜನರಿಗೆ ಸ್ಫೂರ್ತಿಯಾಗಿದ್ದಾರೆ. ಇನ್ನೊಬ್ಬರಿಗೂ ಬೆಳಕಾಗಿದ್ದಾರೆ' ಎಂದು ಧಾರಾವಾಹಿ ಹಾಗೂ ಸಿನಿಮಾ ನಿರ್ದೇಶಕ ಟಿ.ಎನ್. ಸೀತಾರಾಂ ಮೆಚ್ಚುಗೆ ವ್ಯಕ್ತಪಡಿಸಿದರು.

'ಅಪರೂಪದ ಸಾಧನೆಯನ್ನು ಈ ಸಾಧಕರು ಮಾಡಿದ್ದಾರೆ. ಬದುಕಿನಲ್ಲಿ ಎಂತಹ ಕಷ್ಟಗಳು ಬಂದರೂ ನಾವು ಅಧೀರರಾಗಬಾರದು ಮತ್ತು ಧೈರ್ಯದಿಂದ ಸವಾಲುಗಳನ್ನು ಎದುರಿಸಬೇಕು ಎನ್ನುವುದನ್ನು ಈ ಸಾಧಕರು ತೋರಿಸಿಕೊಟ್ಟಿದ್ದಾರೆ' ಎಂದು ಶ್ಲಾಘಿಸಿದರು.

'ಕರ್ನಾಟಕದಲ್ಲಿ ಕನ್ನಡಕ್ಕಾಗಿ ಹೋರಾಟ ಮಾಡುವ ಪರಿಸ್ಥಿತಿ ಇದೆ. ಸಿನಿಮಾ ನಿರ್ದೇಶಕ ಮಂಸೋರೆ ಅಂತಹವರು ಕನ್ನಡಕ್ಕಾಗಿಯೂ ಹೋರಾಟ ನಡೆಸುತ್ತಿದ್ದಾರೆ. ವಿಭಿನ್ನ ಚಲನಚಿತ್ರಗಳ ಮೂಲಕ ಸಿನಿಮಾ ಕ್ಷೇತ್ರದಲ್ಲಿ ಹೊಸತನ ಮೂಡಿಸಿರುವ ಮಂಸೋರೆ ಅವರು ಚಿಕ್ಕವರಾದರೂ ನನ್ನ ಗುರು' ಎಂದು ಪ್ರಶಂಸೆ ವ್ಯಕ್ತಪಡಿಸಿದರು.

'ಪ್ರಜಾವಾಣಿ ಜತೆಗಿನ ನನ್ನ ನಂಟು ಹಳೆಯದು. ಪ್ರಜಾವಾಣಿ ಆಯೋಜಿಸಿದ್ದ ನಾಟಕ ಸ್ಪರ್ಧೆಯಲ್ಲಿ ನನಗೆ ಮತ್ತು ಲಂಕೇಶ್ ಅವರಿಗೆ ಬಹುಮಾನ ದೊರೆತಿತ್ತು' ಎಂದು ನೆನಪಿಸಿಕೊಂಡರು.

ಸಾಧಕರ ಪ್ರತಿಕ್ರಿಯೆಗಳು

ನನ್ನ ಚಿಂತನೆಗಳನ್ನು ತಿದ್ದಿ ತೀಡಿದ್ದರಲ್ಲಿ 'ಪ್ರಜಾವಾಣಿ'ಯ ಪಾಲು ದೊಡ್ಡದಿದೆ. ನನ್ನ ಮೊದಲ ಸಿನಿಮಾ 'ಹರಿವು' 'ಪ್ರಜಾವಾಣಿ'ಯಲ್ಲಿ ಪ್ರಕಟವಾಗಿದ್ದ ಆಶಾ ಬೆನಕಪ್ಪ ಅವರ ಅಂಕಣ ಬರಹದ ಪ್ರಸಂಗವನ್ನು ಆಧರಿಸಿತ್ತು. ಇದು ನನಗೆ ಸಿನಿಮಾ ಮಾಡಲು ಮತ್ತಷ್ಟು ಪ್ರೋತ್ಸಾಹ ಒದಗಿಸಿತು. ಈಗ ನನ್ನನ್ನು ಗುರುತಿಸಿ, ಗೌರವಿಸಿರುವುದು ಸಂತೋಷವನ್ನುಂಟು ಮಾಡಿದೆ.

ಮಂಸೋರೆ, ಸಿನಿಮಾ ನಿರ್ದೇಶಕ

ಚಿಕ್ಕವನಿಂದಲೂ ಮುಂಜಾನೆ ಚಹಾದ ಜತೆಗೆ ಪತ್ರಿಕೆ ಓದುವ ಹವ್ಯಾಸವಿದೆ. ಈಗಿನ ತಲೆಮಾರಿನವರಲ್ಲಿ ಈ ಹವ್ಯಾಸ ಕಡಿಮೆ ಆಗುತ್ತಿರುವುದು ಬೇಸರದ ಸಂಗತಿ. ಇವತ್ತು ಪ್ರಶಸ್ತಿ ತೆಗೆದುಕೊಳ್ಳಲು ಅರ್ಜಿ ಹಾಕಿ, ಅದರ ಹಿಂದೆ ಬೀಳಬೇಕಾದ ಪರಿಸ್ಥಿತಿಯಿದೆ. ಆದರೆ, ನಮಗೇ ಗೊತ್ತಿಲ್ಲದ ಹಾಗೆ ಗುರುತಿಸಿ, ಗೌರವಿಸುತ್ತಿರುವುದು ಸಂತಸದ ಸಂಗತಿ.

ಎಲ್.ವೈ. ರಾಜೇಶ್, ಇನ್‌ಸ್ಪೆಕ್ಟರ್

ಕನ್ನಡ ಪತ್ರಿಕೆಗಳನ್ನು ಓದಬೇಕು ಎಂಬ ಪದ್ಧತಿ ನಮ್ಮ ಶಾಲೆಯಲ್ಲಿತ್ತು. 'ಪ್ರಜಾವಾಣಿ' ಪತ್ರಿಕೆಯನ್ನು ಗ್ರಂಥಪಾಲಕರು ಓದಿಸುತ್ತಿದ್ದರು. ಇದರಿಂದ ನನ್ನ ಭಾಷೆ ಸ್ಪಷ್ಟವಾಗಿದೆ. 'ಕನ್ನಡತಿ' ಧಾರಾವಾಹಿ ಆಯ್ಕೆಗೆ ಹಾಗೂ ಕಥೆಗಳನ್ನು ಬರೆಯಲು ಈ ಭಾಷಾ ಸ್ಪಷ್ಟತೆ ಕಾರಣವಾಗಿರಬಹುದು. ಕನ್ನಡ ಅಕ್ಷರಗಳು ನನ್ನ ಜೀವನದ ಜತೆಗೆ ಹಾಸುಹೊಕ್ಕಾಗಿ ಬಂದಿವೆ.

ರಂಜನಿ ರಾಘವನ್, ಕಿರುತೆರೆ ನಟಿ

ಲಿಂಗತ್ವ ಅಲ್ಪಸಂಖ್ಯಾತರಲ್ಲಿ ಹೆಣ್ಣಾಗಿ ಹುಟ್ಟಿ, ಗಂಡಾಗಿ ಪರಿವರ್ತಿತರಾದವರನ್ನೂ ಗುರುತಿಸಿ ಗೌರವಿಸುತ್ತಿರುವುದು ಶ್ಲಾಘನೀಯ. ಲಿಂಗತ್ವ ಅಲ್ಪಸಂಖ್ಯಾತರಿಗೆ ಸಮಾಜದಲ್ಲಿ ಹಲವು ಸವಾಲುಗಳಿವೆ. ನಾನು ಹೆಣ್ಣಾಗಿ ಹುಟ್ಟಿ, ಗಂಡಾಗಿ ಪರಿವರ್ತನೆಯಾಗಿರುವುದರ ಬಗ್ಗೆ ಗರ್ವವಿದೆ. ನಾನು ಬರವಣಿಗೆಗೆ ತೊಡಗಿಕೊಳ್ಳಲು 'ಪ್ರಜಾವಾಣಿ' ಸಹಕಾರಿಯಾಗಿದ್ದು, ಭಾಷೆ ಬಳಕೆಯಿಂದಲೂ ಪತ್ರಿಕೆ ಆಪ್ತವಾಗಿದೆ.

ರೂಮಿ ಹರೀಶ್, ಸಂಗೀತಗಾರ

ಬಿಎಂಟಿಸಿಗೆ 1,300 ಎಲೆಕ್ಟ್ರಿಕ್ ಬಸ್: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಬಿಎಂಟಿಸಿಗೆ 1,300 ವಿದ್ಯುತ್ ಚಾಲಿತ ಬಸ್‌ಗಳನ್ನು ಸೇರಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕಲಾಸಿಪಾಳ್ಯದಲ್ಲಿ ಬಿಎಂಟಿಸಿಯ ನೂತನ ಬಸ್ ನಿಲ್ದಾಣವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.

ಕೋವಿಡ್‌ನಿಂದಾಗಿ ಕೆಲವು ವರ್ಷಗಳಿಂದ ಪ್ರಯಾಣ ದರವನ್ನು ಹೆಚ್ಚಿಸಲಾಗಿಲ್ಲ. ಹೀಗಾಗಿ ಸರ್ಕಾರವೇ ಬಿಎಂಟಿಸಿಗೆ ₹2,915 ಕೋಟಿ ನೀಡಿದ್ದು, ನಿರಂತರ ಸೇವೆ ಸಲ್ಲಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬಿಎಂಟಿಸಿಗೆ 3,445 ಬಸ್‌ಗಳನ್ನು ನೀಡಲಾಗುತ್ತದೆ ಎಂದು ಹೇಳಿದರು.

ಬಿಎಂಟಿಸಿಯನ್ನು ಲಾಭದಾಯಕಗೊಳಿಸಲು ಶ್ರೀನಿವಾಸಮೂರ್ತಿಯವರ ಸಮಿತಿ ವರದಿಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಬಿಎಂಟಿಸಿ ನೌಕರರ ಕಲ್ಯಾಣಕ್ಕಾಗಿ ಸಂಬಂಧಪಟ್ಟಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ನೌಕರರ ಸಮಸ್ಯೆಗಳಿಗೆ ಪರಿಹಾರ ಒದಗಿಸಲಾಗುವುದು ಎಂದರು.

ಕೆಎಸ್‌ಆರ್‌ಟಿಸಿ, ಖಾಸಗಿ ಬಸ್ ಸೇವೆ ಪಡೆಯುತ್ತಿರುವ ಸುತ್ತಮುತ್ತಲಿನ ಗ್ರಾಮದವರಿಗೆ ಕಲಾಸಿಪಾಳ್ಯ ಬಸ್ ನಿಲ್ದಾಣದಲ್ಲಿ ಹೆಚ್ಚು ಅನುಕೂಲಗಳಿವೆ. ಕಲಾಸಿಪಾಳ್ಯ ಬಸ್ ನಿಲ್ದಾಣವನ್ನು ನಮ್ಮ ಮೆಟ್ರೊಗೆ ಸ್ಟೇಷನ್ ಜೋಡಿಸುವ ಬಗ್ಗೆ ಚರ್ಚೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಲಾಸಿಪಾಳ್ಯದಲ್ಲಿ ಬಿಎಂಟಿಸಿಯ ನೂತನ ಬಸ್ ನಿಲ್ದಾಣಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಚಾಲನೆ ನೀಡಿದರು. ವಿಧಾನ ಪರಿಷತ್ ಸದಸ್ಯ ನಾಗರಾಜ್ ಯಾದವ್, ಸಚಿವ ಆರ್. ಅಶೋಕ, ಶಾಸಕ ಉದಯ್ ಗರುಡಾಚಾರ್ ಇದ್ದರು

ಮಾ. 11 ರಂದು ಐಐಟಿ ಧಾರವಾಡ ಕಾಯಂ ಕ್ಯಾಂಪಸ್ ಲೋಕಾರ್ಪಣೆ

ಧಾರವಾಡ: 'ಐಐಟಿ ಧಾರವಾಡದ ಕಾಯಂ ಕ್ಯಾಂಪಸ್ ಅನ್ನು ಮಾರ್ಚ್ 11ರಂದು ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆಗೊಳಿಸಲಿದ್ದಾರೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಇಲ್ಲಿನ ಮುಮ್ಮಿಗಟ್ಟಿ ಬಳಿಯ ಐಐಟಿ ಧಾರವಾಡದ ಕಾಯಂ ಕ್ಯಾಂಪಸ್‌ಗೆ ಶುಕ್ರವಾರ ಭೇಟಿ ನೀಡಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಅಂದು ಮಧ್ಯಾಹ್ನ 3ಕ್ಕೆ ಪ್ರಧಾನಿ ಮೋದಿ ಅವರು ಇಲ್ಲಿಗೆ ಭೇಟಿ ನೀಡಿ ಕ್ಯಾಂಪಸ್ ಲೋಕಾರ್ಪಣೆಗೊಳಿಸಲಿದ್ದಾರೆ' ಎಂದರು.

2016ರಲ್ಲಿ ಐಐಟಿ ಕಾರ್ಯಾರಂಭ ಮಾಡಿತ್ತು

ಮಹದೇಶ್ವರ ಬೆಟ್ಟ: 5 ದಿನಗಳಲ್ಲಿ ₹ 2.70 ಕೋಟಿ ಆದಾಯ

ಮಹದೇಶ್ವರಬೆಟ್ಟ (ಚಾಮರಾಜನಗರ ಜಿಲ್ಲೆ): ಇಲ್ಲಿನ ಪ್ರಸಿದ್ಧ ಯಾತ್ರಾ ಸ್ಥಳ ಮಲೆ ಮಹದೇಶ್ವರಬೆಟ್ಟದಲ್ಲಿ ಇತ್ತೀಚೆಗೆ ಐದು ದಿನಗಳ ಕಾಲ ನಡೆದ ಮಹಾಶಿವರಾತ್ರಿ ಜಾತ್ರಾ ಮಹೋತ್ಸವವು ಮಲೆ ಮಹದೇಶ್ವರಸ್ವಾಮಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಉತ್ತಮ ಆದಾಯ ತಂದು ಕೊಟ್ಟಿದೆ.

ಫೆ.17ರಿಂದ 21ರವರೆಗೆ ಕ್ಷೇತ್ರಕ್ಕೆ ಭೇಟಿ ನೀಡಿದ್ದ ಭಕ್ತರು ಮಹದೇಶ್ವರ ಸ್ವಾಮಿ ದೇವರಿಗೆ ಸಲ್ಲಿಸಿದ ವಿವಿಧ ಸೇವೆಗಳ ಮೂಲಕ ₹ 2.70 ಕೋಟಿ ಆದಾಯ ಬಂದಿದೆ.

ಇದರಲ್ಲಿ ಹುಂಡಿ ಕಾಣಿಕೆ, ವಸತಿ ಗೃಹಗಳ ಬಾಡಿಗೆ ಹಾಗೂ ಬಸ್‌ನ ಆದಾಯ ಸೇರಿಲ್ಲ.

'ಭ್ರಷ್ಟಾಚಾರ: ಹೊಣೆಗಾರಿಕೆ ನಿಗದಿಪಡಿಸುವ ಅಗತ್ಯವಿದೆ'

ನವದೆಹಲಿ (ಪಿಟಿಐ): 'ಭಾರತದಲ್ಲಿ ಜನಸಾಮಾನ್ಯರು ಭ್ರಷ್ಟಾಚಾರ ಸಮಸ್ಯೆಯಿಂದ ನಲುಗಿಹೋಗಿದ್ದು, ಎಲ್ಲಾ ಹಂತಗಳಲ್ಲೂ ಹೊಣೆಗಾರಿಕೆಯನ್ನು ನಿಗದಿಪಡಿಸುವ ಅಗತ್ಯವಿದೆ' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಅಭಿಪ್ರಾಯಪಟ್ಟಿದೆ.

ಕ್ರಿಮಿನಲ್ ಪ್ರಕರಣಗಳ ಆರೋಪಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸದಂತೆ ನಿರ್ಬಂಧ ವಿಧಿಸಬೇಕು ಎಂದು ಕೋರಿ ವಕೀಲ ಅಶ್ವಿನ್ ಉಪಾಧ್ಯಾಯ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಬಿ.ವಿ. ನಾಗರತ್ನ ಅವರನ್ನೊಳಗೊಂಡ ನ್ಯಾಯಪೀಠವು ಈ ರೀತಿ ತಿಳಿಸಿದೆ.

'ಭಾರತದಲ್ಲಿ ಜನಸಾಮಾನ್ಯರು ಭ್ರಷ್ಟಾಚಾರದಿಂದ ನಲುಗಿದ್ದಾರೆ. ಯಾವುದೇ ಸರ್ಕಾರಿ ಕಚೇರಿಗೆ ಹೋಗಿ, ನೀವು ಅಲ್ಲಿನ ಭ್ರಷ್ಟಾಚಾರದಿಂದ ಪಾರಾಗದೆ ಹೊರಬರಲು ಸಾಧ್ಯವಿಲ್ಲ. ಈ ಬಗ್ಗೆ ಖ್ಯಾತ ನ್ಯಾಯಶಾಸ್ತ್ರಜ್ಞ ನಾನಿ ಪಾಲ್ಖಿವಾಲಾ ಅವರು ತಮ್ಮ 'ವಿ ದಿ ಪೀಪಲ್' ಪುಸ್ತಕದಲ್ಲಿ ಬರೆದಿದ್ದಾರೆ' ಎಂದು ನ್ಯಾಯಪೀಠವು ಉಲ್ಲೇಖಿಸಿತು.

'ಪ್ರಜಾಪ್ರಭುತ್ವದ ಹೆಸರಿನಲ್ಲಿ ಏನಾಗುತ್ತಿದೆ ಎಂಬುದರ ಬಗ್ಗೆ ಏನನ್ನೂ ಹೇಳದಿರಲು ನಾನು ಬಯಸುತ್ತೇನೆ' ಎಂದು ನ್ಯಾಯಮೂರ್ತಿ ಜೋಸೆಫ್ ಹೇಳಿದರು.

27ರಿಂದ ಕರುನಾಡು ಸಂಕಲ್ಪ ಯಾತ್ರೆ

ಬೆಂಗಳೂರು: 'ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದಿಂದ (ಕೆಆರ್‌ಎಸ್) ಫೆ. 27ರಿಂದ 'ಕರುನಾಡು ಕಟ್ಟೋಣ' ಸಂಕಲ್ಪ ಯಾತ್ರೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಸೋಮಸುಂದರ್ ಕೆ.ಎಸ್. ಶುಕ್ರವಾರ ತಿಳಿಸಿದರು.

ಕೆಆರ್‌ಎಸ್ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಅವರ ನೇತೃತ್ವದಲ್ಲಿ ರಾಜ್ಯದ 13 ಜಿಲ್ಲೆಗಳಲ್ಲಿ 'ಕೆಆರ್‌ಎಸ್ ಪಕ್ಷವನ್ನು ಬೆಂಬಲಿಸಿ ಕರ್ನಾಟಕ ರಕ್ಷಿಸಿ' ಎಂಬ ಘೋಷವಾಕ್ಯದೊಂದಿಗೆ ಕರುನಾಡು ಕಟ್ಟೋಣ ಸಂಕಲ್ಪ ಯಾತ್ರೆ ಆಯೋಜಿಸಲಾಗಿದೆ ಫೆ. 27ರಂದು ರಾಮನಗರ ಜಿಲ್ಲೆಯ ಮಾಗಡಿಯಿಂದ ಪ್ರಾರಂಭವಾಗಿ ತುಮಕೂರು, ಹಾಸನ, ಚಿಕ್ಕಮಗಳೂರು, ದಾವಣಗೆರೆ, ಹಾವೇರಿ, ಧಾರವಾಡ, ಬೆಳಗಾವಿ, ಬಾಗಲಕೋಟೆ, ಕೊಪ್ಪಳ, ವಿಜಯನಗರ, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಸಾಗಿ ತುಮಕೂರಿನಲ್ಲಿ ಈ ಯಾತ್ರೆ ಕೊನೆಗೊಳ್ಳಲಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಅಮೆರಿಕ, ಕೊರಿಯಾ ಮುಂತಾದ ರಾಷ್ಟ್ರಗಳಿಗೆ ರಫ್ತು

ವಿದೇಶದಲ್ಲೂ ಬಾಗಲಕೋಟೆ ಮೆಣಸಿನಕಾಯಿ ಘಾಟು

• ಬಸವರಾಜ ಹವಾಲ್ದಾರ

ಪ್ರಜಾವಾಣಿ ವಿಶೇಷ

ಬಾಗಲಕೋಟೆ: ದಾಳಿಂಬೆ, ದ್ರಾಕ್ಷಿ, ಸಪೋಟ, ಪೇರಲದಂತಹ ತೋಟಗಾರಿಕೆ ಬೆಳೆಗಳಿಂದ ಖ್ಯಾತಿ ಪಡೆದಿರುವ ಜಿಲ್ಲೆಯ ಬೆಳೆಗಳ ಪಟ್ಟಿಗೆ ಈಗ ಮೆಣಸಿನಕಾಯಿ ಸೇರ್ಪಡೆಗೊಂಡಿದೆ. ಬಾಗಲಕೋಟೆ, ಹುನಗುಂದ ತಾಲ್ಲೂಕಿನಲ್ಲಿ ಸಾವಿರಕ್ಕೂ ಹೆಚ್ಚು ರೈತರು ಬೆಳೆದ '334' ತಳಿಯ ಕೆಂಪು ಮೆಣಸಿನಕಾಯಿ ಘಾಟು ಈಗ ವಿದೇಶದಲ್ಲಿಯೂ ಹರಡಿಕೊಂಡಿದೆ.

ಈಗಾಗಲೇ 300 ಟನ್‌ನಷ್ಟು ರಫ್ತು ಮಾಡಲಾಗಿದ್ದು, ಅಂದಾಜು ಇನ್ನೂ 100 ಟನ್‌ನಷ್ಟು ರಫ್ತಾಗುವ ನಿರೀಕ್ಷೆ ಇದೆ. ಕಡಲೆ, ತೊಗರಿ ಬೆಳೆದು ಅಲ್ಪ ಆದಾಯ ಪಡೆಯುತ್ತಿದ್ದ ರೈತರು, ಈಗ ಮೆಣಸಿನಕಾಯಿ ಬೆಳೆದು ಪ್ರತಿ ಎಕರೆಗೆ ₹1 ಲಕ್ಷದಿಂದ ₹ 1.25 ಲಕ್ಷ ವರೆಗೆ ಆದಾಯ ಗಳಿಸುತ್ತಿದ್ದಾರೆ.

ಹುನಗುಂದ ತಾಲ್ಲೂಕಿನ ಸೂಳೇಭಾವಿಯಲ್ಲಿರುವ ಹುನಗುಂದ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಾಗಿರುವ ರೈತರು, ಜಿಲ್ಲೆಯ ಮೆಣಸಿನಕಾಯಿ ಘಾಟನ್ನು ಎಲ್ಲೆಡೆ ಹರಡುತ್ತಿದ್ದಾರೆ. ಸಂಸ್ಥೆ ಮೂಲಕ ವಿದೇಶಕ್ಕೂ ಕಳುಹಿಸುತ್ತಿದ್ದಾರೆ.

334 ಅಥವಾ ಸೂಪರ್ 10 ಎಂಬ ತಳಿ ಬೆಳೆಯಲಾಗುತ್ತಿದ್ದು, ಪ್ರತಿ ಎಕರೆಗೆ 10ರಿಂದ 14 ಕ್ವಿಂಟಲ್ ಇಳುವರಿ ಪಡೆಯುತ್ತಿದ್ದಾರೆ. ಪ್ರತಿ ಕ್ವಿಂಟಲ್‌ಗೆ ₹19 ಸಾವಿರದಿಂದ ₹26 ಸಾವಿರವರೆಗೆ ಮಾರಾಟವಾಗಿದೆ. ಮೆಣಸಿನಕಾಯಿ ಮಾರುಕಟ್ಟೆಗಿಂತ ಪ್ರತಿ ಕ್ವಿಂಟಲ್‌ಗೆ ₹2 ಸಾವಿರದಿಂದ ₹3 ಸಾವಿರ ಹೆಚ್ಚಿಗೆ ದೊರೆಯುತ್ತಿದೆ. ಉತ್ತಮ ಬೆಲೆ ದೊರೆಯದ ಕಾರಣ ಯಾರೂ ಮೆಣಸಿನಕಾಯಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿರಲಿಲ್ಲ. ಈಗ ಉತ್ತಮ ಬೆಲೆ ದೊರೆಯುತ್ತಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಮೆಣಸಿನಕಾಯಿ ಬೆಳೆಯಲು ಆರಂಭಿಸಿದ್ದಾರೆ.

'ಮೊದಲು ಕಡಲೆ, ತೊಗರಿ ಬೆಳೆಯುತ್ತಿದ್ದೆವು. ಈಗ ಪ್ರತಿ ಎಕರೆಗೆ ₹50 ಸಾವಿರದಷ್ಟು ವೆಚ್ಚವಾಗುತ್ತಿದ್ದು, 1.20 ಲಕ್ಷ ಉಳಿಯುತ್ತಿದೆ' ಎನ್ನುತ್ತಾರೆ ಹುನಗುಂದ ತಾಲ್ಲೂಕಿನ ಚಿತ್ತರಗಿಯ ರೈತ ಎನ್.ಸಿ. ಗೌಡರ.

ಬಾಗಲಕೋಟೆ ಜಿಲ್ಲೆಯ ಚಿತ್ತರಗಿಯ ಎನ್.ಸಿ. ಗೌಡರ ಹೊಲದಲ್ಲಿನ ಮೆಣಸಿನಕಾಯಿ

ರೈತರು ಸಂಘಟಿತರಾಗಿ, ತಂತ್ರಜ್ಞಾನ ಸರಿಯಾಗಿ ಬಳಸಿಕೊಂಡರೆ ಕೃಷಿಯಲ್ಲಿಯೂ ಲಾಭ ಪಡೆಯಬಹುದಾಗಿದೆ

ರವಿ ಸಜ್ಜನರ, ವ್ಯವಸ್ಥಾಪಕ ನಿರ್ದೇಶಕ, ಹುನಗುಂದ ತೋಟಗಾರಿಕೆ ರೈತ ಉತ್ಪಾದಕ ಸಂಸ್ಥೆ

'ಮೆಣಸಿನಕಾಯಿ ಬೀಜದಿಂದ ಹಿಡಿದು ರಾಶಿ ಮಾಡುವವರೆಗೆ ರೈತರಿಗೆ ಉತ್ಪಾದಕ ಸಂಸ್ಥೆ ವತಿಯಿಂದ ಮಾರ್ಗದರ್ಶನ ಮಾಡಲಾಗುತ್ತದೆ. ರೈತರ ಹೊಲಗಳಿಗೇ ತೆರಳಿ ಸಂಗ್ರಹ ಮಾಡಲಾಗುತ್ತದೆ. ಸಾಗಾಟ ವೆಚ್ಚವನ್ನೂ ಸಂಸ್ಥೆಯೇ ಭರಿಸುತ್ತದೆ' ಎನ್ನುತ್ತಾರೆ ಹುನಗುಂದ ತೋಟಗಾರಿಕಾ ರೈತ ಉತ್ಪಾದಕ ಸಂಸ್ಥೆ ವ್ಯವಸ್ಥಾಪಕ ನಿರ್ದೇಶಕ ರವಿ ಸಜ್ಜನರ.

ವೋಲಮ್ ಇನ್‌ಗ್ರಿಡಿಯಂಟ್ಸ್ ಫುಡ್ ಲಿಮಿಟೆಡ್ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಇಲ್ಲಿಂದ ಕೊಚ್ಚಿನ್‌ಗೆ ಕಳುಹಿಸಲಾಗುತ್ತದೆ. ಅಲ್ಲಿಂದ ಅಮೆರಿಕ, ಕೊರಿಯಾ, ಯುರೋಪ್ ರಾಷ್ಟ್ರಗಳಿಗೆ ರಫ್ತಾಗುತ್ತಿದೆ ಎಂದರು.

'ಯಾವ ದೇಶಕ್ಕೆ ರಫ್ತು ಮಾಡುತ್ತೇವೆ ಎನ್ನುವ ಆಧಾರದ ಮೇಲೆ ಆ ದೇಶದ ಮಿತಿ ಪ್ರಕಾರ ಔಷಧ ಬಳಕೆ ಬಗ್ಗೆ ರೈತರಿಗೆ ಮಾರ್ಗದರ್ಶನ ಮಾಡಲಾಗುತ್ತದೆ' ಎನ್ನುತ್ತಾರೆ ವೋಲಮ್ ಇನ್‌ಗ್ರಿಡಿಯಂಟ್ಸ್ ಫುಡ್ ಲಿಮಿಟೆಡ್ ಮ್ಯಾನೇಜರ್ ಸಂತೋಷ ಯರಗಂಬಳಿಮಠ.

ಚಿತ್ರಾವಳಿ

ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಶುಕ್ರವಾರ ನಡೆದ 'ಸ್ವರ ಕಾವೇರಿ' ಭಾರತೀಯ ಶಾಸ್ತ್ರೀಯ ಸಂಗೀತೋತ್ಸವದಲ್ಲಿ ಅನಹಿತಾ ಹಾಗೂ ಅಪೂರ್ವ ಗಾಯನ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಕನ್ನಡ ಗೆಳೆಯರ ಬಳಗ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಕೆ. ಮುರಳೀಧರ ಮತ್ತು ರಾ.ನಂ. ಚಂದ್ರಶೇಖರ ಅವರು ಸಂಪಾದಿಸಿದ 'ಕನ್ನಡ ಯುವಜನತೆಗೆ ಕೈದೀವಿಗೆ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಆಮ್ ಆದ್ಮಿ ಪಕ್ಷದ ರಾಜ್ಯ ಪ್ರಚಾರ ಹಾಗೂ ಜನಸಂಪರ್ಕ ಸಮಿತಿಯ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಸಂಶೋಧಕ ಆರ್. ಶೇಷಶಾಸ್ತ್ರಿ, ವ.ಚ. ಚನ್ನೇಗೌಡ ಇದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗ ಆಯೋಜಿಸಿದ್ದ ನೂತನ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಕಲಾವಿದ ಶಿಡ್ಲಘಟ್ಟ ಮುನಿವೆಂಕಟಪ್ಪ ಉದ್ಘಾಟಿಸಿದರು. ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಬಿ.ಸಿ. ಮೈಲಾರಪ್ಪ, ಸಮಾಜಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಸಿ. ಸೋಮಶೇಖರ್, ಪ್ರಾಧ್ಯಾಪಕರಾದ ಪ್ರೊ. ರಾಜೇಶ್ ಆರ್. ಮತ್ತು ಸಂಶೋಧಕ ಎಸ್. ಅಂಬರೀಶ್ ಇದ್ದರು.

ಶಿಕ್ಷಕ ಶಂಕರಪ್ಪ ಸಾವು ಪ್ರಕರಣ • ಮರಣಪತ್ರದಲ್ಲಿ ಸಾಲ ಕೊಡಿಸಿದ್ದ ಮಹಿಳೆ ಹೆಸರು ಉಲ್ಲೇಖ

‘₹ 28 ಲಕ್ಷ ಸಾಲ, ಮಕ್ಕಳಿಲ್ಲವೆಂದು ಆತ್ಮಹತ್ಯೆ’

ಪ್ರಜಾವಾಣಿ ವಾರ್ತೆ

ಶಂಕರಪ್ಪ

ಬೆಂಗಳೂರು: ಮೆಜೆಸ್ಟಿಕ್– ಮಲ್ಲೇಶ್ವರ ಮಾರ್ಗದ ಹಳಿಯ ಮೇಲೆ ರೈಲು ಹರಿದು ಮೃತಪಟ್ಟಿರುವ ಶಿಕ್ಷಕ ಶಂಕರಪ್ಪ ಬೋರಣ್ಣಿ (47) ಅವರದ್ದು ಆತ್ಮಹತ್ಯೆ ಎಂಬುದು ತನಿಖೆಯಿಂದ ಗೊತ್ತಾಗಿದ್ದು, ಅವರು ಬರೆದಿಟ್ಟಿದ್ದ ಎನ್ನಲಾದ ಎರಡು ಪುಟಗಳ ಮರಣಪತ್ರ ಪೊಲೀಸರಿಗೆ ಲಭ್ಯವಾಗಿದೆ.

‘ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಶಂಕರಪ್ಪ, ರಾಯಚೂರು ಜಿಲ್ಲೆಯ ಸಿಂಧನೂರಿನ ಪ್ರೌಢಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು. ನಾಲ್ವರು ಸಹೋದ್ಯೋಗಿಗಳ ಜೊತೆ ಇತ್ತೀಚೆಗೆ ನಗರಕ್ಕೆ ಬಂದಿದ್ದ ಶಂಕರಪ್ಪ, ಸ್ವಾತಂತ್ರ್ಯ ಉದ್ಯಾನದಲ್ಲಿ ಅನುದಾನಿತ ಶಾಲಾ–ಕಾಲೇಜುಗಳ ನೌಕರರು ನಡೆಸುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಂಗಳವಾರ (ಫೆ. 21) ರಾತ್ರಿ ತವೂರಿಗೆ ವಾಪಸು ಹೋಗುವಾಗ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂದು ರೈಲ್ವೆ ಪೊಲೀಸರು ತಿಳಿಸಿದರು.

‘ಹಳಿ ಮೇಲೆ ಶಂಕರಪ್ಪ ಮೃತದೇಹ ಸಿಕ್ಕಿದೆ. ಜೇಬಿನಲ್ಲಿ ಎರಡು ಪುಟಗಳ ಮರಣ ಪತ್ರ ಪತ್ತೆಯಾಗಿದೆ’ ಎಂದು ಹೇಳಿದರು.

₹ 35 ಲಕ್ಷ ಸಾಲ ಪಡೆದಿದ್ದ ಶಿಕ್ಷಕ: ‘ಬೆಂಗಳೂರಿನ ನಂದಿನಿ ಎಂಬುವವರು ಕೆಲ ವರ್ಷಗಳ ಹಿಂದೆ ಶಿಕ್ಷಕ ಶಂಕರಪ್ಪ ಮೊಬೈಲ್‌ಗೆ ಕರೆ ಮಾಡಿದ್ದರು. ಐಸಿಐಸಿಐ ಹಾಗೂ ಎಚ್‌ಡಿಎಫ್‌ಸಿ ಬ್ಯಾಂಕ್‌ನಿಂದ ಸಾಲ ಕೊಡಿಸುವುದಾಗಿ ಹೇಳಿದ್ದರು. ಅದಕ್ಕೆ ಒಪ್ಪಿದ್ದ ಶಂಕರಪ್ಪ, ನಂದಿನಿ ಭೇಟಿಯಾಗಿದ್ದರು. ಈ ಸಂಗತಿ ಮರಣಪತ್ರದಲ್ಲಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಾಖಲೆ ಪಡೆದಿದ್ದ ನಂದಿನಿ, ಎರಡೂ ಬ್ಯಾಂಕ್‌ಗಳಿಂದ ₹ 35 ಲಕ್ಷ ಸಾಲ ಮಂಜೂರು ಮಾಡಿಸಿದ್ದರು. ಆರ್ಥಿಕ ಸಂಕಷ್ಟದಲ್ಲಿರುವುದಾಗಿ ಹೇಳಿದ್ದ ಮಹಿಳೆ, ಶಂಕರಪ್ಪ ಅವರಿಂದ ₹ 35 ಲಕ್ಷದಲ್ಲಿ ₹ 28 ಲಕ್ಷವನ್ನು ಸಾಲ ಪಡೆದಿದ್ದರು.’

‘ಸಾಲ ವಾಪಸು ನೀಡಲು ನಂದಿನಿ ವಿಳಂಬ ಮಾಡುತ್ತಿದ್ದರು. ಅದನ್ನು ಪ್ರಶ್ನಿಸಿದ್ದ ಶಂಕರಪ್ಪ, ಪತ್ನಿ ಜೊತೆ ಮಹಿಳೆಯನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದರು. ಸಾಲವನ್ನು ಕಂತಿನಲ್ಲಿ ವಾಪಸು ನೀಡುವುದಾಗಿ ತಾಕೀತು ಮಾಡಿದ್ದರು. ಅದಕ್ಕೆ ಒಪ್ಪಿದ್ದ ನಂದಿನಿ, ಸ್ವಲ್ಪ ಸ್ವಲ್ಪ ಹಣವನ್ನು ಪ್ರತಿ ತಿಂಗಳು ನೀಡುತ್ತಿದ್ದರು. ಆದರೆ, ಸಾಲದ ಸಂಪೂರ್ಣ ಕಂತು ತುಂಬುವುದು ಶಂಕರಪ್ಪ ಅವರಿಗೆ ಹೊರೆಯಾಗಿತ್ತು. ಈ ಅಂಶವೂ ಪತ್ರದಲ್ಲಿದೆ’ ಎಂದು ಮೂಲಗಳು ತಿಳಿಸಿವೆ.

‘ಶಂಕರಪ್ಪ ಮದುವೆಯಾಗಿ 16 ವರ್ಷವಾಗಿತ್ತು. ಅವರಿಗೆ ಮಕ್ಕಳು ಇರಲಿಲ್ಲ. ಈ ಸಂಗತಿಯನ್ನು ಪತ್ರದಲ್ಲಿ ಉಲ್ಲೇಖಿಸಿರುವ ಅವರು, ‘ಹಲವು ಕಾರಣಗಳಿಂದ ಜೀವನದಲ್ಲಿ ಬೇಸತ್ತು ಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಸಾವಿಗೆ ನಾನೇ ಕಾರಣ’ ಎಂದಿದ್ದಾರೆ’ ಎಂದು ಮೂಲ ಹೇಳಿದೆ.

ನಂದಿನಿ ವಿಚಾರಣೆ: ‘ಶಂಕರಪ್ಪ ಪ್ರಕ್ರಿಯ ನಂದಿನಿ ಪತ್ತೆ ಮಾಡಿದೆ. ಹಲವು ಬಾರಿ ಭೇಟಿಯಾಗಿದ್ದಾರೆ. ಆದರೆ, ವಿಳಾಸ ಗೊತ್ತಿಲ್ಲ. ಸಹೋದ್ಯೋಗಿಗಳ ಹೇಳಿಕೆ ಹಾಗೂ ಮರಣಪತ್ರದಲ್ಲಿರುವ ಮಾಹಿತಿ ಆಧರಿಸಿ ಅವರ ವಿಚಾರಣೆ ನಡೆಸಬೇಕಿದೆ. ವಿಳಾಸ ಪತ್ತೆ ಮಾಡಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಡೆಲಿವರಿ ಬಾಯ್ ಸಾವು: ಬಿಎಂಟಿಸಿ ಚಾಲಕ ಬಂಧನ

ಬೆಂಗಳೂರು: ಬನ್ನೇರುಘಟ್ಟ ರಸ್ತೆಯ ಜಲಭವನ ಬಳಿ ಅಪಘಾತ ಮಾಡಿ ಡೆಲಿವರಿ ಬಾಯ್ ಸೈಯದ್ ಅಹಮದ್ ಬಾಬುಖಾನ್ (20) ಸಾವಿಗೆ ಕಾರಣವಾಗಿದ್ದ ಆರೋಪದಡಿ ಬಿಎಂಟಿಸಿ ಚಾಲಕ ಬಸವರಾಜ ಅವರನ್ನು ಮೈಕೊ ಲೇಔಟ್ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಿಎಂಟಿಸಿ 34ನೇ ಡಿಪೊ ಚಾಲಕ ಬಸವರಾಜ್, ಫೆ. 19ರಂದು ಅಪಘಾತವನ್ನುಂಟು ಮಾಡಿ ಪರಾರಿಯಾಗಿದ್ದ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳು ಹಾಗೂ ಪ್ರತ್ಯಕ್ಷದರ್ಶಿಗಳು ನೀಡಿದ್ದ ದೂರು ಆಧರಿಸಿ ಈತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಅಪ್ಪಾನ ಸೈಯದ್, ಜೆ.ಪಿ. ನಗರದಲ್ಲಿ ವಾಸವಿದ್ದರು. ಸ್ವಿಗ್ಗಿ ಕಂಪನಿಯಲ್ಲಿ ಡೆಲಿವರಿ ಬಾಯ್ ಕೆಲಸ ಮಾಡುತ್ತಿದ್ದರು. ಸ್ನೇಹಿತ ಮುಬಾರಕ್ ಸಲ್ಮಾನ್ ಜೊತೆ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಇದೇ ಮಾರ್ಗದಲ್ಲಿ ಹೊರಟಿದ್ದ ಬಸವರಾಜ್, ಅತಿ ವೇಗ ಹಾಗೂ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದರು.’

‘ದ್ವಿಚಕ್ರ ವಾಹನಕ್ಕೆ ಬಸ್ ಡಿಕ್ಕಿ ಹೊಡೆದಿತ್ತು. ರಸ್ತೆಗೆ ಬಿದ್ದಿದ್ದ ಸೈಯದ್ ತಲೆ ಮೇಲೆ ಬಸ್ಸಿನ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದರು. ಹಿಂಬದಿ ಸವಾರ ಮುಬಾರಕ್ ಗಾಯಗೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಆಸ್ಪತ್ರೆಗೆ ಸೇರಿಸದೇ ಪರಾರಿ: ‘ಅಪಘಾತದ ಬಳಿಕ ಬಸ್ಸಿನಿಂದ ಇಳಿದಿದ್ದ ಚಾಲಕ ಬಸವರಾಜ್, ಗಾಯಾಳುಗಳ ಬಳಿ ಹೋಗಿ ನರಳುವುದನ್ನು ನೋಡಿದ್ದ. ಆದರೆ, ಆಸ್ಪತ್ರೆಗೆ ಸೇರಿಸುವ ಪ್ರಯತ್ನ ಮಾಡಿರಲಿಲ್ಲ. ಸ್ಥಳದಲ್ಲಿ ಜನರು ಸೇರುವ ಮುನ್ನವೇ ಆತ ಬಸ್ ಸಮೇತ ಪರಾರಿಯಾಗಿದ್ದ’ ಎಂದು ಪೊಲೀಸರು ಹೇಳಿದರು.

ಅಸ್ಮಿತೆ ರಾಜಕಾರಣ ವರ್ಗ ಐಕ್ಯತೆಯ ಶತ್ರು: ಸುಭಾಷಿಣಿ ಅಲಿ

ಪ್ರಜಾವಾಣಿ ವಾರ್ತೆ

ಸುಭಾಷಿಣಿ ಅಲಿ

ಬೆಂಗಳೂರು: ‘ದುಡಿಯುವ ವರ್ಗದ ಐಕ್ಯತೆ ಒಡೆಯಲು ಬಂಡವಾಳಶಾಹಿಗಳು ಅಸ್ಮಿತೆ ರಾಜಕಾರಣವನ್ನು ಮುನ್ನೆಲೆಗೆ ತಂದಿವೆ’ ಎಂದು ದಲಿತ್ ಶೋಷಣ್ ಮುಕ್ತಿ ಮಂಚ್ ಉಪಾಧ್ಯಕ್ಷೆ ಸುಭಾಷಿಣಿ ಅಲಿ ಕಳವಳ ವ್ಯಕ್ತಪಡಿಸಿದರು.

ದಲಿತ ಹಕ್ಕುಗಳ ಸಮಿತಿಯ ಬೆಂಗಳೂರು ದಕ್ಷಿಣ ಮತ್ತು ಉತ್ತರ ಸಮಿತಿ ಆಯೋಜಿಸಿದ್ದ ‘ಐಡೆಂಟಿಟಿ(ಅಸ್ಮಿತೆ) ರಾಜಕೀಯ’ ಕುರಿತ ಉಪನ್ಯಾಸ ಮತ್ತು ಸಂವಾದದಲ್ಲಿ ಅವರು ಮಾತನಾಡಿದರು.

‘ಅಸ್ಮಿತೆ ರಾಜಕಾರಣ ಭಾರತಕ್ಕೆ ಬಂದಿದ್ದು 1960–70ರ ದಶಕದ ನಂತರ. ಅದಕ್ಕೂ ಹಿಂದೆ ಈ ರಾಜಕಾರಣ ಇರಲಿಲ್ಲ. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಬಂಡವಾಳಶಾಹಿಗಳು ಭಾರತಕ್ಕೆ ಹರಿಬಿಟ್ಟರು. ಧರ್ಮ, ಜಾತಿ, ಒಳ ಜಾತಿಗಳ ಹೆಸರಿನಲ್ಲಿ ದುಡಿಯುವ ವರ್ಗವನ್ನು ಒಡೆಯುವುದೇ ಇದರ ಹಿಂದಿನ ಉದ್ದೇಶ’ ಎಂದರು.

‘ಇದನ್ನು ಕೇಂದ್ರ ಮತ್ತು ರಾಜ್ಯಗಳಲ್ಲಿ ಪ್ರಯೋಗ ಮಾಡಿರುವ ಬಿಜೆಪಿ, ಲಾಭ ಪಡೆದುಕೊಳ್ಳುತ್ತಿದೆ. ಛತ್ತೀಸಗಡದಲ್ಲಿ ಕ್ರಿಶ್ಚಿಯನ್ ಬುಡಕಟ್ಟು ಮತ್ತು ಇತರ ಬುಡಕಟ್ಟು ಸಮುದಾಯಗಳ ನಡುವೆ ಸಂಘರ್ಷ ನಡೆಯಿತು. ಎರಡೂ ಸಮುದಾಯಗಳ ಆಚಾರ, ವಿಚಾರ, ಆಹಾರ ಪದ್ಧತಿ ಎಲ್ಲವೂ ಒಂದೇ ಆದರೂ ಅವರ ನಡುವೆ ಸಂಘರ್ಷ ಹುಟ್ಟುಹಾಕಿ ಅದರ ಲಾಭ ಪಡೆದಿದ್ದು ಬಹುರಾಷ್ಟ್ರೀಯ ಕಂಪನಿಗಳು ಎಂದು ಹೇಳಿದರು.

ಈ ರೀತಿ ವರ್ಗ ಐಕ್ಯತೆ ಒಡೆದು ನಮ್ಮ ನೈಜ ಶತ್ರು ಯಾರು ಎಂಬುದು ಗೊತ್ತಾಗದಂತೆ ನೋಡಿಕೊಳ್ಳುತ್ತಾರೆ. ಅದರ ವಿರುದ್ಧ ದುಡಿಯುವ ವರ್ಗ ಜಾಗೃತವಾಗಬೇಕು ಎಂದು ತಿಳಿಸಿದರು.

ಜಾತಿ ವ್ಯವಸ್ಥೆ ಅಳಿಯಬೇಕೆಂದರೆ ಅಂತರ್ಜಾತಿ ವಿವಾಹ ಹೆಚ್ಚಬೇಕು. ಆದರೆ, ಮರ್ಯಾದೆಗೇಡು ಹತ್ಯೆಗಳು ಅಂತರ್ಜಾತಿ ವಿವಾಹಕ್ಕೆ ಅಡ್ಡಗಾಲಾಗುತ್ತಿವೆ. ಹಿಂದೂ ಹೆಸರಿನಲ್ಲಿ ಎಲ್ಲರನ್ನೂ ಸಂಘಟಿಸಲು ಹೊರಟಿದ್ದಾರೆ. ಆ ಮೂಲಕ ನೈಜ ಸಮಸ್ಯೆಗಳನ್ನು ಮುಚ್ಚಿಡುವ ಪ್ರಯತ್ನಿಸಲಾಗುತ್ತಿದೆ. ಇದರ ವಿರುದ್ಧ ಎಚ್ಚರಿಕೆ ವಹಿಸಬೇಕು ಎಂದರು.

ದಲಿತ ಹಕ್ಕುಗಳ ಸಮಿತಿಯ ಬಿ. ರಾಜಶೇಖರಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

‘ಸಂಭ್ರಮದ ಕಲಿಕೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗಿ ಕಲಿಯದೇ ಸಂಭ್ರಮದಿಂದ ಕಲಿಯಬೇಕು’ ಎಂದು ಸಂಸದ ಡಿ.ವಿ.ಸದಾನಂದಗೌಡ ಹೇಳಿದರು.

ಬೆಂಗಳೂರಿನ ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ ಹಾಗೂ ರಾಷ್ಟ್ರೀಯ ಸಂಶೋಧನಾ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಆಯೋಜಿಸಿದ್ದ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

‘ತಂತ್ರಜ್ಞಾನ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ತಂತ್ರಜ್ಞಾನದ ಕಲಿಕೆ ಇಂದು ಅನಿವಾರ್ಯ. ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಒತ್ತಡ ಹೇರಬಾರದು. ವಿದ್ಯಾರ್ಥಿಗಳು ಸಾಮರ್ಥ್ಯದಿಂದ ಮುಂದಕ್ಕೆ ನಡೆಯಬೇಕು’ ಎಂದರು.

ಪೇಸ್‌ಕಾಂ ಟೆಕ್ನಾಲಜಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪಿ.ರಾಜೀವ್, ಕಾಳಿದಾಸ್ ಶೆಟ್ಟಿ, ಕೆ.ಕರಣ್ ಕುಮಾರ್, ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ.ಎನ್.ಆರ್.ಶೆಟ್ಟಿ, ಪ್ರಾಂಶುಪಾಲ ಡಾ.ಎಚ್.ಸಿ. ನಾಗರಾಜ್ ಇದ್ದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ ಹಾಗೂ ರಾಷ್ಟ್ರೀಯ ಸಂಶೋಧನಾ ಅಭಿವೃದ್ಧಿ ನಿಗಮದ ಸಹಯೋಗದಲ್ಲಿ ಆಯೋಜಿಸಿದ್ದ ವಿಚಾರಸಂಕಿರಣಕ್ಕೆ ಸಂಸದ ಡಿ.ವಿ.ಸದಾನಂದಗೌಡ ಚಾಲನೆ ನೀಡಿದರು

ಯುವತಿಯ ಮೊಬೈಲ್ ಕರೆ ಆಲಿಕೆಗೆ ‘ಸಿಡಿಆರ್’ ದುರುಪಯೋಗ

ಪೊಲೀಸ್ ಇಲಾಖೆಯ ಮೂವರು ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವತಿಯೊಬ್ಬರ ಮೊಬೈಲ್ ಕರೆಗಳ ವಿವರವನ್ನು (ಸಿಡಿಆರ್) ಅಕ್ರಮವಾಗಿ ಸಂಗ್ರಹಿಸಿ ದುರುಪಯೋಗಪಡಿಸಿಕೊಂಡು ಕರ್ತವ್ಯ ಲೋಪ ಎಸಗಿದ್ದ ಪೊಲೀಸ್ ಇಲಾಖೆಯ ಮೂವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಬೆಂಗಳೂರು ಕೇಂದ್ರ ವಿಭಾಗದ ಸೂಪರಿಂಟೆಂಡೆಂಟ್ ಸುರೇಶ್, ಪೂರ್ವ ವಿಭಾಗದ ತಾಂತ್ರಿಕ ಘಟಕದ ಹೆಡ್ ಕಾನ್‌ಸ್ಟೆಬಲ್ ಸೋಮಶೇಖರ್ ಹಾಗೂ ಕಾನ್‌ಸ್ಟೆಬಲ್ ನಾಗರಾಜ್ ಅಮಾನತಾದವರು. ಯುವತಿ ನೀಡಿದ್ದ ದೂರಿನಡಿ ತನಿಖೆ ನಡೆಸಿದ್ದ ಸಿಸಿಬಿ ಪೊಲೀಸರು, ಮೂವರ ವಿರುದ್ಧ ಕಮಿಷನರ್ ಪ್ರತಾಪ್ ರೆಡ್ಡಿ ಅವರಿಗೆ ವರದಿ ಸಲ್ಲಿಸಿದ್ದರು. ಅದನ್ನು ಆಧರಿಸಿ ಮೂವರನ್ನೂ ಅಮಾನತುಗೊಳಿಸಿ, ಇತ್ತೀಚೆಗೆ ಆದೇಶ ಹೊರಡಿಸಲಾಗಿದೆ.

ಖಾಸಗಿ ವ್ಯಕ್ತಿಗಳ ಕೈಗೆ ಸಿಡಿಆರ್: ‘ಅಪರಾಧ ಚಟುವಟಿಕೆ ಮೇಲೆ ನಿಗಾ ಇರಿಸಲು ಹಾಗೂ ಕಾನೂನು ಪಾಲನೆ ಉದ್ದೇಶದಿಂದ ಆರೋಪಿತರ ಮೊಬೈಲ್ ಕರೆಗಳ ವಿವರಗಳನ್ನು (ಸಿಡಿಆರ್) ಸಂಗ್ರಹಿಸಲು ಬೆಂಗಳೂರಿನ ಎಲ್ಲ ವಿಭಾಗಗಳಲ್ಲಿ ಪ್ರತ್ಯೇಕ ತಾಂತ್ರಿಕ ಘಟಕವಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಸೂಪರಿಂಟೆಂಡೆಂಟ್ ಸುರೇಶ್, ಈ ಹಿಂದೆ ಮಾಜಿ ಗೃಹ ಸಚಿವರೊಬ್ಬರ ಬಳಿ ಆಪ್ತ ಸಹಾಯಕರಾಗಿ ಕೆಲಸ ಮಾಡಿದ್ದರು. ಖಾಸಗಿ ವ್ಯಕ್ತಿಯೊಬ್ಬರು ಯುವತಿಯೊಬ್ಬರ ಕರೆಗಳ ವಿವರ ಸಂಗ್ರಹಿಸಲು ಮುಂದಾಗಿದ್ದರು. ಇದಕ್ಕಾಗಿ ಸುರೇಶ್ ಅವರನ್ನು ಸಂಪರ್ಕಿಸಿದ್ದರು. ಆಪ್ತರಾಗಿದ್ದ ಸೋಮಶೇಖರ್ ಹಾಗೂ ನಾಗರಾಜ್ ಅವರಿಗೆ ವಿಷಯ ತಿಳಿಸಿದ್ದ ಸುರೇಶ್, ಸಿಡಿಆರ್ ನೀಡುವಂತೆ ಹೇಳಿದ್ದರು.’

‘ಸುರೇಶ್ ಮಾತಿಗೆ ಒಪ್ಪಿದ್ದ ಇಬ್ಬರೂ ಅಕ್ರಮವಾಗಿ ಸಿಡಿಆರ್ ತೆಗೆದು ಕೊಟ್ಟಿದ್ದರು. ಅದನ್ನೇ ಸುರೇಶ್, ಖಾಸಗಿ ವ್ಯಕ್ತಿಗೆ ನೀಡಿದ್ದರು. ಅದು ಗೊತ್ತಾಗುತ್ತಿದ್ದಂತೆ ಯುವತಿ, ಪೊಲೀಸ್ ಹಿರಿಯ ಅಧಿಕಾರಿಗಳಿಗೆ ದೂರು ನೀಡಿದ್ದರು. ಇದರ ತನಿಖೆಯನ್ನು ಸಿಸಿಬಿಗೆ ವಹಿಸಲಾಗಿತ್ತು. ಮೂವರ ಮೇಲಿನ ಆರೋಪ ಸಾಬೀತಾಗಿತ್ತು’ ಎಂದೂ ತಿಳಿಸಿದರು.

‘ತಾಂತ್ರಿಕ ಸಿಬ್ಬಂದಿ ಮೇಲೆ ನಿಗಾ’

‘ಪೊಲೀಸ್ ಇಲಾಖೆಯ ತಾಂತ್ರಿಕ ಘಟಕಗಳಲ್ಲಿ ಕೆಲಸ ಮಾಡುವ ಕೆಲವರು, ಅಕ್ರಮವಾಗಿ ಸಿಡಿಆರ್ ಸಂಗ್ರಹಿಸಿ ಬೇರೆಯವರಿಗೆ ಕೊಡುತ್ತಿರುವ ಮಾಹಿತಿ ಇದೆ. ಕೆಲವರು ಹಣಕ್ಕಾಗಿ ಈ ಕೃತ್ಯ ಎಸಗುತ್ತಿರುವುದು ಗೊತ್ತಾಗಿದೆ. ಸಿಬ್ಬಂದಿ ಮೇಲೆ ನಿಗಾ ಇರಿಸಲಾಗಿದೆ. ಸಿಕ್ಕಿಬಿದ್ದರೆ, ಶಿಸ್ತುಕ್ರಮ ಜರುಗಿಸಲಾಗುವುದು’ ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಮಾನನಷ್ಟ ಪ್ರಕರಣ: ಜೈರಾಮ್ ರಮೇಶ್‌ಗೆ ನೋಟಿಸ್

ಶ್ರೀನಗರ (ಪಿಟಿಐ): ‘ಗುಲಾಮ, ಮೀರ್ ಜಾಫರ್ ಮತ್ತು ವೋಟ್ ಕಟರ್’ ಎಂದು ಕರೆದಿದ್ದಕ್ಕಾಗಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರಿಗೆ ಡಿಪಿಎಪಿ ಅಧ್ಯಕ್ಷ ಗುಲಾಂ ನಬಿ ಆಜಾದ್ ಲೀಗಲ್ ನೋಟಿಸ್ ಕಳುಹಿಸಿದ್ದಾರೆ.

ಆಜಾದ್ ಅವರ ಕಾನೂನು ಸಲಹೆಗಾರ ನರೇಶ್ ಕುಮಾರ್ ಗುಪ್ತಾ ಮೂಲಕ ಕಳುಹಿಸಲಾದ ನೋಟಿಸ್‌ನಲ್ಲಿ ಆಜಾದ್ ಅವರ ಕಳಂಕರಹಿತ ಪ್ರತಿಷ್ಠೆಗೆ ಹಾನಿ ಉಂಟು ಮಾಡಿದ್ದಕ್ಕಾಗಿ ₹2 ಕೋಟಿ ಪರಿಹಾರ ಕೋರಲಾಗಿದೆ.

ತೋಟಗಾರಿಕೆ ಮೇಳ: ಭರಪೂರ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯ (ಐಐಎಚ್‌ಆರ್) ಆವರಣದಲ್ಲಿ ನಡೆಯುತ್ತಿರುವ ‘ರಾಷ್ಟ್ರೀಯ ತೋಟಗಾರಿಕಾ ಮೇಳ-2023’ಕ್ಕೆ ಶುಕ್ರವಾರ 12 ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡಿದರು.

ವಿವಿಧ ಜಾತಿಗಳ ಹೂವು, ಹಣ್ಣು, ತರಕಾರಿಗಳ ಪ್ರದರ್ಶನವಿದೆ. ಬಿತ್ತನೆ ಬೀಜ, ರಸಗೊಬ್ಬರ, ಯಂತ್ರೋಪಕರಣ, ಹೂವಿನ ಗಿಡ, ಅಲಂಕಾರಿಕ ಪುಷ್ಪಗಳು, ಔಷಧೀಯ ಗಿಡಗಳು, ಸೌಗಂಧಿಕ ಬೆಳೆಗಳು, ಅಣಬೆ ಬೆಳೆಗಳ ಉತ್ಪಾದನೆ ಮತ್ತು ಮೌಲ್ಯವರ್ಧಿತ ತಂತ್ರಜ್ಞಾನಗಳ ನೋಟ ಮೇಳಕ್ಕೆ ಮೆರುಗು ನೀಡುತ್ತಿವೆ. ಈ ಕುರಿತು ಆಸಕ್ತ ರೈತರು ಮತ್ತು ಯುವಕರು ಐಐಎಚ್‌ಆರ್‌ನ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು.

ಶುಕ್ರವಾರ ನಡೆದ ತೋಟಗಾರಿಕಾ ತಂತ್ರಜ್ಞಾನದ ಕಾರ್ಯಾಗಾರದಲ್ಲಿ 40ಕ್ಕೂ ಹೆಚ್ಚು ಉತ್ಸಾಹಿ ಯುವಕರು ಪಾಲ್ಗೊಂಡಿದ್ದರು. ನೆರೆಯ ರಾಜ್ಯಗಳಾದ ಕೇರಳ, ತೆಲಂಗಾಣ, ಆಂಧ್ರ, ತಮಿಳುನಾಡು, ಪುದುಚೇರಿಯಿಂದ ಕೃಷಿಕರು, ತೋಟಗಾರಿಕಾ ಉತ್ಪನ್ನಗಳ ಉದ್ದಿಮೆದಾರರು ಮೇಳಕ್ಕೆ ಭೇಟಿ ನೀಡಿದ್ದಾರೆ. ಕೇರಳದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕೃಷಿ ಆಸಕ್ತರು ಬಂದಿದ್ದಾರೆ’ ಎಂದು ಆಯೋಜಕರು ತಿಳಿಸಿದರು.

‘ಐಐಎಚ್‌ಆರ್‌ನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡಿರುವ ಚಿತ್ರದುರ್ಗದ ಯುವ ರೈತ ಮನೋಜ್ ಬಿ., ಒಡಿಶಾದ ಸುರೇಶ್ ಚಂದ್ರ ಓಟ, ಚಿಕ್ಕಬಳ್ಳಾಪುರದ ಅಶ್ವತ್ಥಪ್ಪ, ಚಾಮರಾಜನಗರದ ಮಹೇಶ್ ನಾಯಕ್, ಬೆಂಗಳೂರಿನ ಯುವ ಉದ್ಯಮಿ ಸತೀಶ, ಬಿಜಾಪುರದ ಆರ್.ಎಸ್. ಪಾಟೀಲ್, ತುಮಕೂರಿನ ವೆಂಕಟರಾಯಪ್ಪ ಅವರನ್ನು ಸನ್ಮಾನಿಸಲಾಯಿತು’ ಎಂದು ಐಐಎಚ್‌ಆರ್‌ನ ನಿರ್ದೇಶಕ ಎಸ್. ಕೆ. ಸಿಂಗ್ ಮಾಹಿತಿ ನೀಡಿದರು.

ಬೆಂಗಳೂರಿನ ಅಟಾರಿಯ ಪ್ರಧಾನ ವಿಜ್ಞಾನಿಗಳಾದ ಡಾ. ಡಿ.ವಿ.ಎಸ್ ರೆಡ್ಡಿ, ಡಾ. ಸಿ. ಕೆ. ನಾರಾಯಣ ಡಾ. ಪ್ರಕಾಶ್ ಪಾಟೀಲ್, ಡಾ. ಸಿ ಅಶ್ವಥ್, ವೆಂಕಟ್ ಕುಮಾರ್ ಇದ್ದರು.

ಚಿರತೆ ಸಾವು: ನಾಲ್ವರ ಬಂಧನ

ನರಸಿಂಹರಾಜಪುರ (ಚಿಕ್ಕಮಗಳೂರು): ತಾಲ್ಲೂಕಿನ ಗೋರ್ಗಲ್ ಗ್ರಾಮದ ಭದ್ರಾ ಹಿನ್ನೀರಿನಲ್ಲಿ ಮೀನು ಹಿಡಿಲು ಹಾಕಿದ್ದ ಬಲೆಯಲ್ಲಿ ಕಾಲು ಸಿಲುಕಿ ಚಿರತೆ ಮೃತಪಟ್ಟಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ಬಂಧಿಸಲಾಗಿದೆ. ಚಿರತೆಯು ನೀರು ಕುಡಿಯಲು ಬಂದಾಗ ಬಲೆಯಲ್ಲಿ ಕಾಲು ಸಿಲುಕಿಕೊಂಡಿತ್ತು.

ನಗರದಲ್ಲಿ ಇಂದು

ಕೆ.ಸಿ. ರೆಡ್ಡಿ ಕಂಚಿನ ಪ್ರತಿಮೆ ಅನಾವರಣ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಬಸವರಾಜ ಹೊರಟ್ಟಿ, ವಿಶ್ವೇಶ್ವರ ಹೆಗಡೆ ಕಾಗೇರಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಲೋಕೋಪಯೋಗಿ ಇಲಾಖೆ, ಸ್ಥಳ: ವಿಧಾನಸೌಧ ಆವರಣ, ಬೆಳಿಗ್ಗೆ 9.30

ಕೋಟಕ್ ಮಹೀಂದ್ರಾ ಬ್ಯಾಂಕ್ ಅಧಿಕಾರಿಗಳ ಸಂಘದ ಸಮ್ಮೇಳನ: ಉದ್ಘಾಟನೆ: ಎಸ್. ನಾಗರಾಜನ್, ಅತಿಥಿಗಳು: ಎಚ್.ಎನ್. ನಾಗಮೋಹನದಾಸ್, ಚೇತನ ಸಾವ್ಲಾ, ರಾವ್ ಸಾಹೇಬ್ ಕಾಂಗನೆ, ವಿ. ಮಧುಸೂದನ್, ಕೆ.ವಿ. ಚಲಪತಿ, ಅಧ್ಯಕ್ಷತೆ: ಜಿ. ಸತ್ಯನಾರಾಯಣ ಚೌಧರಿ, ಸ್ಥಳ: ಪೈ ವಿಸ್ತಾ ಕನ್ವೆನ್ಷನ್ ಹಾಲ್, ಜಿ.ಎಸ್.ಬಿ. ಭವನ, ಬಸವನಗುಡಿ, ಬೆಳಿಗ್ಗೆ 10

ನಾಗಮೋಹನ ದಾಸ್

‘ಅರ್ಥಶಾಸ್ತ್ರಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಚಿಂತನೆಗಳು ಮತ್ತು ಕೊಡುಗೆ’ ಕುರಿತು ಅಂತರರಾಷ್ಟ್ರೀಯ ವಿಚಾರಸಂಕಿರಣ: ಸಾನ್ನಿಧ್ಯ: ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಕೋಟ ಶ್ರೀನಿವಾಸ ಪೂಜಾರಿ, ಸುಖದೇವ್ ಥೋರಟ್, ಆಯೋಜನೆ ಮತ್ತು ಸ್ಥಳ: ಅಂಬೇಡ್ಕರ್ ಎಕನಾಮಿಕ್ಸ್ ಫೌಂಡೇಷನ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ನಾಡೋಜ ಕೋ. ಚೆನ್ನಬಸಪ್ಪ ಜನ್ಮ ಶತಮಾನೋತ್ಸವ ಸಮಾರೋಪ ಸಮಾರಂಭ: ಸಾನ್ನಿಧ್ಯ: ಗುರು ಮಹಾಂತ ಸ್ವಾಮೀಜಿ, ಅಧ್ಯಕ್ಷತೆ: ಗೊ.ರು. ಚೆನ್ನಬಸಪ್ಪ, ಉದ್ಘಾಟನೆ: ವಿ. ಗೋಪಾಲಗೌಡ, ‘ಕೋಚೆ ನೂರರ ನೆನಪು’ ಕೋಚೆ ಸ್ಮರಣ ಗ್ರಂಥ ಬಿಡುಗಡೆ: ವಿಜಯಾ, ಸಮಾರೋಪ ಭಾಷಣ: ಬಿ.ಎಲ್. ಶಂಕರ್, ಅತಿಥಿ: ಮಹೇಶ್ ಕರ್ಜಗಿ, ಉಪಸ್ಥಿತಿ: ಅಶೋಕ್ ಎನ್. ಚಲವಾದಿ, ಕೆ.ಬಿ. ಕಿರಣ್ ಸಿಂಗ್, ಕೆ.ಸಿ. ಗುರುದೇವ್, ಆಯೋಜನೆ: ನಾಡೋಜ ಕೋ. ಚೆನ್ನಬಸಪ್ಪ ಜನ್ಮ ಶತಮಾನೋತ್ಸವ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11

‘ಐ ಥಿಂಕ್ ಬಯಾಲಜಿ’ ಆನ್‌ಲೈನ್ ಮೂಲಕ ವಿದ್ಯಾರ್ಥಿಗಳು ಉಚಿತವಾಗಿ ಓದಬಲ್ಲ ಪಠ್ಯಪುಸ್ತಕ ಬಿಡುಗಡೆ: ಸ್ಥಳ: ಜವಾಹರಲಾಲ್ ನೆಹರೂ ತಾರಾಲಯ, ಮಧ್ಯಾಹ್ನ 1.

6ನೇ ತ್ರೈವಾರ್ಷಿಕ ಸಮ್ಮೇಳನ: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅಧ್ಯಕ್ಷತೆ: ಎಸ್.ಎಂ. ದೇಶಪಾಂಡೆ, ಆಯೋಜನೆ: ಅಖಿಲ ಭಾರತ ಬ್ಯಾಂಕ್ ನಿವೃತ್ತರ ಒಕ್ಕೂಟ, ಸ್ಥಳ: ಶೀಶ್ ಮಹಲ್, ಅರಮನೆ ಮೈದಾನ, ಸಂಜೆ 4

ಸುವರ್ಣ ಮಹೋತ್ಸವ ಸಂಭ್ರಮ: ಅತಿಥಿಗಳು: ಪ್ರಮೋದಾದೇವಿ ಒಡೆಯರ್, ಸುಧಾ ಮೂರ್ತಿ, ಅಧ್ಯಕ್ಷತೆ: ಎಸ್.ಎಸ್. ನಾಗಾನಂದ್, ಉಪಸ್ಥಿತಿ: ಕೆ. ಜೈರಾಜ್, ಆಯೋಜನೆ ಮತ್ತು ಸ್ಥಳ: ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರ, ಮಧ್ಯಾಹ್ನ 3

ಸುಧಾ ಮೂರ್ತಿ

ಕರ್ನಾಟಕ ರಾಜ್ಯೋತ್ಸವ ಆಚರಣೆ ‘ಕನ್ನಡ ಕುಣಿತ’: ಸ್ಥಳ: ವಾರ್ ಮೆಮೊರಿಯಲ್, ಬ್ರಿಗೇಡ್ ರಸ್ತೆ, ಸಂಜೆ 5.30

ಅಭಿನಂದನಾ ಸಮಾರಂಭ: ಉದ್ಘಾಟನೆ: ಕೋಟಿಗಾನಹಳ್ಳಿ ರಾಮಯ್ಯ, ಪ್ರಾಸ್ತಾವಿಕ ನುಡಿ: ಹರಿರಾಮ್, ಅಭಿನಂದಿತರು: ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಉಪಸ್ಥಿತಿ: ವರಲಕ್ಷ್ಮಿ, ವೈ.ಜಿ. ಉಮಾ, ಬಾಲು ಜಂಬೆ, ಮಹೇಶ್ ದಾಸ್, ಆಯೋಜನೆ: ನಾಡೋಜ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ ಅಭಿಮಾನಿ ಬಳಗ, ಸ್ಥಳ: ಸಂಸ ಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರದ ಹಿಂಭಾಗ, ಸಂಜೆ 5

‘ಸ್ವರ ಕಾವೇರಿ’ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ: ಗಾಯನ: ಮಾಧುರಿ ಕೌಶಿಕ್, ಪಿಟೀಲು: ಕಾರ್ತಿಕೇಯ ಕೌಶಿಕ್, ಮೃದಂಗ: ಕೌಶಿಕ್ ಶ್ರೀಧರ್, ಗಾಯನ: ಶ್ರೀರಂಜನಿ ಶಾಂತಗೋಪಾಲನ್, ಪಿಟೀಲು: ಎಲ್. ರಾಮಕೃಷ್ಣನ್, ಮೃದಂಗ: ಪತ್ರಿ ಸತೀಶ್ ಕುಮಾರ್, ಘಟ: ಚಂದ್ರಶೇಖರ ಶರ್ಮಾ, ಗಾಯನ: ರಾಜೇಶ್ ವೈದ್ಯ, ಮೃದಂಗ: ಮೋಹನ್ ರಾಮನ್, ತಬಲಾ: ಪ್ರವೀಣ್ ನಾರಾಯಣ್, ಘಟ: ಸಾಯಿಹರಿ, ಆಯೋಜನೆ: ಭಾರತೀಯ ಸಾಮಗಾನ ಸಭಾ, ಸ್ಥಳ:ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5ರಿಂದ

ನಾದಜ್ಯೋತಿ ಸಂಗೀತ ಸಂಭ್ರಮ: ಗಾಯನ: ಸಿಂಧು ಸುಚೇತನ್, ಎಚ್.ಎಂ. ಸ್ಮಿತಾ, ಪಿಟೀಲು: ಪ್ರದೀಶ್ ಆಚಾರ್, ಮೃದಂಗ: ಎ. ರೇಣುಕಾ ಪ್ರಸಾದ್, ಘಟ್ಟ: ಟಿ.ಎನ್. ರಮೇಶ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

ತಿಂಗಳ ಮಾತುಕತೆ: ವಿಷಯ: ‘ಸಾರಾ ಅಬೂಬಕರ್ ಕೃತಿಗಳಲ್ಲಿ ಮುಸ್ಲಿಂ ಮಹಿಳೆಯರ ತಲ್ಲಣಗಳು’, ಕೃತಿಗಳ ಕುರಿತು: ಕೆ. ಷರೀಫಾ, ಮುಮ್ತಾಜ್ ಬೇಗಂ, ಪ್ರತಿಕ್ರಿಯೆಯಲ್ಲಿ: ಚಾಂದ್ ಪಾಷಾ ಎನ್.ಎಸ್., ಅವಿನಾಶ್ ಹೊಳೆಮರೂರು, ಆಯೋಜನೆ: ಪುಸ್ತಕ ಪ್ರೀತಿ, (ಆನ್‌ಲೈನ್ ಕಾರ್ಯಕ್ರಮ), ಸಂಜೆ 6

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ನಗರದೇವತೆ ಅಣ್ಣಮ್ಮದೇವಿಯನ್ನು ಅಲಂಕೃತ ಹೂವಿನ ಮಂಟಪದಲ್ಲಿ ಕರೆತರುವುದು, ಸ್ಥಳ: ಶ್ರೀನಿರ್ವಾಣಿ ಭಗವತಿ ಸೇವಾ ಮಂಡಳಿ, ಕುರುಹಿನಶೆಟ್ಟಿ, ಶ್ರೀರಾಮ ಭಜನಾ ಮಂದಿರ, ಎಂ.ಆರ್. ಲೇನ್, ಮನವರ್ತಿಪೇಟೆ, ರಾತ್ರಿ 8

ಭೂಮಿಕಾ ಕ್ಲಬ್: ಉದ್ಘಾಟನೆ: ಭೂಮಿ ಶೆಟ್ಟಿ, ಭಾಗವಹಿಸುವವರು: ಗೀತಾ ನಾಯ್ಡು, ಶೈನಿ ಅಲೆಕ್ಸಾಂಡರ್, ಸುಷ್ಮಾ ನಾಣಯ್ಯ, ಆಯೋಜನೆ: ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್, ಸ್ಥಳ: ಸೇಂಟ್ ಜೋಸೆಫ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಎಂ.ಜಿ. ರಸ್ತೆ, ಮಧ್ಯಾಹ್ನ 2.30

ಭೂಮಿ ಶೆಟ್ಟಿ

ಉದ್ಯೋಗ ಮೇಳ: ಎಂ.ಎನ್. ವೆಂಕಟಾಚಲಯ್ಯ, ಎನ್. ಸಂತೋಷ್ ಹೆಗ್ಡೆ, ಕೆ.ಎಂ. ನಾಗರಾಜ್, ಪ್ರಿಯಾಂಕಾ ಉಪೇಂದ್ರ, ಸಪ್ತಮಿ ಗೌಡ, ತೇಜಸ್ವಿನಿ ಅನಂತ್ ಕುಮಾರ್, ಆರ್. ವಿ. ದೇವರಾಜ್, ಆರ್.ವಿ. ಮಮತಾ ದೇವರಾಜ್, ಆರ್.ವಿ. ಯುವರಾಜ್, ಆಯೋಜನೆ: ಚಿಕ್ಕಪೇಟೆ ಜನೋತ್ಸವ, ಸ್ಥಳ: ಬಿ.ಐ.ಟಿ ಕಾಲೇಜು, ಕಿಮ್ಸ್ ಹತ್ತಿರ, ವಿ.ವಿ. ಪುರ, ಬೆಳಿಗ್ಗೆ 10ರಿಂದ

ಪ್ರಿಯಾಂಕಾ ಉಪೇಂದ್ರ

ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ
ಅಧಿಸೂಚನೆ ಸಂಖ್ಯೆ: ಕ–ರೇರಾ/ಆಡಳಿತ/ಸಿಆರ್–61/2022–23, ದಿನಾಂಕ: 24/2/2023
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ಇಲ್ಲಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಭರ್ತಿ ಮಾಡಲು ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪೂರಕ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 10 ಮಾರ್ಚ್ 2023
1. ಕಾನೂನು ಸಲಹೆಗಾರರು (ಅಧಿಸೂಚನೆ ಸಂಖ್ಯೆ : ಕೆ–ರೇರಾ/61/ಸೇವಿ–2/2023)
2. ಸ್ಥಾಯಿ ಸಲಹೆಗಾರರು (ಅಧಿಸೂಚನೆ ಸಂಖ್ಯೆ : ಕೆ–ರೇರಾ/09/ಸೇವಿ–2/2023)
ವಿವರವಾದ ಅಧಿಸೂಚನೆಯು ವೆಬ್‌ಸೈಟ್ www.rera@karnataka.gov.inನಲ್ಲಿ ಲಭ್ಯವಿದೆ.
ಕಾರ್ಯದರ್ಶಿ
ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಯವರ ಕಾರ್ಯಾಲಯ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಬೆಂಗಳೂರು ಗ್ರಾಮಾಂತರ ಜಿಲ್ಲೆ)
ಜಿಲ್ಲಾ ಸಂಕೀರ್ಣ, ಬೀರಸಂದ್ರಗ್ರಾಮ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು–562110,
ಇ–ಮೇಲ್:dudc_blr@yahoo.co.in, dudc.blrrural@gmail.com
ಸಂಖ್ಯೆ: ಜಿನಕೋ(1)/ಸಿಬ್ಬಂದಿ/ಸಿಆರ್/217/2022–23 ದಿನಾಂಕ: 22.02.2023
ಸಾರ್ವಜನಿಕ ಪ್ರಕಟಣೆ
ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಕರ್ನಾಟಕ ಪುರಸಭೆಗಳ (ನಗರಸಭೆಗಳು, ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳ ಪೌರಕಾರ್ಮಿಕರ ನೇಮಕಾತಿ (ವಿಶೇಷ) ನಿಯಮಗಳ ರೀತ್ಯಾ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಚುರಪಡಿಸುತ್ತಿರುವ ಬಗ್ಗೆ.
ಉಲ್ಲೇಖ: 1. ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 176 ಜಿಇಎಲ್ 2022/(ಭಾ–2)(ಇ), ದಿನಾಂಕ : 23.11.2022.
2. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 16–01–2023.
ಕರ್ನಾಟಕ ಪುರಸಭೆಗಳ (ನಗರಸಭೆಗಳ, ಪುರಸಭೆಗಳ ಮತ್ತು ಪಟ್ಟಣ ಪಂಚಾಯಿತಿಗಳ ಪೌರಾಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2022ರಂತೆ ಉಲ್ಲೇಖ (1) & (2)ರ ಅಧಿಸೂಚನೆಯಂತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇಮಕಾತಿಯ ಮೀಸಲಾತಿಯ ಅನುಸಾರವಾಗಿ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ನಗರ ಸ್ಥಳೀಯ ಸಂಸ್ಥೆಗಳ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ. ಅದರಂತೆ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ 07 ದಿನಗಳೊಳಗಾಗಿ ಲಿಖಿತವಾಗಿ ಸಂಬಂಧಿಸಿದ ದೃಢೀಕೃತ ದಾಖಲಾತಿಗಳೊಂದಿಗೆ ಆಕ್ಷೇಪಣೆಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಕಛೇರಿ ಹಾಗೂ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಸಲ್ಲಿಸಲು ಸೂಚಿಸಿದೆ ಹಾಗೂ ಅವಧಿ ಮುಗಿದ ನಂತರ ಸ್ವೀಕೃತವಾದ ಆಕ್ಷೇಪಣೆಯನ್ನು ಸ್ವೀಕರಿಸಲಾಗುವುದಿಲ್ಲವೆಂದು ಈ ಮೂಲಕ ಪ್ರಕಟಣೆ ಹೊರಡಿಸಲಾಗಿದೆ.
ಸಹಿ/– ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಪೌರಕಾರ್ಮಿಕರ ವಿಶೇಷ ನೇಮಕಾತಿ ಹಾಗೂ ಜಿಲ್ಲಾಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲೆ
ವಾ.ಸಾ.ಸಂ.ಇ/ವಾಪ್ರ/4923/ಶಿರಡಿಸಾಯಿ/2022–23

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂ.ಸಂ.: ಕಛೇರಿ: 08156–295427 ಫ್ಯಾಕ್ಸ್: 08156 – 295427, ಇಮೇಲ್ – eemidcbpura@gmail.com
ಅಲ್ಪಾವಧಿ ಟೆಂಡರ್ ಅಧಿಸೂಚನೆ
ಸಂಖ್ಯೆ: ಕಾಸಬ/ತಾಂಶಾ/ಸ.ಇಂ/ ಟೆಂಡರ್ ಪ್ರಕಟಣೆ ಸಂಖ್ಯೆ: 23/2022–23, ದಿನಾಂಕ : 23/02/2023.
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವ್ಯಾಪ್ತಿಯ ಅಟಲ್ ಭೂ ಜಲ್ ಯೋಜನೆ ಅಡಿಯಲ್ಲಿ
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ ಚಿಕ್ಕಬಳ್ಳಾಪುರ, ಬಾಗೇಪಲ್ಲಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಅಟಲ್ ಭೂ ಜಲ್ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲೂ 2 ನಿಭಂದನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1 ಮತ್ತು 2 ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 10/03/2023 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ :13/03/2023 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–295427 ಮತ್ತು ಇ–ಪ್ರೋಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ನೈರುತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: 03/2023
ದಿನಾಂಕ: 20-02-2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಐಟಂಗಳ ಪೂರೈಕೆಗಾಗಿ ಐಆರ್‌ಇಪಿಎಸ್ ಮೂಲಕ ಇ–ಟೆಂಡರನ್ನು ಆಹ್ವಾನಿಸಿದ್ದಾರೆ:
ಸಂಕ್ಷಿಪ್ತ ವಿವರಣೆ: ನಿರ್ದಿಷ್ಟತೆಯ ಪ್ರಕಾರ ಪಿಟ್ ಲೆಸ್ ಎಲೆಕ್ಟ್ರಾನಿಕ್ ಇನ್–ಮೋಷನ್ ವೇಬ್ರಿಡ್ಜ್ ಪೂರೈಕೆ, ಸ್ಥಾಪನೆ ಮತ್ತು ಕಾರ್ಯಾರಂಭ. (ಪರಿಮಾಣ: 01 ನಂ.)
(ಟೆಂಡರ್ ಸಂಖ್ಯೆ: L8235252A)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 17.03.2023, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು
PUB/692/AAD/PRB/SWR/2022-23
S.W.Railways SWRRLY SWRRLY

ಆನೇಕಲ್ ಯೋಜನಾ ಪ್ರಾಧಿಕಾರ
“ಅಣ್ಣ” ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in
ಸಂಖ್ಯೆ: ಆಯೋಪ್ರಾ/ಇತರೆ/ಸಿ.ಎ ಹಂಚಿಕೆ/01/2022–23 ದಿನಾಂಕ: 23.02.2023
ಸಾರ್ವಜನಿಕ ಪ್ರಕಟಣೆ
ವಿಷಯ: ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಬಗ್ಗೆ (ಅರ್ಜಿ ಸಲ್ಲಿಸುವ ದಿನಾಂಕ ವಿಸ್ತರಣೆ ಬಗ್ಗೆ)
ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮ, 2016ರನ್ವಯ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರಿಕ ಸೌಲಭ್ಯ ನಿವೇಶನಗಳನ್ನು ನಿಯಮ–6ರಂತೆ ಸಂಸ್ಥೆಗಳಿಗೆ 30 ವರ್ಷಗಳ ಅವಧಿಗೆ ಲೀಸ್(ಗುತ್ತಿಗೆ) ಆಧಾರದ ಮೇಲೆ ಹಂಚಿಕೆ ಮಾಡಲು ಅರ್ಜಿಗಳನ್ನು ಕರೆಯಲಾಗಿರುತ್ತದೆ.
ಈ ಸಂಬಂಧ ದಿನಾಂಕ: 12.02.2023ರಂದು “ಪ್ರಜಾವಾಣಿ” ಕನ್ನಡ ದಿನಪತ್ರಿಕೆ ಹಾಗೂ “Sunday Times of India” ಆಂಗ್ಲ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿರುತ್ತದೆ.
ಸದರಿ ಪ್ರಕಟಣೆಯಲ್ಲಿ ನಾಗರಿಕ ಸೌಲಭ್ಯ ನಿವೇಶನಕ್ಕಾಗಿ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು ದಿನಾಂಕ: 27.02.2023 ಎಂದು ನಿಗದಿಪಡಿಸಲಾಗಿತ್ತು. ಸದರಿ ದಿನಾಂಕವನ್ನು 04.03.2023 ಸಂಜೆ 5:30ರ ವರೆಗೆ ವಿಸ್ತರಿಸಲಾಗಿದೆ.
ಹಾಗಾಗಿ, ಅರ್ಜಿಗಳನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ದಿನಾಂಕ: 04.03.2023 ಸಂಜೆ 5:30ರ ಒಳಗಾಗಿ ಕಛೇರಿ ಸಮಯದಲ್ಲಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಇವರಿಗೆ ಸಲ್ಲಿಸತಕ್ಕದ್ದು. ಅವಧಿ ಮುಗಿದ ನಂತರ ಬರುವ ಅರ್ಜಿಗಳು ಹಾಗೂ ದೋಷಪೂರಿತ / ಸರಿಯಾಗಿಲ್ಲದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅರ್ಜಿ ಸಲ್ಲಿಸುವ ಪೂರ್ವ ನಿಯಮ–8ರಂತೆ ನೋಂದಣಿ ಶುಲ್ಕ ಪಾವತಿಸಿ ಈ ಕಛೇರಿಯಲ್ಲಿ ಅರ್ಜಿ ನೋಂದಣಿ ಮಾಡಿಕೊಳ್ಳತಕ್ಕದ್ದು.
ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮ 2016ರ ನಿಯಮ 6ರ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಅಂಗವಿಕಲರ ಹಾಗೂ ಬುದ್ಧಿಮಾಂದ್ಯರ ಕಲ್ಯಾಣಕ್ಕಾಗಿ ನಡೆಸುವ ಸಂಘ ಸಂಸ್ಥೆಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ.
ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲರ ಹಾಗೂ ಬುದ್ಧಿಮಾಂದ್ಯರ ಮತ್ತು ಕನ್ನಡ ಮಾಧ್ಯಮ ಶಾಲೆಗಳನ್ನು ನಡೆಸುವ ಸಂಸ್ಥೆಗಳಿಗೆ ಲೀಸ್ ಮೊತ್ತದಲ್ಲಿ ಶೇ.50ರಷ್ಟು ರಿಯಾಯಿತಿ ಇರುತ್ತದೆ. ಅರ್ಹತೆ ಮತ್ತು ಇನ್ನಿತರ ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮ 2016ರನ್ನು ಅವಲೋಕಿಸಬಹುದಾಗಿದೆ.
ಮೇಲ್ಕಂಡ ನಾಗರೀಕ ಸೌಲಭ್ಯ ನಿವೇಶನಗಳ ಪೈಕಿ ಹಂಚಿಕೆ ಪಡೆಯಲು ಆಸಕ್ತಿಯುಳ್ಳ ನಾಗರಿಕ ಸೌಲಭ್ಯದ ಸ್ಥಳ ಪರಿಶೀಲಿಸುವ ಇಚ್ಛೆಯುಳ್ಳವರು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದ 3 ದಿವಸಗಳ ಮುಂಚೆ ಈ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ. ಸ್ಥಳ ಪರಿಶೀಲನೆಗೆ ಈ ಕಛೇರಿಯ ಸಿಬ್ಬಂದಿ / ಅಧಿಕಾರಿಗಳು ಅನುವುಮಾಡಿಕೊಡುತ್ತಾರೆ.
ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್
ವಾಸಾಸಂಇ/ವಾಪ್ರ/ಎಲ್‌ಸಿ/4931/2022–23

ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ
ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು–01
PH: 080-22867369, e-mail: cgmksamb@gmail.com
ಸಂಖ್ಯೆ: APMC/2022-23/AUCTION 185 ದಿನಾಂಕ: 24.02.2023
ತಿದ್ದುಪಡಿ
ಈ ಕಛೇರಿಯ ಟೆಂಡರ್ ಪ್ರಕಟಣೆಯ ಸಂಖ್ಯೆ: APMC/2022-23/AUCTION 185 ದಿನಾಂಕ: 24.02.2023 ರಂದು ಪ್ರಕಟವಾದ ಟೆಂಡರ್ ಪ್ರಕಟಣೆಯಲ್ಲಿ ...

ನೈರುತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: ECN/02/2023
PUB/691/AAD/PRB/SWR/2022-23
S.W.Railways SWRRLY SWRRLY

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 57/2022–23
ದಿನಾಂಕ: 21.02.2023
(ರಸ್ತೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: 21.02.2023 ರಿಂದ 28.02.2023 ರ ಸಂಜೆ 4.00 ಘಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.
(1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: 27.02.2023 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ) (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: 28.02.2023 (ಸಂಜೆ 4.00 ಘಂಟೆಯವರೆಗೆ) (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 01.03.2023 (ಸಂಜೆ 4.30 ಘಂಟೆಯವರೆಗೆ). ಹೆಚ್ಚಿನ ಮಾಹಿತಿಗಾಗಿ www.kpwd.gov.in ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 533/ಎಂ.ಸಿ.ಎ/2022–23
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.
Ph No. : 08156-270058, E-mail ID: eerdwsd.ckb2@gmail.com
ಸಂ.:ಕಾಅ/ಗ್ರಾ.ಕು.ನೀ&ನೈ.ವಿ/ಚಿ.ಪುರ/ಟೆಂಡರ್/ಸ.ಇಂ–2/2022–23/ ದಿನಾಂಕ: 20.02.2023
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 50/2022–23 ದಿನಾಂಕ: 20.02.2023
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ JJM-2215 ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಗೌರಿಬಿದನೂರು ತಾಲ್ಲೂಕಿನ 96 ಗ್ರಾಮಗಳಲ್ಲಿ ನಲ್ಲಿ ನೀರು ಸಂಪರ್ಕ ಕುಡಿಯುವ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು. ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ www.eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.
(1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ ದಿನಾಂಕ: 27.02.2023 ರಂದು ಸಂಜೆ 5.30 ಗಂಟೆವರೆಗೆ. (2) ಭರ್ತಿ ಮಾಡಿದ ಟೆಂಡರ್‌ಗಳನ್ನು ತೆರೆಯುವ ದಿನಾಂಕ: 01.03.2023ರ ಬೆಳಿಗ್ಗೆ 11.00 ಗಂಟೆಗೆ. (3) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 03.03.2023 ಬೆಳಗ್ಗೆ 11.00 ಗಂಟೆಗೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳನ್ನು ಘೋಷಿಸಲ್ಪಟ್ಟರೆ ಮುಂದಿನ ದಿನ ಟೆಂಡರ್ ತೆರೆಯಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ528/ಎಂ.ಸಿ.ಎ/2022–23.
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

‘ಬಂಟರ ನಿಗಮ ಸ್ಥಾಪನೆ ಭರವಸೆ ಈಡೇರಿಸದಿದ್ದರೆ ಬಿಜೆಪಿಗೆ ಪೆಟ್ಟು’

ಮಂಗಳೂರು: ‘ರಾಜ್ಯ ಸರ್ಕಾರ ಬಂಟರ ನಿಗಮ ಸ್ಥಾಪಿಸುವ ಭರವಸೆ ಈಡೇರಿಸದೇ ಸಮುದಾಯಕ್ಕೆ ಮೋಸ ಬಗೆದಿದೆ. ಕನಿಷ್ಠಪಕ್ಷ ಚುನಾವಣಾ ಪ್ರಣಾಳಿಕೆಯಲ್ಲಾದರೂ ಬಂಟರ ನಿಗಮ ಮತ್ತು ಬಂಟರ ಮೀಸಲಾತಿಗೆ ಸಂಬಂಧಿಸಿದ ವಿಷಯ ಪ್ರಸ್ತಾಪಿಸದಿದ್ದರೆ ಮುಂದಿನ ಚುನಾವಣೆಯಲ್ಲಿ ಪಾಠ ಕಲಿಸಲಾಗುವುದು’ ಎಂದು ಜಾಗತಿಕ ಬಂಟರ ಒಕ್ಕೂಟದ ಅಧ್ಯಕ್ಷ ಐಕಳ ಹರೀಶ್ ಶೆಟ್ಟಿ ಎಚ್ಚರಿಕೆ ನೀಡಿದರು.

‘ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಟರ ಪ್ರತಿನಿಧಿಗಳಾಗಿ ಐವರು ಶಾಸಕರು ಇದ್ದಾರೆ. ಸಂಸದ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕೂಡ ಬಂಟ ಸಮುದಾಯದವರು. ಇವರೆಲ್ಲರೂ ಬಂಟರ ಹೆಸರಿನಲ್ಲಿ ವೋಟು ಮತ್ತು ಇತರ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಆದರೆ ಸಮುದಾಯದ ಅಭಿವೃದ್ಧಿಗೆ ಸಂಬಂಧಿಸಿದ ವಿಷಯದಲ್ಲಿ ಉದಾಸೀನ ಮಾಡಿದ್ದಾರೆ’ ಎಂದು ಹರೀಶ್ ಶೆಟ್ಟಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ನಿಗಮ ಸ್ಥಾಪನೆ ಮತ್ತು ಬಂಟರನ್ನು ‘3ಬಿ’ ಯಿಂದ ‘2ಎ’ಗೆ ವರ್ಗಾಯಿಸುವಂತೆ ನಳಿನ್ ಕುಮಾರ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗಿತ್ತು. ಬಜೆಟ್‌ನಲ್ಲಿ ಈ ವಿಷಯ ಪ್ರಸ್ತಾಪ ಆಗಬಹುದು ಎಂಬ ನಿರೀಕ್ಷೆ ಹುಸಿಯಾಗಿದೆ. ನಾವು ಬೀದಿಗೆ ಇಳಿದು ಹೋರಾಟ ಮಾಡುವುದಿಲ್ಲ. ಮೋಸ ಮಾಡಿದವರನ್ನು ಚುನಾವಣೆಯಲ್ಲಿ ಸೋಲಿಸುವೆವು’ ಎಂದರು.

‘ಬಂಟರ ನಿಗಮ ಸ್ಥಾಪನೆ ಮಾಡುವುದಾಗಿ ಕಾಂಗ್ರೆಸ್ ಭರವಸೆ ನೀಡಿದೆ. ಬಿಜೆಪಿ ಇತರ ಸಮುದಾಯದವರಿಗೆ ನಿಗಮ ಸ್ಥಾಪನೆ ಮಾಡಲು ಒಪ್ಪಿಕೊಂಡಿರುವುದು ಸಂತೋಷದ ವಿಷಯ. ಆದರೆ ಬಂಟರ ವಿಷಯದಲ್ಲಿ ತಾರತಮ್ಯ ಮಾಡಿದ್ದು ಸರಿಯಲ್ಲ. ಸರ್ಕಾರದ ಈ ನಿಲುವಿಗೆ ಸಮಾಜದ ಜನಪ್ರತಿನಿಧಿಗಳ ಉದಾಸೀನವೂ ಕಾರಣ’ ಎಂದು ಅವರು ದೂರಿದರು.

ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ; ಜಾತಿ ಲೆಕ್ಕಾಚಾರ ಜೋರು

ಸಿ.ಟಿ.ರವಿ ‘ಏಕಚಕ್ರಾಧಿಪತ್ಯ’ ಅಂತ್ಯಕ್ಕೆ ಯತ್ನ

• ಬಿ.ಜೆ. ಧನ್ಯಪ್ರಸಾದ್

ಚಿಕ್ಕಮಗಳೂರು: ಸತತ ನಾಲ್ಕು ಬಾರಿ ಗೆದ್ದಿರುವ ಶಾಸಕ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರ ‘ಏಕಚಕ್ರಾಧಿಪತ್ಯ ಭೇದಿಸುವ’ ಉಮೇದಿನಲ್ಲಿ ಕಾಂಗ್ರೆಸ್ ಇದೆ.

ರವಿ ವಿರುದ್ಧ ತಿರುಗಿಬಿದ್ದಿರುವ ಅವರ ಆಪ್ತ, ನಗರಸಭೆ ಮಾಜಿ ಅಧ್ಯಕ್ಷ ಎಚ್.ಡಿ. ತಮ್ಮಯ್ಯ ಈಚೆಗೆ ಕಾಂಗ್ರೆಸ್ ಸೇರಿದ್ದಾರೆ. ತಮ್ಮಯ್ಯ, ಬಿ.ಎಚ್. ಹರೀಶ್, ಮಹಡಿಮನೆ ಸತೀಶ್, ಗಾಯತ್ರಿ ಶಾಂತೇಗೌಡ, ರೇಖಾ ಹುಲಿಯಪ್ಪಗೌಡ, ಎ.ಎನ್. ಮಹೇಶ್, ನಯಾಜ್, ಡಾ.ಡಿ.ಎಲ್. ವಿಜಯಕುಮಾರ್ ಅವರು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ. ಈ ಪೈಕಿ ಗಾಯತ್ರಿ ಮತ್ತು ತಮ್ಮಯ್ಯ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿಲ್ಲ.

ಸಿ.ಟಿ. ರವಿ ಒಕ್ಕಲಿಗ ಸಮುದಾಯದವರು. 1999ರ ಚುನಾವಣೆಯಲ್ಲಿ ರವಿ ಅವರು ಸಗೀರ್ ಅಹಮದ್ ವಿರುದ್ಧ ಸೋಲುಂಡಿದ್ದರು. ಮೂರು ಬಾರಿ (1989, 1994 ,1999) ಗೆದ್ದಿದ್ದ ಸಗೀರ್ ಅವರನ್ನು 2004ರ ಚುನಾವಣೆಯಲ್ಲಿ ಸೋಲಿಸಿ ರವಿ ವಿಧಾನಸಭೆ ಪ್ರವೇಶಿಸಿದರು.

ಕ್ಷೇತ್ರದಲ್ಲಿ ಬಿಜೆಪಿಯ ವ್ಯವಸ್ಥಿತ ಸಂಪರ್ಕ ಜಾಲ ಇದೆ. ಮತಬೇಟೆಯಲ್ಲಿ ‘ದತ್ತ ಪೀಠ’, ‘ಹಿಂದುತ್ವ’, ‘ಕ್ಷೇತ್ರದ ಅಭಿವೃದ್ಧಿ’ ವಿಚಾರಗಳು ಬಿಂಬಿತವಾಗುತ್ತವೆ. ಇದು ರವಿ ಅವರ ಬಲ.

ಬಿಜೆಪಿ ಟಿಕೆಟ್‌ಗೆ ಬೇಡಿಕೆ ಇಟ್ಟಿದ್ದ ತಮ್ಮಯ್ಯ ಅವರು, ಟಿಕೆಟ್ ಸಿಗುವುದಿಲ್ಲ ಎಂಬುದು ಖಾತ್ರಿಯಾಗಿ ಪಕ್ಷದಿಂದ ಹೊರನಡೆದರು. ಬೇರಾರೂ ಟಿಕೆಟ್‌ಗಾಗಿ ತುಟಿಬಿಚ್ಚಿಲ್ಲ. ಬಿಜೆಪಿಯಲ್ಲಿ ರವಿ ಅವರೇ ಏಕತ್ರ ಎಂಬಂತಿದೆ.

ಕ್ಷೇತ್ರದ ದೊಡ್ಡ ಸಮುದಾಯಗಳಲ್ಲಿ ವೀರಶೈವ– ಲಿಂಗಾಯತ ಸಮುದಾಯವೂ ಒಂದು. ತಮ್ಮಯ್ಯ, ಹರೀಶ್, ಮಹಡಿಮನೆ ಸತೀಶ್ ಈ ಸಮುದಾಯದವರು. ವೀರಶೈವ–ಲಿಂಗಾಯತ ಅಥವಾ ಕುರುಬ ಸಮುದಾಯದವರಿಗೆ ಟಿಕೆಟ್ ನೀಡುವ ಲೆಕ್ಕಾಚಾರ ಇದೆ.

‘ಲಿಂಗಾಯತ ಸಮುದಾಯದ ಮೂವರು ಟಿಕೆಟ್‌ಗಾಗಿ ಬಿಗಿಪಟ್ಟು ಹಿಡಿದಿದ್ದು, ಈ ಪೈಕಿ ಯಾರು ಹಿತವರು ಎಂದು ಪಕ್ಷ ಸಮೀಕ್ಷೆ ಕಾರ್ಯದಲ್ಲಿ ತೊಡಗಿದೆ. ಈ ಮೂವರೂ ಪಟ್ಟು ಸಡಿಲಿಸದಿದ್ದರೆ ಕುರುಬ ಸಮುದಾಯದವರಿಗೆ (ಗಾಯತ್ರಿ, ರೇಖಾ, ಮಹೇಶ್) ಟಿಕೆಟ್ ಒಲಿಯುವ ಸಾಧ್ಯತೆ ಇದೆ’ ಎಂದು ಕಾಂಗ್ರೆಸ್ ಮುಖಂಡರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

2.20 ಲಕ್ಷ ಮತದಾರರು ಇದ್ದಾರೆ. ಎಸ್‌ಸಿ, ವೀರಶೈವ–ಲಿಂಗಾಯತ, ಮುಸ್ಲಿಂ, ಕುರುಬ, ಒಕ್ಕಲಿಗ, ಶೆಟ್ಟರು ಸಮುದಾಯದವರು ಹೆಚ್ಚು ಇದ್ದಾರೆ.

‘ಹಿಜಾಬ್’, ‘ಹಲಾಲ್’ ವಿಚಾರ, ರವಿ ಅವರು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರನ್ನು ‘ಕಚ್ಚೆ ಹರುಕ’, ‘ಸಿದ್ರಾಮುಲ್ಲಾ ಖಾನ್’ ಎಂದು ಗೇಲಿ ಮಾಡಿರುವುದು, ಎಚ್.ಡಿ. ದೇವೇಗೌಡ ಅವರಿಗೆ ಸಾಬರಾಗಿ ಹುಟ್ಟಲು ತಡ ಏಕೆ ಈಗಲೇ ಹೋಗಿ...’ ಎಂದು ಕಿಚಾಯಿಸಿರುವುದು ಮೊದಲಾದ ಅಂಶಗಳು ರವಿ ಅವರಿಗೆ ಮುಳುವಾಗಿ, ತಮ್ಮ ಪಕ್ಷಕ್ಕೆ ಅನುಕೂಲಸಿಂಧುವಾಗಿ ಪರಿಣಮಿಸಬಹುದು ಎಂಬ ಲೆಕ್ಕಾಚಾರ ಕಾಂಗ್ರೆಸ್‌ನದ್ದು.

ರಾಜ್ಯ ವಿಧಾನಸಭಾ ಚುನಾವಣೆಗೆ ತಯಾರಿ ನಡೆಸಿದ್ದೇವೆ. ಎದುರಾಳಿ ಪಕ್ಷದವರು ಯಾರನ್ನು ಕಣಕ್ಕಿಳಿಸಿದರೂ ಸಮರ್ಥವಾಗಿ ಎದುರಿಸಲು ಸಜ್ಜಾಗಿದ್ದೇವೆ.
ಸಿ.ಟಿ.ರವಿ
ಶಾಸಕ

ಪಕ್ಷದಿಂದ ಟಿಕೆಟ್ ಸಿಗುತ್ತದೆ ಎಂಬ ಭರವಸೆ ಇದೆ. ಯಾರಿಗೆ ಟಿಕೆಟ್ ನೀಡಿದರೂ ಅವರ ಬೆಂಬಲಕ್ಕೆ ನಿಲ್ಲುತ್ತೇನೆ. ಪಕ್ಷ ತೊರೆಯುವ ಪ್ರಶ್ನೆಯೇ ಇಲ್ಲ.
ಬಿ.ಎಚ್.ಹರೀಶ್
ಟಿಕೆಟ್ ಆಕಾಂಕ್ಷಿ, ಕಾಂಗ್ರೆಸ್

ಪಕ್ಷವು ಸಮೀಕ್ಷೆ ಮಾಡಿಸಿ ವರದಿ ಪಡೆದುಕೊಂಡಿದೆ. ಸ್ಪರ್ಧಿಸುವ ಇಚ್ಛೆ ಇದೆ. ಯಾರಿಗೆ ಟಿಕೆಟ್ ನೀಡಿದರೂ ಒಕೆ. ರವಿ ಅವರನ್ನು ಸೋಲಿಸುವುದೇ ಗುರಿ.
ಎ.ವಿ. ಗಾಯತ್ರಿ ಶಾಂತೇಗೌಡ
ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ

ಬೇಷರತ್ತಾಗಿ ಕಾಂಗ್ರೆಸ್ ಸೇರಿದ್ದೇನೆ. ವರಿಷ್ಠರು ಜನಾಭಿಪ್ರಾಯ ಸಂಗ್ರಹಿಸಿ ಟಿಕೆಟ್ ಯಾರಿಗೆ ಎಂಬುದನ್ನು ನಿರ್ಧರಿಸುತ್ತಾರೆ. ‘ಕಿಂಗ್’, ‘ಕಿಂಗ್ ಮೇಕರ್’ ಎರಡಕ್ಕೂ ಸಿದ್ಧ ಇದ್ದೇನೆ.
ಎಚ್.ಡಿ.ತಮ್ಮಯ್ಯ
ಟಿಕೆಟ್ ಆಕಾಂಕ್ಷಿ, ಕಾಂಗ್ರೆಸ್

ಹಾಸನದಿಂದ ಭವಾನಿ ರೇವಣ್ಣ ಸ್ಪರ್ಧೆ?

ಬೆಂಗಳೂರಿನಲ್ಲಿ ನಾಳೆ ನಡೆಯಲಿರುವ ಜೆಡಿಎಸ್ ಪಕ್ಷದ ಸಭೆಯಲ್ಲಿ ನಿರ್ಧಾರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಪ್ರಚಾರ ಆರಂಭಿಸಿರುವ ಮತ್ತೊಬ್ಬ ಪ್ರಬಲ ಆಕಾಂಕ್ಷಿ ಸ್ವರೂಪ್
- ದೇವೇಗೌಡರ ಜೊತೆ ಕುಮಾರಸ್ವಾಮಿ, ರೇವಣ್ಣ ಚರ್ಚೆ

ಹಾಸನ: ಹಾಸನ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಭವಾನಿ ರೇವಣ್ಣ ಕಣಕ್ಕೆ ಇಳಿಯುವುದು ಬಹುತೇಕ ಖಚಿತ ಎನ್ನಲಾಗುತ್ತಿದ್ದು, ಕ್ಷೇತ್ರದ ಅಭ್ಯರ್ಥಿಯನ್ನು ಅಂತಿಮಗೊಳಿಸಲು ಜಿಲ್ಲೆಯ ಪ್ರಮುಖರ ಸಭೆಯನ್ನು ಬೆಂಗಳೂರಿನಲ್ಲಿ ಭಾನುವಾರ ಕರೆಯಲಾಗಿದೆ.

ಕ್ಷೇತ್ರದ 300ಕ್ಕೂ ಅಧಿಕ ಮುಖಂಡರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಕರೆದಿದ್ದು, ಗ್ರಾಮ ಪಂಚಾಯಿತಿ ಮಟ್ಟದ ಪದಾಧಿಕಾರಿಗಳಿಗೂ ಆಹ್ವಾನ ನೀಡಲಾಗಿದೆ. ಹಾಸನ ಕ್ಷೇತ್ರದಿಂದ ಯಾರನ್ನು ಕಣಕ್ಕೆ ಇಳಿಸಿದರೆ, ಜೆಡಿಎಸ್ ಗೆಲುವು ಸಾಧಿಸಬಹುದು ಎನ್ನುವ ಚರ್ಚೆ ನಡೆಸಲಾಗುತ್ತಿದೆ. ನಂತರ ಟಿಕೆಟ್ ಘೋಷಿಸಲು ನಿರ್ಧರಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಈ ಮಧ್ಯೆ ಎಚ್.ಡಿ.ರೇವಣ್ಣ, ಭವಾನಿ ರೇವಣ್ಣ, ಸಂಸದ ಪ್ರಜ್ವಲ್ ಅವರು ತಾಲ್ಲೂಕಿನ ನಿಟ್ಟೂರು, ಸಾಲಗಾಮೆ ಹೋಬಳಿಯಲ್ಲಿ ಶುಕ್ರವಾರ ಪ್ರಚಾರ ನಡೆಸಿದ್ದಾರೆ.

ಮಾಜಿ ಶಾಸಕ ಬಿ.ವಿ.ಕರೀಗೌಡ ಮಾತನಾಡಿ, ‘ಶಾಸಕ ಪ್ರೀತಂ ಗೌಡ ಹಾಕಿರುವ ಸವಾಲನ್ನು ಸ್ವೀಕರಿಸಲು ಭವಾನಿ ಅವರೇ ಸೂಕ್ತ. ಶಾಸಕರು ಪಂಥಾಹ್ವಾನ ನೀಡದಿದ್ದರೆ, ರೇವಣ್ಣ ಕುಟುಂಬದವರು ಹಾಸನಕ್ಕೆ ಬರುವ ಪ್ರಶ್ನೆಯೇ ಇರುತ್ತಿರಲಿಲ್ಲ’ ಎಂದಿದ್ದಾರೆ. ಶಾಸಕ ಪ್ರೀತಂ ಗೌಡ ವಿರುದ್ಧ ವಾಗ್ದಾಳಿ ನಡೆಸಿರುವ ಸಂಸದ ಪ್ರಜ್ವಲ್ ರೇವಣ್ಣ, ‘ನಮ್ಮ ಕುಟುಂಬಕ್ಕೆ ಪಂಥಾಹ್ವಾನ ನೀಡಿದ್ದಾರೆ. ನಮ್ಮ ತಾಯಿಯ ಬಗ್ಗೆ ಇಲ್ಲಸಲ್ಲದ ಹೇಳಿಕೆ ನೀಡಿದ್ದಾರೆ. ನಮಗೆ ಶಕ್ತಿ ಇಲ್ಲವೇ?’ ಎಂದು ಕೇಳಿದ್ದಾರೆ.

ಮತ್ತೊಬ್ಬ ಪ್ರಬಲ ಆಕಾಂಕ್ಷಿ ಎಚ್.ಪಿ.ಸ್ವರೂಪ್ ಕೂಡ ಪ್ರಚಾರ ಶುರು ಮಾಡಿದ್ದಾರೆ. ಆದರೆ, ರೇವಣ್ಣ ಕುಟುಂಬದ ಭರಾಟೆಯನ್ನು ನೋಡುತ್ತಿರುವ ಕಾರ್ಯಕರ್ತರು, ‘ಭವಾನಿ ರೇವಣ್ಣ ಅವರೇ ಕಣಕ್ಕಿಳಿಯುವುದು ನಿಶ್ಚಿತ’ ಎನ್ನುತ್ತಿದ್ದಾರೆ.

‘ಟಿಕೆಟ್ ಕೊಡಿಸುವುದು ನಿಮ್ಮ ಜವಾಬ್ದಾರಿ. ಪಕ್ಷವನ್ನು ಗೆಲ್ಲಿಸಿಕೊಂಡು ಬರುವುದು ನನ್ನ ಜವಾಬ್ದಾರಿ’ ಎಂದು ರೇವಣ್ಣ ಅವರಿಗೆ ಭವಾನಿ ಹೇಳಿದ್ದಾರೆ. ಈ ಬಗ್ಗೆ ಎಚ್.ಡಿ. ದೇವೇಗೌಡ ಹಾಗೂ ಕುಮಾರಸ್ವಾಮಿ ಜೊತೆ ರೇವಣ್ಣ ಚರ್ಚಿಸಿದ್ದಾರೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

‘ಎಎಪಿ ಸಮಾವೇಶಕ್ಕೆ ದೆಹಲಿ, ಪಂಜಾಬ್ ಸಿ.ಎಂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಾವಣಗೆರೆಯಲ್ಲಿ ಮಾರ್ಚ್ 4ರಂದು ನಡೆಯಲಿರುವ ಆಮ್ ಆದ್ಮಿ ಪಕ್ಷದ (ಎಎಪಿ) ಸಮಾವೇಶದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಹಾಗೂ ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಭಾಗವಹಿಸಲಿದ್ದಾರೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ ತಿಳಿಸಿದರು.

‘ಸಮಾವೇಶದಲ್ಲಿ ಎಲ್ಲ ಜಿಲ್ಲೆ, ತಾಲ್ಲೂಕು ಹಾಗೂ ಬೂತ್‌ಮಟ್ಟದ ಕಾರ್ಯಕರ್ತರು ಭಾಗವಹಿಸಲಿದ್ದಾರೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ಹೇಳಿದರು.

‘ದೆಹಲಿಯಲ್ಲಿ ಎಎಪಿ ನೇತೃತ್ವದ ಸರ್ಕಾರವು ಜಾರಿಗೆ ತಂದಿರುವ ಯೋಜನೆಗಳನ್ನು ಕರ್ನಾಟಕದಲ್ಲಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಕಲು ಮಾಡಿ, ಜನರಿಗೆ ಸುಳ್ಳು ಆಶ್ವಾಸನೆ ನೀಡುತ್ತಿವೆ. ಮುಂದಿನ ಚುನಾವಣೆಯಲ್ಲಿ ಅಸಲಿ ಹಾಗೂ ನಕಲಿ ನಡುವಿನ ಹೋರಾಟ ನಡೆಯಲಿದೆ’ ಎಂದು ಹೇಳಿದರು.

‘ಕರ್ನಾಟಕ ರಾಜ್ಯದ ಜನರು ದೆಹಲಿ ಹಾಗೂ ಪಂಜಾಬ್‌ನಲ್ಲಿ ಆಮ್ ಆದ್ಮಿ ಪಕ್ಷದ ನೇತೃತ್ವದ ಸರ್ಕಾರವು ನೀಡುತ್ತಿರುವ ಆಡಳಿತವನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ದೆಹಲಿಯ ಜನರಿಗೆ 200 ಯೂನಿಟ್ ವರೆಗೆ ವಿದ್ಯುತ್, 20 ಸಾವಿರ ಲೀಟರ್ ನೀರು, ಶಿಕ್ಷಣ, ವೈದ್ಯಕೀಯ ಸೌಲಭ್ಯ ಹಾಗೂ ಮಹಿಳೆಯರಿಗೆ ಸಾರಿಗೆ ಸೌಲಭ್ಯವನ್ನು ಉಚಿತವಾಗಿ ನೀಡಲಾಗುತ್ತಿದೆ. ಕರ್ನಾಟಕದಲ್ಲೂ ಜನರು ತೆರಿಗೆ ಪಾವತಿಸಿದರೂ ಸೌಲಭ್ಯ ಸಿಗುತ್ತಿಲ್ಲ. ಜನಾಂದೋಲನ ರೂಪುಗೊಂಡಿದ್ದು, ದಾವಣಗೆರೆ ಸಮಾವೇಶದಲ್ಲಿ ಚಾಲನೆ ನೀಡಲಾಗುವುದು’ ಎಂದು ಹೇಳಿದರು.

ಪಕ್ಷದ ಜನಸಂಪರ್ಕ ಸಮಿತಿ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಮಾತನಾಡಿ, ‘ಪ್ರಾಮಾಣಿಕ ಹಾಗೂ ಜನಪರ ಆಡಳಿತ ಹಾಗೂ ಸರ್ಕಾರಿ ಶಿಕ್ಷಣ, ಆರೋಗ್ಯ ಮುಂತಾದವುಗಳಿಗೆ ಆದ್ಯತೆ ನೀಡಿದರೆ ಪ್ರಜ್ಞಾವಂತ ಜನರು ಕೈಹಿಡಿಯುತ್ತಾರೆ ಎಂಬುದನ್ನು ಕೇಜ್ರಿವಾಲ್ ಸಾಬೀತು ಪಡಿಸಿದ್ದಾರೆ’ ಎಂದು ಹೇಳಿದರು.

ರಾಜ್ಯ ಸಂವಹನಾ ಉಸ್ತುವಾರಿ ಬ್ರಿಜೇಶ್ ಕಾಳಪ್ಪ, ರಾಜ್ಯ ಉಪಾಧ್ಯಕ್ಷ ಚನ್ನಪ್ಪಗೌಡ ನೆಲ್ಲೂರು ಹಾಗೂ ರಾಜ್ಯ ಜಂಟಿ ಕಾರ್ಯದರ್ಶಿ ಉಷಾ ಮೋಹನ್ ಭಾಗವಹಿಸಿದ್ದರು.

ಬಿಜೆಪಿ ಆಡಳಿತದಲ್ಲಿ ದಂಧೆಕೋರರಿಗೆ ರಾಜಾತಿಥ್ಯ: ಎಚ್‌ಡಿಕೆ

ತೀರ್ಥಹಳ್ಳಿ: ‘ರಾಜ್ಯದಲ್ಲಿ ಭ್ರಷ್ಟಾಚಾರ ಮುಕ್ತ ಸರ್ಕಾರ ರಚಿಸುವುದಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಹಾಸ್ಯಾಸ್ಪದವಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ದಂಧೆಕೋರರಿಗೆ ರಾಜಾತಿಥ್ಯ ಸಿಗುತ್ತಿದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಇಲ್ಲಿ ನಡೆದ ಪಂಚರತ್ನ ಯಾತ್ರೆಯಲ್ಲಿ ಮಾತನಾಡಿ, ‘ಇಲ್ಲಿನ ಬಿಜೆಪಿ ಸರ್ಕಾರವೇ ಭ್ರಷ್ಟವಾಗಿದೆ ಎಂಬುದು ಗೊತ್ತಿರಲಿ. ಇದನ್ನು ಪ್ರಜ್ಞಾವಂತರು ಮತದಾರರು ಗಮನಿಸಿದ್ದಾರೆ. ಪೊಲೀಸ್ ವರ್ಗಾವಣೆ ದಂಧೆಯಲ್ಲಿ ಸಿಕ್ಕಿಬಿದ್ದ ಸ್ಯಾಂಟ್ರೊ ರವಿ ಈಗ ಎಲ್ಲಿದ್ದಾನೆ. ಸರ್ಕಾರವು ಆರೋಪಿಗಳಿಗೂ ಐಷಾರಾಮಿ ಸೌಲಭ್ಯ ಒದಗಿಸುತ್ತಿದೆ ಎಂಬುದನ್ನು ಶಾ ನೆನಪಿಟ್ಟುಕೊಳ್ಳಲಿ’ ಎಂದರು.

ಬೆಳಗಾವಿ: ರೋಡ್ ಶೋ ನಡೆಸಲಿರುವ ಪ್ರಧಾನಿ ಮೋದಿ

ಬೆಳಗಾವಿ: ‘ನಗರದಲ್ಲಿ ಫೆ.27ರಂದು ಪ್ರಧಾನಿ ನರೇಂದ್ರ ಮೋದಿ ಅವರು 8 ಕಿ.ಮೀ.ವರೆಗೆ ರೋಡ್ ಶೋ ನಡೆಸಲಿದ್ದಾರೆ. ಇದನ್ನು ನೋಡಲು 3 ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ಹೇಳಿದರು.

‘ಅಂದು ಮಧ್ಯಾಹ್ನ 1ರ ಸುಮಾರಿಗೆ ಪ್ರಧಾನಿ ನಗರಕ್ಕೆ ಆಗಮಿಸಲಿದ್ದಾರೆ.
ಜಿಲ್ಲೆಯ ಜನ ಮೋದಿ ಅವರನ್ನು ನೋಡಲು ಕಾತರರಾಗಿದ್ದಾರೆ. ಇದೊಂದು ಐತಿಹಾಸಿಕ ರೋಡ್ ಶೋ ಆಗಲಿದೆ’ ಎಂದು ಅವರು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ನವೀಕೃತ ರೈಲು ನಿಲ್ದಾಣ, ಡಬ್ಲಿಂಗ್ ಸೇರಿ ₹1,122 ಕೋಟಿ ವೆಚ್ಚದ ಕಾಮಗಾರಿ ಹಾಗೂ ಜಲಜೀವನ ಮಿಷನ್ ಅಡಿ ಮಾಡಿದ ₹1,130 ಕೋಟಿಯ ಕಾಮಗಾರಿ ಸೇರಿ ಒಟ್ಟು ₹ 2,252 ಕೋಟಿ ವೆಚ್ಚದ ಯೋಜನೆಗಳನ್ನು ಜನರಿಗೆ ಅರ್ಪಿಸಲಿದ್ದಾರೆ’ ಎಂದೂ ಹೇಳಿದರು.

ಮಹದಾಯಿ ಕಾಮಗಾರಿಗೆ ಪ್ರಧಾನಿ ಏಕೆ ಚಾಲನೆ ನೀಡುತ್ತಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಮಹದಾಯಿ ವಿಚಾರದಲ್ಲಿ ಯಾರೂ ಆತಂಕ ಪಡಬೇಕಾಗಿಲ್ಲ. ಪ್ರಾಧಿಕಾರ ರಚನೆಗೆ ಕೇಂದ್ರ ಒಪ್ಪಿಗೆ ನೀಡಿದೆ. ಅದರಲ್ಲಿ ಕರ್ನಾಟಕ, ಮಹಾರಾಷ್ಟ್ರ, ಗೋವಾ ಹಾಗೂ ಕೇಂದ್ರದ ಪ್ರತಿನಿಧಿಗಳೂ ಇರುತ್ತಾರೆ. ನಿರೀಕ್ಷಿತ ಸಮಯಕ್ಕೆ ಕಾಮಗಾರಿ ಮಾಡುತ್ತೇವೆ. ಈ ಯೋಜನೆಯಿಂದ ಮುಳುಗಡೆಯಾಗುವ ಅರಣ್ಯ ಪ್ರದೇಶಕ್ಕೆ ಬದಲಾಗಿ, ಜಿಲ್ಲೆಯ ಅಥಣಿ ಬಳಿ ಭೂಮಿ ನೀಡಲಾಗುತ್ತಿದೆ’ ಎಂದರು.

‘ಸಿ.ಎಂ ಅವರಿಂದಲೇ ಶಿವಾಜಿ ಮೂರ್ತಿ ಲೋಕಾರ್ಪಣೆ’

‘ಬೆಳಗಾವಿ ತಾಲ್ಲೂಕಿನ ರಾಜಹಂಸಗಡ ಕೋಟೆ ಮೇಲೆ ಪ್ರತಿಷ್ಠಾಪಿಸಿದ ಛತ್ರಪತಿ ಶಿವಾಜಿ ಮಹಾರಾಜರ ಮೂರ್ತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಉದ್ಘಾಟನೆ ಮಾಡಲಿದ್ದಾರೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಗೋವಿಂದ ಕಾರಜೋಳ ಹೇಳಿದರು.

‘ಛತ್ರಿಪತಿ ಮೂರ್ತಿ ಲೋಕಾರ್ಪಣೆ ಮಾಡುವ ವಿಚಾರದಲ್ಲಿ ಕೆಲವರು ಭಂಡತನದಿಂದ ಮಾತನಾಡಿದ್ದಾರೆ. ಸರ್ಕಾರದ ಕಾರ್ಯಕ್ರಮಗಳನ್ನು ಸರ್ಕಾರವೇ ಲೋಕಾರ್ಪಣೆ ಮಾಡುತ್ತದೆ’ ಎಂದರು.

ಬಿಜೆಪಿಯ 130 ಪ್ರಗತಿ ರಥಗಳಿಗೆ ಚಾಲನೆ

ಬೆಂಗಳೂರು: ‘ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳನ್ನು ಜನರಿಗೆ ಮನವರಿಕೆ ಮಾಡಿಕೊಡಲು ರಾಜ್ಯದಾದ್ಯಂತ 130 ಪ್ರಗತಿ ರಥಗಳು ಸಂಚರಿಸಲಿವೆ. ಈ ರಥಗಳು ರಾಜ್ಯ ಸುತ್ತಿ ಬರುವಷ್ಟರಲ್ಲಿ ಬಿಜೆಪಿ ಸುನಾಮಿ ಸೃಷ್ಟಿಯಾಗಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಿಜೆಪಿ ರಾಜ್ಯ ಘಟಕ ಶುಕ್ರವಾರ ಆಯೋಜಸಿದ್ದ ಪ್ರಗತಿ ರಥ ಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬಿಜೆಪಿಗೆ ಸಮರ್ಥ ನಾಯಕತ್ವವಿದೆ. ಜನರು ಬಿಜೆಪಿಯೇ ಭರವಸೆ ಎಂದು ನಂಬಿದ್ದಾರೆ. ಹೆಣ್ಣುಮಕ್ಕಳು, ಬಡವರು, ಶಾಲಾ ಮಕ್ಕಳು ಎಲ್ಲರಿಗೂ ಮಾಹಿತಿ ತಲುಪಿಸಲಾಗುವುದು, ಜಾಗೃತಿ ಮೂಡಿಸಲಾಗುವುದು. ನವ ಕರ್ನಾಟಕದ ಮೂಲಕ ನವ ಭಾರತ ಕಟ್ಟುವ ಕೆಲಸ ಬಿಜೆಪಿ ಮಾಡಲಿದೆ ಎಂದರು.

ಪ್ರಧಾನಿ ಹೇಳಿದಂತೆ ಸಂಕಲ್ಪವೇ ಸಿದ್ಧಿ. ಕೋವಿಡ್ ಸಂಕಲ್ಪದ ನಂತರ ರಾಜ್ಯ, ಕೇಂದ್ರ ಸರ್ಕಾರಗಳು ಮಾಡಿದ ಜನಪರ ಕಾರ್ಯಗಳು, ರಾಜ್ಯದ ಯೋಜನೆಗಳಿಗೆ ಕೇಂದ್ರ ನೀಡಿದ ನೆರವು, ಅಭಿವೃದ್ಧಿ ಕಾರ್ಯಗಳಿಂದ ರಾಜ್ಯ ಪ್ರಗತಿಯ ಪಥದಲ್ಲಿ ಸಾಗುತ್ತಿದೆ. ಎಲ್ಲ ವರ್ಗದ ಜನರಿಗೂ ಸರ್ಕಾರ ಸ್ಪಂದಿಸಿದೆ. ಈ ಎಲ್ಲ ವಿಷಯಗಳನ್ನು, ಪಕ್ಷದ ಮುಂದಿನ ಸಂಕಲ್ಪವನ್ನು ರಾಜ್ಯದ ಹಳ್ಳಿಗಳಿಗೆ ತಲುಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಮತ್ತಿತರರು ಉಪಸ್ಥಿತರಿದ್ದರು.

‘ಬೊಮ್ಮಾಯಿಯಿಂದ ಸುಳ್ಳು ಆರೋಪ’

ಒಂದನೇ ಪುಟದಿಂದ...

‘ಅಧಿಕಾರಿಗಳು ವರದಿ ನೀಡುವಾಗ ಚುನಾವಣಾ ನೀತಿಸಂಹಿತೆ ಜಾರಿಗೆ ಬಂದಿತ್ತು. ಆದ್ದರಿಂದ ಶೆಟ್ಟರ್ ಕಡತವನ್ನು ಅನುಮೋದಿಸಿರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಹೈಕೋರ್ಟ್‌ನಲ್ಲಿ ಒಂದು ಅರ್ಜಿ ಬಾಕಿ ಇತ್ತು. ಸುಪ್ರೀಂ ಕೋರ್ಟ್ ನಿಗದಿಪಡಿಸಿದ ಮಾನದಂಡಗಳ ಆಧಾರದಲ್ಲಿ ಪರಿಷ್ಕೃತ ಯೋಜನೆ ರೂಪಿಸಿರುವುದಾಗಿ ಅಧಿಕಾರಿಗಳು ವಿವರಿಸಿದರು. ಆ ಬಳಿಕ ನಾನು ಕಡತಕ್ಕೆ ಅನುಮೋದನೆ ನೀಡಿದೆ’ ಎಂದು ಹೇಳಿದರು.

‘ಅದು ರೀ–ಡೂ ಅಲ್ಲ. ರೀ ಮಾಡಿಫೈಡ್ ಸ್ಕೀಂ. ನಮ್ಮ ಅವಧಿಯಲ್ಲಿ ಯಾವುದೇ ಜಮೀನಿನ ಡಿನೋಟಿಫಿಕೇಷನ್ ನಡೆದಿರಲಿಲ್ಲ. ಈ ಪ್ರಕರಣದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆಗಿನ ವಿರೋಧ ಪಕ್ಷದ ನಾಯಕ ಶೆಟ್ಟರ್ ಆರೋಪ ಮಾಡಿದ್ದರು. ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಕೆಂಪಣ್ಣ ಅಧ್ಯಕ್ಷತೆಯಲ್ಲಿ ವಿಚಾರಣಾ ಆಯೋಗ ರಚಿಸಿದ್ದೆ. ಯಾವ ಅಕ್ರಮವೂ ನಡೆದಿಲ್ಲ ಎಂದು ಆಯೋಗ ಹೇಳಿದೆ. ಇದೆಲ್ಲವೂ ತಿಳಿಯದವರಂತೆ ಬೊಮ್ಮಾಯಿ ಆರೋಪ ಮಾಡಿದ್ದಾರೆ’ ಎಂದರು.

‘ಕೆಂಪಣ್ಣ ಆಯೋಗದ ವರದಿ ಪರಿಶೀಲನೆಗಾಗಿ ನಿವೃತ್ತ ನ್ಯಾಯಮೂರ್ತಿ ಕೇಶವ ನಾರಾಯಣ ಅಧ್ಯಕ್ಷತೆಯಲ್ಲಿ ಹೈಕೋರ್ಟ್ ಸಮಿತಿ ನೇಮಿಸಿದೆ. ನಿವೃತ್ತ ಐಎಎಸ್ ಅಧಿಕಾರಿ ಸಂದೀಪ್ ದವೆ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ಎನ್. ಎಸ್. ಮೇಘರಿಕ್ ಸಮಿತಿಯಲ್ಲಿದ್ದಾರೆ. ವಿಷಯ ಈಗ ಸಮಿತಿಯ ಮುಂದಿದೆ. ಇಂತಹ ಸಂದರ್ಭದಲ್ಲಿ ಸುಳ್ಳು ಆರೋಪ ಮಾಡುವುದು ಸರಿಯೆ’ ಎಂದು ಕೇಳಿದರು.

‘868 ಎಕರೆ ಡಿನೋಟಿಫೈ ಆಗಿದೆ ಎಂದು ಮುಖ್ಯಮಂತ್ರಿಯೇ ಸದನಕ್ಕೆ ಸುಳ್ಳು ಹೇಳಿದ್ದಾರೆ. ಎಕರೆಗೆ ₹ 10 ಕೋಟಿಯಂತೆ ₹ 8,000 ಕೋಟಿ ಭ್ರಷ್ಟಾಚಾರ ನಡೆದಿದೆ ಎಂದು ಬಿಂಬಿಸಲು ಯತ್ನಿಸಿದ್ದಾರೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಏನೋ ನಡೆದಿದೆ ಎಂದು ಕಟ್ಟುಕತೆ ಸೃಷ್ಟಿಸುವ ಅವರ ಪ್ರಯತ್ನ ಯಶಸ್ವಿಯಾಗುವುದಿಲ್ಲ’ ಎಂದರು.

ಕಾನೂನು ಜ್ಞಾನ ಇಲ್ಲವೇ?

‘ಲೋಕಾಯುಕ್ತದಲ್ಲಿ ಭ್ರಷ್ಟಾಚಾರ ನಡೆದಿದ್ದ ಕಾರಣದಿಂದ ಇತರ ರಾಜ್ಯಗಳಲ್ಲಿ ಇರುವಂತೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ರಚಿಸಲಾಗಿತ್ತು. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕವೂ ಎಸಿಬಿ ಅಸ್ತಿತ್ವದಲ್ಲಿತ್ತು. ಹೈಕೋರ್ಟ್ ಆದೇಶದಂತೆ ಅದನ್ನು ರದ್ದು ಮಾಡಲಾಗಿದೆ. ಬಿಜೆಪಿ ಆಡಳಿತದಲ್ಲಿರುವ ಎಲ್ಲ ರಾಜ್ಯಗಳಲ್ಲೂ ಎಸಿಬಿ ಇದೆ. ಇಲ್ಲಿ ಮಾತ್ರ ಸತ್ಯ ಹರಿಶ್ಚಂದ್ರನ ಮೊಮ್ಮಕ್ಕಳ ರೀತಿ ವರ್ತಿಸುತ್ತಿದ್ದಾರೆ’ ಎಂದು ಸಿದ್ದರಾಮಯ್ಯ ಟೀಕಿಸಿದರು.

‘ನನ್ನ ವಿರುದ್ಧ ಸಲ್ಲಿಕೆಯಾಗಿದ್ದ 59 ದೂರುಗಳಲ್ಲಿದ್ದ ಆರೋಪಗಳ ಕುರಿತು ‘ಬಿ’ ವರದಿಗಳು ಬಂದಿವೆ. ಅದರ ವಿರುದ್ಧ ನ್ಯಾಯಾಲಯಕ್ಕೆ ಹೋಗಬೇಕಿತ್ತು. ಅದನ್ನು ಮಾಡದೇ ಈಗ ಎಲ್ಲರನ್ನೂ ಜೈಲಿಗೆ ಕಳಿಸುತ್ತೇವೆ ಎಂದು ಬಡಾಯಿ ಬಿಡುವುದನ್ನು ಜನ ನಂಬುವುದಿಲ್ಲ. ಮುಖ್ಯಮಂತ್ರಿಗೆ ಕಾನೂನಿನ ಜ್ಞಾನ ಇಲ್ಲವೆ’ ಎಂದು ಕೇಳಿದರು.

ವಸಂತನ ಆಗಮನಕ್ಕಾಗಿ... ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಮರಗಳು ಚಿಗುರೊಡೆಯುತ್ತಿದ್ದು ವಸಂತ ಋತುವಿನ ಆಗಮನವನ್ನು ಸೂಚಿಸುತ್ತಿವೆ –ಪ್ರಜಾವಾಣಿ ಚಿತ್ರ/ಬಿ.ಎಚ್.ಶಿವಕುಮಾರ್

ಡೆನ್ಮಾರ್ಕ್ ಪ್ರಶಸ್ತಿಯ ಅಂತಿಮ ಸುತ್ತಿಗೆ ಕುಡ್ಲದ ಜ್ಯೋತ್ಸ್ನಾ

ಪ್ರಜಾವಾಣಿ ವಾರ್ತೆ

ಮಂಗಳೂರು: ಡೆನ್ಮಾರ್ಕ್‌ನ ಅತಿ ಪ್ರತಿಭಾವಂತ ಯುವ ಸಲಹೆಗಾರ ಪ್ರಶಸ್ತಿಯ ಅಂತಿಮ ಹಂತಕ್ಕೆ ಆಯ್ಕೆಯಾಗಿರುವ ಐವರು ಸ್ಪರ್ಧಿಗಳಲ್ಲಿ ಮಂಗಳೂರಿನ ಜ್ಯೋತ್ಸ್ನಾ ಅಮೃತ್ ಕೂಡ ಒಬ್ಬರಾಗಿದ್ದಾರೆ.

ಡೆನ್ಮಾರ್ಕ್‌ನ ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಎಂಜಿನಿಯರ್ಸ್–ಎಫ್‌ಐಆರ್ ಸಂಸ್ಥೆಯು ಮಾ.2ರಂದು ಅಂತಿಮವಾಗಿ ಒಬ್ಬರನ್ನು ಪ್ರಶಸ್ತಿಗೆ ಆಯ್ಕೆ ಮಾಡುತ್ತದೆ.

ಕೋಪನ್‌ಹೇಗನ್ ರೈಲ್ವೆ ವಿಭಾಗದಲ್ಲಿ ಪ್ರಾಜೆಕ್ಟ್ ಮ್ಯಾನೇಜರ್ ಆಗಿರುವ ಜ್ಯೋತ್ಸ್ನಾ ಅವರು ಹಲವಾರು ರೈಲ್ವೆ ಯೋಜನೆಗಳಲ್ಲಿ ಉತ್ತಮ ಕಾರ್ಯನಿರ್ವಹಣೆ ಮಾಡಿ ಗಮನ ಸೆಳೆದಿದ್ದಾರೆ. ‘ಜಕಾರ್ತಾ ಮಾಸ್ ರ್‍ಯಾಪಿಡ್ ಟ್ರಾನ್ಸಿಟ್’ ರೈಲು ಯೋಜನೆಯಲ್ಲಿ ಅವರು ಮಾಡಿರುವ ಸಾಧನೆ ಗಮನಿಸಿ, ಅಂತಿಮ ಸುತ್ತಿಗೆ ಅವರನ್ನು ಆಯ್ಕೆ ಮಾಡಲಾಗಿದೆ.

ಜ್ಯೋತ್ಸ್ನಾ ಅಮೃತ್

ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ನೌಕಾಪಡೆಯ ತುಕಡಿಯನ್ನು ಮುನ್ನಡೆಸಿದ್ದ ದಿಶಾ ಅಮೃತ್ ಅವರ ಸಹೋದರಿ ಜ್ಯೋತ್ಸ್ನಾ, ಮೂಲತಃ ಮಂಗಳೂರಿನ ಬೋಳೂರು ತಿಲಕನಗರದವರು.

ಕಾಡಾನೆ ಸ್ಥಳಾಂತರದ ವೇಳೆ ಗಲಾಟೆ: ಏಳು ಜನರ ಬಂಧನ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ: ದಕ್ಷಿಣ ಕನ್ನಡ ಜಿಲ್ಲೆಯ ಕೊಂಬಾರು ಗ್ರಾಮದ ಅರಣ್ಯ ಪ್ರದೇಶದಲ್ಲಿ ಗುರುವಾರ ಸಂಜೆ ಕಾಡಾನೆ ಸೆರೆ ಹಿಡಿದು ಸ್ಥಳಾಂತರ ಮಾಡುವ ವೇಳೆ ಅರಣ್ಯ ಹಾಗೂ ಪೊಲೀಸ್ ಇಲಾಖೆ ವಾಹನಗಳ ಮೇಲೆ ಕಲ್ಲು ತೂರಾಟ ನಡೆಸಿದ ಆರೋಪದ ಮೇಲೆ ಏಳು ಮಂದಿಯನ್ನು ಕಡಬ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಕೊಂಬಾರು ಗ್ರಾಮದ ಕಮರಕಜ್ಜಿಮನೆ ಉಮೇಶ್, ರಾಜೇಶ್ ಕನ್ನಡ, ಜನಾರ್ದನ್ ರೈ, ಕೋಕಿಲ ನಂದ, ತೀರ್ಥಕುಮಾರ್, ಗಂಗಾಧರ ಗೌಡ, ಅಜಿತ್ ಕುಮಾರ್ ಬಂಧಿತರು.

ಕೊಂಬಾರು ಅರಣ್ಯದಲ್ಲಿ ಗುರುವಾರ ಸೆರೆ ಹಿಡಿದಿದ್ದ ಕಾಡಾನೆಯನ್ನು ವಾಹನದಲ್ಲಿರಿಸಿ, ತಿತಿಮತಿ ಕ್ಯಾಂಪ್‌ಗೆ ಬಿಡಲು ಹೊರಟ ವೇಳೆ ಸ್ಥಳೀಯ ಕೆಲವರು, ಆನೆಯನ್ನು ಕೊಂಡೊಯ್ಯುತ್ತಿದ್ದ ಲಾರಿಯನ್ನು ತಡೆದರು. ಹಿಡಿದಿರುವ ಆನೆಯನ್ನು ಇಲ್ಲಿಯೇ ನಿಲ್ಲಿಸಿ, ಇತರ ಕಾಡಾನೆಗಳನ್ನು ಸೆರೆಹಿಡಿದು ಒಟ್ಟಿಗೆ ಎಲ್ಲ ಆನೆಗಳನ್ನು ತೆಗೆದುಕೊಂಡು ಹೋಗಬೇಕು ಎಂದು ಪಟ್ಟು ಹಿಡಿದರು. ಇಲಾಖೆ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿ, ಕರ್ತವ್ಯದಲ್ಲಿದ್ದ ಪೊಲೀಸರು ಮತ್ತು ಅರಣ್ಯ ಸಿಬ್ಬಂದಿ ಮೇಲೆ ಕಲ್ಲು ತೂರಾಟ ನಡೆಸಿದ್ದರು. ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ ಪೊಲೀಸರಿಗೆ ಗಾಯಗಳಾಗಿವೆ. ಆರೋಪಿಗಳು ಸ್ಥಳದಲ್ಲಿ ನಿಲ್ಲಿಸಿದ್ದ ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ವಾಹನಗಳ ಮೇಲೂ ಕಲ್ಲು ತೂರಾಟ ಮಾಡಿ ವಾಹನಗಳನ್ನು ಜಖಂ ಮಾಡಿದ್ದಾರೆ ಎಂದು ಪಂಜ ಉಪವಲಯ ಅರಣ್ಯಾಧಿಕಾರಿ ಪೊಲೀಸರಿಗೆ ದೂರು ನೀಡಿದ್ದರು.

ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಲ್ಲು ತೂರಾಟದಲ್ಲಿ ಅರಣ್ಯ ಇಲಾಖೆಯ ಒಬ್ಬರು ಗಾರ್ಡ್ ಮತ್ತು ಡಿಆರ್‌ಎಫ್‌ಒ ಒಬ್ಬರು ಗಾಯಗೊಂಡಿದ್ದರು. ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದಾರೆ. ಜನವಸತಿ ಪ್ರದೇಶಕ್ಕೆ ಬರುವ ಆನೆಗಳನ್ನು ಸೆರೆ ಹಿಡಿಯುವ ತನಕ ಕಾರ್ಯಾಚರಣೆ ಮುಂದುವರಿಯಲಿದೆ’ ಎಂದು ಡಿಸಿಎಫ್ ಡಾ. ದಿನೇಶ್‌ಕುಮಾರ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ರಾಜ್ಯಮಟ್ಟದ ಭಜನಾ ಸ್ಪರ್ಧೆ ಮಾರ್ಚ್ 23ರಿಂದ

ಹುಬ್ಬಳ್ಳಿ: ಇಲ್ಲಿನ ಸಿದ್ಧಾರೂಢ ಮಠದಲ್ಲಿ ಮಾರ್ಚ್ 23ರಿಂದ 28ರ ವರೆಗೆ ರಾಜ್ಯಮಟ್ಟದ ಭಜನಾ ಸ್ಪರ್ಧೆ ಆಯೋಜಿಸಲಾಗಿದೆ.

‘ಮಾರ್ಚ್ 22ರ ಒಳಗಾಗಿ ಭಜನಾ ತಂಡಗಳು ಮಠದ ಟ್ರಸ್ಟ್ ಕಮಿಟಿ ಕಾರ್ಯಾಲಯದಲ್ಲಿ ನೋಂದಣಿ ಮಾಡಿಕೊಳ್ಳಬೇಕು’ ಎಂದು ಭಜನಾ ಸ್ಪರ್ಧೆಯ ಅಧ್ಯಕ್ಷ ಶಾಮಾನಂದ ಪೂಜೇರಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

‘ಮೊದಲ ಬಹುಮಾನ ₹ 95 ಸಾವಿರ, ಎರಡನೇ ಬಹುಮಾನ ₹ 75 ಸಾವಿರ, ಮೂರನೇ ಬಹುಮಾನ ₹ 65 ಸಾವಿರ ಹಾಗೂ ಹತ್ತು ಸಮಾಧಾನಕರ ಬಹುಮಾನ (ತಲಾ ₹ 8,500) ನೀಡಲಾಗುವುದು. 16 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ತಂಡಕ್ಕೆ ತಲಾ ₹ 9,500 ಹಾಗೂ ಒಂದು ಅತ್ಯುತ್ತಮ ಮಹಿಳಾ ಭಜನಾ ತಂಡಕ್ಕೆ ₹ 9,500 ನೀಡಲಾಗುವುದು’ ಎಂದು ಅವರು ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ: 96206 93060, 98801 69881 ಸಂಪರ್ಕಿಸಬಹುದು.

ಪ್ರತಿಭಾ ಪಾಟೀಲ್ ಪತಿ ನಿಧನ

ಪುಣೆ (ಪಿಟಿಐ): ಮಾಜಿ ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಅವರ ಪತಿ ದೇವಿಸಿಂಗ್ ರಾಮ್‌ಸಿಂಗ್ ಶೇಖಾವತ್ (89) ಇಲ್ಲಿಯ ಆಸ್ಪತ್ರೆಯಲ್ಲಿ ಶುಕ್ರವಾರ ಬೆಳಿಗ್ಗೆ ಹೃದಯಾಘಾತದಿಂದ ನಿಧನರಾದರು. ಕಳೆದ ಕೆಲವು ದಿನಗಳ ಹಿಂದೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ದೇವಿಸಿಂಗ್ ಅವರು ಪತ್ನಿ ಪ್ರತಿಭಾ ಪಾಟೀಲ್ ಮತ್ತು ಇಬ್ಬರು ಮಕ್ಕಳನ್ನು ಅಗಲಿದ್ದಾರೆ.

ಶೇಖಾವತ್ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ, ಮಾಜಿ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಸೇರಿದಂತೆ ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಶಿಂದೆ ಪುತ್ರನ ಮೇಲಿನ ಆರೋಪ: ರಾವುತ್ ವಿರುದ್ಧ ಮೊಕದ್ದಮೆ

ಮುಂಬೈ(ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆ ಪುತ್ರ ಶ್ರೀಕಾಂತ್ ಶಿಂಧೆಯಿಂದ ಜೀವ ಬೆದರಿಕೆ ಇದೆ ಎಂದು ಆರೋಪಿಸಿದ್ದ ಶಿವಸೇನಾ (ಯುಬಿಟಿ) ಮುಖ್ಯಸ್ಥ ಸಂಜಯ್ ರಾವುತ್ ವಿರುದ್ಧ ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.



ಸಂಜಯ್ ರಾವುತ್

ಶಿವಸೇನೆಯ ಬೀಡ್ ಜಿಲ್ಲಾ ಘಟಕದ ಮುಖ್ಯಸ್ಥರು ಗುರುವಾರ ನೀಡಿದ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿದೆ ಎಂದರು. ರಾವತ್ ಅವರ ಆರೋಪಕ್ಕೆ ಸಂಬಂಧಿಸಿದಂತೆ ಎರಡನೇ ಎಫ್‌ಐಆರ್ ಇದಾಗಿದೆ.

ವಿಷ ಕುಡಿದಿದ್ದ ನಿವೃತ್ತ ನೌಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿಂಚಣಿ ಸೌಲಭ್ಯ ಕಲ್ಪಿಸಬೇಕು’ ಎಂದು ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಲಾಗುತ್ತಿದ್ದ ಪ್ರತಿಭಟನೆಯಲ್ಲಿ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ್ದ ಸಿದ್ದಯ್ಯ ಹಿರೇಮಠ (67) ಎಂಬುವವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ.



ಸಿದ್ದಯ್ಯ ಹಿರೇಮಠ

ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲು ನಿವಾಸಿ ಸಿದ್ದಯ್ಯ, ಸ್ಥಳೀಯ ಶಾಲೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು. ಅವರಿಗೆ ಪುತ್ರ ಹಾಗೂ ನಾಲ್ವರು ಪುತ್ರಿಯರಿದ್ದಾರೆ. ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮೊದಲ ದಿನದಿಂದಲೇ ಪಾಲ್ಗೊಂಡಿದ್ದರು.

ಮುಖ್ಯಾಂಶಗಳು
- ಪಿಂಚಣಿಗಾಗಿ ಪ್ರತಿಭಟನೆ
- ಮತ್ತೊಬ್ಬರ ಆರೋಗ್ಯ ಗಂಭೀರ

ಪ್ರತಿಭಟನೆ ಸ್ಥಳದಲ್ಲಿ ಗುರುವಾರ ಹಾಜರಿದ್ದ ಸಿದ್ದಯ್ಯ ಹಿರೇಮಠ ಹಾಗೂ ವೆಂಕಟರಾಜು, ‘ಸರ್ಕಾರ ನಮ್ಮ ಬೇಡಿಕೆ ಈಡೇರಿಸುತ್ತಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿ ವಿಷ ಕುಡಿದಿದ್ದರು. ಅವರಿಬ್ಬರನ್ನೂ ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದರು. ಇದೀಗ ಸಿದ್ದಯ್ಯ ಮೃತಪಟ್ಟಿದ್ದು, ವೆಂಕಟರಾಜು ಆರೋಗ್ಯ ಸ್ಥಿತಿಯೂ ಗಂಭೀರವಾಗಿದೆ.

ಪ್ರತಿಭಟನೆ ಕೈಬಿಟ್ಟ ನೌಕರರು

141 ದಿನಗಳಿಂದ ನಡೆಸುತ್ತಿದ್ದ ಪ್ರತಿಭಟನೆಯನ್ನು ನೌಕರರು ಶುಕ್ರವಾರ ಕೈಬಿಟ್ಟಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಸಂಘದ ಮುಖಂಡರ ನಿಯೋಗ ಭೇಟಿ ಆಗಿತ್ತು. ಪಿಂಚಣಿ ನೀಡುವ ಬಗ್ಗೆ ಬೊಮ್ಮಾಯಿ ಭರವಸೆ ನೀಡಲಿಲ್ಲ. ಇದರಿಂದ ಆಕ್ರೋಶಗೊಂಡ ನೌಕರರು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಹೊರಟಿದ್ದರು.

ಉದ್ಯಾನದ ಬಳಿ ನೌಕರನ್ನು ತಡೆದ ಪೊಲೀಸರು, ವಶಕ್ಕೆ ಪಡೆದು ಸಿಎಆರ್ ಮೈದಾನಕ್ಕೆ ಕರೆದೊಯ್ದರು. ಕೆಲ ಗಂಟೆಗಳ ಬಳಿಕ ಎಲ್ಲರನ್ನೂ ಬಿಟ್ಟು ಕಳುಹಿಸಿದರು.

‘ಪಿಂಚಣಿ ನೀಡಲು ಆಗುವುದಿಲ್ಲವೆಂದು ಮುಖ್ಯಮಂತ್ರಿ ನೇರವಾಗಿ ಹೇಳಿದ್ದಾರೆ. ಪ್ರತಿಭಟನೆ ಕೈಬಿಟ್ಟು ಜಾಗ ಖಾಲಿ ಮಾಡುವಂತೆ ಪೊಲೀಸರೂ ಒತ್ತಡ ಹಾಕುತ್ತಿದ್ದರು. ಹೀಗಾಗಿ, ಪ್ರತಿಭಟನೆ ಕೈಬಿಡುವ ಅನಿವಾರ್ಯತೆ ಬಂತು’ ಎಂದು ಸಂಘದ ಅಧ್ಯಕ್ಷ ಜಿ. ಹನುಮಂತಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ಆರ್‌ಎಸ್‌ಎಸ್ ಸಹಕಾರ್ಯವಾಹ ಕೃಷ್ಣ ಗೋಪಾಲ್ ಹೇಳಿಕೆ

‘ಪಾಕ್ ನೆರವಿಗೆ ಭಾರತ ಧಾವಿಸಲಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಭಾರತವು ಪಾಕಿಸ್ತಾನದ ರಕ್ಷಣೆಗೆ ಧಾವಿಸಬೇಕು ಮತ್ತು ಪಾಕಿಸ್ತಾನವೂ ಭಾರತದ ನೆರವು ಯಾಚಿಸಬೇಕಿತ್ತು’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸಹಕಾರ್ಯವಾಹ ಕೃಷ್ಣ ಗೋಪಾಲ್ ಅವರು ಹೇಳಿದ್ದಾರೆ.

ಖಾಸಗಿ ಸುದ್ದಿವಾಹಿನಿಯ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಗೋಪಾಲ್, ‘ಸರ್ವೇ ಭವಂತು ಸುಖಿನಃ’ ಎನ್ನುವ ತತ್ವವನ್ನ ಭಾರತವು ಅನುಸರಿಸಬೇಕು. ನಮ್ಮ ನೆರೆಹೊರೆಯವರು ಸೇರಿದಂತೆ ಯಾರೂ ಹಸಿವಿನಿಂದ ಮಲಗಬಾರದು. ಭಾರತವು ಪಾಕಿಸ್ತಾನಕ್ಕೆ ಗೋಧಿಯನ್ನು ಕಳುಹಿಸುತ್ತಿದ್ದರೆ, ನೆರೆಯ ದೇಶವಾಗಿ ಅದು ಭಾರತದ ಮೇಲಿನ ದಾಳಿಯನ್ನು ಮುಂದುವರಿಸಿದೆ’ ಎಂದರು.

‘ಎಲ್ಲರೂ ಸಂತೋಷವಾಗಿರಬೇಕು. ಜಗತ್ತಿನಲ್ಲಿ ಯಾರೂ ಹಸಿವಿನಿಂದ ಮಲಗಬಾರದು. ಪಾಕಿಸ್ತಾನವು ಇಂದು ಸಂಕಷ್ಟದಲ್ಲಿದೆ. ಆದರೂ ಅದು ಭಾರತದ ಮೇಲಿನ ದಾಳಿಯನ್ನು ನಿಲ್ಲಿಸಿಲ್ಲ. ಒಂದು ವೇಳೆ ಪಾಕಿಸ್ತಾನವು ಭಾರತಕ್ಕೆ ನೆರವು ಕೇಳಿದರೆ, ನಾವು ಯಾವುದೇ ಪ್ರಶ್ನೆಗಳಿಲ್ಲದೇ ಅದರ ನೆರವಿಗೆ ಧಾವಿಸುತ್ತೇವೆ. ಇದು ಭಾರತದ ಸನಾತನ ಸಂಪ್ರದಾಯ. ಕೋವಿಡ್ ಸಂದರ್ಭದಲ್ಲಿ ಆ ದೇಶಕ್ಕೆ ತುರ್ತಾಗಿ ಬೇಕಾಗಿದ್ದ ಔಷಧಿಗಳು ಮತ್ತು ಲಸಿಕೆಗಳನ್ನು ನಾವು ತಲುಪಿಸಿದ್ದೆವು. ಅಂತೆಯೇ ಗೋಧಿಯನ್ನೂ ತಲುಪಿಸಿದ್ದೇವೆ. ಭಾರತವು ಹೆಚ್ಚುವರಿ ಪ್ರಮಾಣದಲ್ಲಿ ಗೋಧಿ ಹೊಂದಿದೆ. ಆದರೂ ಪಾಕಿಸ್ತಾನ ತನ್ನ ಮೊಂಡುತನ ಬಿಡಲು ಸಿದ್ಧವಿಲ್ಲ. ಅದು ಅವರ ಸಮಸ್ಯೆ’ ಎಂದು ಗೋಪಾಲ್ ಹೇಳಿದ್ದಾರೆ.

ಪಾಕಿಸ್ತಾನ ನೆರವು ಕೇಳದಿದ್ದರೂ ಭಾರತವು ಆ ದೇಶಕ್ಕೆ ಸಹಾಯ ಮಾಡುತ್ತದೆಯೇ ಎನ್ನುವ ಪ್ರಶ್ನೆಗೆ, ‘ಭಾರತವು 1.5 ಲಕ್ಷ ಟನ್‌ಗಳಷ್ಟು ಹೆಚ್ಚುವರಿ ಗೋಧಿಯನ್ನು ಉತ್ಪಾದಿಸುತ್ತದೆ ಮತ್ತು ಪಾಕಿಸ್ತಾನಕ್ಕೆ ಗೋಧಿಯನ್ನು ನೀಡಬಹುದು, ಅಲ್ಲಿ ಅದನ್ನು ಪ್ರಸ್ತುತ ಒಂದು ಕಿಲೋಗೆ ₹ 250ರಂತೆ ಮಾರಾಟ ಮಾಡಲಾಗುತ್ತಿದೆ’ ಎಂದು ಉತ್ತರಿಸಿದರು.

‘ಪಾಕಿಸ್ತಾನವು ತನ್ನ ಮಾರ್ಗವನ್ನು ಸರಿಪಡಿಸಿಕೊಳ್ಳಬೇಕು. ನಂಬಿಕೆ ದ್ರೋಹದ ಆಧಾರದ ಮೇಲೆ ಪಾಕಿಸ್ತಾನವು ರಚನೆಯಾಗಿದೆ ಎಂಬುದಾಗಿ ಆರ್‌ಎಸ್‌ಎಸ್ ನಂಬುತ್ತದೆ. ಇಲ್ಲಿ(ಭಾರತ) ಹಿಂದೂಗಳೊಂದಿಗೆ ಇರಲು ಸಾಧ್ಯವಿಲ್ಲ ಎಂದು ಜಿನ್ನಾ ಹೇಳಿದ್ದರು. ಆದರೆ, ಅವರ ತಪ್ಪು ಕಲ್ಪನೆ. ಏಕೆಂದರೆ ವಿಭಜನೆಯ ನಂತರವೂ ಭಾರತದಲ್ಲಿ ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ನೆಮ್ಮದಿಯಿಂದ ಬದುಕುತ್ತಿದ್ದಾರೆ, ವಿಭಜನೆಯಾದಾಗ ಭಾರತದಲ್ಲಿ 3.5 ಕೋಟಿ ಮುಸ್ಲಿಮರಿದ್ದರೆ, ಈಗ 14 ಕೋಟಿಗೂ ಹೆಚ್ಚು ಜನರಿದ್ದಾರೆ. ಆದರೆ ಪಾಕಿಸ್ತಾನದಲ್ಲಿ ಆಗ ಹಿಂದೂಗಳು ಶೇ 11ರಷ್ಟಿದ್ದರು. ಈಗ ಅವರ ಸಂಖ್ಯೆ ಶೇ 1ಕ್ಕಿಂತಲೂ ಕಡಿಮೆಯಾಗಿದೆ’ ಎಂದೂ ಗೋಪಾಲ್ ಹೇಳಿದ್ದಾರೆ.

‘ನೀಟ್‌-ಪಿಜಿ ಪರೀಕ್ಷೆ ಮುಂದೂಡಿದರೆ ಪರ್ಯಾಯ ದಿನಾಂಕ ಲಭ್ಯವಿಲ್ಲ’

ನವದೆಹಲಿ (ಪಿಟಿಐ): ಮಾರ್ಚ್ 5 ರಂದು ನಿಗದಿಯಾಗಿರುವ ನೀಟ್‌-ಪಿಜಿ ಪರೀಕ್ಷೆಗೆ ಸುಮಾರು 2.09 ಲಕ್ಷ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದು, ಪರೀಕ್ಷೆ ಮುಂದೂಡಿದರೆ ಮುಂದಿನ ದಿನಗಳಲ್ಲಿ ನಡೆಸಲು ಯಾವುದೇ ಪರ್ಯಾಯ ದಿನಾಂಕ ಲಭ್ಯವಿಲ್ಲ ಎಂದು ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇ) ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್)-ಪಿಜಿ ಪರೀಕ್ಷೆ ಮುಂದೂಡುವಂತೆ ಕೋರಿ ಸಲ್ಲಿಸಲಾಗಿದ್ದ ಎರಡು ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಸ್.ಆರ್.ಭಟ್ ಮತ್ತು ದೀಪಂಕರ್ ದತ್ತಾ ಪೀಠದ ಮುಂದೆ ಈ ಹೇಳಿಕೆ ನೀಡಲಾಗಿದೆ.

ಅರ್ಜಿದಾರರು ಎತ್ತಿರುವ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವಂತೆ ಎನ್‌ಬಿಇ ಪರ ಹಾಜರಾದ ವಕೀಲರಾದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರಿಗೆ ಸೂಚಿಸಿದ ಕೋರ್ಟ್, ಈ ಸಂಬಂಧ ಯಾವುದೇ ಆದೇಶ ಹೊರಡಿಸುವುದಿಲ್ಲ ಎಂದು ತಿಳಿಸಿದೆ.

ಮುಂದಿನ ವಿಚಾರಣೆಯನ್ನು ಫೆ.27 ಕ್ಕೆ ಮುಂದೂಡಿದೆ.

ಇಂಟರ್ನ್‌ಶಿಪ್‌ಗೆ ಕಟ್-ಆಫ್ ದಿನಾಂಕ ವಿಸ್ತರಿಸಿರುವುದರಿಂದ ಕೌನ್ಸೆಲಿಂಗ್ ಅನ್ನು ಆ. 11 ರ ನಂತರ ನಡೆಸಬೇಕಾಗಿದೆ. ಹಾಗಾಗಿ ಅರ್ಜಿದಾರರು ಪರೀಕ್ಷೆ ಮುಂದೂಡಬೇಕೆಂದು ಕೋರಿದ್ದಾರೆ.

‘ಈ ಪರೀಕ್ಷೆಗೆ ಕಾಯುತ್ತಿರುವವರಿಗೆ, ಇದು ಮಾನಸಿಕ ಹಿಂಸೆಯಾಗಿದೆ. ನಾವು ನ್ಯಾಯಾಂಗ ಪರೀಕ್ಷೆ ಮುಂದೂಡಿದಾಗ, ಅದಕ್ಕಾಗಿ ತಯಾರಿ ನಡೆಸುತ್ತಿರುವ ಅಭ್ಯರ್ಥಿಗಳಿಗೆ ವೇದನೆ ಇರುತ್ತದೆ’ ಎಂದು ಕೋರ್ಟ್ ಹೇಳಿದೆ.

13 ಅರ್ಜಿದಾರರು ಸುಪ್ರೀಂ ಕೋರ್ಟ್ ಸಂಪರ್ಕಿಸಿದ್ದರೂ, ಅವರು ಎತ್ತಿದ ವಿಷಯವು ಸುಮಾರು 45,000 ಅಭ್ಯರ್ಥಿಗಳ ಮೇಲೆ ಪರಿಣಾಮ ಬೀರುತ್ತದೆ ಎಂದು ಅರ್ಜಿದಾರರ ಪರ ಹಿರಿಯ ವಕೀಲ ಗೋಪಾಲ್ ಶಂಕರನಾರಾಯಣನ್ ತಿಳಿಸಿದರು.

ಹಿರಿಯ ವಕೀಲ ಮುಕುಲ್ ರೋಹಟಗಿ, ವಿವಿಧ ರಾಜ್ಯಗಳು ಇಂಟರ್ನ್‌ಶಿಪ್‌ಗೆ ವಿಭಿನ್ನ ವೇಳಾಪಟ್ಟಿ ಹೊಂದಿರುವುದರಿಂದ ಈ ಸಮಸ್ಯೆ ಉದ್ಭವಿಸಿದೆ ಎಂದು ಅವರು ಹೇಳಿದರು.

ವರೀಂದರ್ ಸಿಂಗ್ ಅಪಹರಣ, ಥಳಿತ ಆರೋಪ

ಅಮೃತ್‌ಪಾಲ್ ಸಿಂಗ್ ಆಪ್ತ ಬಿಡುಗಡೆ

ಅಮೃತಸರ: ಕ್ರಾಂತಿಕಾರಿ ವಿಚಾರಗಳ ಬೋಧಕ ಅಮೃತ್‌ಪಾಲ್ ಸಿಂಗ್ ಅವರ ಆಪ್ತ ಲವ್‌ಪ್ರೀತ್ ಸಿಂಗ್ ತೂಫಾನ್ ಅವರನ್ನು ಶುಕ್ರವಾರ ಜೈಲಿನಿಂದ ಬಿಡುಗಡೆಗೊಳಿಸಲಾಗಿದೆ.

ರೂಪನಗರ ಜಿಲ್ಲೆಯ ಚಮ್ಕೌರ್ ಸಾಹಿಬ್ ನಿವಾಸಿ ವರೀಂದರ್ ಸಿಂಗ್ ಎಂಬುವವರನ್ನು ಅಪಹರಿಸಿ, ಥಳಿಸಿರುವ ಆರೋಪದಲ್ಲಿ ಇವರನ್ನು ಬಂಧಿಸಲಾಗಿತ್ತು.

ಅಜ್ನಾಲಾದ ನ್ಯಾಯಾಲಯವು ಬಿಡುಗಡೆಗೆ ಆದೇಶ ನೀಡಿದ ಕೆಲವೇ ಗಂಟೆಗಳಲ್ಲಿ ಲವ್‌ಪ್ರೀತ್ ಅವರನ್ನು ಅಮೃತಸರದ ಕೇಂದ್ರೀಯ ಕಾರಾಗೃಹದಿಂದ ಬಿಡುಗಡೆಗೊಳಿಸಲಾಯಿತು.

ಅಪರಾಧ ನಡೆದ ಸ್ಥಳದಲ್ಲಿ ಲವ್‌ಪ್ರೀತ್ ಇರಲಿಲ್ಲ ಎಂಬುದು ತನಿಖೆಯಿಂದ ತಿಳಿದು ಬಂದಿರುವುದರಿಂದ ಅವರನ್ನು ಬಿಡುಗಡೆಗೊಳಿಸಬೇಕೆಂದು ಕೋರಿ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ‘ಸುಳ್ಳು ಮೊಕದ್ದಮೆ ದಾಖಲಿಸಿ ಲವ್‌ಪ್ರೀತ್ ಅವರನ್ನು ಜೈಲಿಗೆ ಹಾಕಲಾಗಿತ್ತು’ ಎಂದು ಅಮೃತ್ ಪಾಲ್ ಆರೋಪಿಸಿದ್ದಾರೆ.

ಲವ್‌ಪ್ರೀತ್ ಬಿಡುಗಡೆಗೆ ಆಗ್ರಹಿಸಿ ಖಲಿಸ್ತಾನ ಪರ ಸಹಾನುಭೂತಿ ಹೊಂದಿರುವ ಅಮೃತ್‌ಪಾಲ್ ಅವರ ಬೆಂಬಲಿಗರು ಗುರುವಾರ ಅಜ್ನಾಲಾ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದ್ದರು. ಖಡ್ಗ ಮತ್ತು ಬಂದೂಕುಗಳನ್ನು ಹಿಡಿದಿದ್ದ ಪ್ರತಿಭಟನಕಾರರು ಬ್ಯಾರಿಕೇಡ್‌ಗಳನ್ನು ದಾಟಿ ಠಾಣೆಗೆ ನುಗ್ಗಿದ್ದರು.

ಅಮೃತಸರದ ಕೇಂದ್ರೀಯ ಕಾರಾಗೃಹದಿಂದ ಲವ್‌ಪ್ರೀತ್ ಸಿಂಗ್ ಅವರು ಶುಕ್ರವಾರ ಹೊರಬಂದರು —ಪಿಟಿಐ ಚಿತ್ರ

‘ಹೇಡಿತನದ ವರ್ತನೆ’

(ಚಂಡೀಗಢ ವರದಿ): ಪೊಲೀಸ್ ಠಾಣೆಗೆ ನುಗ್ಗಿದ ಪ್ರತಿಭಟನಕಾರರು ಪವಿತ್ರ ಗುರು ಗ್ರಂಥ್ ಸಾಹಿಬ್ ಅನ್ನು ಗುರಾಣಿಯಂತೆ ಬಳಸಿಕೊಂಡು, ಪೊಲೀಸರ ಮೇಲೆ ಹಲ್ಲೆ ನಡೆಸಿದ್ದಾರೆ. ಇದು ಹೇಡಿತನದ ವರ್ತನೆ ಎಂದು ಪಂಜಾಬ್ ಡಿಜಿಪಿ ಗೌರವ್ ಯಾದವ್ ಹೇಳಿದ್ದಾರೆ.

ಶಾಂತಿಯುತವಾದ ಪ್ರತಿಭಟನೆಗೆ ಅನುಮತಿ ನೀಡಿದ್ದೆವು ಆದರೆ ಅವರು ಆಯುಧಗಳನ್ನು ಹಿಡಿದು ಮುತ್ತಿಗೆ ಹಾಕಿದ್ದಾರೆ ಎಂದೂ ತಿಳಿಸಿದ್ದಾರೆ.

ಪ್ರತಿಭಟನಕಾರರೊಂದಿಗೆ ನಡೆದಿದ್ದ ಘರ್ಷಣೆಯಲ್ಲಿ ಆರು ಮಂದಿ ಪೊಲೀಸರು ಗಾಯಗೊಂಡಿದ್ದರು.

ಕೋವಿಡ್ ಲಸಿಕೆ: 34 ಲಕ್ಷಕ್ಕೂ ಹೆಚ್ಚು ಜನರ ರಕ್ಷಣೆ

ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಅಧ್ಯಯನ ವರದಿಯಲ್ಲಿ ಉಲ್ಲೇಖ

ನವದೆಹಲಿ (ಪಿಟಿಐ): ಭಾರತದಲ್ಲಿ ದೇಶ ವ್ಯಾಪಿ ಕೋವಿಡ್ ಲಸಿಕೆ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ 34 ಲಕ್ಷಕ್ಕೂ ಅಧಿಕ ಜನರ ಪ್ರಾಣವನ್ನು ಉಳಿಸಲಾಗಿದೆ ಎಂದು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಪ್ರಕಟಿಸುವ ವರದಿಯಲ್ಲಿ ಹೇಳಲಾಗಿದೆ.

ಅಲ್ಲದೇ, ದೇಶದ ಆರ್ಥಿಕ ಕ್ಷೇತ್ರದಲ್ಲಿನ ನಷ್ಟವನ್ನು ತಡೆಯಲು ಸಹ ಈ ಲಸಿಕೆ ಕಾರ್ಯಕ್ರಮ ನೆರವಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಇನ್‌ಸ್ಟಿಟ್ಯೂಟ್ ಫಾರ್ ಕಾಂಪಿಟೇಟಿವ್‌ನೆಸ್ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ಈ ಕುರಿತು ಅಧ್ಯಯನ ಕೈಗೊಂಡಿದ್ದವು.

ಇನ್‌ಸ್ಟಿಟ್ಯೂಟ್ ಫಾರ್ ಕಾಂಪಿಟೇಟಿವ್‌ನೆಸ್ ಮತ್ತು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ಯುಎಸ್–ಏಷ್ಯಾ ಟೆಕ್ನಾಲಜಿ ಮ್ಯಾನೇಜ್‌ಮೆಂಟ್ ಸೆಂಟರ್ ಜಂಟಿಯಾಗಿ ವರ್ಚುವಲ್ ವಿಧಾನದಲ್ಲಿ ಶುಕ್ರವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯಾ ಅವರು ಈ ಅಧ್ಯಯನ ವರದಿಯನ್ನು ಬಿಡುಗಡೆ ಮಾಡಿದರು.

‘2020ರ ಜನವರಿಯಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಕೋವಿಡ್–19 ಅನ್ನು ಸಾರ್ವಜನಿಕ ಆರೋಗ್ಯ ತುರ್ತುಪರಿಸ್ಥಿತಿ ಎಂಬುದಾಗಿ ಘೋಷಿಸಿತು. ಆದರೆ, ಈ ಘೋಷಣೆಗೂ ಮುನ್ನವೇ ಭಾರತದಲ್ಲಿ ಈ ಸೋಂಕು ಕಾಯಿಲೆಯ ನಿರ್ವಹಣೆಗೆ ಸಂಬಂಧಿಸಿ ವಿವಿಧ ಆಯಾಮಗಳಲ್ಲಿ ಕೈಗೊಳ್ಳ ಬೇಕಾದ ಕ್ರಮಗಳ ಕುರಿತು ಸಿದ್ಧತೆಗಳು ನಡೆಯುತ್ತಿದ್ದವು’ ಎಂದು ಸಚಿವ ಮಾಂಡವೀಯಾ ಹೇಳಿದರು.

ದೇಶದಲ್ಲಿ ಕೊರೊನಾ ಸೋಂಕು ಪ್ರಸರಣ ತಡೆಯುವಲ್ಲಿ ಕಂಟೇನ್‌ಮೆಂಟ್ ವಲಯಗಳ ರಚನೆಯು ವಹಿಸಿದ್ದ ಮಹತ್ವದ ಪಾತ್ರ ಕುರಿತು ಅಧ್ಯಯನ ವರದಿಯಲ್ಲಿ ಚರ್ಚಿಸಲಾಗಿದೆ.

ಸೋಂಕಿತರ ಸಂಪರ್ಕಕ್ಕೆ ಬಂದವರ ಪತ್ತೆ, ಸಾಮೂಹಿಕ ಪರೀಕ್ಷೆ, ಹೋಂ ಕ್ವಾರಂಟೈನ್, ಆರೋಗ್ಯಕ್ಷೇತ್ರ ಮೂಲಸೌಕರ್ಯಗಳನ್ನು ಹೆಚ್ಚಿಸುವುದು, ಜಿಲ್ಲೆ, ರಾಜ್ಯದಿಂದ ಹಿಡಿದು ಕೇಂದ್ರದವರೆಗೆ ಸಂಬಂಧಪಟ್ಟ ಇಲಾಖೆಗಳ ನಡುವಿನ ಸಮನ್ವಯದ ಫಲವಾಗಿ ಸೋಂಕು ಪ್ರಕರಣಕ್ಕೆ ಪರಿಣಾಮಕಾರಿಯಾಗಿ ಕಡಿವಾಣ ಹಾಕಲು ಸಾಧ್ಯವಾಯಿತು ಎಂಬ ಅಂಶದ ಬಗ್ಗೆ ವರದಿಯಲ್ಲಿ ಒತ್ತು ನೀಡಲಾಗಿದೆ.

ಹಿಮರಾಶಿ...

ರುದ್ರಪ್ರಯಾಗ್ ಜಿಲ್ಲೆಯ ಕೇದಾರನಾಥ ಕಣಿವೆಯಿಂದ ಕಾರ್ಮಿಕರು ಶುಕ್ರವಾರ ಹಿಮ ತೆರವುಗೊಳಿಸುತ್ತಿರುವ ದೃಶ್ಯ ಪಿಟಿಐ . ಚಿತ್ರ

ನ್ಯಾಯಾಲಯಕ್ಕೆ ಹಾಜರಾದ ಯಾಸಿನ್ ಮಲಿಕ್

ಜಮ್ಮು(ಪಿಟಿಐ): ಜಮ್ಮು–ಕಾಶ್ಮೀರ ಲಿಬರೇಷನ್ ಫ್ರಂಟ್ ಮುಖ್ಯಸ್ಥ ಯಾಸಿನ್ ಮಲಿಕ್‌ನನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಶುಕ್ರವಾರ ಇಲ್ಲಿನ ವಿಶೇಷ ನ್ಯಾಯಾಲಯದ ಎದುರು ವಿಚಾರಣೆಗೆ ಹಾಜರುಪಡಿಸಲಾಗಿತ್ತು.

ಈ ವೇಳೆ ಮುಫ್ತಿ ಮಹಮ್ಮದ್ ಸಯೀದ್ ಅವರ ಪುತ್ರಿ ರುಬಿಯಾ ಸಯೀದ್ ಅಪಹರಣ ಪ್ರಕರಣದ ಪ್ರತ್ಯಕ್ಷ ಸಾಕ್ಷಿಗಳು ಮಲಿಕ್‌ನನ್ನು ಗುರುತಿಸಿದವು.

‘ರುಬಿಯಾ ಅಪಹರಣದ ನಂತರ ಯಾಸಿನ್ ಮಲಿಕ್ ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ಸೊಪೋರೆಗೆ ಹೋಗಿದ್ದ. ಪ್ರತ್ಯಕ್ಷದರ್ಶಿಗಳು ಪ್ರಕರಣ ನಡೆದ ಸ್ಥಳ ಮತ್ತು ಸಂಬಂಧಿತ ವ್ಯಕ್ತಿಗಳನ್ನು ಗುರುತಿಸಿದ್ದಾರೆ’ ಎಂದು ಸಂತ್ರಸ್ತೆ ಪರ ವಕೀಲರು ತಿಳಿಸಿದ್ದಾರೆ.

ಭಯೋತ್ಪಾದನಾ ಕೃತ್ಯಗಳಿಗೆ ಹಣಕಾಸು ಒದಗಿಸಿದ ಪ್ರಕರಣದಲ್ಲಿ ಯಾಸಿನ್ ಮಲಿಕ್ ಸದ್ಯ ದೆಹಲಿಯ ತಿಹಾರ್ ಜೈಲಿನಲ್ಲಿದ್ದಾನೆ. ಗೃಹ ಸಚಿವಾಲಯ ಈತನ ಚಲನವಲನಗಳ ಮೇಲೆ ನಿರ್ಬಂಧ ವಿಧಿಸಿರುವ ಕಾರಣ ವಿಡಿಯೊ ಕಾನ್ಫರೆನ್ಸ್ ಮೂಲಕ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿತ್ತು.

ಐವರು ಭಯೋತ್ಪಾದಕರ ಬಿಡುಗಡೆಗಾಗಿ 1989 ಡಿಸೆಂಬರ್ 8ರಂದು ಯಾಸಿನ್ ಮಲ್ಲಿಕ್, ರುಬಿಯಾ ಅವರನ್ನು ಅಪಹರಿಸಿ ಐದು ದಿನಗಳ ಬಳಿಕ ಅವರನ್ನು ಬಿಡುಗಡೆ ಮಾಡಿದ್ದ.

ಜನರ ಬಳಿಗೆ ತೆರಳಿ ನ್ಯಾಯ ಕೇಳುತ್ತೇವೆ: ಪನ್ನೀರ್‌ಸೆಲ್ವಂ

ಚೆನ್ನೈ: ‘ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರು ಎಐಎಡಿಎಂಕೆಯ ಹಂಗಾಮಿ ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರಿಯಲು ಸುಪ್ರೀಂ ಕೋರ್ಟ್ ಸಮ್ಮತಿ ನೀಡಿರುವುದರಿಂದ ನಮಗೆ ಹಿನ್ನಡೆಯಾಗಿಲ್ಲ. ನಾವು ಜನರ ಬಳಿಗೆ ಹೋಗಿ ನ್ಯಾಯ ಕೇಳುತ್ತೇವೆ’ ಎಂದು ಪಕ್ಷದ ಪದಚ್ಯುತ ಮುಖಂಡ ಒ.ಪನ್ನೀರ್‌ಸೆಲ್ವಂ ಶುಕ್ರವಾರ ಪ್ರತಿಕ್ರಿಯಿಸಿದ್ದಾರೆ.

‘ಧರ್ಮ ಯುದ್ಧ ನಡೆಯುತ್ತಿದೆ. ನಾವು ಧರ್ಮದ ಪರವಾಗಿ ನಿಂತು ನ್ಯಾಯ ಕೇಳಲಿದ್ದೇವೆ. ನಾನು ಮತ್ತು ಬೆಂಬಲಿಗರು ಶೀಘ್ರವೇ ರಾಜ್ಯದ ಪ್ರತಿ ಜಿಲ್ಲೆಗಳಿಗೆ ತೆರಳಿ ಜನರನ್ನು ಭೇಟಿಯಾಗಲಿದ್ದೇವೆ’ ಎಂದೂ ವಿವರಿಸಿದ್ದಾರೆ.

ಆಡಳಿತಾರೂಢ ಡಿಎಂಕೆಯ ‘ಬಿ’ ಟೀಮ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಆರೋಪದ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಪನ್ನೀರ್‌ಸೆಲ್ವಂ, ‘ಪಳನಿಸ್ವಾಮಿ ಪಾಳಯದವರು ಡಿಎಂಕೆಯ ‘ಎ’ಯಿಂದ ‘ಝಡ್’ ಟೀಮ್ ಎಂದಿದ್ದಾರೆ.

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನಕ್ಕೆ ಒಳಪಟ್ಟಿದೆ)
ಕೆ.ಆರ್.ಇ.ಡಿ.ಎಲ್. ಕಚೇರಿ ಕಟ್ಟಡ, 10ನೇ ಬ್ಲಾಕ್, 2ನೇ ಹಂತ, ನಾಗರಭಾವಿ, ಬೆಂಗಳೂರು–72.
ದೂ: 080–22282220, ಇ– ಮೇಲ್: kredlmd@gmail.com
ಸಂ:ಕೆ.ಆರ್. ಇ.ಡಿಎಲ್/ಎಸ್‌ಜಿ/992/2022–23 ದಿನಾಂಕ: 24.02.2023
ಟೆಂಡರ್ ಆಹ್ವಾನ ಪ್ರಕಟಣೆ (ಕರೆ–2)
ಬಿಡ್ಡಿಂಗ್ ಮಾದರಿ: ರಾಷ್ಟ್ರೀಯ ಸ್ಪರ್ಧಾತ್ಮಕ ಬಿಡ್ಡಿಂಗ್ (ಎನ್ ಸಿ ಬಿ)
ಬಿಡ್ಡಿಂಗ್ ವಿಧಾನ: ತೆರೆದ ಟೆಂಡರ್, ಏಕಹಂತ, ದ್ವಿ ಲಕೋಟೆ
ಸ್ಪರ್ಧಾತ್ಮಕ ಬಿಡ್ಡಿಂಗ್
ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ (ಕೆ.ಆರ್.ಇ.ಡಿ.ಎಲ್), ಇದು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು ಕರ್ನಾಟಕದಲ್ಲಿನ ತುಮಕೂರು ಜಿಲ್ಲೆಯ ಪಾವಗಡ ಸೋಲಾರ್ ಪಾರ್ಕ್‌ನಲ್ಲಿ 2MWac ಪಿವಿ ವಿದ್ಯುತ್ ಸ್ಥಾವರ ಜೊತೆಗೆ 4.5 MWhr ಬ್ಯಾಟರಿ ಎನರ್ಜಿ ಸ್ಟೋರೇಜ್ ಸಿಸ್ಟಮ್‌ನ ವಿನ್ಯಾಸ, ಇಂಜಿನಿಯರಿಂಗ್, ಸರಬರಾಜು, ನಿರ್ಮಾಣ, ಸ್ಥಾಪನೆ,ಪರೀಕ್ಷೆ ಮಾಡುವುದು, ಕಾರ್ಯಾಚರಣೆಗೊಳಿಸುವುದು ಮತ್ತು 12 ವರ್ಷಗಳು ಸ್ಥಾವರದ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಇಂಜಿನಿಯರಿಂಗ್, ಸಂಗ್ರಹಣೆ ಮತ್ತು ನಿರ್ಮಾಣ (ಇಪಿಸಿ) ಗುತ್ತಿಗೆದಾರನ ಆಯ್ಕೆಗಾಗಿ ಈ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ. ಬಿಡ್ ದಸ್ತಾವೇಜುಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಇಲ್ಲಿ ದಿನಾಂಕ: 25.02.2023 ರಂದು ಅಥವಾ ಆ ನಂತರ ಲಭ್ಯವಾಗಲಿದೆ.
ಸೂಚನೆ: ಕೆಆರ್‌ಇಡಿಎಲ್ ಬಿಡ್ಡಿಂಗ್ ಪ್ರಕ್ರಿಯೆಯನ್ನು ರದ್ದುಪಡಿಸುವ ಮತ್ತು ಅಂತಹ ಆಹ್ವಾನ ಪ್ರಕಟಣೆಗೆ ಯಾವುದೇ ಹೊಣೆಗಾರಿಕೆ ಅಥವಾ ಬಾಧ್ಯತೆ ನೀಡದೆ ಮತ್ತು ಯಾವುದೇ ಕಾರಣಗಳನ್ನು ನೀಡದೆ ಹೊಸದಾಗಿ ಬಿಡ್‌ಗಳನ್ನು ಆಹ್ವಾನಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಯಾವುದೇ ಮುಂದಿನ ಮಾರ್ಪಾಡುಗಳನ್ನು ಇ–ಪೋರ್ಟಲ್, ಕರ್ನಾಟಕ ಸರ್ಕಾರ ಮತ್ತು ಕೆಆರ್‌ಇಡಿಎಲ್ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು–ಎಸ್‌ಜಿ, ಕೆಆರ್‌ಇಡಿಎಲ್

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹಾರಂಗಿ ಪುನರ್ವಸತಿ ವಿಭಾಗ,, ಕುಶಾಲನಗರ–571234,
ಸೋಮವಾರಪೇಟೆ ತಾ॥ ಕೊಡಗು ಜಿಲ್ಲೆ, ಕರ್ನಾಟಕ
ದೂರವಾಣಿ ಸಂಖ್ಯೆ: 08276–274365, ಫ್ಯಾಕ್ಸ್ ಸಂಖ್ಯೆ: 08276–274365,
ಇ–ಮೇಲ್: eehrdksh@gmail.com
ಸಂ:ಕಾ.ಇಂ/ಕಾ.ನೀ.ನಿ.ನಿ/ಹಾಪುವಿ/ಪಿಬಿಬಿ/ಟೆಂಡರ್ ಪ್ರಕಟಣೆ ಸಂಖ್ಯೆ: 30/22–23,
ದಿನಾಂಕ: 24.02.2023
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ ಕರೆ)
(ಐಟಂವಾರು: ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮೂಲಕ ಮಾತ್ರ)
ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರುರವರ ಪರವಾಗಿ ಸೂಚಿತ ದರ್ಜೆ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪದ್ಧತಿ ಮುಖಾಂತರ ಐಟಂವಾರು ದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಈ ವಿಭಾಗ ವ್ಯಾಪ್ತಿಯಿಂದ, ಕುಶಾಲನಗರ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ 4701 ಲೆಕ್ಕಶೀರ್ಷಿಕೆಯಡಿ 2 ಕಾಮಗಾರಿಗಳಿಗೆ ಐಟಂವಾರು ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಯ ಅಂದಾಜು ಮೊತ್ತ ರೂ. 300.00 ಹಾಗೂ ರೂ. 400.00 ಲಕ್ಷಗಳಿದ್ದು, ಈ ಕಾಮಗಾರಿಗಳಿಗೆ ನಿಗಧಿತ ದರ್ಜೆ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ.
ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 3.3.2023 ಅಪರಾಹ್ನ 4.00 ಗಂಟೆಯವರೆಗೆ ಸಲ್ಲಿಸಬಹುದಾಗಿದೆ. ತಾಂತ್ರಿಕ ಬಿಡ್ಡನ್ನು ದಿನಾಂಕ 4.3.2023ರ ಪೂರ್ವಾಹ್ನ 4.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ತಾಂತ್ರಿಕ ಬಿಡ್ಡು ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ವಿಳಾಸ: http://eproc.karnataka.gov.in ರಲ್ಲಿ ಪಡೆಯಬಹುದಾಗಿದೆ. ಈ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ನಿಗದಿಯಾಗಿದ್ದು, ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಕೆಳಸಹಿದಾರರನ್ನು ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಹಾರಂಗಿ ಪುನರ್ವಸತಿ ವಿಭಾಗ,
ಕಾವೇರಿ ನೀರಾವರಿ ನಿಗಮ ನಿಯಮಿತ, ಕುಶಾಲನಗರ,
ಸೋಮವಾರಪೇಟೆ ತಾ, ಕೊಡಗು ಜಿಲ್ಲೆ–571234

ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/8443–5054/2022–23/8657/
ದಿ: 22–02–2023
ಇ–ಟೆಂಡರ್ ಪ್ರಕಟಣೆ
ದಿನಾಂಕ: 22–02–2023ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 164865 ಮತ್ತು 163215ರ ಕಾಮಗಾರಿಗಳ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 08–03–2023 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ), ಕಾಮಗಾರಿಗಳ ಇಂಡೆಂಟ್ ಸಂಖ್ಯೆ 165424ರ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 06–03–2023 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/–(ಕೆ.ರಮೇಶ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾ.ಸಾ.ಇ/ಹಾವೇರಿ/567/2022–23/ದೇಶಪಾಂಡೆಪಬ್ಲಿಸಿಟಿ

ನಗರಸಭಾ ಕಾರ್ಯಾಲಯ, ರಾಮನಗರ
ರಾಮನಗರ ಜಿಲ್ಲೆ – 562159
Web: www.ramanagaracity.mrc.gov.in Email ID: itstaff_ulb_ramanagaram@yahoo.com
Ph: No: 080-27271286, Helpline No: 080-27276070
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
ನಂ:ನಸರಾ/ಆ.ಶಾ/ಸ.ಕಾ.ಅ/ಸಿಆರ್/95/2021–2022 ದಿನಾಂಕ : 23.02.2023
ದಿನಾಂಕ: 20.02.2023 ರಂದು 2021–22ನೇ ಸಾಲಿನ 15ನೇ ಹಣಕಾಸು ಯೋಜನೆ ಅನುದಾನದಲ್ಲಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ 13 ಸಂಖ್ಯೆ ಆಟೋ ಟಿಪ್ಪರ್‌ಗಳನ್ನು ಖರೀದಿಸಲು ಟೆಂಡರ್‌ನ್ನು ಕರೆಯಲಾಗಿದ್ದು, ತಾಂತ್ರಿಕವಾಗಿ ಅರ್ಹತೆ ಹೊಂದಿರುವ ಇಚ್ಛೆಯುಳ್ಳ ಸರಬರಾಜುದಾರರು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಭಾಗವಹಿಸಲು ಕೊನೆಯ ದಿನಾಂಕ : 28.02.2023 ಸಂಜೆ 4.30 ಎಂದು ಈಗಾಗಲೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿತ್ತು. ಆದರೆ ಇ–ಪ್ರಕ್ಯೂರೆಂಟ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಸದರಿ ದಿನದಂದು ಅಪ್‌ಲೋಡ್ ಮಾಡುವ ವೇಳೆ ತಾಂತ್ರಿಕ ದೋಷ ಕಾಣಿಸಿದ್ದರಿಂದ ಇಂದು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು ಟೆಂಡರ್‌ನಲ್ಲಿ ಭಾಗವಹಿಸಲು ಕೊನೆ ದಿನಾಂಕ : 02.03.2023 ಸಂಜೆ 4.30 ಆಗಿರುತ್ತದೆ.
ಅಧ್ಯಕ್ಷರು ನಗರಸಭೆ, ರಾಮನಗರ
ಸಹಿ/– ಪೌರಾಯುಕ್ತರು ನಗರಸಭೆ, ರಾಮನಗರ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ. 8, ಎಂಎಸ್‌ಬಿ–1, 6ನೇ ಮತ್ತು 7ನೇ ಮಹಡಿ,
ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು–560052
ಸಂ.: ಕವಶಿಸಸ/ಸಕಾಅ–3/ಟೆಂಡರ್–34/2022–23 ದಿನಾಂಕ: 22.02.2023
ಟೆಂಡರ್ ಪ್ರಕಟಣೆ (ಇ–ಟೆಂಡರ್ ಮೂಲಕ ಮಾತ್ರ)
ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವತಿಯಿಂದ ಯಾದಗಿರಿ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಯಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ದುರಸ್ತಿ ಕಾಮಗಾರಿಗಳಿಗೆ (ಟೆಂಡರ್ ಇಂಡೆಂಟ್ ಸಂಖ್ಯೆ 3089, 3090, 3091, 3092, 3093, 3094, 3095, 3096, 3097, 3098 & 3099) ಇ–ಪೋರ್ಟಲ್ ಮುಖಾಂತರ ದಿನಾಂಕ: 23.02.2023ರಂದು ಟೆಂಡರನ್ನು ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 09.03.2023ರಂದು ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://eproc.karnataka.gov.in ರಲ್ಲಿ ನೋಡಬಹುದಾಗಿದೆ.
ಸೂಚನೆ: ಅಲ್ಪಾವಧಿ ಟೆಂಡರ್ ಪ್ರಕಟಣೆಯಲ್ಲಿ ವ್ಯತ್ಯಾಸವಿದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಅದನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಸಹಾಯಕ ಕಾರ್ಯಪಾಲಕ ಅಭಿಯಂತರರು, ಕ.ವ.ಶಿ.ಸ.ಸಂ.
ವಾಸಾಸಂಇ/ವಾಪ್ರ/ಎಲ್‌ಸಿ/4932/2022–23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ, ಕೃಭಾಜನಿನಿ
ಮುಏನೀ ವಿಭಾಗ ನಂ–3 ಬಸವನ ಬಾಗೇವಾಡಿ, ಜಿಲ್ಲೆ: ವಿಜಯಪುರ
ಸಂ/ಕೃಭಾಜನಿನಿ/ಮುಏನೀ/ವಿ–3/ಟೆಂಡರ್/2022–23/1190 ದಿನಾಂಕ:24.02.2023
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್‌ನಲ್ಲಿ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ಆಧಾರದ ಮೇಲೆ ಇಂಡೆಂಟ್ ಸಂಖ್ಯೆ KBJNL/2022-23/CN/WORK_INDENT24141 (ಸಂಕನಾಳ ಶಾಖಾ ಕಾಲುವೆಯಡಿಯಲ್ಲಿ ಬರುವ 1 ರಿಂದ 8ರ ವಿತರಣಾ ಕಾಲುವೆಯ ಜಾಲ) ಕಾಮಗಾರಿಗೆ ಎರಡು ಕವರ್‌ಗಳಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 4178.64 ಲಕ್ಷಗಳು.
ಸದರಿ ಟೆಂಡರಗಳನ್ನು ದಿನಾಂಕ: 24.02.2023 ರಿಂದ ಇ–ಪ್ರೋಕ್ಯುರಮೆಂಟ್ ಪೋರ್ಟಲ್‌ನಲ್ಲಿ ವೀಕ್ಷಿಸಬಹುದಾಗಿದ್ದು, ಪೂರ್ಣಗೊಳಿಸಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 07.03.2023 ಸಾಯಂಕಾಲ 5.00 ಗಂಟೆಯಾಗಿರುತ್ತದೆ. ಕಾಮಗಾರಿಯ ಕುರಿತು ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 03.03.2023 ಬೆಳಿಗ್ಗೆ 10.30 ಗಂಟೆಯಾಗಿರುತ್ತದೆ. ಸದರಿ ಕಾಮಗಾರಿಯ ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 03.03.2023 ರಂದು ಬೆಳ್ಳಿಗ್ಗೆ 11.00 ಗಂಟೆಗೆ ಮುಖ್ಯ ಇಂಜನಿಯರರ ಕಚೇರಿ, ಕೃ.ಭಾ.ಜ.ನಿ.ನಿ. ಆಣೆಕಟ್ಟು ವಲಯ ಆಲಮಟ್ಟಿಯಲ್ಲಿ ನಡೆಸಲಾಗುವುದು. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.03.2023 ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಾಲತಾಣ (ವೆಬ್‌ಸೈಟ್) https://eproc.karnataka.gov.in/eportal/ index.seam ದಲ್ಲಿ ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ,ಮುಏನೀ ವಿಭಾಗ–03, ಬ.ಬಾಗೇವಾಡಿ
ವಾಸಾಸಂಇ/ವಿಜಯಪುರ/943/ಕೆಎಸ್‌ಎಂಸಿಎ/2022–23

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ
ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(83ಇ/81ಇ/78ಇ/47ಇ/21ಇ)2022–23:ಜೆಇ–2 ದಿನಾಂಕ: 24.02.2023
ಅಲ್ಪಾವಧಿ ಟೆಂಡರ್ ಪ್ರಕಟಣೆ / 4ನೇ ಕರೆ/ 6ನೇ ಕರೆ / 9ನೇ ಕರೆ /ಸಮಯಾವಧಿ ವಿಸ್ತರಣೆ
(ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)
ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಸಾರ್ವಜನಿಕ ಇ–ಪ್ರೊಕ್ಯುರ್‌ಮೆಂಟ್ ಮೂಲಕ ಲೆಕ್ಕಶೀರ್ಷಿಕೆ :–"3054–03–102–0–01–200 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆಯಡಿ ಇಂಡೆಂಟ್ ನಂ. 165430, 165310, 164714 ಮತ್ತು ಲೆಕ್ಕಶೀರ್ಷಿಕೆ:– 3054–04–105–0–01–200 ಜಿಲ್ಲಾ ಮತ್ತು ಇತರೆ ರಸ್ತೆ ಸೇತುವೆಗಳ ನಿರ್ವಹಣೆ ರಡಿ ಇಂಡೆಂಟ್ ನಂ. 164716 ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 06.03.2023 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಲೆಕ್ಕಶೀರ್ಷಿಕೆ :–5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು ಬಂಡವಾಳ ವೆಚ್ಚಗಳು ಯೋಜನೆಯಡಿ ಇಂಡೆಂಟ್ ನಂ. 165297 ಮತ್ತು ಈ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದೆ.
ಲೆಕ್ಕಶೀರ್ಷಿಕೆ :–5054 –ಜಿಲ್ಲಾ ಮತ್ತು ಇತರೆ ರಸ್ತೆಗಳು – ಸುಧಾರಣೆ (ಅಪೆಂಡಿಕ್ಸ್– ಇ) ರಡಿ ಇಂಡೆಂಟ್ ನಂ.152827 ಕಾಮಗಾರಿಗೆ 4 ನೇ ಕರೆಯಾಗಿ ಮತ್ತು ಇಂಡೆಂಟ್ ನಂ.155908, 153469 ಕಾಮಗಾರಿಗಳಿಗೆ 6 ನೇ ಕರೆಯಾಗಿ ಹಾಗೂ ಇಂಡೆಂಟ್ ನಂ.156561, 155917 ಕಾಮಗಾರಿಗಳಿಗೆ 9 ನೇ ಕರೆಯಾಗಿ ಟೆಂಡರ್ ಕರೆಯಾಗಿದೆ.
ಲೆಕ್ಕಶೀರ್ಷಿಕೆ:–2059–80–053–4–00–200 ವಿವಿಧ ಇಲಾಖಾ ಕಟ್ಟಡಗಳ ನಿರ್ವಹಣೆಯಡಿ ಇಂಡೆಂಟ್ ನಂ.165030, 165305, 164829, 164827, 164873, 164877 ಮತ್ತು ಲೆಕ್ಕಶೀರ್ಷಿಕೆ :3054–03–337–0–05–200 ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆ ರಡಿ ಇಂಡೆಂಟ್ ನಂ.163924, 164034, 163933 ಹಾಗೂ ಲೆಕ್ಕಶೀರ್ಷಿಕೆ :–"3054–03–102–0–01–200 ರಾಜ್ಯ ಹೆದ್ದಾರಿ ಸೇತುವೆಗಳ ನಿರ್ವಹಣೆಯಡಿ ಇಂಡೆಂಟ್ ನಂ. 164779, ಲೆಕ್ಕಶೀರ್ಷಿಕೆ :2216–07–053–0–01–200 ಲೋಕೋಪಯೋಗಿ ವಸತಿಗೃಹಗಳು ಹಾಗೂ ನ್ಯಾಯಾಂಗ ವಸತಿಗೃಹಗಳ ದುರಸ್ತಿ /ನಿರ್ವಹಣೆ ರಡಿ ಇಂಡೆಂಟ್ ನಂ.164336, 164322, ಮತ್ತು ಲೆಕ್ಕಶೀರ್ಷಿಕೆ :3054–04–337–1–10–200 ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ ರಡಿ ಇಂಡೆಂಟ್ ನಂ. 164394, 164038 ಈ ಕಾಮಗಾರಿಗಳಿಗೆ ಸಮಯಾವಧಿ ವಿಸ್ತರಣೆ ಮಾಡಲಾಗಿದೆ. ಈ ಎಲ್ಲಾ ಕಾಮಗಾರಿಗಳಿಗೆ ಇ–ಪ್ರೊಕ್ಯುರ್‌ಮೆಂಟ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 04.03.2023 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.
ಈ ಕಾಮಗಾರಿಗಳ ಗರಿಷ್ಠ ಅಂದಾಜು ಮೊತ್ತ ರೂ.95.00 ಲಕ್ಷ, ಕನಿಷ್ಠ ಅಂದಾಜು ಮೊತ್ತ ರೂ.5.77 ಲಕ್ಷ ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ https://eproc.karnataka.gov.inನ್ನು ಸಂಪರ್ಕಿಸಲು ಕೋರಲಾಗಿದೆ.
DIPR/MNG/KSMCA/1403/22-23 dt.24.02.2023 ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ಬೆವಿಕಂ BESCOM
ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)
(CIN: U04010KA2002SGC030438)
ಇ–ಟೆಂಡರ್ ಪ್ರಕಟಣೆ
ಬೆವಿಕಂಯು “ಸೌರ ವಿದ್ಯುತ್ ಉತ್ಪಾದಕರ (SPGs) ಆಯ್ಕೆಗಾಗಿ ಬಿಲ್ಡ್–ಓನ್–ಆಪರೇಟ್ (BOO) ಆಧಾರದ ಮೇಲೆ ಬೆವಿಕಂ ವ್ಯಾಪ್ತಿಯ ಸಬ್ ಸ್ಟೇಷನ್ (SS) ಮಟ್ಟದಲ್ಲಿ 2,62,331 ಕೃಷಿ ಪಂಪ್‌ಸೆಟ್‌ಗಳನ್ನೊಳಗೊಂಡ ಆಯ್ದ ಕೃಷಿ ಫೀಡರ್‌ಗಳ ಸೌರೀಕರಣಕ್ಕಾಗಿ, ವಿಕೇಂದ್ರೀಕೃತ ಸೌರ ಘಟಕಗಳ ವಿನ್ಯಾಸ, ಸಮೀಕ್ಷೆ, ಸರಬರಾಜು, ಸ್ಥಾಪನೆ, ಪರೀಕ್ಷೆ, ಅನುಷ್ಠಾನ, ಕಾರ್ಯಾಚರಣೆ & ನಿರ್ವಹಣೆ, ಅದರ ಸಂಬಂಧಿತ 11ಕೆ.ವಿ ಮಾರ್ಗ ಹಾಗೂ ಸೌರ ವಿದ್ಯುತ್ ಸ್ಥಾವರಗಳ ರಿಮೋಟ್ ಮಾನಿಟರಿಂಗ್ ಸಿಸ್ಟಮ್ (RMS) ನೊಂದಿಗೆ ಸ್ಥಾವರವನ್ನು ರೆಸ್ಕೋ ಮಾದರಿ ಮೂಲಕ 25 ವರ್ಷ ಪಿಪಿಎ ಅವಧಿಯ ವರೆಗೆ ಸಂಪರ್ಕಿಸಲು ಪಿಎಂ–ಕುಸುಮ್ ಕಾಂಪೊನೆಂಟ್–ಸಿ ಯೋಜನೆಯ ಕೃಷಿ ಫೀಡರ್‌ಗಳ ಸೌರೀಕರಣ” ಯೋಜನೆಯ ಪ್ರಸ್ತಾವನೆಯ ವಿನಂತಿ(RFP) ಯನ್ನು ಆಹ್ವಾನಿಸಿದೆ.

RFP ವಿಚಾರಣೆ ಸಂಖ್ಯೆ	BESCOM/GM(DSM)/BC-51/KUSUM-C/2022-23/1, ದಿನಾಂಕ: 24.02.2023
ಬಿಡ್ಡಿಂಗ್ ಪೋರ್ಟಲ್	https://eproc.karnataka.gov.in
RFP ದಾಖಲೆಗಳ ಲಭ್ಯತೆ	24ನೇ ಫೆಬ್ರವರಿ 2023 ರ ನಂತರ
ಬಿಡ್ ಪೂರ್ವ ಸಭೆ	1ನೇ ಮಾರ್ಚ್ 2023 ಮದ್ಯಾಹ್ನ 3:00 ಗಂಟೆಗೆ ಸ್ಥಳ: ಸಭಾಂಗಣ, 3ನೇ ಮಹಡಿ, ಬೆಳಕು ಭವನ, ನಿಗಮ ಕಾರ್ಯಾಲಯ, ಕೆ.ಆರ್.ವೃತ್ತ, ಬೆವಿಕಂ, ಬೆಂಗಳೂರು
ಪೂರ್ವ ಬಿಡ್ ಪ್ರಶ್ನೆಗಳು/ಸ್ಪಷ್ಟೀಕರಣಗಳನ್ನು ಸಲ್ಲಿಸಲು ಕೊನೆಯ ದಿನಾಂಕ & ಸಮಯ	1ನೇ ಮಾರ್ಚ್ 2023 ಸಂಜೆ 5:00 ಗಂಟೆಯವರೆಗೆ
ಬಿಡ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ & ಸಮಯ	7ನೇ ಮಾರ್ಚ್2023, ಸಂಜೆ 4:00 ಗಂಟೆಯವರೆಗೆ
ಬ್ಯಾಂಕ್ ಗ್ಯಾರಂಟಿ ಮೂಲಕ ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ & ಸಮಯ	9ನೇ ಮಾರ್ಚ್2023, ಸಂಜೆ 4:00 ಗಂಟೆಯವರೆಗೆ
ತಾಂತ್ರಿಕ–ವಾಣಿಜ್ಯ ಬಿಡ್(Techno-Commercial) ತೆರೆಯುವ ದಿನಾಂಕ & ಸಮಯ	9ನೇ ಮಾರ್ಚ್2023, ಸಂಜೆ 5.00 ಗಂಟೆಗೆ
ಬಿಡ್ ದರ (Price) ತೆರೆಯುವ ದಿನಾಂಕ & ಸಮಯ	ತಾಂತ್ರಿಕ–ವಾಣಿಜ್ಯ ಮೌಲ್ಯಮಾಪನವನ್ನು ಪೂರ್ಣಗೊಳಿಸಿದ ನಂತರ ಬಿಡ್ಡಿಂಗ್ ಪೋರ್ಟಲ್‌ನಲ್ಲಿ ತೆರೆಯಲಾಗುತ್ತದೆ. ಬಿಡ್ ದರ ತೆರೆಯುವ ದಿನಾಂಕದ ಬಗ್ಗೆ ಪ್ರತ್ಯೇಕ ಸೂಚನೆ ನೀಡಲಾಗುವುದಿಲ್ಲ.

ಸಹಿ/–ಪ್ರಧಾನ ವ್ಯವಸ್ಥಾಪಕರು(ವಿ), ಡಿ.ಎಸ್.ಎಂ, ಬೆವಿಕಂ, ಬೆಂಗಳೂರು
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುವು:ಸಇಂ–1:ಟೆಂಡರ್–72/2022–23
ದಿನಾಂಕ: 21.02.2023
ಟೆಂಡರ್ ಪ್ರಕಟಣೆ ಸಂ.72/2022–23 ದಿನಾಂಕ: 21.02.2023
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 72/2022–23:ದಿನಾಂಕ 21–02–2023 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 8443– ಠೇವಣಿವಂತಿಕೆ ಮತ್ತು ನಬಾರ್ಡ್–28 ಲೆಕ್ಕ ಶೀರ್ಷಿಕೆ ಅಡಿಯಲ್ಲಿ 02 ಕಾಮಗಾರಿಗಳಿಗೆ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಟ ಮೊತ್ತ ರೂ.410.04 ಲಕ್ಷಗಳು, ಟೆಂಡರಿಗಿಟ್ಟ ಕನಿಷ್ಟ ಮೊತ್ತ ರೂ: 79.45 ಲಕ್ಷಗಳು, ಇ.ಎಂ.ಡಿ ಗರಿಷ್ಟ ಮೊತ್ತ ರೂ.6,15,100/– ಇ.ಎಂ.ಡಿ ಕನಿಷ್ಟ ಮೊತ್ತ ರೂ.1,59,000/–, ಅರ್ಹ ಗುತ್ತಿಗೆದಾರರು : 3 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 06 ರಿಂದ 08 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 01.03.2023 ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ 22.02.2023 ರಿಂದ 02.03.2023ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 02.03.2023 ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 03.03.2023 ರ ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 04.03.2023 ರ ಬೆಳಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ
ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/999/KSMCA/2022-23

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆ • ವಿದಾಯ ಭಾಷಣದ ವೇಳೆ ಮೆಚ್ಚುಗೆ

‘ಮನೆ– ಮಠ ಬಿಟ್ಟು ಪಕ್ಷ ಕಟ್ಟಿದ ಬಿಎಸ್‌ವೈ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನನ್ನ ಮತ್ತು ಯಡಿಯೂರಪ್ಪ ಮಧ್ಯೆ ವೈಮನಸ್ಸು ಇದ್ದರೂ, ಅವರು ನಮ್ಮ ನಾಯಕರು. ಮನೆ-ಮಠ ಬಿಟ್ಟು ರಾಜ್ಯದಲ್ಲಿ ಪಕ್ಷವನ್ನು ಕಟ್ಟಿದವರು’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ವಿಧಾನಸಭೆಯಲ್ಲಿ ಮಾತನಾಡಿದ ಅವರು, ‘ಯಡಿಯೂರಪ್ಪ ಮತ್ತು ಅನಂತಕುಮಾರ್ ರಾಜ್ಯದಲ್ಲಿ ನಮ್ಮ ಪಕ್ಷವನ್ನು ಕಟ್ಟಿದ ಜೋಡಿ. ಕೃಷ್ಣ-ಅರ್ಜುನರಂತೆ ಇದ್ದರು’ ಎಂದು ನೆನಪಿಸಿಕೊಂಡರು. ಯತ್ನಾಳ ಅವರು ಯಡಿಯೂರಪ್ಪ ವಿರುದ್ಧ ನಿರಂತರ ವಾಗ್ದಾಳಿ ಮಾಡುತ್ತಾ ಬಂದಿದ್ದರು. ಆದರೆ, ವಿದಾಯ ಭಾಷಣದ ವೇಳೆ ಮೆಚ್ಚುಗೆ ವ್ಯಕ್ತಪಡಿಸಿದರು.

‘ಅಟಲ್ ಬಿಹಾರಿ ವಾಜಪೇಯಿ ಅವರ ಸರ್ಕಾರದಲ್ಲಿ ಮಂತ್ರಿ ಆಗಿ ಕೆಲಸ ಮಾಡಿದ್ದು ನನ್ನ ಸೌಭಾಗ್ಯ. ಆ ಸ್ಥಾನ ಸಿಗಲು ಯಡಿಯೂರಪ್ಪ ಮತ್ತು ಅನಂತಕುಮಾರ್ ಕಾರಣರು. ಯಡಿಯೂರಪ್ಪ ನಮ್ಮನ್ನು ಬೆಳೆಸಿದರು. ಹಿಂದೆ ಅವರು ಡಿಲಕ್ಸ್ ಬಸ್ ಹತ್ತಿಕೊಂಡು ವಿಜಯಪುರಕ್ಕೆ ಬರುತ್ತಿದ್ದರು. ಬಸ್ ಸ್ಟಾಂಡ್‌ನಿಂದ ಆಟೋದಲ್ಲಿ ಅವರನ್ನು ಐಬಿಗೆ ಕರೆದುಕೊಂಡು ಹೋಗುತ್ತಿದ್ದೆ. ಪಕ್ಷಕ್ಕಾಗಿ ಮನೆ-ಮಠ ಬಿಟ್ಟು ದುಡಿದವರು. ಆದರೆ, ಈ ಬಾರಿ ನನ್ನನ್ನು ಮತ್ತು ನಿಮ್ಮನ್ನು (ಕಾಗೇರಿ) ಮಂತ್ರಿ ಮಾಡಲಿಲ್ಲ’ ಎಂದು ಲಘು ದಾಟಿಯಲ್ಲಿ ಛೇಡಿಸಿದರು.

ವಿಧಾನಸಭೆಯಲ್ಲಿ ಬಸನಗೌಡ ಪಾಟೀಲ ಯತ್ನಾಳ್ ಮಾತನಾಡಿದರು

ಬಿಎಸ್‌ವೈ ಛಲ–ಸಾಹಸ ನಮಗೆ ಮಾದರಿ: ಬಸವರಾಜ ಬೊಮ್ಮಾಯಿ

‘ಯಡಿಯೂರಪ್ಪ ಅವರಿಗೆ ಜೀವನದ ಸತ್ಯ, ಸಿಹಿ–ಕಹಿ ಎಲ್ಲವೂ ಗೊತ್ತು. ನಮ್ಮ ವಯಸ್ಸಿನಷ್ಟು ಅವರಿಗೆ ಅನುಭವ ಇದೆ. ಅದನ್ನು ತೋರಿಸಿಕೊಳ್ಳದೇ ಎಲ್ಲರ ಜತೆಗೂ ಬೆರೆತು ಎಲ್ಲರನ್ನೂ ಸರಿಸಮಾನರನ್ನಾಗಿ ಕಂಡು ದೊಡ್ಡತನ ಮೆರೆಯುತ್ತಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಬಿಎಸ್‌ವೈ ಅವರು ನಡೆದು ಬಂದ ದಾರಿ, ಮಾಡಿದ ಹೋರಾಟ ಸಾಮಾನ್ಯ ಏನಲ್ಲ. ತಾವು ಏನು ಮಾಡಬೇಕೆಂದುಕೊಂಡಿದ್ದರೋ ಅದನ್ನು ಮಾಡದೇ ಬಿಟ್ಟಿಲ್ಲ. ಅವರ ಛಲ–ಸಾಹಸ ನಿಜಕ್ಕೂ ಮೆಚ್ಚುವಂಥದ್ದು. ನಮಗೆಲ್ಲ ಮಾದರಿ’ ಎಂದು ಹೇಳಿದರು.

‘ಯಡಿಯೂರಪ್ಪ ಚುನಾವಣೆ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ಇನ್ನೂ ಕೆಲವು ಹಿರಿಯ ಶಾಸಕರು ಸ್ಪರ್ಧಿಸುವುದಿಲ್ಲ, ಮಕ್ಕಳಿಗೆ ಟಿಕೆಟ್ ಕೇಳುತ್ತೇನೆ ಎನ್ನುತ್ತಿದ್ದವರು, ಈಗ ಉಲ್ಟಾ ಹೊಡೆಯುತ್ತಿದ್ದಾರೆ. ಜನ ಬಿಡ್ತಾ ಇಲ್ಲ ಮತ್ತೆ ಸ್ಪರ್ಧಿಸಿ ಎಂದು ದುಂಬಾಲು ಬೀಳುತ್ತಿದ್ದಾರೆ ಎಂದು ಸಬೂಬು ಹೇಳುತ್ತಿದ್ದಾರೆ. ಇಂತಹವರಿಗೆ ಸಾಯೋತನಕ ಶಾಸಕನಾಗಿರಬೇಕು, ಆ ಸ್ಥಾನದಲ್ಲೇ ಇದ್ದು ಸಾಯಬೇಕು ಎಂಬ ಹಂಬಲವುಳ್ಳವರೂ ಇದ್ದಾರೆ ಎಂದು ಚಾಟಿ ಬೀಸಿದರು.

ವಿರೋಧ ಪಕ್ಷದ ಉಪನಾಯಕ ಯು.ಟಿ.ಖಾದರ್, ಜೆಡಿಎಸ್ ಉಪನಾಯಕ ಬಂಡೆಪ್ಪ ಕಾಶೆಂಪುರ್, ಜೆಡಿಎಸ್‌ನ ಸಾ.ರಾ.ಮಹೇಶ್ ಮತ್ತು ಇತರರು ಯಡಿಯೂರಪ್ಪ ಅವರ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಆಡಿ, ತಮ್ಮ ಕ್ಷೇತ್ರಗಳ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದನ್ನು ಸ್ಮರಿಸಿಕೊಂಡರು.

> **ಯತ್ನಾಳ್‌ಗೆ ಅವರದ್ದೇ ಶೈಲಿ ಇದೆ. ಅವರ ಮಾತಿನಲ್ಲಿ ಮೊನಚು ಇದೆ. ಹೇಳಬೇಕಾಗಿದ್ದನ್ನು ನಿರ್ಭೀತಿಯಿಂದ ಹೇಳಿಬಿಡುತ್ತಾರೆ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> **ಯಡಿಯೂರಪ್ಪ ಅವರಂತೆ ಸವಾಲು– ಸಮಸ್ಯೆಗಳನ್ನು ಎದುರಿಸಿದ ಮತ್ತೊಬ್ಬ ಮುಖ್ಯಮಂತ್ರಿ ಇಲ್ಲ. ರೈತರು, ನೀರಾವರಿ ಬಗ್ಗೆ ಅಪಾರ ಕಾಳಜಿಯುಳ್ಳವರಾಗಿದ್ದರು**
> **ಜೆ.ಸಿ.ಮಾಧುಸ್ವಾಮಿ,** ಕಾನೂನು ಸಚಿವ

ಸುದ್ದಿ 2 ನಿಮಿಷ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಸಿದ್ಧತೆ: 27ರಿಂದ ರೇಡಿಯೊ ಪಾಠ

ಬೆಂಗಳೂರು: ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಪರೀಕ್ಷಾ ಸಿದ್ಧತೆಗೆ ಪೂರಕವಾಗಿ ಫೆ. 27ರಿಂದ ಮಾರ್ಚ್ 23ರವರೆಗೆ ರೇಡಿಯೊ ಪಾಠ ‘ಬಾನ್ ದನಿ’ ಪ್ರಸಾರ ಮಾಡಲಾಗುತ್ತಿದೆ.

27ರಂದು ಕನ್ನಡ, 28ರಂದು ದ್ವಿತೀಯ ಭಾಷೆ ಇಂಗ್ಲಿಷ್, ಮಾರ್ಚ್ 1ರಂದು ಭೌತಶಾಸ್ತ್ರ, ರಸಾಯನ ವಿಜ್ಞಾನ, 2ರಂದು ಜೀವಶಾಸ್ತ್ರ, 6ರಂದು ಅಂಕಗಣಿತ, ಬೀಜಗಣಿತ, 7ರಂದು ರೇಖಾಗಣಿತ, 8ರಂದು ಇತಿಹಾಸ, ರಾಜ್ಯಶಾಸ್ತ್ರ, 9ರಂದು ಭೂಗೋಳ, ಅರ್ಥಶಾಸ್ತ್ರ, 13ರಂದು ಹಿಂದಿ, 14ರಂದು ಸಂಸ್ಕೃತ, 15ರಂದು ಪ್ರಥಮ ಭಾಷೆ ಇಂಗ್ಲಿಷ್, 16ರಂದು ಪರೀಕ್ಷಾ ಮಂಡಳಿ ನಿರ್ದೇಶಕರಿಂದ ಪರೀಕ್ಷಾ ಮಾಹಿತಿ, 20ರಂದು ಪರೀಕ್ಷೆ ಬರೆಯಲು ಅನುಸರಿಸುವ ಕ್ರಮ, 21ರಂದು ಆರೋಗ್ಯ ಮತ್ತು ಆಹಾರದ ಮಾಹಿತಿ, 23ರಂದು ಉರ್ದು ವಿಷಯಗಳ ಕುರಿತು ಪಾಠಗಳು 13 ಆಕಾಶವಾಣಿ ಕೇಂದ್ರಗಳು, ಮೂರು ವಿವಿಧ ಭಾರತಿ ಎಫ್‌ಎಂ ಕೇಂದ್ರಗಳಿಂದ ಏಕಕಾಲದಲ್ಲಿ ಪ್ರಸಾರವಾಗಲಿವೆ ಎಂದು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಮಾಹಿತಿ ನೀಡಿದೆ.

ಪಾವಗಡ: ತಹಶೀಲ್ದಾರ್ ವಿರುದ್ಧ ಜಾತಿ ನಿಂದನೆ ಪ್ರಕರಣ ದಾಖಲು

ಪಾವಗಡ: ಇಲ್ಲಿನ ಗ್ರೇಡ್ 2 ತಹಶೀಲ್ದಾರ್ ಸುಮತಿ ಅವರ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಜಾತಿ ನಿಂದನೆ ಪ್ರಕರಣ ಶುಕ್ರವಾರ ದಾಖಲಾಗಿದೆ.

ತಾಲ್ಲೂಕಿನ ಮಂಗಳವಾಡ ಗ್ರಾಮದ ಹನುಮಂತರಾಯ ಎಂಬುವರು ಭೂರಹಿತ ದೃಢೀಕರಣ ಪತ್ರ ಮತ್ತು ಕೃಷಿ ದೃಢೀಕರಣ ಪತ್ರ ಕೋರಿ ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು. ಆದರೆ, ತಹಶೀಲ್ದಾರ್ ಅವರು ಭೂರಹಿತ ದೃಢೀಕರಣ ಪತ್ರ ನೀಡಲಾಗುವುದಿಲ್ಲ ಎಂದು ಫೆ. 21ರಂದು ಅರ್ಜಿಯನ್ನು ವಜಾಗೊಳಿಸಿದ್ದರು.

ಈ ಬಗ್ಗೆ ತಹಶೀಲ್ದಾರ್ ಅವರನ್ನು ಪ್ರಶ್ನಿಸಿದಾಗ, ‘ನೀನು ವಿಧಾನಸೌಧಕ್ಕಾದರೂ ಹೋಗು; ಎಲ್ಲಿಗಾದರೂ ಹೋಗು. ದೃಢೀಕರಣ ಪತ್ರ ಕೊಡಲು ಬರುವುದಿಲ್ಲ’ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದರು ಎಂದು ಹನುಮಂತರಾಯ ದೂರಿನಲ್ಲಿ ತಿಳಿಸಿದ್ದಾರೆ.

‘ಆದಿ ಕರ್ನಾಟಕ ಸಮುದಾಯಕ್ಕೆ ಸೇರಿದ ಫಲಾನುಭವಿಗಳು ಸರ್ಕಾರಿ ಸೌಲಭ್ಯ ಪಡೆಯಲು ಜಾತಿ ಪ್ರಮಾಣ ಪತ್ರ ಸೇರಿದಂತೆ ವಿವಿಧ ದೃಢೀಕರಣ ಪತ್ರಗಳನ್ನು ಕೋರಿ ಅರ್ಜಿ ಸಲ್ಲಿಸಿದರೂ ನೀಡುತ್ತಿಲ್ಲ. ನನ್ನ ಅರ್ಜಿ ವಜಾ ಮಾಡಿರುವ ಬಗ್ಗೆ ಹಿಂಬರಹ ನೀಡಿ ಅಥವಾ ಸರ್ಕಾರಿ ಆದೇಶ ತೋರಿಸಿ ಎಂದು ಕೇಳಿದ್ದಕ್ಕೆ ತಹಶೀಲ್ದಾರ್ ಕಚೇರಿಯಲ್ಲಿಯೇ ಜಾತಿ ನಿಂದನೆ ಮಾಡಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮೇ 20, 21ಕ್ಕೆ ಸಿಇಟಿ

ಬೆಂಗಳೂರು: ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಕೆಸಿಇಟಿ-2023) ಮೇ 20 ಹಾಗೂ 21ರಂದು ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಿರ್ಧರಿಸಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಪರೀಕ್ಷೆ ನಡೆಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಪೂರ್ಣ ವಿವರಗಳನ್ನು ಶೀಘ್ರ ಪ್ರಕಟಿಸಲಾಗುವುದು. ಹೊರನಾಡು- ಗಡಿನಾಡು ಕಡ್ಡಾಯ ಕನ್ನಡ ಪರೀಕ್ಷೆ ಮೇ 22ರಂದು ನಡೆಯಲಿದೆ ಎಂದು ಕೆಇಎ ಪ್ರಕಟಣೆ ತಿಳಿಸಿದೆ.

ಕೆಲಸದ ಅವಧಿ ಹೆಚ್ಚಳಕ್ಕೆ ಸ್ವಪಕ್ಷೀಯರಿಂದಲೇ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಖಾನೆಗಳಲ್ಲಿ ಕೆಲಸದ ಅವಧಿಯನ್ನು 12 ಗಂಟೆಗಳಿಗೆ ಹೆಚ್ಚಿಸಿರುವ, ಮಹಿಳೆಯರಿಗೆ ರಾತ್ರಿಪಾಳಿ ಕೆಲಸಕ್ಕೆ ಅನುವು ಮಾಡಿಕೊಟ್ಟಿರುವ ‘ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ಮಸೂದೆ-2023’ಗೆ ಆಡಳಿತ ಪಕ್ಷದ ಆಯನೂರು ಮಂಜುನಾಥ್, ತೇಜಸ್ವಿನಿ ಗೌಡ ವಿರೋಧ ವ್ಯಕ್ತಪಡಿಸಿದರು.

ವಿಧಾನಸಭೆಯಲ್ಲಿ ಅಂಗೀಕಾರಗೊಂಡ ಮಸೂದೆಯನ್ನು ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಶುಕ್ರವಾರ ವಿಧಾನ ಪರಿಷತ್‌ನಲ್ಲಿ ಮಂಡಿಸಿದ ನಂತರ ನಡೆದ ಚರ್ಚೆಯಲ್ಲಿ ಮಾತನಾಡಿದ ಆಯನೂರು, ಬಡವರನ್ನು ಶೋಷಿಸುವ, ಮಾನವೀಯತೆಗೆ ವಿರುದ್ಧವಾದ ಮಸೂದೆಯ ಅಂಗೀಕಾರಕ್ಕೆ ಅವಸರ ಬೇಡ, ಸಾಕಷ್ಟು ಚರ್ಚಿಸಿದ ನಂತರ ಕೆಲ ಬದಲಾವಣೆಗಳನ್ನು ಮಾಡಬಹುದು ಎಂದು ಸಲಹೆ ನೀಡಿದರು.

ಉದ್ಯಮಿಗಳಿಗೆ, ಐಟಿ,ಬಿಟಿ ಕಂಪನಿಗಳಿಗೆ ಅನುಕೂಲ ಮಾಡಿಕೊಡಲು ಮಸೂದೆ ಮಂಡಿಸಲಾಗಿದೆ. ಒಬ್ಬ ಕಾರ್ಮಿಕ ನಿರಂತರವಾಗಿ 12 ಗಂಟೆ ಕೆಲಸ ಮಾಡಿದರೆ ಕೌಶಲ ಅಭಿವೃದ್ಧಿಯಾಗುತ್ತದೆಯೇ? ಅಸಂಘಟಿತ ವಲಯದ 1.30 ಕೋಟಿ ಸೇರಿ ರಾಜ್ಯದಲ್ಲಿ ಸುಮಾರು 2 ಕೋಟಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಅವರ ಬೆವರಿಗೆ ಗೌರವ ನೀಡಬೇಕು ಎಂದರು.

ಬಿಜೆಪಿಯ ತೇಜಸ್ವಿನಿ ಗೌಡ, ದುಡಿಯುವ ಮಹಿಳೆಯರ ಸುರಕ್ಷತೆಗೆ ಈ ಕಾಯ್ದೆ ಒತ್ತು ನೀಡಿಲ್ಲ. ಕುಟುಂಬ, ಕೆಲಸದ ಮಧ್ಯೆ ಮಹಿಳೆ ತನ್ನ ಮಕ್ಕಳನ್ನು ಸೇರುವುದು, ಆರೋಗ್ಯ ಕಾಪಾಡಿಕೊಳ್ಳುವುದು ಸವಾಲಿನ ಕೆಲಸ. ರಾತ್ರಿಪಾಳಿ ಕೆಲಸ ಅಂತಹ ಅವಕಾಶಗಳಿಂದ ಮಹಿಳೆಯನ್ನು ವಂಚಿತಗೊಳಿಸಬಹುದು ಎಂದು ಬೇಸರ ವ್ಯಕ್ತಪಡಿಸಿದರು.

ಮಸೂದೆ ವಿರೋಧಿಸಿ ಆಯನೂರು ಮಂಜುನಾಥ್ ಹಾಗೂ ಕಾಂಗ್ರೆಸ್, ಜೆಡಿಎಸ್ ಸದಸ್ಯರ ಸಭಾತ್ಯಾಗ ಮಾಡಿದರು. ಬಳಿಕ ಮಸೂದೆಗೆ ಅಂಗೀಕಾರ ನೀಡಲಾಯಿತು.

ಐದು ಮಸೂದೆಗಳಿಗೆ ಒಪ್ಪಿಗೆ

ಕರ್ನಾಟಕ ಧನ ವಿನಿಯೋಗ ಮಸೂದೆ-2023 ಸೇರಿ ಐದು ಮಸೂದೆಗಳಿಗೆ ವಿಧಾನ ಪರಿಷತ್ ಶುಕ್ರವಾರ ಒಪ್ಪಿಗೆ ನೀಡಿತು.

ಕರ್ನಾಟಕ ಧನವಿನಿಯೋಗ ಮಸೂದೆ, ಧನವಿನಿಯೋಗ ಲೇಖಾನುದಾನ ಮಸೂದೆ, ಕರ್ನಾಟಕ ವೃತ್ತಿಗಳ ಕಸುಬುಗಳ, ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ತಿದ್ದುಪಡಿ) ಮಸೂದೆ, ಕಾರ್ಖಾನೆಗಳ ಮಸೂದೆಯನ್ನು ಅಂಗೀಕರಿಸಲಾಯಿತು.

ಪಕ್ಷದ ನೈತಿಕತೆಯ ಪ್ರತಿಬಿಂಬ: ಪ್ರಧಾನಿ ಮೋದಿ ಶ್ಲಾಘನೆ

ನವದೆಹಲಿ: ಕರ್ನಾಟಕ ವಿಧಾನಸಭೆಯಲ್ಲಿ ಬಿ.ಎಸ್. ಯಡಿಯೂರಪ್ಪ ಅವರು ಶುಕ್ರವಾರ ಮಾಡಿದ ವಿದಾಯ ಭಾಷಣವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶ್ಲಾಘಿಸಿದ್ದಾರೆ. ಯಡಿಯೂರಪ್ಪ ಅವರ ಭಾಷಣವು ಪಕ್ಷದ ನೈತಿಕತೆಯನ್ನು ಪ್ರತಿಬಿಂಬಿಸಿದೆ ಎಂದಿದ್ದಾರೆ.

ಕರ್ನಾಟಕ ಬಿಜೆಪಿಯು ಟ್ವೀಟ್ ಮಾಡಿದ್ದ ಯಡಿಯೂರಪ್ಪ ಅವರ ಭಾಷಣವನ್ನು ಮರು ಟ್ವೀಟ್ ಮಾಡಿರುವ ಪ್ರಧಾನಿ ಮೋದಿ ಅವರು, ‘ಬಿಜೆಪಿಯ ಒಬ್ಬ ಕಾರ್ಯಕರ್ತನಾಗಿ ನನಗೆ ಈ ಭಾಷಣವು ಸ್ಫೂರ್ತಿದಾಯಕ ಎನಿಸಿದೆ. ಇದು ನಮ್ಮ ಪಕ್ಷದ ನೈತಿಕತೆಯನ್ನು ಬಿಂಬಿಸಿದೆ. ಜೊತೆಗೆ, ಈ ಭಾಷಣವು ಪಕ್ಷದ ಎಲ್ಲಾ ಕಾರ್ಯಕರ್ತರಿಗೂ ಸ್ಫೂರ್ತಿದಾಯಕವಾಗಿದೆ’ ಎಂದಿದ್ದಾರೆ.

ಪ್ರಧಾನಿ ಮೋದಿ ಅವರ ಟ್ವೀಟ್‌ಗೆ ಪ್ರತಿಕ್ರಿಯಿಸಿರುವ ಬಿ.ಎಸ್. ಯಡಿಯೂರಪ್ಪ ಅವರು, ‘ತಮ್ಮ ಆತ್ಮೀಯ ಹಾರೈಕೆಗಳಿಗೆ ಧನ್ಯವಾದಗಳು. ತಮ್ಮ ಸ್ಫೂರ್ತಿ ತುಂಬಿದ ನಾಯಕತ್ವದಲ್ಲಿ ಪಕ್ಷದ ಕಾರ್ಯಕರ್ತರಾದ ನಾವೆಲ್ಲರೂ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ, ಇನ್ನಷ್ಟು ಹುಮ್ಮಸ್ಸಿನಿಂದ ಕೆಲಸ ಮಾಡಲಿದ್ದೇವೆ’ ಎಂದಿದ್ದಾರೆ.

‘ಶಿಸ್ತುಬದ್ಧ ಲೆಕ್ಕಾಚಾರ: ಹಳಿಗೆ ಬಂದ ಆರ್ಥಿಕತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ನಂತರ ವಿಶ್ವದ ಆರ್ಥಿಕತೆ ನಲುಗಿದ್ದರೂ, ಶಿಸ್ತುಬದ್ಧ ಲೆಕ್ಕಾಚಾರಗಳ ಮೂಲಕ ಸರ್ಕಾರದ ಆರ್ಥಿಕ ಪರಿಸ್ಥಿತಿ ಹಳಿಗೆ ತಂದಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ನಡೆದ ಬಜೆಟ್ ಮೇಲಿನ ಚರ್ಚೆಯಲ್ಲಿ ಅವರು ಮಾತನಾಡಿದರು.

‘ಜನರ ಮೇಲೆ ಸಾಲದ ಹೊರೆ ಹೊರಿಸಲಾಗಿದೆ ಎಂಬ ವಿರೋಧ ಪಕ್ಷಗಳ ಆರೋಪ ಸರಿಯಲ್ಲ. ಕೋವಿಡ್‌ನಿಂದಾಗಿ ಸರ್ಕಾರ ಹಲವು ಸವಾಲುಗಳನ್ನು ಎದುರಿಸಿದೆ. ಕುಸಿದ ಆರ್ಥಿಕ ಪರಿಸ್ಥಿತಿಯಲ್ಲಿ ಆರೋಗ್ಯ ಕ್ಷೇತ್ರ ಸೇರಿದಂತೆ ಸಾಕಷ್ಟು ಕ್ಷೇತ್ರಗಳಿಗೆ ಅಪಾರ ಹಣ ವ್ಯಯಿಸಲಾಗಿದೆ. ಅಂತಹ ಸಂಕಷ್ಟದಲ್ಲೂ ಬದ್ಧತಾ ವೆಚ್ಚ, ಸಬ್ಸಿಡಿ ನಿಭಾಯಿಸಿ ಅಭಿವೃದ್ಧಿಗೆ ಒತ್ತು ನೀಡಿದ್ದೇವೆ’ ಎಂದು ವಿವರ ನೀಡಿದರು.

‘ಬೀದಿಬದಿ ವ್ಯಾಪಾರಿಗಳಿಂದ ಉದ್ಯಮಿಗಳವರೆಗೆ ಎಲ್ಲ ವರ್ಗಗಳೂ ನಲುಗಿದ್ದವು. ₹ 5 ಸಾವಿರ ಕೋಟಿ ತೆರಿಗೆ ಸಂಗ್ರಹ ಕುಸಿದಿತ್ತು. ಆರ್ಥಿಕ ಬಿಕ್ಕಟ್ಟಿನ ಚೇತರಿಕೆಯ ನಂತರ ಒಂದೇ ವರ್ಷದಲ್ಲಿ ಮತ್ತೆ ₹ 13 ಸಾವಿರ ಕೋಟಿ ಹೆಚ್ಚುವರಿ ತೆರಿಗೆ ಸಂಗ್ರಹಿಸಿದ್ದೇವೆ. ಕಳೆದ ಬಜೆಟ್‌ನಲ್ಲಿ ₹ 72 ಸಾವಿರ ಕೋಟಿ ಸಾಲ ಪಡೆಯಲು ಅನುಮತಿ ಪಡೆಯಲಾಗಿತ್ತು. ಅದರಲ್ಲಿ ₹ 68 ಕೋಟಿಯಷ್ಟೇ ತೆಗೆದುಕೊಳ್ಳಲಾಗಿದೆ. ನಾಲ್ಕು ವರ್ಷಗಳ ಅವಧಿಯಲ್ಲಿ ಸಾಲ ಪಡೆಯಲು ಅನುಮತಿ ಸಿಕ್ಕಿದ್ದ ಮೊತ್ತದಲ್ಲಿ ಶೇ 71ರಷ್ಟು ಪಡೆಯಲಾಗಿದೆ’ ಎಂದರು.

ಕಾಂಗ್ರೆಸ್‌ನ ಎಂ.ನಾಗರಾಜು ಮಾತನಾಡಿ, ‘ಇದು ಕೇಂದ್ರದ ದ್ರೋಹದ ಕಥೆ ಹೇಳುವ ಬಜೆಟ್. ಬಿಜೆಪಿ ಬಣ್ಣಿಸಿದಂತೆ ಇದು ಅಮೃತಕಾಲದ ಬಜೆಟ್ ಅಲ್ಲ, ಅಂಧ ಕಾಲ ಎನ್ನಬೇಕು. ಕಾಂಗ್ರೆಸ್ ಹಲವು ದಶಕಗಳು ಮಾಡಿದ್ದಕ್ಕಿಂತ ದುಪ್ಪಟ್ಟು ಸಾಲ ಮೂರೂವರೆ ವರ್ಷಗಳಲ್ಲಿ ಮಾಡಲಾಗಿದೆ’ ಎಂದು ಟೀಕಿಸಿದರು.

ಮಹೇಶ ಜೋಶಿಗೆ ಸಚಿವರ ಚೀಟಿ

ವಿಧಾನ ಪರಿಷತ್‌ನ ಪತ್ರಕರ್ತರ ಗ್ಯಾಲರಿಯಲ್ಲಿ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ ಜೋಶಿ ಕುಳಿತಿದ್ದರು. ಅದನ್ನು ಗಮನಿಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ಸುನಿಲ್‌ಕುಮಾರ್ ಮಾರ್ಷಲ್ ಬಳಿ ಚೀಟಿ ಕಳುಹಿಸಿದರು.

‘ತಾವು ಅಲ್ಲಿ ಕುಳಿತುಕೊಳ್ಳಬಾರದು, ದಯವಿಟ್ಟು ಹೊರಗೆ ಕುಳಿತಿರಿ ಬಂದು ಭೇಟಿ ಮಾಡುತ್ತೇನೆ’ ಎಂದು ಚೀಟಿಯಲ್ಲಿ ವಿನಂತಿಸಿದ್ದರು. ಅದನ್ನು ಓದಿ ವಿಚಲಿತರಾದ ಜೋಶಿ ಸಚಿವರ ಮುಖ ನೋಡಿದರು. ಸುನಿಲ್‌ಕುಮಾರ್ ಅಲ್ಲಿಂದಲೇ ಕೈಮುಗಿದರು. ಜೋಶಿ ತಕ್ಷಣ ಜಾಗ ಖಾಲಿ ಮಾಡಿದರು.

ಬಹು ಮಾಧ್ಯಮ ಪ್ರಜಾವಾಣಿ @75
www.prajavani.net

ಇಂದು

ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ನಾಳೆ

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ

ಸೆಲೆಬ್ರಿಟಿ PREMIERE

ಇಂದುಶ್ರೀ ರವೀಂದ್ರ
ಧ್ವನಿಮಾಯಾ ಕಲಾವಿದೆ

ಬೆಳಿಗ್ಗೆ 10 ಕ್ಕೆ

ಗೊಂಬೆ ಒಡತಿಯ ಮನದಾಳದ ಮಾತು

Prajavani.net Prajavani Prajavani

15ನೇ ವಿಧಾನಸಭೆ: ಮುಗಿದ ಅಧ್ಯಾಯ

ಒಂದನೇ ಪುಟದಿಂದ

2018ರಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರ ಹೊಮ್ಮಿದರೂ ಬಹುಮತಕ್ಕೆ ಕೊರತೆ ಆಗಿತ್ತು. ಆದರೆ, ತಾವು ಬಹುಮತ ಸಾಬೀತುಪಡಿಸುವುದಾಗಿ ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಆದರೆ, ಬಹುಮತ ಸಾಬೀತು ಮಾಡಲಾಗದೇ ಮೂರೇ ದಿನಗಳಲ್ಲಿ ನಿರ್ಗಮಿಸಬೇಕಾಯಿತು.

ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವುದಾಗಿ ಹೇಳಿಕೊಂಡ ಕಾಂಗ್ರೆಸ್, ಜೆಡಿಎಸ್‌ಗೆ ಬೇಷರತ್ ಬೆಂಬಲ ಘೋಷಿಸಿ, ಎಚ್‌.ಡಿ.ಕುಮಾರಸ್ವಾಮಿ ಅವರನ್ನು ಮುಖ್ಯಮಂತ್ರಿ ಮಾಡಲು ಒಪ್ಪಿಕೊಂಡಿತು. ಇದರ ಫಲವಾಗಿ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಿತು. ಮುಖ್ಯಮಂತ್ರಿ ಪದಗ್ರಹಣ ಕಾರ್ಯಕ್ರಮಕ್ಕೆ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿದ್ದ ರಾಜ್ಯಗಳ ಹಲವು ಮುಖ್ಯಮಂತ್ರಿಗಳು ಮತ್ತು ವಿವಿಧ ಪಕ್ಷಗಳ ಮುಖಂಡರು ಭಾಗವಹಿಸಿದ್ದರು.

ಆರಂಭದಿಂದಲೇ ಎರಡೂ ಪಕ್ಷಗಳ ಮಧ್ಯೆ ಸಾಮರಸ್ಯ ಇರಲಿಲ್ಲ. ಎಚ್‌.ಡಿ. ಕುಮಾರಸ್ವಾಮಿ ಮತ್ತು ಸಿದ್ದರಾಮಯ್ಯ ಅವರ ಮಧ್ಯೆ ಮುಸುಕಿನ ಗುದ್ದಾಟ ತೀವ್ರವಾಗಿತ್ತು. ಅಂತಿಮವಾಗಿ ಕಾಂಗ್ರೆಸ್ ಮತ್ತು ಬಿಜೆಪಿಯಿಂದ 17 ಶಾಸಕರು ಬಂಡೆದ್ದು, ತಮ್ಮ ಶಾಸಕ ಸ್ಥಾನಗಳಿಗೆ ರಾಜೀನಾಮೆ ನೀಡಿ, ಬಿಜೆಪಿಯನ್ನು ಸೇರಿದರು. ಮೈತ್ರಿ ಸರ್ಕಾರ ಒಂದು ವರ್ಷ ಎರಡು ತಿಂಗಳು ಮಾತ್ರ ಅಧಿಕಾರದಲ್ಲಿತ್ತು. ‘ಆಪರೇಷನ್ ಕಮಲ’ದಿಂದಾಗಿ ಮೈತ್ರಿ ಸರ್ಕಾರ ಬಹುಮತ ಕಳೆದುಕೊಂಡು, ಮುಖ್ಯಮಂತ್ರಿ ಸ್ಥಾನಕ್ಕೆ ಕುಮಾರಸ್ವಾಮಿ ರಾಜೀನಾಮೆ ನೀಡಿದರು. ರಾಜೀನಾಮೆ ಕೊಟ್ಟ ಶಾಸಕರನ್ನು ಅಂದಿನ ವಿಧಾನಸಭಾಧ್ಯಕ್ಷ ಕೆ.ಆರ್. ರಮೇಶ್‌ಕುಮಾರ್ ಅನರ್ಹಗೊಳಿಸಿದರು. ಅದು ನ್ಯಾಯಾಲಯದ ಮೆಟ್ಟಿಲೇರಿತು.

ಶಾಸಕರ ರಾಜೀನಾಮೆಯಿಂದಾಗಿ ಸದನ ಸದಸ್ಯರ ಒಟ್ಟು ಸಂಖ್ಯೆ ಇಳಿಕೆಯಾಗಿದ್ದರಿಂದ, ಅಂದು ಅತಿ ಹೆಚ್ಚು ಸದಸ್ಯರನ್ನು ಹೊಂದಿದ್ದ ಬಿಜೆಪಿಗೆ ಬಹುಮತ ದೊರೆಯಿತು. ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಪ್ರಮಾಣ ಸ್ವೀಕರಿಸಿದರು. ಸಂಪುಟ ವಿಸ್ತರಣೆಗೆ ಬಿಜೆಪಿ ವರಿಷ್ಠರು ಒಂದು ತಿಂಗಳು ಒಪ್ಪಿಗೆ ಸೂಚಿಸಲಿಲ್ಲ. ಭಾರಿ ಪ್ರವಾಹ ಉಂಟಾಗಿ ಜನ ಸಂಕಷ್ಟಕ್ಕೆ ಸಿಲುಕಿದ್ದರು. ಯಡಿಯೂರಪ್ಪ ಒಬ್ಬರೇ ಓಡಾಡಿ ಪರಿಹಾರದ ಕ್ರಮಗಳನ್ನು ಕೈಗೊಂಡರು.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಒಂದು ವರ್ಷ ಮುಗಿಸುತ್ತಿದ್ದಂತೆ ಮುಖ್ಯಮಂತ್ರಿ ಬದಲಾವಣೆ ವಿಚಾರ ಮುನ್ನೆಲೆಗೆ ಬಂದಿತು. ಅಷ್ಟರಲ್ಲೇ ಕೋವಿಡ್ ಆಕ್ರಮಣ ಎದುರಾಯಿತು. ಎರಡು ವರ್ಷ ಹಾಗೂ ವರಿಷ್ಠರನ್ನು ಸಂಭಾಳಿಸಿದ ಯಡಿಯೂರಪ್ಪ, ಎರಡು ವರ್ಷ ಪೂರ್ಣಗೊಂಡ ದಿನ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ಆ ಬಳಿಕ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಇವರ ಅವಧಿಯಲ್ಲೂ ಸಂಪುಟ ವಿಸ್ತರಣೆ ತಡವಾಯಿತು. ಐದು ಸಚಿವ ಸ್ಥಾನಗಳನ್ನು ಕೊನೆಗೂ ಭರ್ತಿ ಮಾಡಲು ಸಾಧ್ಯವಾಗಲಿಲ್ಲ. ಮುಖ್ಯಮಂತ್ರಿಯಾಗಿ ಆರು ತಿಂಗಳಲ್ಲೇ ಬೊಮ್ಮಾಯಿ ಬದಲಾವಣೆಯ ವದಂತಿಗಳು ಜೋರಾಗಿಯೇ ಹಬ್ಬಿದವು.

ಹೀಗೆ ಮೂವರು ಮುಖ್ಯಮಂತ್ರಿಗಳನ್ನು ಈ ಅವಧಿಯಲ್ಲಿ ನಾಡು ಕಂಡಿತು. ಮುಖ್ಯಮಂತ್ರಿಯಾಗಿ ಬೊಮ್ಮಾಯಿ, ಸಭಾಧ್ಯಕ್ಷರಾಗಿ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ವಿರೋಧ ಪಕ್ಷದ ನಾಯಕರಾಗಿ ಸಿದ್ದರಾಮಯ್ಯ ಅವರಿಗೆ ಇದು ಕೊನೆಯ ಕಲಾಪವಾಗಿದೆ.

ಗದ್ಗದಿತರಾದ ಸಭಾಧ್ಯಕ್ಷ ಕಾಗೇರಿ

ಕಲಾಪದ ಕೊನೆಯಲ್ಲಿ ತಮ್ಮ ನಾಲ್ಕು ವರ್ಷಗಳ ಅವಧಿಯ ಸಿಂಹಾವಲೋಕನ ಮಾಡಿದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಗದ್ಗದಿತರಾದರು. ಮಾತು ಹೊರಡದಂತಾಯಿತು. ನೀರು ಕುಡಿದು ಮತ್ತೆ ಸಾವರಿಸಿಕೊಂಡರು. ಹೆಚ್ಚು ಮಾತನಾಡಲಾಗದೇ ಕಲಾಪಕ್ಕೆ ತೆರೆ ಎಳೆದರು.

‘ದೇಶದಲ್ಲಿ ಜನ ಭಾಷೆ, ಜಾತಿ, ರಾಜ್ಯ ಎಂಬ ಸೀಮಿತವಾಗಿ ಯೋಚನೆ ಮಾಡುವ ಸ್ಥಿತಿ ಇದೆ. ಎಲ್ಲಕ್ಕಿಂತ ದೇಶವೇ ಮೊದಲು ಎಂಬ ಭಾವನೆ ಬಂದಾಗ ದೇಶ ಇನ್ನಷ್ಟು ಸುಭದ್ರವಾಗಿ ಎಲ್ಲ ರೀತಿಯಿಂದಲೂ ಪ್ರಗತಿ ಸಾಧ್ಯವಿದೆ. ಜನರ ಅಭ್ಯುದಯವೂ ಆಗಲಿದೆ. ಆದರೆ, ಜಾತಿ,ಭಾಷೆ ಇತ್ಯಾದಿಗಳ ವಿಚಾರದಲ್ಲಿ ಜನರನ್ನು ಒಡೆಯುವ ಹಿತಾಸಕ್ತಿಗಳು ನಿರಂತರವಾಗಿ ಕೆಲಸ ಮಾಡುತ್ತಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಅಧ್ಯಾತ್ಮ ಜ್ಞಾನದ ಕಾರಣಕ್ಕೆ ಭಾರತ ವಿಶ್ವದಲ್ಲಿ ಗೌರವಿಸಲ್ಪಡುತ್ತಿದೆ. ಅದರ ಪುನರುತ್ಥಾನವಾಗಬೇಕು. ಮುಂದಿನ ದಿನಗಳಲ್ಲಿ ಸದನಕ್ಕೆ ಒಳ್ಳೆಯವರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿ ಬರಬೇಕು ಮತ್ತು ಒಳ್ಳೆಯ ತಂಡ ಸರ್ಕಾರವನ್ನು ಮುನ್ನಡೆಸಬೇಕು’ ಎಂದು ಕಾಗೇರಿ ಹೇಳಿದರು.

167 ದಿನ, 760 ಗಂಟೆ ಕಲಾಪ

ಕಳೆದ ಐದು ವರ್ಷಗಳಲ್ಲಿ 167 ದಿನಗಳು, 760 ಗಂಟೆಗಳು ಕಲಾಪ ನಡೆದಿದೆ. 200 ಮಸೂದೆಗಳು ಮಂಡನೆಯಾಗಿದ್ದು, ಬಹುತೇಕ ಅಂಗೀಕಾರವಾಗಿವೆ. 6,000 ಪ್ರಶ್ನೆಗಳಿಗೆ ಉತ್ತರ ನೀಡಲಾಗಿದೆ. 25,924 ಪ್ರಶ್ನೆಗಳಿಗೆ ಲಿಖಿತವಾಗಿ ಉತ್ತರ ನೀಡಲಾಗಿದೆ. ಜೆಡಿಎಸ್‌ನ ಕೆ.ಎಸ್. ಲಿಂಗೇಶ್ ಮತ್ತು ಬಿಜೆಪಿ ಸಿ.ಎಂ.ನಿಂಬಣ್ಣನವರ ಅವರು 167 ದಿನಗಳೂ ತಪ್ಪದೇ ಕಲಾಪಕ್ಕೆ ಹಾಜರಾಗಿದ್ದರು.

> **15ನೇ ವಿಧಾನಸಭೆಯಲ್ಲಿ ವಿರೋಧಾಭಾಸವಿರುವ ಪಕ್ಷಗಳು ಒಂದಾಗಿ ಅಧಿಕಾರ ಹಿಡಿದವು. ಬಳಿಕ ನಮ್ಮ ಸರ್ಕಾರ ಬಂದಿತು. ಪ್ರವಾಹ ಬಂದಿತು. ಕೋವಿಡ್ ಸಂಕಷ್ಟದಿಂದ ತತ್ತರಿಸಿತು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> **ದ್ವೇಷ ರಹಿತ ಸಮಾಜ ಕಟ್ಟೋಣ. ದ್ವೇಷ ಮತ್ತು ದುಶ್ಚಟ ಮುಕ್ತ ಸಮಾಜ ನಿರ್ಮಿಸಬೇಕು ಹಾಗೂ ದ್ವೇಷ ಮುಕ್ತ ಚುನಾವಣೆ ನಡೆಯಬೇಕು**
> **ಯು.ಟಿ.ಖಾದರ್**
> ವಿರೋಧ ಪಕ್ಷದ ಉಪ ನಾಯಕ

ಹಿಂದೂ ಮುಖಂಡರ ಹತ್ಯೆಗೆ ಸಂಚು: ವಿಶೇಷ ನ್ಯಾಯಾಲಯದಲ್ಲಿ ಆರೋಪ ಸಾಬೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಯೋತ್ಪಾದನೆ ಕೃತ್ಯ ಎಸಗಲು ಹಾಗೂ ಹಿಂದೂ ಮುಖಂಡರ ಹತ್ಯೆಗೆ ಸಂಚು ರೂಪಿಸಿದ್ದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಮೂವರು ಶಂಕಿತರ ವಿರುದ್ಧದ ಆರೋಪಗಳು ವಿಶೇಷ ನ್ಯಾಯಾಲಯದಲ್ಲಿ ಸಾಬೀತಾಗಿವೆ.

‘ಲಷ್ಕರ್–ಎ–ತಯಬಾ’ ನಿಷೇಧಿತ ಉಗ್ರ ಸಂಘಟನೆ ಜೊತೆ ನಂಟು ಇಟ್ಟುಕೊಂಡಿದ್ದ ಪಾಕಿಸ್ತಾನದ ಮೊಹಮ್ಮದ್ ಫಹಾದ್ ಹೈ ಅಲಿಯಾಸ್ ಖೋಯಾ (30), ಬೆಂಗಳೂರು ಟಿಪ್ಪು ನಗರದ ಸೈಯದ್ ಅಬ್ದುಲ್ ರೆಹಮಾನ್ (25) ಹಾಗೂ ಚಿಂತಾಮಣಿಯ ಅಫ್ಸರ್ ಪಾಷಾ ಅಲಿಯಾಸ್ ಖಷೀರುದ್ದೀನ್ (32) ಅವರನ್ನು ಸಿಸಿಬಿ ಪೊಲೀಸರು 2012ರಲ್ಲಿ ಬಂಧಿಸಿದ್ದರು. ಪಿಸ್ತೂಲ್, 4 ಜೀವಂತ ಗುಂಡುಗಳು, ಎರಡು ಮೊಬೈಲ್ ಹಾಗೂ ಸ್ಫೋಟಕ ವಸ್ತುಗಳನ್ನು ಜಪ್ತಿ ಮಾಡಿದ್ದರು.

ತನಿಖೆ ನಡೆಸಿದ್ದ ಎಸಿಪಿ ಎನ್. ಚಲಪತಿ ನೇತೃತ್ವದ ತಂಡ, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ವಿಚಾರಣೆ ನಡೆಸಿದ್ದ ನ್ಯಾಯಾಲಯವು ಆರೋಪಿಗಳು ತಪ್ಪಿತಸ್ಥರೆಂದು ತೀರ್ಮಾನಿಸಿದೆ. ಶಿಕ್ಷೆ ಪ್ರಮಾಣವನ್ನು ಫೆ. 27ಕ್ಕೆ ಘೋಷಿಸುವ ಸಾಧ್ಯತೆ ಇದೆ. ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಸಿ.ಎ. ರವೀಂದ್ರ ವಾದಿಸಿದ್ದರು.

ಜೈಲಿನಲ್ಲಿ ಸಂಚು: ‘ಪಾಕಿಸ್ತಾನದ ಕರಾಚಿಯ ಉತ್ತರ ನಿಜಾಮ್‌ಬಾದ್‌ನ ಮೊಹಮ್ಮದ್ ಫಹಾದ್ ಹೈ, ತಂದೆ ಅಬ್ದುಲ್ ಹೈ ಜೊತೆ ಮೈಸೂರಿಗೆ ಬಂದಿದ್ದ. ಅಬ್ದುಲ್‌ಗೆ ಇಬ್ಬರು ಪತ್ನಿಯರು. ಒಬ್ಬರು ಭಾರತೀಯರು ಹಾಗೂ ಇನ್ನೊಬ್ಬರು ಪಾಕಿಸ್ತಾನ್‌ದವರು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘ಪಾಕಿಸ್ತಾನದಲ್ಲಿರುವಾಗ ಕೆಲವರ ಜೊತೆ ಒಡನಾಟ ಹೊಂದಿದ್ದ ಮೊಹಮ್ಮದ್ ಫಹಾದ್, ತಂದೆ ಜೊತೆ ಭಾರತಕ್ಕೆ ಬಂದ ಬಳಿಕವೂ ಭಯೋತ್ಪಾದನಾ ಕೃತ್ಯದಲ್ಲಿ ತೊಡಗಿದ್ದ. ಕೇರಳ ಹಾಗೂ ಮೈಸೂರಿನ ವಿಜಯನಗರ ಠಾಣೆಯಲ್ಲಿ ದಾಖಲಾಗಿದ್ದ ದೇಶದ್ರೋಹ ಪ್ರಕರಣದಲ್ಲಿ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಈತನನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು.’

‘ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಮೇಲೆ ನಡೆದಿದ್ದ ಉಗ್ರರ ದಾಳಿ ಪ್ರಕರಣದಲ್ಲಿ ಅಫ್ಸರ್ ಪಾಷಾ ಜೈಲು ಸೇರಿದ್ದ. ಕೊಲೆ ಹಾಗೂ ಕಳ್ಳತನ ಪ್ರಕರಣದಲ್ಲಿ ಸೈಯದ್ ಅಬ್ದುಲ್ ರೆಹಮಾನ್ ಸಹ ಪರಪ್ಪನ ಅಗ್ರಹಾರಕ್ಕೆ ಬಂದಿದ್ದ. ಮೂವರೂ ಜೈಲಿನಲ್ಲಿ ಸ್ನೇಹಿತರಾಗಿದ್ದರು. ಹಿಂದೂ ಮುಖಂಡರನ್ನು ಹತ್ಯೆ ಮಾಡಲು ಹಾಗೂ ರಾಜ್ಯದಲ್ಲಿ ಭಯೋತ್ಪಾದನೆ ಕೃತ್ಯ ಎಸಗಲು ಸಂಚು ರೂಪಿಸಿದ್ದರು. ಮುಸ್ಲಿಂ ಯುವಕರನ್ನು ಪ್ರಚೋದಿಸಿ ಭಯೋತ್ಪಾದನಾ ಕೃತ್ಯಕ್ಕೆ ಬಳಸುವುದು ಆರೋಪಿಗಳ ಉದ್ದೇಶವಾಗಿತ್ತು’ ಎಂದು ಮೂಲಗಳು ತಿಳಿಸಿವೆ.

‘ಮೊಹಮ್ಮದ್ ಫಹಾದ್‌ಗೆ ಎರಡು ಪ್ರಕರಣಗಳಲ್ಲಿ 10 ಶಿಕ್ಷೆಯಾಗಿದೆ. ಅಫ್ಸರ್ ಪಾಷಾಗೆ ಐಐಎಸ್ಸಿ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಆಗಿದೆ’ ಎಂದು ಹೇಳಿವೆ.

ಏರ್ ಇಂಡಿಯಾ ವಿಮಾನ ತುರ್ತು ಭೂಸ್ಪರ್ಶ

ತಿರುವನಂತಪುರ (ಪಿಟಿಐ): ಕೋಯಿಕ್ಕೋಡ್‌ನಿಂದ ಸೌದಿ ಅರೇಬಿಯಾದ ದಮ್ಮಾಮ್‌ಗೆ ಹೊರಟಿದ್ದ ವಿಮಾನದ ಹೈಡ್ರಾಲಿಕ್ ವ್ಯವಸ್ಥೆಯಲ್ಲಿ ವೈಫಲ್ಯ ಕಂಡುಬಂದ ಸಂಶಯದ ಮೇರೆಗೆ ವಿಮಾನವು ತಿರುವನಂತಪುರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ತುರ್ತು ಭೂಸ್ಪರ್ಶ ಮಾಡಿತು.

ಮುಂಜಾಗ್ರತಾ ಕ್ರಮವಾಗಿ, ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿತ್ತು. 168 ಪ್ರಯಾಣಿಕರಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಐಎಕ್ಸ್–385 ವಿಮಾನವು ಮಧ್ಯಾಹ್ನ 12.15ಕ್ಕೆ ನಿಲ್ದಾಣದಲ್ಲಿ ಇಳಿಯಿತು ಎಂದು ವಿಮಾನ ನಿಲ್ದಾಣ ಮೂಲಗಳು ಹೇಳಿವೆ.

ಶಿಲ್ಲಾಂಗ್‌ನಲ್ಲಿ ನಡೆದ ರ್‍ಯಾಲಿಯಲ್ಲಿ ಕಾಂಗ್ರೆಸ್ ನಾಯಕರಿಗೆ ಪ್ರಧಾನಿ ಮೋದಿ ತಿರುಗೇಟು

‘ಮೇಘಾಲಯದಲ್ಲಿ ಕಮಲ ಅರಳಲಿದೆ’

ಶಿಲ್ಲಾಂಗ್ (ಪಿಟಿಐ): ‘ಮೋದಿ ನಿನ್ನ ಸಮಾಧಿ ತೋಡುತ್ತೇವೆ’ (ಮೋದಿ ತೇರಿ ಖಬರ್ ಖುದೇಂಗೆ) ಎಂದು ಗುರುವಾರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಘೋಷಣೆ ಕೂಗಿದ್ದ ಕಾಂಗ್ರೆಸ್ ಕಾರ್ಯಕರ್ತರಿಗೆ ಇಂದು ಇಲ್ಲಿ ಪ್ರಧಾನಿ ಮೋದಿ ತಿರುಗೇಟು ನೀಡಿದರು.

ಇಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ರ್‍ಯಾಲಿಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ‘ದೇಶದ ಜನರಿಂದ ತಿರಸ್ಕೃತರಾದ, ನಿರಾಶೆಯಲ್ಲಿಯೇ ಮುಳುಗಿರುವವರು ಇಂದು ‘ಮೋದಿ ನಿನ್ನ ಸಮಾಧಿ ತೋಡುತ್ತೇವೆ’ ಎನ್ನುತ್ತಿದ್ದಾರೆ. ಆದರೆ, ಮೇಘಾಲಯದ ಜನರು ‘ಮೋದಿ ನಿನ್ನ ಕಮಲ ಅರಳಲಿದೆ’ (ಮೋದಿ ತೇರಾ ಕಲಮ್ ಖಿಲೇಂಗೆ) ಎನ್ನುತ್ತಿದ್ದಾರೆ’ ಎಂದರು.

ದೆಹಲಿಯ ವಿಮಾನ ನಿಲ್ದಾಣದಲ್ಲಿ ಕಾಂಗ್ರೆಸ್ ನಾಯಕ ಪವನ್ ಖೇರಾ ಅವರನ್ನು ಗುರುವಾರ ಬಂಧಿಸಿ ಕ್ರಮವನ್ನು ಖಂಡಿಸಿ ಕಾಂಗ್ರೆಸ್ ಸದಸ್ಯರು ಮೋದಿ ವಿರುದ್ಧ ಘೋಷಣೆ ಕೂಗಿದ್ದರು.

‘ಭಾರತವು ಯಶಸ್ಸಿನ ಹೊಸ ಎತ್ತರಕ್ಕೆ ಏರುತ್ತಿದೆ. ಇದರಲ್ಲಿ ಮೇಘಾಲಯದ ದೊಡ್ಡ ಮಟ್ಟದ ಕೊಡುಗೆಯೂ ಇದೆ. ರಸ್ತೆ, ರೈಲು ಅಥವಾ ವಿಮಾನ ಸಂಪರ್ಕದ ಕೊರತೆಯು ಮೇಘಾಲಯದ ಅಭಿವೃದ್ಧಿಗೆ ತೊಡಕಾಗಿದ್ದವು. ಆದರೆ, ಕಳೆದ ಒಂಬತ್ತು ವರ್ಷದಲ್ಲಿ ಕೇಂದ್ರದ ಬಿಜೆಪಿ ಸರ್ಕಾರವು ಇಲ್ಲಿನ ಅಭಿವೃದ್ಧಿಯಲ್ಲಿ ಸಕಾರಾತ್ಮಕ ಬದಲಾವಣೆಗಳನ್ನು ತಂದಿದೆ’ ಎಂದರು.

‘ಕುಟುಂಬ ರಾಜಕಾರಣ ಮಾಡುವ ಪಕ್ಷವು ತನ್ನ ಬೊಕ್ಕಸವನ್ನು ತುಂಬಿಸಿಕೊಳ್ಳಲು ದೆಹಲಿಯನ್ನು ಮಾತ್ರವಲ್ಲ ಮೇಘಾಲಯವನ್ನೂ ಎಟಿಎಂನಂತೆ ಬಳಸಿಕೊಂಡಿದೆ. ಆದ್ದರಿಂದಲೇ ಮೇಘಾಲಯದ ಜನರು ಅವರನ್ನು ತಿರಸ್ಕರಿಸಿದ್ದಾರೆ. ಯುವಕರು, ಮಹಿಳೆಯರು, ಸರ್ಕಾರಿ ನೌಕರರು ಎಲ್ಲರೂ ಮೇಘಾಲಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು ಎಂದು ಬಯಸುತ್ತಿದ್ದಾರೆ’ ಎಂದರು.

ಫೆ.27ರಂದು ಮೇಘಾಲಯದಲ್ಲಿ ಮತದಾನ ನಡೆಯಲಿದೆ.

‘ಈಶಾನ್ಯ ರಾಜ್ಯಗಳು ಕಾಂಗ್ರೆಸ್‌ಗೆ ಎಟಿಎಂ ಆಗಿದ್ದವು’

ದೀಮಾಪುರ (ನಾಗಾಲ್ಯಾಂಡ್) (ಪಿಟಿಐ): ‘ಭಾರತದ ಈಶಾನ್ಯ ರಾಜ್ಯಗಳನ್ನು ಕಾಂಗ್ರೆಸ್ ಎಟಿಎಂನಂತೆ ಬಳಸಿಕೊಂಡಿತು. ಆದರೆ, ಬಿಜೆಪಿಯು ಈ ಎಂಟು ರಾಜ್ಯಗಳನ್ನು ‘ಅಷ್ಟ ಲಕ್ಷ್ಮಿ’ಯರಂತೆ ನೋಡಿಕೊಂಡಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದರು.

ಇಲ್ಲಿ ನಡೆದ ಚುನಾವಣಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ‘ಈ ಹಿಂದೆ ರಾಜ್ಯದಲ್ಲಿ ವಿಭಜಕ ರಾಜಕಾರಣವಿತ್ತು. ಆದರೆ, ಇದನ್ನು ನಾವು ಇಂದು ಪವಿತ್ರ ಆಡಳಿತವನ್ನು ನೀಡಿದ್ದೇವೆ. ಧರ್ಮ ಅಥವಾ ಪ್ರದೇಶದ ಹೆಸರಿನಲ್ಲಿ ಜನರನ್ನು ತಾರತಮ್ಯದಿಂದ ನೋಡುವುದು ಅಕ್ಷಮ್ಯ’ ಎಂದರು.

‘ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ನಾಗಾಲ್ಯಾಂಡ್‌ನಲ್ಲಿ ರಾಜಕೀಯ ಅಸ್ಥಿರತೆ ಇತ್ತು. ಕಾಂಗ್ರೆಸ್ ಪಕ್ಷವು ದೆಹಲಿಯಿಂದ ಈಶಾನ್ಯ ರಾಜ್ಯಗಳ ನಿಯಂತ್ರಣ ಮಾಡುತ್ತಿತ್ತು. ಇಲ್ಲಿನ ಅಭಿವೃದ್ಧಿಗಾಗಿ ಮೀಸಲಿದ್ದ ಹಣವನ್ನು ಕೊಳ್ಳೆಹೊಡೆದರು. ಕುಟುಂಬ ರಾಜಕಾರಣಕ್ಕೆ ಮಾತ್ರವೇ ಪ್ರಾಮುಖ್ಯತೆ ನೀಡಿದರು. ಮತ ಪಡೆದ ನಂತರ ಇಲ್ಲಿನ ಜನರನ್ನು ಮರೆತರು’ ಎಂದು ದೂರಿದರು.

‘ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ, 1958 ಅನ್ನು ರದ್ದುಪಡಿಸಿ, ನಾಗಾಲ್ಯಾಂಡ್‌ನಲ್ಲಿ ಶಾಶ್ವತ ಶಾಂತಿ ನೆಲೆಸಲು ನ್ಯಾಷನಲ್ ಡೆಮಾಕ್ರಟಿಕ್ ಅಲಯನ್ಸ್ (ಎನ್‌ಡಿಎ) ಸರ್ಕಾರವು ಕಠಿಣ ಪರಿಶ್ರಮ ಪಡುತ್ತಿದೆ’ ಎಂದರು.

ನಾಗಾಲ್ಯಾಂಡ್‌ನಲ್ಲಿ ಹಿಂಸೆಯ ಪ್ರಕರಣಗಳು ಶೇ 75ರಷ್ಟು ಕಡಿಮೆ ಆಗಿವೆ. ಶಾಂತಿ, ಪ್ರಗತಿ ಹಾಗೂ ಸಮೃದ್ಧಿ ಎನ್‌ಡಿಎ ಸರ್ಕಾರದ ಮೂರು ಮಂತ್ರಗಳಾಗಿವೆ ಎಂದರು.



ನಾಗಾಲ್ಯಾಂಡ್‌ನಲ್ಲಿ ಶುಕ್ರವಾರ ನಡೆದ ಚುನಾವಣಾ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ನಾಗಾಲ್ಯಾಂಡ್‌ನ ಮುಖ್ಯಮಂತ್ರಿ ನೈಫ್ಯೂ ರಿಯೊ ಅವರು ಸನ್ಮಾನಿಸಿದರು —ಪಿಟಿಐ ಚಿತ್ರ

ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತವರು ಜಿಲ್ಲೆಯಲ್ಲಿ ಪ್ರಕರಣ

ಚಿಕಿತ್ಸೆ ಸಿಗದೆ ಮಹಿಳೆ ಸಾವು: ದೂರು

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ (ಚಿಕ್ಕಬಳ್ಳಾಪುರ ಜಿಲ್ಲೆ): ತಾಲ್ಲೂಕಿನ ಬಿಳ್ಳೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಕಾಲಕ್ಕೆ ಚಿಕಿತ್ಸೆ ದೊರೆಯದೆ ಮಂಗಮ್ಮ (35) ಎಂಬುವರು ಶುಕ್ರವಾರ ಮೃತಪಟ್ಟಿದ್ದಾರೆ ಎಂಬ ದೂರು ಕೇಳಿಬಂದಿದೆ.

ಬಿಳ್ಳೂರು ಗ್ರಾಮ ಹೊರವಲಯದ ಗುಡಿಸಲಿನಲ್ಲಿ ಅವರು ವಾಸವಾಗಿದ್ದರು. ಮಂಗಮ್ಮ ಒಂದು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಜ್ವರ ಹೆಚ್ಚಿದ ಕಾರಣ ಬೆಳಿಗ್ಗೆ 10ಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಂಬಂಧಿಕರು ಕರೆ ತಂದಿದ್ದಾರೆ. ಆದರೆ, ಸಕಾಲದಲ್ಲಿ ವೈದ್ಯರು ಮತ್ತು ಸಿಬ್ಬಂದಿ ಸೂಕ್ತ ಚಿಕಿತ್ಸೆ ನೀಡಿಲ್ಲ ಎಂದು ಮಂಗಮ್ಮ ಅವರ ಸಂಬಂಧಿಕರು ಮತ್ತು ನೆರೆಹೊರೆಯವರು ದೂರಿದ್ದಾರೆ.

'ಹೆಚ್ಚಿನ ಚಿಕಿತ್ಸೆಗೆ ಬಾಗೇಪಲ್ಲಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸುವಂತೆ ಸಿಬ್ಬಂದಿ ತಿಳಿಸಿದ್ದಾರೆ. ಆಸ್ಪತ್ರೆಗೆ ಕರೆದೊಯ್ಯಲು ಆರೋಗ್ಯ ಕೇಂದ್ರದಲ್ಲಿ ಆಂಬುಲೆನ್ಸ್ ಸಹ ಇರಲಿಲ್ಲ. ಆಂಬುಲೆನ್ಸ್‌ಗಾಗಿ ಬಾಗೇಪಲ್ಲಿ ತಾಲ್ಲೂಕು ಆಸ್ಪತ್ರೆಗೆ ಕರೆ ಮಾಡಿದರೆ 2 ಗಂಟೆ ತಡವಾಗುತ್ತದೆ ಎಂದು ಅಲ್ಲಿನ ಸಿಬ್ಬಂದಿ ತಿಳಿಸಿದ್ದಾರೆ. ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದೆ ಮಹಿಳೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ' ಎಂದು ಆರೋಪಿಸಿದ್ದಾರೆ.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ತವರು ಜಿಲ್ಲೆಯಾದ ಚಿಕ್ಕಬಳ್ಳಾಪುರ ಜಿಲ್ಲೆಯ ಗಡಿ ಭಾಗದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಇಂದಿಗೂ ಅಗತ್ಯ ವೈದ್ಯರು ಹಾಗೂ ಸಿಬ್ಬಂದಿ ಇಲ್ಲ.

'ಬಿಳ್ಳೂರು ಆರೋಗ್ಯ ಕೇಂದ್ರದಲ್ಲಿ ಅಗತ್ಯ ವೈದ್ಯರು, ಸಿಬ್ಬಂದಿ ಇಲ್ಲ. ರೋಗಿಗಳು ಗಂಟೆಗಟ್ಟಲೇ ಕಾಯಬೇಕು. ತುರ್ತು ಚಿಕಿತ್ಸೆ ಪಡೆಯಲು ಬರುವ ರೋಗಿಗಳು ಪರದಾಡುತ್ತಾರೆ. ಬಾಗೇಪಲ್ಲಿ ಹಾಗೂ ಚಿಂತಾಮಣಿ ತಾಲ್ಲೂಕು ಕೇಂದ್ರಗಳು ಗ್ರಾಮದಿಂದ 40 ಕಿ.ಮೀ. ದೂರದಲ್ಲಿವೆ' ಎಂದು ಬಿಳ್ಳೂರಿನ ಅನಿಲ್ ಎಂಬುವವರು 'ಪ್ರಜಾವಾಣಿ'ಗೆ ತಿಳಿಸಿದರು.

'3ಂಗಳಿನಿಂದ ತರಬೇತಿಯಲ್ಲಿ ವೈದ್ಯರು'

ಬಿಳ್ಳೂರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಒಂದು ತಿಂಗಳ ಕಾಲ ತರಬೇತಿ ಪಡೆಯಲು ತೆರಳಿದ್ದಾರೆ. ಶಿವಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರನ್ನು ವಾರದಲ್ಲಿ ಮೂರು ದಿನ ಬಿಳ್ಳೂರಿನಲ್ಲಿ ಕಾರ್ಯ ನಿರ್ವಹಿಸಲು ನಿಯೋಜಿಸಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಸಿ.ಎನ್. ಸತ್ಯನಾರಾಯಣರೆಡ್ಡಿ ತಿಳಿಸಿದರು.

'ಒಂದು ತಿಂಗಳಿನಿಂದ ಮಹಿಳೆ ಅನಾರೋಗ್ಯದಿಂದ ಬಳಲಿದ್ದಾರೆ. ಚಿಕಿತ್ಸೆಗೆ ಬಿಳ್ಳೂರು ಕೇಂದ್ರಕ್ಕೆ ಕರೆತಂದಾಗ ವೈದ್ಯರು ಇರಲಿಲ್ಲ. ಆದರೆ, ಕೇಂದ್ರದಲ್ಲಿದ್ದ ವೈದ್ಯಕೀಯ ಸಿಬ್ಬಂದಿ ಆಕೆಯ ತಪಾಸಣೆ ನಡೆಸಿದ್ದಾರೆ. ಆಗ ಆಕೆಯ ದೇಹ ನಿಸ್ತೇಜಗೊಂಡಿರುವುದು ಕಂಡುಬಂದಿದೆ' ಎಂದರು.

ಆಸ್ತಿ ಕಲಹ: ಒಂದೇ ಕುಟುಂಬದ ನಾಲ್ವರ ಕೊಲೆ

ಪ್ರಜಾವಾಣಿ ಚಿತ್ರ

ಭಟ್ಕಳ: ತಾಲ್ಲೂಕಿನ ಹಾಡುವಳ್ಳಿಯ ಓಣಿಬಾಗಿಲು ಗ್ರಾಮದಲ್ಲಿ ಆಸ್ತಿ ವಿಚಾರಕ್ಕೆ ಶುಕ್ರವಾರ ನಾಲ್ವರನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ಹಾಡುವಳ್ಳಿ ಓಣಿಬಾಗಿಲು ನಿವಾಸಿ ಶಂಭು ಭಟ್ (70), ಅವರ ಪತ್ನಿ ಮಾದೇವಿ ಭಟ್(60), ಅವರ ಮಗ ರಾಘು (ರಾಜು ಭಟ್) (40) ಹಾಗೂ ಸೊಸೆ ಕುಸುಮಾ ಭಟ್(35) ಕೊಲೆಯಾದವರು.

'ಕುಟುಂಬದ ಸಂಬಂಧಿ ವಿನಯ ಶ್ರೀಧರ ಭಟ್ ಕತ್ತಿಯಿಂದ ಹಲ್ಲೆ ಮಾಡಿ ಈ ಕೃತ್ಯ ಎಸಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಏಳು ತಿಂಗಳ ಹಿಂದೆ ಶಂಭು ಭಟ್ ಅವರ ಹಿರಿಯ ಮಗ ಶ್ರೀಧರ ಭಟ್ ಕ್ಯಾನ್ಸರ್‌ನಿಂದ ಮೃತಪಟ್ಟಿದ್ದರು. ಅವರ ಮರಣದ ನಂತರ ಅವರ ಪತ್ನಿ ವಿದ್ಯಾ ಭಟ್, ಕುಟುಂಬದ ಆಸ್ತಿಯಲ್ಲಿ ಪಾಲು ಕೇಳಿ ಜಗಳ ಮಾಡಿಕೊಂಡಿದ್ದರು. ಮಾತುಕತೆ ನಂತರ ಶಂಭು ಭಟ್ಟರು ಸೊಸೆ ವಿದ್ಯಾಳಿಗೆ ಆಸ್ತಿಯಲ್ಲಿ ಪಾಲು ನೀಡಿದ್ದರು. ಇದೇ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದ ವಿದ್ಯಾಳ ಸಹೋದರ ಹಲ್ಯಾಣಿ ನಿವಾಸಿ ವಿನಯ ಶ್ರೀಧರ ಭಟ್ ಶುಕ್ರವಾರ ಈ ಕೃತ್ಯ ಎಸಗಿದ್ದಾರೆ' ಎಂದು ಪ್ರಾಥಮಿಕ ತನಿಖೆ ನಡೆಸಿದ ಭಟ್ಕಳ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಕೃತ್ಯ ನಡೆಯುವ ವೇಳೆ ಹತ್ತು ವರ್ಷದ ಮಗು ಪಕ್ಕದ ಮನೆಯಲ್ಲಿತ್ತು. ನಾಲ್ಕು ವರ್ಷದ ಇನ್ನೊಂದು ಮಗು ಮಲಗಿತ್ತು. ಹೀಗಾಗಿ ಇವರಿಬ್ಬರು ಅಪಾಯದಿಂದ ಪಾರಾಗಿದ್ದಾರೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಎಸ್ಸಿ– ಎಸ್ಟಿ ಮೀಸಲಾತಿ ಹೆಚ್ಚಳ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಪ್ರಮಾಣ ಹೆಚ್ಚಿಸಿರುವ ಸರ್ಕಾರದ ಕ್ರಮ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಬೆಂಗಳೂರಿನ ಕೆಎಲ್‌ಇ ಕಾನೂನು ಕಾಲೇಜಿನ ವಿದ್ಯಾರ್ಥಿ ಮಹೇಶ್ ಎನ್. ಉಪ್ಪಾರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯ ಪೀಠ ವಿಚಾರಣೆ ನಡೆಸಿ ಪ್ರತಿವಾದಿಯಾದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಅರ್ಜಿಯಲ್ಲಿ ಏನಿದೆ?: 'ಶೈಕ್ಷಣಿಕ ಸಂಸ್ಥೆಗಳಲ್ಲಿನ ಸೀಟು, ರಾಜ್ಯ ಸರ್ಕಾರಿ ನೇಮಕಾತಿ ಅಥವಾ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿಯವರ ಮೀಸಲು ಪ್ರಮಾಣವನ್ನು ಶೇ 15ರಿಂದ 17ಕ್ಕೆ, ಪರಿಶಿಷ್ಟ ಪಂಗಡದವರಿಗೆ ಶೇ 3ರಿಂದ 7ಕ್ಕೆ ಹೆಚ್ಚಿಸಲಾಗಿದೆ. ಇದು ಸಂವಿಧಾನದ 14 (ಸಮಾನತೆ) 15 (ಸಮಾನ ಉದ್ಯೋಗವಕಾಶ) ಮತ್ತು 16ನೇ (ಜಾತಿ, ಧರ್ಮ, ಜನಾಂಗ, ಲಿಂಗ, ಜನ್ಮಸ್ಥಳ ಹೆಸರಿನಲ್ಲಿ ತಾರತಮ್ಯ ನಿಷೇಧ) ವಿಧಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

'ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ದಿಮೆಗಳು ಮತ್ತು ಎಲ್ಲ ರಾಜ್ಯಗಳಲ್ಲಿ ಒಟ್ಟು 60 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿಯಿವೆ. ಕೇಂದ್ರ ಸರ್ಕಾರವೊಂದರಲ್ಲೇ 30.7 ಲಕ್ಷ, ಕರ್ನಾಟಕ ಸರ್ಕಾರದಲ್ಲಿ 2.3 ಲಕ್ಷ ಹುದ್ದೆಗಳು ಖಾಲಿಯಿವೆ. ಇದರಲ್ಲಿ ಹೆಚ್ಚಿನ ಸಂಖ್ಯೆಯ ಉದ್ಯೋಗಗಳನ್ನು ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿಡಲಾಗಿದೆ. ಆದರೆ, ಇವುಗಳ ಭರ್ತಿ ವಿಳಂಬಕ್ಕೆ ಸರ್ಕಾರಗಳಿಂದ ಯಾವುದೇ ಸ್ಪಷ್ಟನೆ ಇಲ್ಲ' ಎಂದು ಅರ್ಜಿದಾರರು ದೂರಿದ್ದಾರೆ. 'ನಿಯಮದ ಪ್ರಕಾರ ಒಟ್ಟಾರೆ ಮೀಸಲು ಪ್ರಮಾಣವು ಶೇ 50ರಷ್ಟೇ ಇರಬೇಕು. ಹೀಗಾಗಿ, ಕಾಯ್ದೆಯನ್ನು ಸಂವಿಧಾನಬಾಹಿರ ಎಂದು ಘೋಷಿಸಬೇಕು' ಎಂದು ಕೋರಿದ್ದಾರೆ.

ಬಿಹಾರ ವಿಧಾನ ಪರಿಷತ್ ಸದಸ್ಯತ್ವಕ್ಕೆ ಕುಶ್ವಾಹ ರಾಜೀನಾಮೆ

ಪಟ್ನಾ (ಪಿಟಿಐ): ಇತ್ತೀಚೆಗಷ್ಟೇ ಜೆಡಿಯು ತೊರೆದಿದ್ದ ಉಪೇಂದ್ರ ಕುಶ್ವಾಹ ಅವರು ಬಿಹಾರ ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ನೀಡಿದರು. ವಿಧಾನ ಪರಿಷತ್ ಸಭಾಪತಿ ದೇವೇಶ್ ಚಂದ್ರ ಠಾಕೂರ್ ಅವರಿಗೆ ರಾಜೀನಾಮೆ ಪತ್ರ ಸಲ್ಲಿಸಿದರು.

2021ರಲ್ಲಿ ಜೆಡಿಯುಗೆ ಮರಳಿದ್ದ ಕುಶ್ವಾಹ ಅವರು, ತಮ್ಮ ರಾಷ್ಟ್ರೀಯ ಲೋಕ ಸಮತಾ ಪಕ್ಷವನ್ನು ಅದರೊಂದಿಗೆ ವಿಲೀನಗೊಳಿಸಿದ್ದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಿಪಟೂರು–572201
ದೂ :08134–251046 E-mail:apmctiptur@gmail.com
ಕ್ರಮ ಸಂಖ್ಯೆ:ಕೃಮಾಇ/ಕೃಉಮಾಸ/ತಿ/ಅಭಿವಿ/2022–23/1760 ದಿನಾಂಕ: 23.02.2023

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ (2ನೇ ಕರೆ)

ಕೃ.ಉ.ಮಾ.ಸ ತಿಪಟೂರು ವತಿಯಿಂದ 2022–23 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾದ ತಿಪಟೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ರೈತಭವನ ನವೀಕರಣ ಕಾಮಗಾರಿಯ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ವಿವರ ಈ ಕೆಳಗಿನಂತಿದೆ.:–

ಅ ನಂ	ಕಾಮಗಾರಿಗಳ ಸ್ಥಳದ ಹೆಸರು	ಟೆಂಡರ್ ಇಂಡೆಂಟ್ ನಂಬರ್	ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ)	ಮೀಸಲಾತಿ
01	ತಿಪಟೂರು ಮುಖ್ಯ ಪ್ರಾಂಗಣ	APMC/2022-23/BD/WORK_INDENT5370 /CALL-2	81.42	ಸಾಮಾನ್ಯ

ಮೇಲ್ಕಂಡ ಕೋಷ್ಟಕದಲ್ಲಿನ ಕಾಮಗಾರಿಯ ಟೆಂಡರ್‌ನ್ನು ಸ್ವೀಕರಿಸುವ ಕೊನೆಯ ದಿನಾಂಕ:14.03.2023 ರ ಸಂಜೆ 04.00 ಗಂಟೆಯಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://www.eproc.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಚೇರಿ ವೇಳೆಯಲ್ಲಿ ಕಾರ್ಯದರ್ಶಿಯವರಿಂದ ಪಡೆಯಬಹುದಾಗಿದೆ. ತಿದ್ದುಪಡಿ / ಅವಧಿ ವಿಸ್ತರಣೆ ಇದ್ದಲ್ಲಿ ಇ–ಪೋರ್ಟಲ್ ಮೂಲಕ ಮಾತ್ರ ತಿಳಿಸಲಾಗುವುದು. ದಿನಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– (ಎಸ್.ಬಿ.ನ್ಯಾಮಗೌಡ) ಕಾರ್ಯದರ್ಶಿ, ಕೃ.ಉ.ಮಾ.ಸ., ತಿಪಟೂರು.
ಸಹಿ/– (ಫ಼ಿ.ರಮೇಶ) ಆಡಳಿತಾಧಿಕಾರಿಗಳು ಕೃ.ಉ.ಮಾ.ಸ., ತಿಪಟೂರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,ವಿಭಾಗ ವಿಜಯಪುರ
No.EE/MID/VJP/AE-1,2,3,4/4702/TND/2022-23/4285 Date: 21.02.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ "ಇ–ಪ್ರೋಕ್ಯುರಮೆಂಟ್" ಮುಖಾಂತರ ಟೆಂಡರ ಕರೆಯಲಾಗಿದೆ.

ಪ್ರಧಾನ ಕಾಮಗಾರಿಗಳು :– ಒಟ್ಟು 5 ಕಾಮಗಾರಿಗಳು, ಅಂದಾಜು ಮೊತ್ತ **ರೂ.306.51ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳಿಂದ ಆರು(6) ತಿಂಗಳುಗಳು.**

ಅಟಲ ಭೂ–ಜಲ ಕಾಮಗಾರಿಗಳು :– ಒಟ್ಟು 20 ಕಾಮಗಾರಿಗಳು, ಅಂದಾಜು ಮೊತ್ತ **ರೂ.848.00ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

ಎಸ್.ಸಿ.ಪಿ. ಕಾಮಗಾರಿಗಳು :– ಒಟ್ಟು 9 ಕಾಮಗಾರಿಗಳು, ಅಂದಾಜು ಮೊತ್ತ **ರೂ.74.00ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

ಟಿ.ಎಸ್.ಪಿ. ಕಾಮಗಾರಿಗಳು :– ಒಟ್ಟು 2 ಕಾಮಗಾರಿಗಳು, ಅಂದಾಜು ಮೊತ್ತ **ರೂ.49.20ಲಕ್ಷಗಳು, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಾವಧಿ ಮಳೆಗಾಲ ಸಹಿತ ಮೂರು(3) ತಿಂಗಳುಗಳು.**

ಗುತ್ತಿಗೆದಾರರು ಕರ್ನಾಟಕ ಸರಕಾರದ "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://eproc.karnataka.gov.in/eportal/index.seam ನಲ್ಲಿ ಲಾಗಿನ್ ಆಗಿ ದಿನಾಂಕ:27/02/2023 ರಿಂದ Download ಮಾಡಿಕೊಳ್ಳಬಹುದು. ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೆಬ್ ಸೈಟನಲ್ಲಿ ನಿಗದಿತ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್‌ಲೈನ್ ಪೇಮೆಂಟ ಮಾತ್ರ) "ಇ–ಪ್ರೋಕ್ಯುರಮೆಂಟ್" ವೆಬ್ಸೈಟ https://eproc.karnataka.gov.in/eportal/index.seam ನಲ್ಲಿ ಲಾಗಿನ್ ಆಗಿ ದಿನಾಂಕ:06/03/2023ರ 17–30 ಘಂಟೆವರೆಗೆ ಸ್ವೀಕರಿಸಲಾಗುವದು. ಕಾಮಗಾರಿ ಪಡೆಯಲು ಅರ್ಹತೆ, ಶರತ್ತುಗಳು, ಕಾಮಗಾರಿಗಳ ವಿವರ ಇತ್ಯಾದಿಗಳನ್ನು ದಿನಾಂಕ:04/03/2023ರ 17–30 ಘಂಟೆವರೆಗೆ ವಿಭಾಗ ಕಛೇರಿಯಲ್ಲಿ (ಫೋನಃ–08352–277188) ಅಥವಾ "ಇ–ಪ್ರೋಕ್ಯುರಮೆಂಟ್" ಹೆಲ್ಪ ಡೆಸ್ಕನಿಂದ (ಫೋನಃ–080–25501216 ಮತ್ತು 080–25501227) ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ವಿಭಾಗ ವಿಜಯಪುರ
ವಾಸಾಸಂಇ/ವಿಜಯಪುರ/925/ಕೆಎಸ್‌ಎಂಸಿಎ/2022–23

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು – 560001. ದೂ.080–25586520/25589112 ಫ್ಯಾಕ್ಸ್ : 080–25886321
ಇ–ಮೇಲ್: contact@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂಖ್ಯೆ: ಕರಾಮಾನಿಮಂ/ತ್ಯಾನಿಕೋ/764/ಪ್ಲಾಸ್ಟಿಕ್/2022–23/7897 ದಿನಾಂಕ: 21/02/2023

ಸಾರ್ವಜನಿಕ ಸೂಚನಾ ಪ್ರಕಟಣೆ
(ಜಿಟಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ)

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು, 2022 (ತಿದ್ದುಪಡಿಯಂತೆ) ಅಡಿಯಲ್ಲಿ ಬಯೋಡಿಗ್ರೇಡಬಲ್ (CPCB ಪ್ರಮಾಣಪತ್ರವಿಲ್ಲದೆ) ಮತ್ತು ಆಕ್ಸೊ–ಬಯೋಡಿಗ್ರೇಡಬಲ್ ಪ್ಲಾಸ್ಟಿಕ್‌ಗಳ ಹೆಸರಿನಲ್ಲಿ ನಿಷೇಧಿತ ಏಕ ಬಳಕೆಯ ಪ್ಲಾಸ್ಟಿಕ್ (SUP) ಉತ್ಪನ್ನಗಳ ಉತ್ಪಾದನೆ, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ನಿಷೇಧಿಸಿರುವ ಬಗ್ಗೆ ಪ್ರಕಟಣೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, (MoEF& CC) ನವದೆಹಲಿ, ಪರಿಸರ (ಸಂರಕ್ಷಣೆ) ಕಾಯಿದೆ, 1986 ರ ಸೆಕ್ಷನ್ 3, 6 ಮತ್ತು 25 ರ ಅಡಿಯಲ್ಲಿ ಪ್ರಧಾನ ಮಾಡಲಾದ ಅಧಿಕಾರ ವ್ಯಾಪ್ತಿಯಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ (PWM) ನಿಯಮಗಳು, 2016 ಅನ್ನು ಅಧಿಸೂಚಿಸಿದ್ದು, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು (CPCB) ಈ ಅಧಿಸೂಚನೆಯ ಅನುಷ್ಠಾನದ ಕುರಿತು ಎಲ್ಲಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ನಿರ್ದೇಶಿಸಿದೆ.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆ ನಿಯಮಗಳ 4(h) ನಿಯಮದ ಪ್ರಕಾರ, ಬಯೋಡಿಗ್ರೇಡಬಲ್ ಮತ್ತು ಕಾಂಪೋಸ್ಟಬಲ್ ಪ್ಲಾಸ್ಟಿಕ್ ಸರಕುಗಳ ತಯಾರಕರು ಮತ್ತು ಮಾರಾಟಗಾರರು CPCB ಯಿಂದ ಪ್ರಮಾಣೀಕರಿಸಬೇಕು. ಬಯೋಡಿಗ್ರೇಡಬಲ್/ಆಕ್ಸೊ–ಬಯೋಡಿಗ್ರೇಡಬಲ್ ಉತ್ಪನ್ನಗಳು ಎಂದು ಹೇಳಿಕೊಳ್ಳುವ ನಿಷೇಧಿತ SUP ಉತ್ಪನ್ನಗಳನ್ನು ಕೆಲ ಘಟಕಗಳು ಮಾರುಕಟ್ಟೆಯಲ್ಲಿ ತಯಾರಿಸಿ, ಮಾರಾಟ ಹಾಗೂ ಬಳಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಇಲ್ಲಿಯವರೆಗೂ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು, 2022 (ತಿದ್ದುಪಡಿ ಮಾಡಿದಂತೆ) ನಿಯಮ 4(h) ಪ್ರಕಾರ ಬಯೋಡಿಗ್ರೇಡಬಲ್ ಉತ್ಪನ್ನಗಳಿಗೆ CPCB ಯಾವುದೇ ಪ್ರಮಾಣಪತ್ರವನ್ನು ನೀಡಿರುವುದಿಲ್ಲ ಹಾಗು ಆಕ್ಸೊ–ಬಯೋಡಿಗ್ರೇಡಬಲ್ ಪ್ಲಾಸ್ಟಿಕ್‌ಗಳಿಗೆ ಸಹ ಯಾವುದೇ ವಿನಾಯಿತಿ ನೀಡಲಾಗಿರುವುದಿಲ್ಲ.

ಇದಲ್ಲದೆ, ಪಾಲಿಮರ್ ಆಧಾರಿತ, ಜೈವಿಕ ವಿಘಟನೀಯ ಮತ್ತು ಕಾಂಪೋಸ್ಟಬಲ್ ಮತ್ತು ಎಲ್ಲಾ ಗಾತ್ರದ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳ ತಯಾರಿಕೆ, ಪೂರೈಕೆ, ಸಂಗ್ರಹಣೆ, ಸಾಗಣೆ, ಮಾರಾಟ ಮತ್ತು/ಅಥವಾ ವಿತರಿಸುವ ಕುರಿತು ಕರ್ನಾಟಕ ಸರ್ಕಾರವು 11.03.2016 ರಂದು ಪ್ಲಾಸ್ಟಿಕ್ ನಿಷೇಧಿಸಿ ಅಧಿಸೂಚನೆಯನ್ನು ಮತ್ತು 30.06.2022 ರಂದು ಸುತ್ತೋಲೆ ಹೊರಡಿಸಿದೆ.

ಆದ್ದರಿಂದ, ನಿಷೇಧಿತ SUP ಬಯೋಡಿಗ್ರೇಡಬಲ್ (CPCB ಪ್ರಮಾಣಪತ್ರವಿಲ್ಲದೆ) ಮತ್ತು ಆಕ್ಸೊ–ಬಯೋಡಿಗ್ರೇಡಬಲ್ ಪ್ಲಾಸ್ಟಿಕ್ ಉತ್ಪಾದನೆ, ಪೂರೈಕೆ, ಸಂಗ್ರಹಣೆ, ಸಾಗಣೆ, ವಿತರಣೆ, ಮಾರಾಟ ಹಾಗೂ ಬಳಕೆಯನ್ನು ನಿಷೇಧಿಸಿ ಈ ಸೂಚನೆಯನ್ನು ನೀಡಲಾಗಿದೆ.

ಮೇಲಿನ ಯಾವುದೇ ನಿರ್ದೇಶನಗಳನ್ನು ಉಲ್ಲಂಘಿಸಿದಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು, 2016 ರ ನಿಬಂಧನೆಗಳ ಪ್ರಕಾರ ದಂಡ ವಿಧಿಸಿ, ಕಾನೂನು ಕ್ರಮ ಕೈಗೊಳ್ಳಲಾಗುವುದು.

ಸಹಿ/– ಸದಸ್ಯ ಕಾರ್ಯದರ್ಶಿ
DIPR/CP/4930/GREENFMC/2022-23

ನಮ್ಮೆಲ್ಲರ ಚಿತ್ತ, ನೈರ್ಗಿಕ ಸಂಪನ್ಮೂಲಗಳ ಮಿತಬಳಕೆಯತ್ತ; ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಮುಏನೀ ವಿಭಾಗ ನಂ–1, ಮಟ್ಟಿಹಾಳ, ತಾ: ಕೋಲ್ಹಾರ, ಜಿ: ವಿಜಯಪುರ. ದೂರವಾಣಿ ಸಂ: 08426–286126,
ಇ–ಮೇಲ್: kbjnleemli@gmail.com
ಸಂ:ಕೃಭಾಜನಿ(ನಿ)/ಮುಏನೀ/ವಿ–1ಮ/ಯೋ.ಶಾ/ಟೆಂಡರ್/2022–23/1752 ದಿನಾಂಕ:24.02.2023

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಅಧಿಸೂಚನೆ (ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಬೆಂಗಳೂರು, ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ದ್ವಿ–ಲಕೋಟೆ ಪದ್ಧತಿಯಲ್ಲಿ ಒಟ್ಟು 01 ಕಾಮಗಾರಿಯ ಮೂರನೆ ಕರೆ ಇಂಡೆಂಟ್ ಸಂಖ್ಯೆ: 21494 ಕಾಮಗಾರಿಗಯ ಟೆಂಡರಿಗಿಟ್ಟ ಗರಿಷ್ಠ ಮೊತ್ತರೂ. 90.06 ಲಕ್ಷಗಳು ಇರುತ್ತವೆ. ಗುತ್ತಿಗೆದಾರರು ನಿಗದಿಪಡಿಸಿದ ಇ.ಎಮ್.ಡಿ ಮೊತ್ತ/ ಗುತ್ತಿಗೆದಾರರ ದರ್ಜೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ ಶುಲ್ಕ, ಇತ್ಯಾದಿ ವಿವರಗಳನ್ನು https://eproc.karnataka.gov.in/ ಅಥವಾ ಕೆಳಗೆ ಸಹಿ ಮಾಡಿದವರನ್ನು ಕಛೇರಿಯ ಸಮಯದಲ್ಲಿ ದಿನಾಂಕ: **08.03.2023** ಸಮಯ ಸಾಯಂಕಾಲ 05.00 ಗಂಟೆವರೆಗೆ ಸಂಪರ್ಕಿಸಬಹುದು. ದೂರವಾಣಿ 08426–286126. ಸದರಿ ಟೆಂಡರುದಾರರು ದ್ವಿ–ಪ್ರತಿಯಲ್ಲಿ (ತಾಂತ್ರಿಕ್ ಮತ್ತು ಆರ್ಥಿಕ ಬಿಡ್) ಅಪಲೋಡ್ ಮಾಡುವುದು.

ಟೆಂಡರ್ ಅಧಿಸೂಚನೆಯ ಪ್ರಕಾರ ದಿನಾಂಕವಾರು ಘಟನಾವಳಿಗಳು ಈ ಕೆಳಗಿನಂತಿವೆ.

1.1 ಇ–ಟೆಂಡರ್ ದಸ್ತಾವೇಜುಗಳ ವಿವರಗಳು ಗುತ್ತಿಗೆದಾರರಿಗೆದೊರೆಯುವ ದಿನಾಂಕ ಹಾಗೂ ಪೂರ್ಣಗೊಳಿಸಿದ ಇ–ಟೆಂಡರ್ ದಾಖಲೆಗಳನ್ನು **ದಿನಾಂಕ: 27.02.2023 ರಿಂದ 08.03.2023** ರವರೆಗೆ ಸಮಯ **ಸಾಯಂಕಾಲ 5.00** ಘಂಟೆಯವರೆಗೆ ಸಲ್ಲಿಸುವುದು.

1.2 ಲಕೋಟೆ–1 (ತಾಂತ್ರಿಕ್ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು ದಿನಾಂಕ: **10.03.2023** ಸಮಯ ಬೆಳಿಗ್ಗೆ **11.00** ಗಂಟೆಗೆ ನಂತರ ತೆರೆಯಲಾಗುವುದು.

1.3 ಲಕೋಟೆ–2 (ಆರ್ಥಿಕ ಬಿಡ್)ನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃ.ಭಾ.ಜ.ನಿ.ನಿ, ಮು.ಏ.ನೀ, ವಿಭಾಗ ಸಂಖ್ಯೆ–1 ಮಟ್ಟಿಹಾಳ, ಕೋಲ್ಹಾರ ತಾಲೂಕು ವಿಜಯಪುರ ಜಿಲ್ಲೆ ಇವರ ಕಛೇರಿಯಲ್ಲಿ ತೆರೆಯುವುದು ದಿನಾಂಕ: **13.03.2023** ಸಮಯ ಬೆಳಿಗ್ಗೆ **11.00** ಗಂಟೆಗೆ ನಂತರ ತೆರೆಯಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಮುಏನೀ ವಿಭಾಗ ನಂ.1, ಮಟ್ಟಿಹಾಳ
ವಾಸಾಸಂಇ/ವಿಜಯಪುರ/949/ಕೆಎಸ್‌ಎಂಸಿಎ/2022–23

SKYLINE CITY CONSTRUCTION LLP
Arenja Arcade, Office No. 310, Plot No. 4, Sector 17, Vashi, Navi Mumbai, Maharashtra-400705

PUBLIC NOTICE

Smt. Dasanala Mallama W/o Dasanala Mallappa R/o House No 3/1 18th ward, near Jala Anjineya Temple, S.R.Nagar of Hosapete and the successors of Sri Dasanala Mallapa, represented to the under signed that they are the absolute owner of the schedule mentioned land and made the company to execute the agreement of sale and received the earnest money saying that, they will execute the regular registered sale deed in favor of our company, vide agreement dated 19.08.2022 further they agreed to furnish the title deeds of the said property before the registration of the sale deed. It is germane to state that, she undertook to fix the boundaries and will get the survey of the said lands before registration of the sale deed. It has come to our attention that, the said Smt. Dasanala Mallamma and the executors of the said agreement are making hectic efforts to sell the said land to the third parties and trying to encumber the said property. Therefore it is incumbent upon me to give the present public notice, and I made it clear that, I have entered into an agreement of sale of the schedule mentioned land and the said vendors subscribed their respective signatures and received the earnest money of Rs 51,00,000/- as a part consideration. I therefore caution all the public at large to not make any sort of agreement either to purchase or to encumber the said property or with any other person claiming under her. I instruct that, such an act is illegal and void carry no effect on my agreement. I also give notice that any person or entity found to be in breach of this notice shall be held liable for any losses, damages, expenses incurred by me as a result of such breach. This notice is given to the general public for information and should be viewed seriously in case of breach and they will be made as party to the proposed litigation, in such eventuality they will held responsible for the cost and consequences, please avoid unpleasant things. This public notice is given on this day of 25th February 2023.

SCHEDULE : The Land bearing Survey Number 468 Hissa Number E/2A, measuring extent 1.52 Acres situated at Amaravathi Village of Hospete Taluk of Vijayanagara District situated within the registration district, sub-registration district of Hospete with following boundaries.
East : Remaining land of Sy.No.469
West : Land bearing Sy.No.468/D/2A2
North : T.B.Dam Road
South : Land of H.L.C.

For, SKYLINE CITY CONSTRUCTION LLP
Sd/- Authorized Signatory

ಕರ್ನಾಟಕ ಸರ್ಕಾರ
ಕರ್ನಾಟಕ ಪರೀಕ್ಷಾ ಪ್ರಾಧಿಕಾರ
KEA
ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಫ್ಯಾಕ್ಸ್: 080–23461576 ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in
ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–14/2022–23 ದಿನಾಂಕ: 23–02–2023

ಅಧಿಸೂಚನೆ
ಆಯುರ್ವೇದ, ಯೋಗ & ನ್ಯಾಚುರೋಪತಿ, ಯುನಾನಿ ಮತ್ತು ಹೋಮಿಯೋಪತಿ ಸ್ನಾತಕೋತ್ತರ ಕೋರ್ಸುಗಳ ಪ್ರವೇಶ 2022–23 (ಪಿಜಿಆಯುಷ್)

ಆಯುಷ್ ಸಚಿವಾಲಯ, ನವದೆಹಲಿ ಇವರ ಮಾರ್ಗದರ್ಶಿ ಸೂತ್ರಗಳ ಅನ್ವಯ, ಸರ್ಕಾರವು ತನ್ನ ಆದೇಶ ಸಂಖ್ಯೆ ಆಕುಕ 70 ಪಿಟಿಡಿ 2017 ಬೆಂಗಳೂರು ದಿನಾಂಕ 06–09–2017 ಹಾಗು ಆಯುಷ್ ಇಲಾಖೆಯ ಪತ್ರ ಸಂಖ್ಯೆ: ಆಯುಷ್/77/ವೈಶಿ(2)/2022–23 ದಿನಾಂಕ: 08.02.2023 ರಲ್ಲಿ ಆಯುರ್ವೇದ, ಯೋಗ & ನ್ಯಾಚುರೋಪತಿ, ಯುನಾನಿ ಮತ್ತು ಹೋಮಿಯೋಪತಿ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಕ್ಕಾಗಿ All India AYUSH Post Graduate Entrance Test (AIAPGET-2022) ರಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಅನ್ನು ನಡೆಸಲು ಪ್ರಾಧಿಕಾರಕ್ಕೆ ಆದೇಶಿಸಿದೆ.

ಕರ್ನಾಟಕ ಆಯುಷ್ ಇಲಾಖೆಯ ದಿನಾಂಕ 08–02–2023ರ ಪತ್ರದ ಅನ್ವಯ, ಸರ್ಕಾರಿ ಮಹಾವಿದ್ಯಾಲಯಗಳ ಶೇ.85% (ಭಾರತ ಸರ್ಕಾರ ಶೇ.15% ಹೊರತುಪಡಿಸಿ) ಹಾಗೂ ಖಾಸಗಿ ಮಹಾವಿದ್ಯಾಲಯಗಳಲ್ಲಿ; ಆಯುರ್ವೇದ ಮತ್ತು ಯುನಾನಿ ಪದ್ಧತಿಯ ಶೇ.100 ರಷ್ಟು ಸೀಟುಗಳನ್ನು, ಹೋಮಿಯೋಪತಿ ಪದ್ಧತಿಯ ಶೇ.40% ರಷ್ಟು ಸೀಟುಗಳನ್ನು (ರಾಜ್ಯ ಸರ್ಕಾರದ 25% ಹಾಗು ಭಾರತ ಸರ್ಕಾರದ 15%) ಹಾಗೂ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯ ಶೇ.25% ರಷ್ಟು ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆ ಮಾಡಲಾಗುವುದು. AIAPGET-2022 ರಲ್ಲಿ ಅರ್ಹತೆಯನ್ನು ಪಡೆದಿರುವ ಎಲ್ಲಾ ಅಭ್ಯರ್ಥಿಗಳು ಪಿಜಿಆಯುಷ್ ಸೀಟುಗಳಿಗೆ ನೊಂದಯಿಸಿಕೊಳ್ಳಬಹುದು. SC/ST/Cat-1/2A/2B/3A/3B ಅರ್ಹತಾ ಮಾನದಂಡಗಳು ಕರ್ನಾಟಕದ SC/ST/OBC ಅಭ್ಯರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಎಂಬುದನ್ನು ಗಮನಿಸಿ.

AIAPGET - 2022 ರಲ್ಲಿ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಂದ ಸರ್ಕಾರವು ನಿಗದಿಪಡಿಸುವ 2022ನೇ ಸಾಲಿನ ಸ್ನಾತಕೋತ್ತರ ಆಯುಷ್ ಸೀಟುಗಳ / ಕೋರ್ಸುಗಳ ಪ್ರವೇಶಕ್ಕಾಗಿ ಪ್ರಾಧಿಕಾರವು ಅರ್ಜಿಗಳನ್ನು ಆನ್‌ಲೈನ್ ಮೂಲಕ ಆಹ್ವಾನಿಸಿದೆ. ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು ದಿನಾಂಕ: **24–02–2023 ರ ಸಂ.6.00 ರಿಂದ 28–02–2023 ರ ರಾ.11.59 ರೊಳಗೆ** ಆನ್‌ಲೈನ್ ಮೂಲಕ ಕಡ್ಡಾಯವಾಗಿ ಅರ್ಜಿಯನ್ನು ಸಲ್ಲಿಸಬೇಕು. ನೊಂದಣಿ ಶುಲ್ಕ, Rs.2,000/- (Rs.1000/- for SC/ST and Cat-I of Karnataka) ದಿನಾಂಕ: **01–03–2023 ರೊಳಗೆ** ಆನ್‌ಲೈನ್ ಮೂಲಕ ಪಾವತಿಸಬೇಕು.

ವೇಳಾಪಟ್ಟಿ, ದಾಖಲಾತಿ ಪರಿಶೀಲನೆಗೆ ಮೂಲ ದಾಖಲಾತಿಗಳನ್ನು ಸಲ್ಲಿಸಬೇಕಾದ ವಿವರಗಳು ಮತ್ತು ಇನ್ನಿತರ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ನೋಡಲು ಸೂಚಿಸಿದೆ. AIAPGET - 2022 ರ ಮಾಹಿತಿ ಪುಸ್ತಕದಲ್ಲಿ ನೀಡಿರುವ ಅರ್ಹತಾ ಷರತ್ತುಗಳು ಮತ್ತು ಇತರೆ ಮಾಹಿತಿಗಳನ್ನೂ ಸಹ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದೆ.

ಅಭ್ಯರ್ಥಿಯ ಅರ್ಹತೆಯು ತಾತ್ಕಾಲಿಕವಾಗಿರುತ್ತದೆ ಮತ್ತು AIAPGET-2022 ರ ಮಾಹಿತಿ ಪುಸ್ತಕದಲ್ಲಿ ನೀಡಿರುವ ಅರ್ಹತಾ ಷರತ್ತುಗಳಿಗೆ ಒಳಪಟ್ಟಿರುತ್ತದೆ ಹಾಗೆಯೇ ಪ್ರವೇಶವು ಸಂಬಂಧಿಸಿದ NCISM / NCH / ಸರ್ಕಾರ / ಅರ್ಹತಾ ಪ್ರಾಧಿಕಾರ / ವಿಶ್ವವಿದ್ಯಾನಿಲಯ ಅನುಮೋದನೆಗೆ ಒಳಪಟ್ಟಿರುತ್ತದೆ. ನೋಂದಣಿ ಮಾಡುವುದರಿಂದಾಗಲೀ ಅಥವಾ ದಾಖಲಾತಿಗಳನ್ನು ಪರಿಶೀಲನೆ ಮಾಡಿಕೊಳ್ಳುವುದರಿಂದಾಗಲೀ ಕರ್ನಾಟಕದ ಆಯುಷ್ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಕ್ಕಾಗಿ ಅಭ್ಯರ್ಥಿಗಳು ಯಾವುದೇ ಹಕ್ಕನ್ನು ಪಡೆಯುವುದಿಲ್ಲ.

ಹೆಚ್ಚಿನ ವಿವರಗಳಿಗಾಗಿ ಅಭ್ಯರ್ಥಿಗಳು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ಗೆ ಭೇಟಿ ನೀಡಲು ಕೋರಿದೆ.

ಸಹಿ/– (ಎಸ್. ರಮ್ಯ ಭಾಆಸೇ) ಕಾರ್ಯನಿರ್ವಾಹಕ ನಿರ್ದೇಶಕರು.
ವಾಸಾಸಂಇ/ವಾಪ್ರ/ಎಎಎ/4952/2022–23

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, (ಜಿಲ್ಲಾ ನಗರಾಭಿವೃದ್ಧಿ ಕೋಶ), ಕೊಠಡಿ ಸಂ : 123, ಜಿಲ್ಲಾಡಳಿತ ಭವನ, ಗದಗ–582101 Ph & Fax : 08372-231877, Email : dudc_gdg@yahoo.co.in
ಸಂಖ್ಯೆ : ಜಿನಕೋ/ಅಭಿವೃದ್ಧಿ/ಅಮೃತ್ ನಗರೋತ್ಥಾನ ಹಂತ–4/ವಹಿ–25/2021–22 ದಿನಾಂಕ : 23–02–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (3ನೇ ಕರೆ)

ಕಾರ್ಯಪಾಲಕ ಅಭಿಯಂತರರು ಜಿಲ್ಲಾನಗರಾಭಿವೃದ್ಧಿ ಕೋಶ ಜಿಲ್ಲಾಧಿಕಾರಿಗಳ ಕಾರ್ಯಲಯ ಗದಗ ಜಿಲ್ಲೆ ಗದಗ ಇವರು ಎರಡು ಲಕೋಟೆ ಪದ್ದತಿಯಲ್ಲಿ ಕೆ.ಡಬ್ಲ್ಯು–2 & 3 ಟೆಂಡರ್ ದಸ್ತಾವೇಜಿನಲ್ಲಿ ಗದಗ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಅಮೃತ ನಗರೋತ್ಥಾನ ಮುನ್ಸಿಪಾಲಿಟಿ ಹಂತ–4ರ ಯೋಜನೆಯಡಿ ಕಟ್ಟಡ ಕಾಮಗಾರಿಗಳ ಪ್ಯಾಕೇಜ್‌ನಲ್ಲಿ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಕೆಟಿಪಿಪಿ ಅಧಿನಿಯಮ 1999 ನಿಯಮ 2000ರನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು ಸದರ ವಿವರ ಈ ಕೆಳಗಿನಂತೆ ಇರುತ್ತದೆ.

ಅ ನಂ	ಕಾಮಗಾರಿಗಳ ಪ್ಯಾಕೇಜ್ ವಿವರ	ಟೆಂಡರ್‌ಗೆ ಇಟ್ಟ ಮೊತ್ತ	ಇ.ಎಂಡಿ
1	ಗಜೇಂದ್ರಗಡ ಪುರಸಭೆ ವ್ಯಾಪ್ತಿಯಲ್ಲಿ E-Proc Indent No. DMA/2022-23/BD/WORK_INDENT146188	28.10	0.70
2	ರೋಣ ಪುರಸಭೆ ವ್ಯಾಪ್ತಿಯಲ್ಲಿ E-Proc Indent No. DMA/2022-23/BD/WORK_INDENT146362	37.68	0.75
3	ನರೇಗಲ್ಲ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ E-Proc Indent No. DMA/2022-23/BD/WORK_INDENT146868	26.71	0.53
4	ನರೇಗಲ್ಲ ಪಟ್ಟಣ ಪಂಚಾಯತಿ ವ್ಯಾಪ್ತಿಯಲ್ಲಿ E-Proc Indent No. DMA/2022-23/BD/WORK_INDENT146874	64.28	1.29

ಬಿಡ್ಡದಾರರು / ತಯಾರಕರು ಟೆಂಡರ್ ವಿವರಗಳನ್ನು e-Procurement portal ರಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀ ಗಳನ್ನು electronic ಪದ್ದತಿಯಲ್ಲಿ ತುಂಬಿ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳನ್ನು ಟೆಂಡರ್ www.eproc.karnataka.gov.in. ಸಲ್ಲಿಸಬಹುದಾಗಿದೆ
(1) ಟೆಂಡರ್ ಸಲ್ಲಿಸಲು ಕೊನೆ ದಿನಾಂಕ : **04-03-2023** upto 17.30 hrs (2) ಟೆಂಡರ್ ತೆರೆಯುವ ದಿನಾಂಕ : (Technical Bids SL.No. 4) (Technical & Financial Bids SL.No. 1.2.3) : **06-03-2023** at 11.00 hrs.

ಸದರಿ ಟೆಂಡರ್‌ಗೆ ಸಂಬಂಧಿಸಿದಂತೆ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ e-Procurement portal ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು ಜಿಲ್ಲಾನಗರಾಭಿವೃದ್ಧಿ ಕೋಶ ಗದಗ
ವಾಸಾಸಂಇ/ಗದಗ/ಕೆಎಸ್‌ಎಂ.ಸಿ.ಎ/684/2022–23

Dr. B.R. Ambedkar School of Economics University Bengaluru
A Unitary University, Govt. of Karnataka

ಡಾ. ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು

ಪ್ರವೇಶಾತಿ ಪ್ರಕಟಣೆ 2023–24

ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯುನಿವರ್ಸಿಟಿ, ಬೆಂಗಳೂರು ರಲ್ಲಿ ಕೆಳಕಂಡ ಮೂರು ಕೋರ್ಸ್‌ಗಳಿಗೆ 2023–24ನೇ ಸಾಲಿಗೆ ಪ್ರವೇಶಾತಿಗಾಗಿ ಅರ್ಜಿಗಳನ್ನು http:/www.base.ac.in ವೆಬ್‌ಸೈಟಿನಲ್ಲಿ ಅಹ್ವಾನಿಸಲಾಗಿದೆ. ಈ ಎಲ್ಲಾ ಕೋರ್ಸ್‌ಗಳು ಪೂರ್ಣಾವಧಿ ವಿಷಯದ ವಸತಿ ಸೌಲಭ್ಯದ ಕೋರ್ಸ್‌ಗಳಾಗಿವೆ (full-time, residential).

- ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ ಎಕನಾಮಿಕ್ಸ್–ಎನ್.ಇ.ಪಿ 2020 ರನ್ವಯ (75 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು/ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎಸ್ಸಿ ಎಕನಾಮಿಕ್ಸ್ (20 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು/ಭಾರತೀಯ ಮೂಲದ ವ್ಯಕ್ತಿಗಳು)
- ಎರಡು ವರ್ಷಗಳ ಎಂ.ಎಸ್ಸಿ ಫೈನಾನ್ಶಿಯಲ್ ಎಕನಾಮಿಕ್ಸ್ (30 ಸೀಟು ಭಾರತೀಯ ವಿದ್ಯಾರ್ಥಿಗಳಿಗೆ ಮತ್ತು 5 ಸೀಟು ವಿದೇಶಿ ಪ್ರಜೆಗಳು/ಭಾರತೀಯ ಮೂಲದ ವ್ಯಕ್ತಿಗಳು)

ಅರ್ಹತೆ: 1) ಐದು ವರ್ಷಗಳ ಇಂಟಿಗ್ರೇಟೆಡ್ ಎಂ.ಎಸ್ಸಿ ಎಕನಾಮಿಕ್ಸ್: ಅಭ್ಯರ್ಥಿಯು ಇಂಗ್ಲೀಷ್ ಒಂದು ವಿಷಯ ಹಾಗೂ ಗಣಿತವನ್ನು ಕೋರ್ ವಿಷಯವಾಗಿಸಿಕೊಂಡು 2ನೇ ಪಿಯುಸಿ/ 12ನೇ ತರಗತಿ/ತತ್ಸಮಾನ ಪರೀಕ್ಷೆಯಲ್ಲಿ ಒಟ್ಟಾರೆಯಾಗಿ ಕನಿಷ್ಠ 65% ಅಂಕಗಳನ್ನು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ 60%). ಪಡೆದು ಉತೀರ್ಣರಾಗಿರಬೇಕು

2) ಎರಡು ವರ್ಷಗಳ ಎಂ.ಎಸ್ಸಿ ಅರ್ಥಶಾಸ್ತ್ರ ಹಾಗೂ ಎರಡು ವರ್ಷಗಳ ಎಂ.ಎಸ್ಸಿ ಫೈನಾನ್ಶಿಯಲ್ ಎಕನಾಮಿಕ್ಸ್: ಅಭ್ಯರ್ಥಿಯು ಬಿ.ಎಸ್ಸಿ/ಬಿ.ಎ (ಆನರ್ಸ್) ಅರ್ಥಶಾಸ್ತ್ರ ಅಥವಾ ಬಿ.ಎಸ್ಸಿ/ಬಿ.ಎ ಅರ್ಥಶಾಸದೊಂದಿಗೆ ಗಣಿತ ಶಾಸ್ತ್ರ ಮತ್ತು ಸ್ಟ್ಯಾಟಿಸ್ಟಿಕ್ಸ್/ಎಕನಾಮೆಟ್ರಿಕ್ಸ್ ಮುಖ್ಯ ವಿಷಯವಾಗಿಸಿಕೊಂಡು ಪದವಿಯಲ್ಲಿ 55% (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ 50%) ಅಂಕಗಳನ್ನು ಪಡೆದು ಉತೀರ್ಣರಾಗಿರಬೇಕು.

ಆಯ್ಕೆಯ ವಿಧಾನ:– ಅಭ್ಯರ್ಥಿಗಳು ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್.ಟಿ.ಎ) ಮೂಲಕ ನಡೆಸಲಾಗುವ ಸಾಮಾನ್ಯ ವಿಶ್ವವಿದ್ಯಾಲಯ ಪ್ರವೇಶ ಪರೀಕ್ಷೆ (ಸಿಯುಇಟಿ) 2023–24ನೇ ಸಾಲಿಗೆ ಏರ್ಪಡಿಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಅರ್ಜಿ ಸಲ್ಲಿಸಿ, online ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು ಮತ್ತು ಪ್ರವೇಶ ಪರೀಕ್ಷೆಯ ದಿನಾಂಕ, ಪಠ್ಯಕ್ರಮ ಮತ್ತು ಇನ್ನಿತರೇ ಹೆಚ್ಚಿನ ಮಾಹಿತಿಗಾಗಿ ಹಾಗೂ ಸಿಯುಇಟಿ ಅರ್ಜಿ ಭರ್ತಿ ಮಾಡಲು ದಯಮಾಡಿ ವೀಕ್ಷಿಸಿ https://cuet.samarth.ac.in. ಸಿಯುಇಟಿ ಅರ್ಜಿಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯುನಿವರ್ಸಿಟಿ, ಬೆಂಗಳೂರು, ಅನ್ನು ಇಚ್ಛಿಸುವುದಾದಲ್ಲಿ ಆದ್ಯತೆಯಾಗಿ ಆಯ್ಕೆ ಮಾಡುವುದು ಕಡ್ಡಾಯವಾಗಿರುತ್ತದೆ ಹಾಗೂ ಈ ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕ ಅರ್ಜಿ ಭರ್ತಿ ಮಾಡಲು http:/www.base.ac.in. ವೀಕ್ಷಿಸಿ.. ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಪ್ರವೇಶಾತಿಗಾಗಿ ಪರಿಗಣಿಸಲಾಗುವುದು. ಸಿಯುಇಟಿ 2023–24 ರಲ್ಲಿ ಪಡೆಯುವ ಅಂಕಗಳ ಅರ್ಹತಾ ಪಟ್ಟಿಯನ್ನಾಧರಿಸಿ, ಮೇಲ್ಕಂಡ ಮೂರು ಕೋರ್ಸ್‌ಗಳಿಗೆ ಕರ್ನಾಟಕ ಮತ್ತು ಕರ್ನಾಟಕೇತರ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ತಯಾರಿಸಿ ಪ್ರವೇಶಾತಿ ಮಾಡಿಕೊಳ್ಳಲಾಗುವುದು.

ವಿದೇಶಿ ಪ್ರಜೆಗಳು/ಭಾರತೀಯ ಮೂಲದ ವ್ಯಕ್ತಿಗಳ ಪ್ರವೇಶಾತಿಯು ಸದರಿ ಕೋರ್ಸ್‌ಗಳಿಗೆ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಮಾಡಿಕೊಳ್ಳಲಾಗುವುದು.

ಅರ್ಜಿಯ ಶುಲ್ಕ: 1) ಸಾಮಾನ್ಯ ಹಾಗು ಇತರೆ ಅಭ್ಯರ್ಥಿಗಳು: ರೂ.600/– 2) ಎಸ್.ಸಿ/ಎಸ್.ಟಿ/ಅಂಗವಿಕಲರು: ರೂ.300/–

* ಆನ್–ಲೈನ್ ಅರ್ಜಿಗಳನ್ನು ತುಂಬಲು ಪ್ರಾರಂಭ ದಿನಾಂಕ : **ಮಾರ್ಚ್ 1 ನೇ ವಾರ 2023**
* ಆನ್–ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **04–06–2023**

ವಿಶ್ವವಿದ್ಯಾಲಯದ ಬ್ರೋಚರ್ (brochure), ಮೀಸಲಾತಿ ವಿವರ, ಶುಲ್ಕ ವಿವರ, ಆಯ್ಕೆಯ ಪ್ರಕ್ರಿಯೆ ಮತ್ತು ಇತರೆ ಮಾಹಿತಿಯನ್ನು www.base.ac.in ವೆಬ್‌ಸೈಟಿನಲ್ಲಿ ವೀಕ್ಷಿಸಬಹುದು.

* ಎಲ್ಲಾ ದಿನಾಂಕಗಳು ಸರ್ಕಾರದ ಆದೇಶದನ್ವಯ ಬದಲಾವಣೆಗೆ ಒಳಪಟ್ಟಿರುತ್ತದೆ.

ಡಾ|| ಎನ್ ಆರ್ ಭಾನುಮೂರ್ತಿ ಕುಲಪತಿಗಳು
DIPR/CP/RO4920/AAPL/2022-23
ಡಾ|| ಎಚ್ ಆರ್ ಶಿವಕುಮಾರ್ ಕುಲಸಚಿವರು

ವಿಳಾಸ: ಜ್ಞಾನ ಭಾರತಿ ಮುಖ್ಯ ರಸ್ತೆ, ನಾಗರಭಾವಿ, ಬೆಂಗಳೂರು, ಕರ್ನಾಟಕ 560072
Helpline No.: 080–29557767, ಇ–ಮೇಲ್: info@base.ac.in

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ವನ್ಯಜೀವಿ ಛಾಯಾಚಿತ್ರಗಳು : ಪ್ರಿಯಾ ಕುಂಜಿರ್ಕಾನ



ವನದಲ್ಲಿ ವನಿತೆಯರು

ಮಾರ್ಚ್ 3 ವಿಶ್ವ ವನ್ಯಜೀವಿ ದಿನ: ಈ ನೆಪದಲ್ಲಿ ಕಾಡಿನಲ್ಲಿ ವನ್ಯಜೀವಿಗಳ ಜಾಡು ಹಿಡಿದು, ಸ್ವಚ್ಛಂದವಾಗಿರುವ ಅವುಗಳನ್ನು ತಮ್ಮ ಕ್ಯಾಮೆರಾ ಕಣ್ಣಿನಲ್ಲಿ ಸೆರೆ ಹಿಡಿಯುವ ಹೆಣ್ಣುಮಕ್ಕಳ ಕಥನ ಇಲ್ಲಿದೆ....

ಲಯ ಅರಿತರೆ ಸಂವಹನ

ಪ್ರಿಯಾ ಕುಂಜಿರ್ಕಾನ

ಒಬ್ಬ ಹೆಣ್ಣುಮಗಳಾಗಿ ಫೋಟೊಗ್ರಫಿ ಅದರಲ್ಲೂ ವನ್ಯಜೀವಿಗಳ ಛಾಯಾಚಿತ್ರಗಳನ್ನು ಸೆರೆ ಹಿಡಿಯುವಾಗ ಅನುಕೂಲಕ್ಕೆ ಬಂದಿದ್ದು ನನ್ನೊಳಗಿನ ತಾಳ್ಮೆ. ಇದು ಅಗಾಧ ಸಮಯ ಹಾಗೂ ತಾಳ್ಮೆಯನ್ನು ಬೇಡುವ ಪ್ರವೃತ್ತಿ. ಹಾಗಾಗಿ ವ್ಯಕ್ತಿತ್ವಕ್ಕೂ ಹೊಸ ಕಳೆಯನ್ನು ದಕ್ಕಿಸಿಕೊಟ್ಟ ಹವ್ಯಾಸವೂ ಹೌದು.

ಹುಟ್ಟಿದ್ದು ಸುಳ್ಯದ ಬಾಳಿಲ. ಅಮ್ಮ- ಅಪ್ಪ ಇಬ್ಬರೂ ಶಿಕ್ಷಕರು. ಓದಿದ್ದು ಪತ್ರಿಕೋದ್ಯಮ. ಆಕ್ಸೆಂಚರ್ ಕಂಪನಿಯಲ್ಲಿ ಕಟೆಂಟ್ ರೈಟರ್ ಆಗಿ ಕೆಲಸ ಮಾಡುತ್ತಿದ್ದೀನಿ. ಎಳವೆಯಿಂದಲೂ ಅಪ್ಪ ಅಮ್ಮನೊಂದಿಗೆ ಟ್ರೆಕ್ಕಿಂಗ್ ಮಾಡುತ್ತಿದ್ದೆ. ಒಂದೆರೆಡು ಕಿ.ಮೀ ಕ್ರಮಿಸಿದರಷ್ಟೆ ನೆರೆಮನೆ ಸಿಗುತ್ತಿದ್ದರಿಂದ ನಿಸರ್ಗದ ಜತೆಯೇ ಮೊದಲಿನಿಂದಲೂ ಸಖ್ಯ ಜಾಸ್ತಿ. ಈ ಪ್ರಕೃತಿಯೊಂದಿಗಿನ ಒಡನಾಟವೇ ವನ್ಯಜೀವಿ ಛಾಯಾಗ್ರಹಣದತ್ತ ಎಳೆದು ತಂತು.

ನನ್ನ ಪತಿ ವಿನಯ್ ಕೂಡ ಫೋಟೊಗ್ರಾಫರ್. ಫೋಟೊಗ್ರಫಿ ದುಬಾರಿ ಹವ್ಯಾಸವೂ ಹೌದು. ನಾನು ವಿನಯ್ ಇಬ್ಬರೂ ಒಟ್ಟಿಗೆ ಫೋಟೊಗ್ರಫಿಯನ್ನು ಆರಂಭಿಸಿದೆವು.

ಪಕ್ಷಿ ಇರಲಿ, ಪ್ರಾಣಿಯೇ ಇರಲಿ ಅದರ ಚಂದದ ಚಿತ್ರಗಳನ್ನು ತೆಗೆಯಬೇಕು ಅಂದರೆ ಮೊದಲಿಗೆ ಅದರ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳಬೇಕು. ಅದರ ಗುಣಲಕ್ಷಣ, ನಡೆ, ಹಾವಭಾವ, ಭಂಗಿ ಎಲ್ಲದರ ಬಗ್ಗೆ ಸಂಶೋಧನಾತ್ಮಕವಾಗಿ ಅಧ್ಯಯನ ನಡೆಸಿದಾಗ ಮಾತ್ರ ಅದರ ಲಯವನ್ನು ಅರ್ಥ ಮಾಡಿಕೊಳ್ಳಬಹುದು. ಪ್ರತಿ ಜೀವಿಯ ಬದುಕು ಲಯಬದ್ಧವಾಗಿರುತ್ತದೆ. ಅದನ್ನು ಅರ್ಥಮಾಡಿಕೊಂಡಾಗಷ್ಟೆ ಅದರ ಜತೆ ಸಂವಹನ ಸಾಧ್ಯ. ಹೀಗೆ ಕಣ್ಣಲ್ಲಿ ಕಂಡು ಸಂತೋಷಪಟ್ಟಿದ್ದನ್ನು ಕ್ಯಾಮೆರಾ ಕಣ್ಣಿನಲ್ಲಿ ಸೆರೆ ಹಿಡಿಯುವ ಹೊಸ ಖಯಾಲಿ ಶುರು ಆಯಿತು.

ಆರಂಭದಲ್ಲಿ ಕಬಿನಿ, ಬಂಡೀಪುರಕ್ಕೆ ಹೋಗುತ್ತಿದ್ದೆವು. ವನ್ಯಜೀವಿ ಹಾಗೂ ಪಕ್ಷಿಗಳ ಫೋಟೊಗ್ರಫಿ ಕಡೆಗೆ ಮುಖ ಮಾಡುವಂತೆ ಪ್ರೇರೇಪಿಸಿದ್ದು ನನ್ನ ಗಂಡನೇ. ಸಲೀಂ ಅಲಿ ಅವರ ದೊಡ್ಡ ಪುಸ್ತಕವೊಂದನ್ನು ಕೈಗಿತ್ತು, ಬಗೆ ಬಗೆಯ ಪಕ್ಷಿಗಳ ಬಗ್ಗೆ ತಿಳಿದುಕೊಳ್ಳುವಂತೆ ಹೇಳಿದರು. ಹಿರಿಯ ಫೋಟೊಗ್ರಾಫರ್ ಸುರೇಶ್ ಬಸವರಾಜು ಅವರೊಂದಿಗೆ ಬೆಂಗಳೂರು, ತುಮಕೂರಿನ ಸುತ್ತಮುತ್ತಲಿರುವ ಪಕ್ಷಿಧಾಮಗಳಿಗೆ ಹೋಗುತ್ತಿದ್ದೆವು.

ನಮ್ಮ ನಡೆ ಪ್ರಕೃತಿಯ ಲಯಕ್ಕೆ ಅನುಗುಣವಾಗಿದ್ದಾಗ ಮಾತ್ರ ವನ್ಯಜೀವಿಗಳು ಆ ಪ್ರದೇಶದಲ್ಲಿ ಇರುತ್ತವೆ. ಸುರಕ್ಷಿತವಲ್ಲ ಅನಿಸಿದ ಮರುಕ್ಷಣವೇ ಅವು ಅಲ್ಲಿಂದ ದೂರ ಸರಿಯುತ್ತವೆ. ಎಷ್ಟೋ ಬಾರಿ ಬೆಳಗಿನ ಜಾವ 4ಕ್ಕೆ ಹೋದರೆ ಸಂಜೆ 8 ಗಂಟೆಗೆ ಬರುತ್ತಿದ್ದೆವು. ಮಗಳು ಐದು ತಿಂಗಳ ಮಗುವಾಗಿದ್ದಾಗಲೂ ಅವಳನ್ನು ಜತೆಗೆ ಕರೆದುಕೊಂಡು ಪ್ರಾಣಿಗಳ ಫೋಟೊ ತೆಗೆಯುವುದಕ್ಕೆ ಹೋಗಿದ್ದಿದೆ.

ಹೆಣ್ಣುಮಕ್ಕಳು ವೈಲ್ಡ್‌ಲೈಫ್ ಫೋಟೊಗ್ರಫಿ ಮಾಡುತ್ತಾರೆ ಅಂದರೆ ಯಾರೂ ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ; ಉಪೇಕ್ಷೆ ಮಾಡುತ್ತಾರೆ. ಹೆಜ್ಜೆ ಹೆಜ್ಜೆಗೂ ನಮ್ಮಲ್ಲಿರುವ ಸಾಮರ್ಥ್ಯದ ಬಗ್ಗೆ ಸಂಶಯ ಪಡುವವರೇ ಹೆಚ್ಚು. ನಾಲ್ಕು ಪಕ್ಷಿ ಸೆರೆ ಹಿಡಿದಿದ್ದೀರಾ ಅಂದರೆ ಹಿತ್ತಲಿನದ್ದೋ, ಮನೆಯ ಸಮೀಪದ್ದು ಎಂದುಕೊಳ್ಳುವವರ ಸಂಖ್ಯೆಯೇನೂ ಕಡಿಮೆ ಇಲ್ಲ. ಈ ಸವಾಲುಗಳ ನಡುವೆಯೂ ಅನಿಸಿದ್ದನ್ನು ಮಾಡಬೇಕು. ವನ್ಯಜೀವಿ ಸಂರಕ್ಷಣಾ ಕಾರ್ಯದಲ್ಲಿಯೂ ಅಳಿಲು ಸೇವೆ ಮಾಡುವ ಆಸೆಯಿದೆ. ವೈಲ್ಡ್ ಲೈಫ್ ಕನ್ಸರ್ವೇಷನ್ ಟ್ರಸ್ಟ್‌ನೊಂದಿಗೆ ಸೇರಿ ಕಾಡುಮಕ್ಕಳಿಗೆ ಶಿಕ್ಷಣ ನೀಡುವ ಕೆಲಸ ಮಾಡುತ್ತಿದ್ದೇವೆ. ನಾಗರಹೊಳೆ, ಕಬಿನಿಯಲ್ಲಿರುವ ಬುಡಕಟ್ಟು ಜನಾಂಗದವರಿಗೆ ಪುನಃಶ್ಚೇತನ ಶಿಬಿರ ಹಮ್ಮಿಕೊಳ್ಳಲಾಗುತ್ತದೆ. ಕಾಡಿನ ಬಗ್ಗೆ ಅವರಿಗಿರುವ ಜ್ಞಾನ ಅಗಾಧವಾದದ್ದು. ಅದರ ಬಗ್ಗೆ ಅವರಿಗೆ ಅರಿವಿಲ್ಲ. ಅದಕ್ಕೆ ಮನ್ನಣೆ ಸಿಗುವ ಕೆಲಸ ಆಗಬೇಕಿದೆ.

ಹಲವು ಛಾಯಾಚಿತ್ರ ಪ್ರದರ್ಶನ ನಡೆಸಿದ್ದೇನೆ. ಕರ್ನಾಟಕ ಅರಣ್ಯ ಇಲಾಖೆ ನಡೆಸಿದ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಬಹುಮಾನ ಸಿಕ್ಕಿತ್ತು. ಇಂಡಿಯಾ ನೇಚರ್ ವಾಚ್ ಎನ್ನುವ ವೆಬ್‌ಸೈಟ್‌ನಿಂದ ಭಾರತದ ವಿವಿಧೆಡೆ ವನ್ಯಜೀವಿ ಫೋಟೊಗ್ರಾಫರ್‌ಗಳ ಪರಿಚಯ ಆಗಿದೆ. ಯಾವ ಋತುವಿನಲ್ಲಿ ಯಾವ ಪಕ್ಷಿ, ಪ್ರಾಣಿಗಳು ಯಾವ ಸಮಯದಲ್ಲಿ ಇರುತ್ತವೆ ಎಂಬುದರ ಬಗ್ಗೆ ತಿಳಿದುಕೊಳ್ಳಲು ಇದು ಸಹಾಯವಾಗಿದೆ. ಹೆಣ್ಣುಮಕ್ಕಳಲ್ಲಿ ಸೃಜನಶೀಲತೆ ತುಸು ಹೆಚ್ಚೇ ಇದೆ. ಅದಕ್ಕೆ ಸೂಕ್ತ ವೇದಿಕೆ ಸಿಗಬೇಕಷ್ಟೆ.

(ನಿರೂಪಣೆ: ರೂಪಾ ಕೆ.ಎಂ.)

ಕಾಡು ಕಲಿಸುವ ಗುರು

ದೇವಮಣಿ ಎಂ.

ನನ್ನದು ನಂಜನಗೂಡು ತಾಲ್ಲೂಕಿನ ಶಿರಮಳ್ಳಿ. ಇಬ್ಬರು ಅಕ್ಕಂದಿರು, ಒಬ್ಬ ತಮ್ಮನೊಂದಿಗೆ ಬೆಳೆದ ನನಗೆ ಬಾಲ್ಯದಿಂದಲೇ ಪ್ರಕೃತಿಯತ್ತ ವಿಸ್ಮಯದ ನೋಟವಿತ್ತು. ಶಾಲೆ-ಕಾಲೇಜು ಓದುವಾಗ ಬಸ್‌ನಲ್ಲಿ ಕುಳಿತು, ಹಿಂದಕ್ಕೆ ಓಡುವ ಮರಗಿಡಗಳು, ಕೆರೆಗಳು, ಹಾರುವ ಪಕ್ಷಿಗಳನ್ನು ನೋಡುತ್ತಿದ್ದೆ.

ಚಿತ್ರಕಲೆ, ಫೋಟೊ ಪ್ರದರ್ಶನಗಳನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ. ಮೊಬೈಲ್ ಫೋನ್‌ನಲ್ಲಿ ಫೋಟೊ ತೆಗೆಯುತ್ತಿದ್ದೆ. ಸಾಲಿಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕಿಯಾದ ನಂತರ ಮೊದಲ ಸಂಬಳದಿಂದ ಸೋನಿ ಕ್ಯಾಮೆರಾ ಖರೀದಿಸಿದೆ. ಹೂವು, ಮರಗಿಡ, ಮಳೆ ಹನಿ, ಸೂರ್ಯಾಸ್ತ, ಸೂರ್ಯೋದಯ ಹೀಗೆ.. ಮೈಸೂರು-ಸಾಲಿಗ್ರಾಮ ನಡುವೆ ಪ್ರಯಾಣಿಸುತ್ತಿದ್ದಾಗ ತೆಗೆಯುತ್ತಿದ್ದ ಫೋಟೊಗಳ ಬಗ್ಗೆ ಸ್ನೇಹಿತರು ಒಳ್ಳೆಯ ಮಾತಾಡಿದರು.

ಪೂರ್ಣಚಂದ್ರ ತೇಜಸ್ವಿಯವರ ಪಾಠಗಳನ್ನು ಓದಿದ್ದೆ. ಪಕ್ಷಿಗಳು, ಕಾಡಿನ ಚಿತ್ರಗಳನ್ನು ನೋಡುವಾಗ ನಾನೂ ಅಂಥ ಒಳ್ಳೆಯ ಫೋಟೊ ತೆಗೆಯಬೇಕೆನ್ನಿಸುತ್ತಿತ್ತು. ಕೆಲಸ ಸಿಕ್ಕಿದರೂ ತೃಪ್ತಿಯಿರಲಿಲ್ಲ. 'ಇನ್ನೂ ಏನೋ ಮಾಡುವುದಿದೆ' ಎಂದೆನ್ನಿಸುತ್ತಿದ್ದರೂ ಸ್ಪಷ್ಟತೆಯಿರಲಿಲ್ಲ. ಡಿಜಿಟಲ್ ಕ್ಯಾಮೆರಾ ಬಂದಿದ್ದರೂ ವಿಶ್ವಾಸವಿರಲಿಲ್ಲ. ಕುಪ್ಪಳಿಗೂ ಹೋಗಿ ಫೋಟೊಗಳನ್ನು ತೆಗೆದಿದ್ದೆ.

ಮೈಸೂರಿನ ಮಹಾರಾಣಿ ಕಲಾ ಕಾಲೇಜಿಗೆ ವರ್ಗಾವಣೆಯಾಯಿತು. ಆ ಸಮಯದಲ್ಲಿ ಅನುಭವಿ ಛಾಯಾಗ್ರಾಹಕ ಲೋಕೇಶ್ ಮೊಸಳೆಯವರು ರಂಗನತಿಟ್ಟಿನಲ್ಲಿ ಹಮ್ಮಿಕೊಂಡ ಫೋಟೊಗ್ರಫಿ ಕಾರ್ಯಾಗಾರದಲ್ಲಿ ಪಾಲ್ಗೊಂಡೆ. ಅದು ನನ್ನ ಬದುಕನ್ನೇ ಬದಲಾಯಿಸಿತು. ಕ್ಯಾಮೆರಾ ಬಳಕೆ ಗೊತ್ತಾಯಿತು. ಅಲ್ಲಿದ್ದ ಬಹುತೇಕರಲ್ಲಿ ದೊಡ್ಡ ಕ್ಯಾಮೆರಾಗಳಿದ್ದವು. ನಾನೂ ದೊಡ್ಡ ಕ್ಯಾಮೆರಾ ತೆಗೆದುಕೊಂಡ ಬಳಿಕ ಲೋಕೇಶ್ ಅವರೊಂದಿಗೆ ರಂಗನತಿಟ್ಟು, ದಾಂಡೇಲಿಗೆ ಹೋಗಿದ್ದೆ. ಕಬಿನಿ ಹಿನ್ನೀರು-ಕಾಡನ್ನು ಹೆಚ್ಚು ಸುತ್ತಿದ್ದು ಅಲ್ಲಿಯೇ.

ವೈಲ್ಡ್‌ಲೈಫ್ ಫೋಟೊಗ್ರಫಿ ಬಹಳ ಭಿನ್ನ ಪ್ರಕಾರ. ಪ್ರಾಣಿ, ಪಕ್ಷಿ, ಮರಗಿಡಗಳ ಜೀವನಶೈಲಿಯನ್ನು ಅರ್ಥ ಮಾಡಿಕೊಳ್ಳುವುದೇ ಮುಖ್ಯ. ಫೋಟೊಗ್ರಫಿ ನೆಪವಷ್ಟೆ. ಕಾಡು ಹಲವು ವಿಷಯಗಳನ್ನು ಕಲಿಸುವ ಗುರು.

ಕುಟುಂಬವೆಂಬ ವ್ಯವಸ್ಥೆ ಪ್ರಾಣಿಗಳಲ್ಲಿಲ್ಲವೆಂಬ ನನ್ನ ತಿಳಿವಳಿಕೆಯನ್ನು ಕಾಡು ಬದಲಾಯಿಸಿತು. ಕಬಿನಿಯಲ್ಲಿ ಸಫಾರಿ ಹೋಗುವಾಗ ಗುಂಪಿನಲ್ಲಿದ್ದ ಹೆಣ್ಣಾನೆಯ ಕಡೆಗೆ ಬೇರೊಂದು ಗಂಡಾನೆ ಬಂದಾಗ, ಗುಂಪಿನಲ್ಲಿದ್ದ ಗಂಡಾನೆ ಅದನ್ನು ಅಟ್ಟಿಸಿಕೊಂಡು ಹೋಗಿದ್ದ ಸರಣಿ ಫೋಟೊಗಳನ್ನು ತೆಗೆದದ್ದನ್ನು ಮರೆಯಲಾರೆ. ಕಬಿನಿ ಹಿನ್ನೀರಿನಲ್ಲಿ ನೀರು ನಾಯಿಯ ಫೋಟೊ ತೆಗೆಯುವ ಅವಕಾಶವೂ ಅಂಥದ್ದೇ. ಪಕ್ಷಿ ಜಗತ್ತಿನಲ್ಲಿ ಬಹಳ ಸುಂದರವಾದದ್ದು ಗಂಡು. ಬಣ್ಣ ನೋಡಿಯೇ ಅದು ಗಂಡೋ-ಹೆಣ್ಣೋ ಹೇಳಬಲ್ಲೆ. ಛಾಯಾಗ್ರಹಣದ ಹವ್ಯಾಸ ಅಂಥದ್ದೊಂದು ಪರಿಸರ ಪಾಠ ಕಲಿಸಿದೆ.

ವೈಲ್ಡ್‌ಲೈಫ್ ಫೋಟೊಗ್ರಫಿಗಾಗಿ ಪುರುಷರ ಗುಂಪಿನೊಂದಿಗೆ ಹೋಗಲು ಧೈರ್ಯವಿರಬೇಕು. ಕಾಡಲ್ಲಿ ನನಗೆ ಇನ್ನೊಬ್ಬ ಮಹಿಳೆ ಸಿಗಬಹುದಷ್ಟೇ. ಆದರೂ ಅಂಥದ್ದೊಂದು ಹುಚ್ಚುತನ ಮಾಡುತ್ತೇನೆ. ಜೊತೆಯಲ್ಲಿರುವವರಲ್ಲಿ ನಂಬಿಕೆ ಇಟ್ಟಿರುತ್ತೇನೆ. ಲೋಕೇಶ್ ಮೊಸಳೆಯವರು ಒಮ್ಮೆ ನನ್ನ ಜೊತೆ ತಮ್ಮ ಮಗಳನ್ನೂ ಕಾಡಿಗೆ ಕರೆತಂದು, ನನ್ನ ಒಂಟಿತನಕ್ಕೆ ವಿಶೇಷ ಬೆಂಬಲ ನೀಡಿದ್ದರು. ಪ್ರತಿ ಬಾರಿ ಕಾಡಿಗೆ ಹೋಗುವಾಗ ಬೆನ್ನು ತಟ್ಟುವ ನನ್ನ ಪತಿ ಎಚ್.ಎನ್.ಮಯೂರರ ಉತ್ತೇಜನವೇ ದೊಡ್ಡ ಶಕ್ತಿ.

ಭಾರವಾದ ಕ್ಯಾಮೆರಾ, ಲೆನ್ಸ್, ಟ್ರೈಪಾಡ್ ಹೊತ್ತು ನಡೆಯುವುದು ಕಷ್ಟವೆನಿಸುತ್ತದೆ. ಪುರುಷರಂತೆ ಸಲೀಸಾಗಿ ಹೆಚ್ಚು ದೂರ ಪ್ರಯಾಣಿಸಲು ಆಗುವುದಿಲ್ಲ. ಆದರೆ ಕ್ಯಾಮೆರಾ ಕೈಯಲ್ಲಿ ಹಿಡಿದರೆ ಎಲ್ಲ ಮರೆತು ಹೋಗುತ್ತದೆ. ಹೆಣ್ಣೆಂಬುದು ಮಿತಿಯೇನೂ ಅಲ್ಲ. ಆಸಕ್ತಿ ಇದ್ದರೆ ಎಲ್ಲವನ್ನೂ ಗೆಲ್ಲಬಹುದು. ಕಾಡಾದರೂ, ನಾಡಾದರೂ...

(ನಿರೂಪಣೆ : ಕೆ.ನರಸಿಂಹಮೂರ್ತಿ)

ಕಾಡಹಕ್ಕಿಯ ಹಾಡು ಕೇಳುತ....

ಶ್ರುತಿ ಲಕ್ಕೋಳ್

ಮೈಯೆಲ್ಲ ಕಣ್ಣಾಗಿಸಿ ನೋಡೋದು ಅಂತಾರಲ್ಲ ಹಾಗೇ. ಗಮನವಿಟ್ಟು ನೋಡುವ, ಕೇಳುವ ಹೊಸ ಸಾಧ್ಯತೆಯನ್ನು ವೈಲ್ಡ್‌ಲೈಫ್ ಫೋಟೊಗ್ರಫಿ ಕಲಿಸಿದೆ. ನನ್ನೂರು ದಾವಣಗೆರೆಯ ಚನ್ನಗಿರಿ. ಕಲಿತದ್ದು ಸಿವಿಲ್ ಎಂಜಿನಿಯರಿಂಗ್ ಆದರೂ ಬಾಲ್ಯದಿಂದಲೂ ಕ್ಯಾಮೆರಾದ ಬಗ್ಗೆ ಸೆಳೆತವಿತ್ತು. ಐದು ವರ್ಷಗಳಿಂದೀಚೆಗೆ ವೈಲ್ಡ್ ಲೈಫ್ ಫೋಟೊಗ್ರಫಿ ಮಾಡ್ತಿದ್ದೀನಿ. ಇರುವ ಕೆಲಸ ಬಿಟ್ಟು ಫೋಟೊಗ್ರಫಿಯನ್ನೇ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಂಡಿದ್ದೀನಿ.

ಕಬಿನಿ, ಬಂಡೀಪುರ, ಮಹಾರಾಷ್ಟ್ರ ಹೀಗೆ ಹಲವು ಕಡೆ ವನ್ಯಜೀವಿಗಳನ್ನು ಹುಡುಕಿಕೊಂಡು ಹೋಗಿದ್ದೇನೆ. ಮನುಷ್ಯರು ಎಷ್ಟು ಹೊತ್ತು ಬೇಕಾದರೂ ಕ್ಯಾಮೆರಾಗೆ ಫೋಸು ಕೊಡಬಲ್ಲರು. ಆದರೆ, ಪ್ರಾಣಿ-ಪಕ್ಷಿಗಳು ಯಾವ ಪ್ರಚಾರದ ಹಂಗೂ ಇಲ್ಲದೇ, ತಮ್ಮಷ್ಟಕ್ಕೆ ತಾವು ತಮಗಿಷ್ಟ ಬಂದ ರೀತಿಯಲ್ಲಿ ಬದುಕುತ್ತವೆ. ಅವುಗಳ ಆ ಸ್ವಚ್ಛಂದದ ಜೀವನ ಇದೆಯಲ್ಲಾ ಅದನ್ನು ಕ್ಯಾಮೆರಾ ಕಣ್ಣಿನಲ್ಲಿ ಸೆರೆ ಹಿಡಿಯುವಾಗ ಸಿಗುವ ಖುಷಿಯೆ ಬೇರೆ. ಆದರೆ, ಇದು ಅಷ್ಟು ಸುಲಭದ ಮಾತಲ್ಲ. ಅವುಗಳ ಮುಕ್ತ ಜೀವನದ ಹಲವು ಭಂಗಿಗಳು ಎಲ್ಲ ಸಮಯದಲ್ಲಿಯೂ ನಮ್ಮ ದುಬಾರಿ ಲೆನ್ಸ್‌ಗಳಿಗೆ ದಕ್ಕದೇ ಹೋಗಬಹುದು.

ಮೂರು ನಾಲ್ಕು ಬಾರಿ ಸಫಾರಿಗೆ ಹೋಗಿ ಬಂದಾಗ ಒಂದೂ ಪ್ರಾಣಿ ಸಿಗದೇ ವಾಪಸ್ ಬರಬಹುದು. ಇದಕ್ಕೆಲ್ಲ ಬೇಸರ ಮಾಡಿಕೊಳ್ಳಬಾರದು.

ಕಳೆದ ಸೆಪ್ಟೆಂಬರ್‌ನಲ್ಲಿ ಸಫಾರಿಗೆ ಅಂತ ಹೋಗಿದ್ದಾಗ ಇನ್ನೇನೂ ಸಫಾರಿ ಮುಗಿಯಬೇಕು ಎನ್ನುವಾಗ ಜಿಂಕೆಯೊಂದು ಕಂಡಿತ್ತು. ಅದರ ವಿಶಿಷ್ಟ ಭಂಗಿಯನ್ನು ಸೆರೆ ಹಿಡಿದಿದ್ದೆ. ಅದು 'ನ್ಯಾಷನಲ್ ಜಿಯಾಗ್ರಫಿ' ನಿಯತಕಾಲಿಕೆಯಲ್ಲಿ ಫೀಚರ್ ಆಯ್ತು. ಲಾಲ್‌ಬಾಗ್‌ಗೆ ಚಳಿಗಾಲದಲ್ಲಿ ಬೇರೆ ಬೇರೆ ಪ್ರದೇಶಗಳಿಂದ ಪಕ್ಷಿಗಳು ವಲಸೆ ಬರುತ್ತವೆ. ಕೆಲವೊಮ್ಮೆ ಅಷ್ಟು ಜಾತಿಯ ಪಕ್ಷಿಗಳು ಬಂದರೂ ಕ್ಯಾಮೆರಾ ಕಣ್ಣಿಗೆ ಸಿಗದು. ಸಾಮಾನ್ಯವಾಗಿ ಕಾಡಿನಲ್ಲಿ ಆನೆ ಮತ್ತು ಕರಡಿಗಳ ದಾಳಿ ಹೆಚ್ಚಿರುತ್ತವೆ. ಅವು ಇದ್ದಕ್ಕಿದ್ದಂತೆ ಉದ್ವೇಗಕ್ಕೆ ಒಳಗಾಗಿ ದಾಳಿ ಮಾಡುವ ಸಾಧ್ಯತೆ ಇರುತ್ತವೆ. ಹಾಗಾಗಿ ಅವುಗಳ ಬಗ್ಗೆ ಚೆನ್ನಾಗಿ ತಿಳಿದುಕೊಳ್ಳುವುದು ಉತ್ತಮ.

ಒಂದು ಕಾಡಿನಲ್ಲಿ ಪ್ರಾಣಿಯೊಂದು ತನ್ನಷ್ಟಕ್ಕೆ ತಾನಿದೆ. ಅದನ್ನು ಕ್ಯಾಮೆರಾ ಕಣ್ಣಿನಲ್ಲಿ ಸೆರೆ ಹಿಡಿಯಬೇಕು ಎಂದುಕೊಂಡು ಉತ್ಸಾಹದಲ್ಲಿ ಹೊರಟರೂ ಒಬ್ಬ ಹುಡುಗಿಯಾಗಿ ಒಂಟಿಯಾಗಿ ಅಲ್ಲಿಗೆ ಹೋಗಲು ಆಗುವುದಿಲ್ಲವೆಂಬುದೇ ದೊಡ್ಡ ಮಿತಿ. ಅಲ್ಲಿ ಹೋಗುವ ಮುಂಚೆ ಪ್ರಾಣಿಭೀತಿಗಿಂತಲೂ ಮನುಷ್ಯರ ಭೀತಿ ಇದೆಯೇ ಎಂದು ಮೊದಲು ಪರಿಶೀಲನೆ ಮಾಡಿಕೊಳ್ಳಬೇಕಾಗುತ್ತದೆ. ಪ್ರಾಣಿ ಅಥವಾ ಪಕ್ಷಿ ವೀಕ್ಷಣೆಗೆಂದು ಕಾಡಂಚಲ್ಲಿ ತಿರುಗುವಾಗೆಲ್ಲ 'ಈ ದಾರಿಯಲ್ಲಿ ಹುಡುಗರು ಇದ್ದಾರೆ' ಅಂತ ಎಚ್ಚರಿಸುವ ದನಿಗಳೇ ಹೆಚ್ಚಿರುತ್ತವೆ. ಹಾಗಾಗಿ ಇವೆಲ್ಲವೂ ಮಿತಿಯೇ. ಮಿತಿಯೆಂದು ಹಲುಬುತ್ತ ಕುಳಿತರೆ ಆಸಕ್ತಿಯನ್ನು ಪೋಷಿಸುವವರು ಯಾರು? ಕೊನೆಗೂ ನಮ್ಮೊಳಗಿನ ಆಸಕ್ತಿ, ಅಭಿರುಚಿಗೆ ಪ್ರೋತ್ಸಾಹ ನೀಡಬೇಕಿರುವವರು ನಾವೇ ಅಲ್ಲವೇ?.

(ನಿರೂಪಣೆ : ರೂಪಾ ಕೆ.ಎಂ.)

ಕಾಡಿನ ಪಾಠ ಅರಿತರೆ ಫೋಟೋ..

ವೈದೇಹಿ ಗುಂಜಾಳ



ಹವ್ಯಾಸಕ್ಕೆ ವಯಸ್ಸಿನ ಹಂಗಿಲ್ಲ. ಜೀವನದ ಒತ್ತಡದಲ್ಲೂ ಸಮಯ ನೀಡಿದಾಗ ಹವ್ಯಾಸ ಸದಾ ಜೀವಂತವಾಗಿರುತ್ತದೆ. 56ನೇ ವಯಸ್ಸಿನಲ್ಲೂ ಕ್ಯಾಮೆರಾ ಹೆಗಲಿಗೇರಿಸಿಕೊಂಡು, ಕಾರು ಚಲಾಯಿಸಿಕೊಂಡು ರಾಜ್ಯದ ಗಡಿ ದಾಟಿ ಪಕ್ಷಿಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತೇನೆ.

ನಾನು ಹುಟ್ಟಿದ್ದು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ. ಶಿಕ್ಷಣ ಮುಗಿಸಿದ್ದು ಬೆಳಗಾವಿ ಹಾಗೂ ಸಾಂಗ್ಲಿಯಲ್ಲಿ. ಮದುವೆ ನಂತರ ಬೆಂಗಳೂರಿನಲ್ಲಿ ವಾಸವಾಗಿದ್ದೆ, 2009ರಿಂದ ಪತಿ ಹಾಗೂ ಮಗನೊಂದಿಗೆ ಧಾರವಾಡದ ರಜತಗಿರಿಯಲ್ಲಿ ನೆಲೆಸಿದ್ದೇನೆ. ಸಾಂಗ್ಲಿ ಯೂನಿವರ್ಸಿಟಿಯಲ್ಲಿ ಬ್ಯಾಚುಲರ್ ಆಫ್ ಫೈನ್ ಆರ್ಟ್ ಮುಗಿಸಿದೆ. ನನ್ನ ತಂಗಿಯೊಟ್ಟಿಗೆ ಸೇರಿ ಮನೆ ಅಲಂಕಾರಕ್ಕಾಗಿ ಬಳಸುವ ಸುಂದರವಾದ ಪೇಂಟಿಂಗ್‌ಗಳನ್ನೂ ರಚಿಸಿ, ಮಾರಾಟ ಮಾಡುತ್ತೇನೆ.

ಛಾಯಾಗ್ರಹಣ ಎನ್ನುವುದು ಹವ್ಯಾಸ ಮಾತ್ರವಲ್ಲದೇ, ವೃತ್ತಿ, ಜೀವನದಲ್ಲಿ ತಾಳ್ಮೆ ಹಾಗೂ ನಮ್ಮ ಸುತ್ತಲಿನ ಜನ, ವಸ್ತು, ಜೀವಿ ಪ್ರತಿಯೊಂದನ್ನು ಪ್ರೀತಿಸುವ ಹಾಗೂ ಗೌರವಿಸುವ ಪಾಠ ಕಲಿಸುತ್ತದೆ.

ನಾನು ಬಾಲ್ಯದಿಂದಲೇ ಮನೆ ತೋಟ, ಸುತ್ತ ಮುತ್ತಲಿನ ಗಾರ್ಡನ್‌ಗಳಲ್ಲಿ ಕೀಟಗಳ, ಪಕ್ಷಿ ಫೋಟೊ ಸೆರೆಹಿಡಿಯುತ್ತಿದ್ದೆ. ಛಾಯಾಚಿತ್ರ ತೆಗೆಯುವವರಿಗೆ ಎಲ್ಲವೂ ಸುಂದರವಾಗಿಯೇ ಕಾಣಿಸುತ್ತದೆ. ಆಗ ಕ್ಯಾಮೆರಾ ಇರಲಿಲ್ಲ. ಆದರೆ ಆಸಕ್ತಿ ಕುಂದಿರಲಿಲ್ಲ. 2015ರಲ್ಲಿ ಕ್ಯಾಮೆರಾ ಖರೀದಿಸಿ, ಪಕ್ಷಿಯ ಬೆನ್ನೆತ್ತಿ ಹೊರಟೆ. ಮನೆಯವರ ಬೆಂಬಲ ಇನ್ನಷ್ಟು ಉತ್ಸಾಹಿಯನ್ನಾಗಿ ಮಾಡಿತು.

ಧಾರವಾಡದ ಸುತ್ತ ಮುತ್ತ ಅನೇಕ ಸುಂದರ ತಾಣಗಳಿವೆ, ಇಲ್ಲಿಯೂ ವಿವಿಧ ಜಾತಿಯ ಪಕ್ಷಿಗಳು ಬರುತ್ತವೆ. ಆದರೆ ಅವುಗಳನ್ನು ಸೆರೆ ಹಿಡಿಯುವುದು ಸುಲಭವಲ್ಲ. ಅದಕ್ಕಾಗಿ ಗಂಟೆಗಟ್ಟಲೆ ಸಂಯಮದಿಂದ ಕಾಯಬೇಕು ಹಾಗೂ ಕೈಯಲ್ಲಿ ಕ್ಯಾಮೆರಾ ಆನ್ ಆಗಿರಬೇಕು. ಆ್ಯಕ್ಷನ್ ಫೋಟೊ ಸೆರೆಹಿಡಿಯಬೇಕಾದರೆ ಅಲರ್ಟ್ ಆಗಿರಬೇಕು, ಸದ್ದಾಗದಂತೆ ಎಚ್ಚರಿಕೆ ವಹಿಸಬೇಕು.

ಹೀಗೆ ಕೈಗೆ ಕ್ಯಾಮೆರಾ ಸಿಕ್ಕಮೇಲೆ ಅಸ್ಸಾಂ, ಅರುಣಾಚಲ ಪ್ರದೇಶ,ಸುಂದರಬನ, ಚಂದೋಲಿ, ಕ್ಯಾಸಲ್‌ರಾಕ್, ಗೋವಾ ಹಾಗೂ ಕೊಡಗು ಸೇರಿದಂತೆ ಅನೇಕ ಪ್ರದೇಶಗಳಲ್ಲಿ ಸುತ್ತಾಡಿ ಸಾವಿರಾರು ಪಕ್ಷಿ ಫೋಟೊಗಳನ್ನು ಕ್ಲಿಕ್ಕಿಸಿದ್ದೇನೆ. ಹಾಗೇ ಕ್ಲಿಕ್ಕಿಸುವಾಗ ಅನೇಕ ಬಾರಿ ಕಾಲಿಗೆ ಗಾಯವನ್ನು ಮಾಡಿಕೊಂಡಿದ್ದೇನೆ. ಪ್ರತಿಯೊಂದು ಫೋಟೊ ಸೆರೆ ಹಿಡಿದಿದ್ದರ ಹಿಂದೆ ತನ್ನದೇ ಆದ ಕಥೆಗಳಿವೆ. ಅವುಗಳನ್ನು ಮಾತಿನಲ್ಲಿ ವಿವರಿಸುವುದು ಅಸಾಧ್ಯ.

ಹೊಸ ಜಾತಿಯ ಪಕ್ಷಿ ಛಾಯಾಚಿತ್ರ ಸೆರೆಹಿಡಿದ ನಂತರ ಅವುಗಳ ಬಗೆಗೆನ ಕುತೂಹಲ ಹೆಚ್ಚಾಗಿ, ಅವುಗಳ ಜೀವನಶೈಲಿ, ಆಹಾರಶೈಲಿ ಕುರಿತು ಮಾಹಿತಿ ಕಲೆ ಹಾಕಿ ಡಾಕ್ಯುಮೆಂಟೇಶನ್ ಸಹ ಮಾಡುತ್ತಿದ್ದೇನೆ. ಇದರಿಂದ ಪಕ್ಷಿಸಂಕುಲ ವೈವಿಧ್ಯದ ಬಗ್ಗೆ ತಿಳಿದುಕೊಂಡಿದ್ದೇನೆ. ಸೆರೆಹಿಡಿದ ಪಕ್ಷಿ ಚಿತ್ರಗಳನ್ನು ನೋಡಿ ಪೇಂಟಿಂಗ್ ಸಹ ಮಾಡಿದ್ದೇನೆ. ಪ್ರತಿಷ್ಠಿತ ನಿಯತಕಾಲಿಕೆಗಳಲ್ಲೂ ಅವು ಪ್ರಕಟವಾಗಿವೆ.

ಬೆಳಗಿನಜಾವ ಹಾಗೂ ಸಂಜೆ ಪಕ್ಷಿ ಛಾಯಾಚಿತ್ರಕ್ಕೆ ಹೇಳಿ ಮಾಡಿಸಿದ ಸಮಯ. ಸಾಧ್ಯವಾದಷ್ಟು ಗುಂಪಿನೊಂದಿಗೆ ಹೋಗುವುದು ಒಳಿತು, ಮೊಬೈಲ್ ಸದಾ ಜೊತೆಗೆ ಇರಲಿ, ಕುಡಿಯುವ ನೀರಿನ ಬಾಟಲಿ, ತಿನಿಸು ಕೊಂಡೊಯ್ಯಬೇಕು. ಒಬ್ಬರೇ ಹೋಗುವುದಾದರೆ ಸದಾ ಜಾಗೃತರಾಗಿರಬೇಕು. ಸಾಧ್ಯವಾದಷ್ಟು ನಮ್ಮ ವಾಹನದ ಬಳಿಯೇ ಇರುವುದು ಉತ್ತಮ.

ವಿವಾಹಿತ ಮಹಿಳೆಯರು ಫೋಟೊಗ್ರಫಿಯಲ್ಲಿ ಹವ್ಯಾಸ ಹೊಂದಿದ್ದರೆ, ಸಮಯ ನಿರ್ವಹಣೆಗೆ ಆದ್ಯತೆ ನೀಡಬೇಕು. ಮಹಿಳೆಯರು ಸೀಮಾತೀತರು. ಎಲ್ಲ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿಯೂ ತಮ್ಮೊಳಗಿನ ಆಸಕ್ತಿಗೆ ಕುಂದು ಬಾರದಂತೆ ನೋಡಿಕೊಳ್ಳಬೇಕಷ್ಟೆ.

(ನಿರೂಪಣೆ: ಗೌರಮ್ಮ ಕಟ್ಟಿಮನಿ)

ಪೌಷ್ಟಿಕ ಖಾದ್ಯಗಳು

ಬಳಲುವ ದೇಹಕ್ಕೆ ಚೈತನ್ಯ ತುಂಬಲು ಪೌಷ್ಟಿಕಾಂಶಯುಕ್ತ ಆಹಾರ ಅಗತ್ಯ. ಇಂಥ ರುಚಿ, ಪರಿಮಳ ಮತ್ತು ಪೌಷ್ಟಿಕಾಂಶವಿರುವ ಖಾದ್ಯಗಳ ರೆಸಿಪಿಗಳನ್ನು **ಕೆ.ವಿ. ರಾಜಲಕ್ಷ್ಮಿ** ಇಲ್ಲಿ ಪರಿಚಯಿಸಿದ್ದಾರೆ.

ನಳಪಾಕ

ರಾಗಿ ಸಿಹಿ ಪುಡಿ

ಬೇಕಾಗುವ ಸಾಮಗ್ರಿ: ರಾಗಿ ಹುರಿಹಿಟ್ಟು -1 ಕಪ್, ಬೆಲ್ಲದ ಪುಡಿ ಮುಕ್ಕಾಲು ಕಪ್, ಎರಡು ಚಮಚ ಒಣಕೊಬ್ಬರಿ ಪುಡಿ, ಏಲಕ್ಕಿಪುಡಿ ಕಾಲು ಚಮಚ, ತುಪ್ಪ ರುಚಿಗೆ ತಕ್ಕಷ್ಟು.

ಮಾಡುವ ವಿಧಾನ: ಸಣ್ಣ ಉರಿಯಲ್ಲಿ ಬಾಣಲೆಯಲ್ಲಿ ತುಪ್ಪ ಕರಗಿಸಿ ಮೊದಲಿಗೆ ಬೆಲ್ಲದಪುಡಿ ಹಾಕಿ ಕರಗಿಸಿ. ನಂತರ ರಾಗಿ ಹುರಿಹಿಟ್ಟು, ಒಣಕೊಬ್ಬರಿ ಪುಡಿ, ಏಲಕ್ಕಿ ಪುಡಿ ಹಾಕಿ ಒಂದೆರಡು ನಿಮಿಷ ಗೊಟಾಯಿಸಿ. ಸ್ಟವ್ ಆರಿಸಿ. ಪುಡಿ ತಣಿದ ಮೇಲೆ ಅದನ್ನು ಗಾಳಿಯಾಡದ ಡಬ್ಬಿಗೆ ವರ್ಗಾಯಿಸಿ. ನಿಮಗೆ ಬೇಕೆನಿಸಿದಾಗ ಈ ಪುಡಿಯನ್ನು ಸೇವಿಸಬಹುದು. ಅಷ್ಟೇ ಅಲ್ಲ, ಹಾಲಿನೊಂದಿಗೆ ಈ ಪುಡಿಯನ್ನು ಬೆರೆಸಿ ಮಾಲ್ಟ್ ರೀತಿ ಮಾಡಿ ಕುಡಿಯಬಹುದು.

ಪ್ರೋಟೀನ್ ಪೌಡರ್

ಬೇಕಾಗುವ ಸಾಮಗ್ರಿ: ಹುರಿದು, ಸಿಪ್ಪೆ ತೆಗೆದ ಕಡಲೆಕಾಯಿ ಬೀಜ 1 ಕಪ್, ಹುರಿಗಡಲೆ 1 ಕಪ್, ಒಣಕೊಬ್ಬರಿ ತುರಿ ಅರ್ಧ ಕಪ್, ಬೆಲ್ಲದಪುಡಿ 3 ಕಪ್, ಗೋಡಂಬಿ 6, ಬಾದಾಮಿ 6, ಏಲಕ್ಕಿ ಪುಡಿ 1 ಚಮಚ.

ಮಾಡುವ ವಿಧಾನ: ಬೆಲ್ಲದ ಪುಡಿ, ಏಲಕ್ಕಿ ಪುಡಿ ಹೊರತುಪಡಿಸಿ, ಉಳಿದೆಲ್ಲ ಪದಾರ್ಥಗಳನ್ನು ತರಿತರಿಯಾಗಿ ಅರೆಯಿರಿ. ನಂತರ ಆ ಪುಡಿಗೆ ಬೆಲ್ಲ, ಏಲಕ್ಕಿಪುಡಿ ಹಾಕಿ. ಒಂದೆರಡು ಸುತ್ತು ಅರೆಯಿರಿ. ಸ್ವಾದಿಷ್ಟಭರಿತ ಪ್ರೋಟೀನ್ ಪೌಡರ್ ಸಿದ್ಧ. ಇದನ್ನು ಹಾಲಿನೊಂದಿಗೆ ಬೆರೆಸಿಕೊಂಡು ಸೇವಿಸಬಹುದು. ಪಾಯಸ ತಯಾರಿಸುವಾಗ, ಈ ಪ್ರೊಟಿನ್ ಪುಡಿಯನ್ನು ಎರಡು ಚಮದಷ್ಟು ಬೆರೆಸಿಕೊಂಡರೆ, ಪಾಯಸ ರುಚಿಗಟ್ಟುತ್ತದೆ.

ಉದರದ ಬೊಜ್ಜು ಅಪಾಯವೇ?

ಸ್ಪಂದನ

ಡಾ. ವೀಣಾ ಎಸ್. ಭಟ್

1. ನನಗೆ ವಯಸ್ಸು 32 ವರ್ಷ. ತೂಕ 64 ಕೆ.ಜಿ. ಮೊದಲನೆಯದು ಸಿಸೇರಿಯನ್ ಹೆರಿಗೆ. ಮಗುವಿಗೆ 5 ವರ್ಷ. ಈಗ ಎರಡನೇ ಮಗು ಮಾಡಿಕೊಳ್ಳುವ ಬಗ್ಗೆ ಯೋಚಿಸಿದ್ದೇನೆ. ತಿಂಗಳ ಮುಟ್ಟು ನಾರ್ಮಲ್ ಇದೆ. ಆದರೆ ಹೊಟ್ಟೆಯಭಾಗ ದಪ್ಪ ಇದೆ. ಹೊಟ್ಟೆ 4-5 ತಿಂಗಳ ಬಸುರಿ ರೀತಿ ಕಾಣಿಸುತ್ತದೆ. ನಾನು ಈಗ ಗರ್ಭಿಣಿಯಾದರೆ ಈ ಬೊಜ್ಜು ಮಗುವಿನ ಬೆಳವಣಿಗೆ ಮೇಲೆ ಪರಿಣಾಮ ಬೀರಬಹುದೇ?

ಹೆಸರು, ಊರು ತಿಳಿಸಿಲ್ಲ

ಉತ್ತರ: ನಿಮಗಿರುವುದು ಉದರದ(ಹೊಟ್ಟೆ) ಬೊಜ್ಜು. ಅಂದರೆ ದೇಹದಲ್ಲಿ ಆಂಡ್ರಾಯ್ಡ್ ಅಥವಾ ಸೇಬು ತರಹದ ಕೊಬ್ಬು. ಅಂದರೆ ಕೊಬ್ಬಿನ ಶೇಖರಣೆ ದೇಹದ ಮಧ್ಯಭಾಗದಲ್ಲಿ ಹಾಗೂ ಮೇಲ್ಭಾಗದಲ್ಲಿ ಉಂಟಾಗುವುದು.

ನಿಮ್ಮ ಸೊಂಟದ ಸುತ್ತಳತೆ 90 ಸೆಂ.ಮೀ. ಒಳಗೆ ಇರಬೇಕು. ನಿಮಗೆ 100 ಸೆಂ.ಮೀಗಿಂತ ಹೆಚ್ಚಾಗಿರಬೇಕಲ್ಲವೇ? ಹೌದಾದರೆ, ಅದು ಒಳ್ಳೆಯದಲ್ಲ. ಹಾಗಿದ್ದರೆ, ಅದು ಗರ್ಭಧಾರಣೆಯ ಸಮಯದಲ್ಲಿ ಹಾಗೂ ಭವಿಷ್ಯದ ದಿನಗಳಲ್ಲೂ ಹಲವು ಆರೋಗ್ಯ ಸಮಸ್ಯೆಗಳನ್ನು ತಂದೊಡ್ಡುವ ಮುನ್ಸೂಚನೆ.

ಉದರದಲ್ಲಿ ಕರುಳಿನ ಸುತ್ತಲು ಹರಡಿರುವ ಒಮೆಂಟಮ್‌ನ ಭಾಗದಲ್ಲಿ ಕೊಬ್ಬಿನ ಶೇಖರಣೆಯಾಗಿದೆ. ಇದು ಇಲ್ಲಿ ಪ್ರಮುಖ ಪಾತ್ರವಹಿಸಿದೆ. ಇದರಲ್ಲಿ ಚರ್ಮದ ಕೆಳಗಿನ ಕೊಬ್ಬಿನಾಂಶಕ್ಕಿಂತ ಹೊಟ್ಟೆಯೊಳಗಿನ ಬೊಜ್ಜಿನಾಂಶ (ವಿಸರಲ್ ಫ್ಯಾಟ್) ಯುನಿಟ್ ಮಾಸ್‌ಗೆ ಹೆಚ್ಚು ಕೊಬ್ಬಿನ ಕಣಗಳನ್ನು ಹೊಂದಿರುತ್ತದೆ. ಈ ಕೊಬ್ಬಿನ ಕಣಗಳಿಗೆ ರಕ್ತಸರಬರಾಜು ಕೂಡಾ ಹೆಚ್ಚಿರುತ್ತದೆ. ಇವುಗಳಿಂದ ಉತ್ಪತ್ತಿಯಾಗುವ ಹಾರ್ಮೋನುಗಳು ಮತ್ತು ಕೊಬ್ಬಿನ ಆಮ್ಲಗಳು ರಕ್ತಕ್ಕೆ ನೇರವಾಗಿ ತಲುಪಿ, ಇನ್ಸುಲಿನ್ ಪ್ರತಿರೋಧತೆಯಲ್ಲಿ ಹೆಚ್ಚಳ ಉಂಟಾಗಿ ಗ್ಲೂಕೋಸ್ ಅಸಮತೋಲನ, ಏರುರಕ್ತದೊತ್ತಡ(ಬಿ.ಪಿ), ಕೊಲೆಸ್ಟ್ರಾಲ್ ಮಟ್ಟ ಏರಿಕೆ ಎಲ್ಲವನ್ನೊಳಗೊಂಡ ಮೆಟಬಾಲಿಕ್‌ಸಿಂಡ್ರೋಂ ಉಂಟುಮಾಡುತ್ತದೆ. ಪಿತ್ತಕೋಶದಕಲ್ಲುಗಳು, ಲಿವರ್‌ನ ಕೊಬ್ಬು ರೋಗ ಇತ್ಯಾದಿಗಳ ಸಂಭವ ಹೆಚ್ಚು.

ನೀವು ನಿಮ್ಮ ಎತ್ತರವನ್ನು ತಿಳಿಸಿಲ್ಲ. ನಿಮ್ಮ ತೂಕವೂ ಅಗತ್ಯಕ್ಕಿಂತ ಹೆಚ್ಚಿರಬಹುದು. ಹಲವು ಅಧ್ಯಯನಗಳ ಪ್ರಕಾರ ಬೊಜ್ಜಿರುವ ಮಹಿಳೆಯರು ಗರ್ಭಿಣಿಯಾದಾಗ ಬಿ.ಪಿ, ಗರ್ಭಾವಸ್ಥೆಯ ಮಧುಮೇಹ, ಹೆಚ್ಚಾಗುವ ಸಿಸೇರಿಯನ್ ಸಂಭನೀಯತೆ ಹೆಚ್ಚಿರುತ್ತದೆ. ಸ್ತನ್ಯಪಾನದಲ್ಲೂ ತೊಡಕುಉಂಟಾಗುವುದು, ಮಗುವಿಗೂ ಮುಂದೆ ಬೊಜ್ಜುಂಟಾಗುವುದು.. ಹೀಗೆ ಹಲವು ಸಮಸ್ಯೆಗಳು ಉಂಟಾಗಬಹುದು. ಹಾಗಾಗಿ ಗರ್ಭಧಾರಣೆಗೂ ಮೊದಲೇ ಬೊಜ್ಜು ಕಡಿಮೆಮಾಡಿಕೊಳ್ಳಿ.

ಹಲವು ಮಹಿಳೆಯರು ಹೊಟ್ಟೆಯನ್ನು ಮಾತ್ರ ಹೇಗಾದರೂ ಸಣ್ಣ ಮಾಡಿಕೊಡಿ ಮೇಡಂ ಎಂದು ಕೇಳುತ್ತಾರೆ ಮತ್ತು ಅವರಾಗಿಯೇ ಜಾಹೀರಾತಿನಲ್ಲಿ ತೋರಿಸುವ ತರಹವಾರಿ ಎಣ್ಣೆ, ಟಮ್ಮಿಟ್ರಿಮ್ಮರ್ ಇತ್ಯಾದಿ ಉಪಯೋಗಿಸು ತ್ತಾರೆ. ಆದರೆ ಇವೆಲ್ಲಾ ತಪ್ಪು. ಹಿತಮಿತ ಆಹಾರ ನಿಯಮಿತ ವ್ಯಾಯಾಮವನ್ನು ಅನುಸರಿಸಿದಾಗ ಇಡೀ ಶರೀರದ ಕೊಬ್ಬು ಕರಗಿದಾಗ ಹೊಟ್ಟೆಯ ಬೊಜ್ಜೂ ಕರಗುತ್ತದೆ. ದೇಹದ ಒಡೊಂದೇ ಭಾಗದ ಕೊಬ್ಬನ್ನ ಕರಗಿಸಲು ಸಾಧ್ಯವಿಲ್ಲ.

ಹಾಗಾಗಿ ನೀವು ಹೆಚ್ಚು ಪ್ರಕೃತಿದತ್ತ ಆಹಾರಗಳನ್ನ ಸೇವಿಸಿ. ಉಪ್ಪಿನಾಂಶ ಹಾಗೂ ಸಕ್ಕರೆ ಹೆಚ್ಚಿರುವ ಆಹಾರ ಸೇವನೆ ಕಡಿಮೆ ಮಾಡಿ. ದಿನಾಲೂ 4ಲೀಟರ್ ನೀರು ಕುಡಿಯಿರಿ. ಕಾಫಿ, ಕೋಲಾ, ಜಂಕ್‌ಫುಡ್ ಸೇವನೆ (ಅಭ್ಯಾಸವಿದ್ದರೆ) ಕಡಿಮೆ ಮಾಡಿ. ಎಲ್ಲದಕ್ಕಿಂತ ಮುಖ್ಯವಾಗಿ ಒತ್ತಡ ಕಡಿಮೆಮಾಡಿಕೊಳ್ಳಿ.

ಹಗಲುನಿದ್ರೆ ಮಾಡದೇ ರಾತ್ರಿ 6 ರಿಂದ 8 ತಾಸು ನಿದ್ರಿಸಿ. ಹೊಟ್ಟೆಯ ಮಾಂಸಖಂಡಗಳನ್ನು ಬಲಪಡಿಸಿ ಕೊಳ್ಳುವುದು ಬಹಳಮುಖ್ಯ. ಇದಕ್ಕಾಗಿ ನೀವು ನಿಲ್ಲುವಾಗ ಸದಾ ಕಾಲುಗಳ ಮೇಲೆ ಸಮಭಾರ ಹಾಕಿ, ಹೊಟ್ಟೆಯನ್ನ ಒಳಗೆಳೆದುಕೊಂಡು ನಿಲ್ಲಲು ಪ್ರಯತ್ನಿಸಿ. ದ್ವಿಪಾದ ಉತ್ಥಾನಾಸನ, ನೌಕಾಸನ ಸೂರ್ಯ ನಮಸ್ಕಾರದಂತಹ ಆಸನಗಳನ್ನು ನಿಯಮಿತವಾಗಿ ಮಾಡುತ್ತಾ, ನಿಮ್ಮ ಉದರದಬೊಜ್ಜು ಸರಿಪಡಿಸಿಕೊಂಡು ನಂತರ ಗರ್ಭಧರಿಸಿಕೊಳ್ಳಲು ಪ್ರಯತ್ನಿಸಿ.

ಮತ್ತಷ್ಟು ಪ್ರಶ್ನೋತ್ತರಕ್ಕೆ https://www.prajavani.net/health ನೋಡಿ

ಸ್ಪಂದನ....

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ
ಹಳೆಯ ರೂಢಿ, ಪರಂಪರೆಗಳಿಗೆ ಜೋತುಬೀಳದಿರಿ. ಹೊಸ ಹಲಗೆಯ ಮೇಲೆ ಹೊಸ ಪಾಠ ಬರೆಯಿರಿ.
-ಡಾ. ಬಿ.ಆರ್.ಅಂಬೇಡ್ಕರ್

ಅಕ್ರಮ ಗಣಿಗಾರಿಕೆಯಿಂದ ವರಮಾನ ಸೋರಿಕೆ ತಡೆಗೆ ಬಿಗಿ ಕ್ರಮ ಅಗತ್ಯ

ರಾಜ್ಯದಲ್ಲಿ ಉಪ ಖನಿಜಗಳ ಅಕ್ರಮ ಗಣಿಗಾರಿಕೆ ಅಬಾಧಿತವಾಗಿ ನಡೆಯುತ್ತಿರುವುದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹ 18,000 ಕೋಟಿಯಿಂದ ₹ 20,000 ಕೋಟಿಯಷ್ಟು ವರಮಾನ ನಷ್ಟವಾಗುತ್ತಿದೆ ಎಂಬುದನ್ನು ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ (ಪಿಎಸಿ) ಪತ್ತೆಮಾಡಿದೆ. ಕಾಂಗ್ರೆಸ್ ಶಾಸಕ ಕೃಷ್ಣ ಬೈರೇಗೌಡ ನೇತೃತ್ವದ ಸಮಿತಿ ಸಲ್ಲಿಸಿರುವ ವರದಿಯನ್ನು ವಿಧಾನಮಂಡಲದಲ್ಲಿ ಮಂಡಿಸಲಾಗಿದೆ. ಕಟ್ಟಡ ಕಲ್ಲು, ಗ್ರಾನೈಟ್, ಸಿಲಿಕಾ, ಮರಳು, ಸುಣ್ಣದಕಲ್ಲು ಸೇರಿದಂತೆ ಲಭ್ಯವಿರುವ ಉಪ ಖನಿಜಗಳ ಗಣಿ ಪ್ರದೇಶದ ಸಮಗ್ರ ಪಟ್ಟಿಯೇ ರಾಜ್ಯ ಸರ್ಕಾರದ ಬಳಿ ಇಲ್ಲ ಎಂಬುದನ್ನೂ ಪಿಎಸಿ ವರದಿ ಬಹಿರಂಗಪಡಿಸಿದೆ. ರಾಜ್ಯದಲ್ಲಿನ ಉಪ ಖನಿಜಗಳ ಗಣಿಗಾರಿಕೆಯಲ್ಲಿ ವರಮಾನ ಸೋರಿಕೆ ಆಗುತ್ತಿರುವ ಕುರಿತು ಮಹಾಲೇಖಪಾಲರು (ಸಿಎಜಿ) ಈ ಹಿಂದೆ ಲೆಕ್ಕಪರಿಶೋಧನೆ ನಡೆಸಿದ್ದರು. ಆಗ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿನ ಕಟ್ಟಡ ಕಲ್ಲು ಮತ್ತು ಗ್ರಾನೈಟ್ ಗಣಿಗಾರಿಕೆ ಕುರಿತು ಪ್ರಾಯೋಗಿಕವಾಗಿ ಅಧ್ಯಯನ ನಡೆಸಿದ್ದರು. ಉಪಗ್ರಹ ಚಿತ್ರಗಳು ಮತ್ತು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಆಧಾರದಲ್ಲಿ ಅಲ್ಲಿನ 292 ಗಣಿ ಗುತ್ತಿಗೆಗಳ ಕುರಿತು ಮಹಾಲೇಖಪಾಲರು ತನಿಖೆ ನಡೆಸಿದ್ದರು. ಗುತ್ತಿಗೆ ಪ್ರದೇಶದ ಹೊರಗೆ ನಡೆಯುವ ಅಕ್ರಮ ಗಣಿಗಾರಿಕೆಯಿಂದ ಚಿಕ್ಕಬಳ್ಳಾಪುರ ಜಿಲ್ಲೆಯೊಂದರಲ್ಲೇ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ ₹ 2,324 ಕೋಟಿಯಷ್ಟು ನಷ್ಟವಾಗುತ್ತಿದೆ ಎಂದು ವರದಿ ನೀಡಿದ್ದರು. ಆ ಕುರಿತು ಪರಿಶೀಲನೆ ನಡೆಸಿರುವ ಪಿಎಸಿ, ಸಿಎಜಿ ವರದಿಯ ಆಧಾರದಲ್ಲಿ ಇಡೀ ರಾಜ್ಯದಲ್ಲಿನ ಅಕ್ರಮ ಗಣಿಗಾರಿಕೆ ಪ್ರಮಾಣವನ್ನು ಅಂದಾಜು ಮಾಡಿ ನಷ್ಟದ ಲೆಕ್ಕಾಚಾರ ಹಾಕಿದೆ. ಪ್ರಸ್ತುತ ರಾಜ್ಯ ಸರ್ಕಾರವು ಉಪ ಖನಿಜಗಳ ಗಣಿಗಾರಿಕೆಯಿಂದ ತೆರಿಗೆಯೇತರ ರಾಜಸ್ವದ ರೂಪದಲ್ಲಿ ವಾರ್ಷಿಕ ₹ 6,300 ಕೋಟಿ ವರಮಾನ ಪಡೆಯುತ್ತಿದೆ. ಉಪ ಖನಿಜಗಳ ಗುತ್ತಿಗೆ ಪ್ರದೇಶಗಳ ಗಡಿಯ ಹೊರಭಾಗದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯನ್ನು ಉಪಗ್ರಹ ಚಿತ್ರಗಳು ಸೇರಿದಂತೆ ತಂತ್ರಜ್ಞಾನದ ಆಧಾರದಲ್ಲಿ ನಿಖರವಾಗಿ ಅಂದಾಜು ಮಾಡಿ ರಾಜಧನ ಮತ್ತು ಇತರ ಶುಲ್ಕಗಳನ್ನು ಸಂಗ್ರಹಿಸಿದರೆ, ಈ ಮೂಲದಿಂದ ಸಂಗ್ರಹವಾಗುವ ವರಮಾನವು ಮೂರು ಪಟ್ಟಿಗಿಂತಲೂ ಹೆಚ್ಚಾಗುತ್ತದೆ ಎಂದು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಹೇಳಿದೆ. ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ರಾಜ್ಯವು ಗಣಿಗಾರಿಕೆ ಪ್ರದೇಶವನ್ನು ಗುರುತಿಸಲು ಅತ್ಯಂತ ಹಳೆಯದಾದ ವಿಧಾನಗಳನ್ನು ಅನುಸರಿಸುತ್ತಿದೆ. ಈ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಸಮಿತಿ, ಆಧುನಿಕ ತಂತ್ರಜ್ಞಾನ ಬಳಕೆಗೆ ಶಿಫಾರಸು ಮಾಡಿದೆ.

ಅಕ್ರಮ ಗಣಿಗಾರಿಕೆಯನ್ನು ರಾಜಕೀಯ ಪಕ್ಷಗಳ ತಿಜೋರಿ ತುಂಬಿಸುವುದಕ್ಕೆ ಪೂರಕವಾಗಿ ಬಳಸಿಕೊಳ್ಳುವ ಧೋರಣೆ ಕೈಬಿಡಬೇಕು

ಅಕ್ರಮ ಗಣಿಗಾರಿಕೆ ಹಗರಣಗಳು ಕರ್ನಾಟಕಕ್ಕೆ ಹೊಸವೇನೂ ಅಲ್ಲ. ಆದರೆ, ಅಕ್ರಮ ಗಣಿಗಾರಿಕೆ ತಡೆಯುವ ದಿಸೆಯಲ್ಲಿ ರಾಜ್ಯ ಸರ್ಕಾರದ ಧೋರಣೆ ಕಿಂಚಿತ್ತೂ ಬದಲಾಗಿಲ್ಲ ಎಂಬುದಕ್ಕೆ ಉಪ ಖನಿಜಗಳ ಗಣಿಗಾರಿಕೆಯಲ್ಲಿ ವರಮಾನ ಸೋರಿಕೆ ಕುರಿತು ಪಿಎಸಿ ನೀಡಿರುವ ವರದಿಯೇ ಸಾಕ್ಷಿ. 2006ರಿಂದ 2010ರ ಅವಧಿಯಲ್ಲಿ ರಾಜ್ಯದಲ್ಲಿ ನಡೆದ ಕಬ್ಬಿಣದ ಅದಿರಿನ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿದ್ದ ಆಗಿನ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, 2011ರಲ್ಲಿ 25,000ಕ್ಕೂ ಹೆಚ್ಚು ಪುಟಗಳ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ವರದಿಯ ಪರಿಣಾಮವಾಗಿ ಸಿಬಿಐ ತನಿಖೆ ನಡೆದು ಮಾಜಿ ಸಚಿವ ಜಿ. ಜನಾರ್ದನ ರೆಡ್ಡಿ ಸೇರಿದಂತೆ ಬಳ್ಳಾರಿಯ ಕೆಲವು ರಾಜಕೀಯ ಮುಖಂಡರು, ಉದ್ಯಮಿಗಳು ಜೈಲು ಸೇರಿದ್ದರು. ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯಬೇಕಾಯಿತು. ಹಲವು ರಾಜಕಾರಣಿಗಳು ಮತ್ತು 600ಕ್ಕೂ ಹೆಚ್ಚು ಅಧಿಕಾರಿಗಳ ವಿರುದ್ಧ ವರದಿಯಲ್ಲಿ ಆರೋಪಿಸಲಾಗಿತ್ತು. 2006-2010ರ ಅವಧಿಯಲ್ಲಿ ಕಬ್ಬಿಣದ ಅದಿರಿನ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ₹ 16,000 ಕೋಟಿ ನಷ್ಟವಾಗಿದೆ ಎಂದು ಲೋಕಾಯುಕ್ತರು ಅಂದಾಜು ಮಾಡಿದ್ದರು. ನಷ್ಟದ ಬಗ್ಗೆ ಮರು ಪರಿಶೀಲನೆಗೆ ಸರ್ಕಾರ ನೇಮಿಸಿದ್ದ ಸಮಿತಿಯು ಅಕ್ರಮ ಗಣಿಗಾರಿಕೆಯಿಂದ ಆದ ನಷ್ಟದ ಪ್ರಮಾಣ ₹ 1.43 ಲಕ್ಷ ಕೋಟಿ ಎಂದು ಅಂದಾಜಿಸಿತ್ತು. ಸರ್ಕಾರವು ಅಕ್ರಮ ಚಟುವಟಿಕೆ ಮತ್ತು ಕಾನೂನು ಉಲ್ಲಂಘನೆ ತಡೆಯಲು ವಿಫಲವಾಗಿದ್ದ ಕಾರಣದಿಂದಲೇ ಭಾರಿ ಪ್ರಮಾಣದ ಅಕ್ರಮ ಗಣಿಗಾರಿಕೆ ನಡೆದಿತ್ತು ಎಂದು ಲೋಕಾಯುಕ್ತರು ವರದಿಯಲ್ಲಿ ಉಲ್ಲೇಖಿಸಿದ್ದರು. ಉಪ ಖನಿಜಗಳ ಅಕ್ರಮ ಗಣಿಗಾರಿಕೆಯಿಂದಲೂ ದೊಡ್ಡ ಪ್ರಮಾಣದ ವರಮಾನ ಸೋರಿಕೆಗೂ ಇದೇ ಕಾರಣ. ಈ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿರುವವರಲ್ಲಿ ಹೆಚ್ಚಿನವರು ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಅಥವಾ ಅವರ ಹಿಂಬಾಲಕರೇ ಆಗಿದ್ದಾರೆ. ಈ ಕಾರಣದಿಂದಾಗಿಯೇ ಕ್ರಮಕೈಗೊಳ್ಳಲು ಹಿಂದೇಟು ಹಾಕಲಾಗುತ್ತಿದೆ. ಉಪ ಖನಿಜಗಳ ಗುತ್ತಿಗೆ ಪ್ರದೇಶಗಳು ಕಬ್ಬಿಣದ ಅದಿರಿನ ಗಣಿಗಳಷ್ಟು ಹೆಚ್ಚು ವಿಸ್ತಾರವಾಗಿರುವುದಿಲ್ಲ. ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ರಾಜ್ಯದಲ್ಲಿ ಲಭ್ಯವಿರುವ ಉಪ ಖನಿಜಗಳ ನಿಕ್ಷೇಪಗಳನ್ನು ನಿಖರವಾಗಿ ಗುರುತಿಸಿ ಪಟ್ಟಿಯೊಂದನ್ನು ಸಿದ್ಧಪಡಿಸಬೇಕು. ಅಕ್ರಮ ಗಣಿಗಾರಿಕೆ ಮತ್ತು ಗುತ್ತಿಗೆ ಪ್ರದೇಶದ ಹೊರ ಭಾಗದಲ್ಲಿ ನಡೆಯುವ ಗಣಿಗಾರಿಕೆ ಪತ್ತೆಹಚ್ಚಲು ಜಿಲ್ಲಾ ಮಟ್ಟದಲ್ಲಿ ಪರಿಶೋಧನೆ ನಡೆಸಬೇಕು. ಅಕ್ರಮ ಗಣಿಗಾರಿಕೆಯನ್ನು ರಾಜಕೀಯ ಪಕ್ಷಗಳ ತಿಜೋರಿ ತುಂಬಿಸುವುದಕ್ಕೆ ಪೂರಕವಾಗಿ ಬಳಸಿಕೊಳ್ಳುವ ಧೋರಣೆ ಕೈಬಿಡಬೇಕು. ಅದನ್ನು ಮಟ್ಟಹಾಕಿ, ಗಣಿಗಾರಿಕೆಯನ್ನು ಸರ್ಕಾರದ ಬೊಕ್ಕಸ ಭರ್ತಿ ಮಾಡುವ ಆದಾಯದ ಮೂಲವನ್ನಾಗಿ ಪರಿವರ್ತಿಸುವ ಬದ್ಧತೆಯನ್ನು ಪ್ರದರ್ಶಿಸಬೇಕು.

ದಿನದ ಟ್ವೀಟ್

ಅಳವಡಿಕೆಗೆ ತಡವೇಕೆ?

ಎಲ್ಲ ಪೊಲೀಸ್ ಠಾಣೆಗಳಲ್ಲಿ ಮತ್ತು ಬಂಧಿಸುವ ಅಧಿಕಾರ ಹೊಂದಿರುವ ಎಲ್ಲ ಸಂಸ್ಥೆಗಳ ಕಚೇರಿಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾಗಳನ್ನು ಅಳವಡಿಸುವ ಆದೇಶದ ಪಾಲನೆಗೆ ಸಂಬಂಧಿಸಿದ ವರದಿ ಸಲ್ಲಿಸಲು ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ಹೇಳಿದೆ. ಬಹುತೇಕ ರಾಜ್ಯಗಳು ಅರ್ಧದಷ್ಟು ಪ್ರಮಾಣದಲ್ಲೂ ಅಳವಡಿಸಿಲ್ಲ. ಈ ವಿಷಯದಲ್ಲಿ ಕರ್ನಾಟಕವು ಮುಂಚೂಣಿ ಸ್ಥಾನದಲ್ಲಿ ಇರುವಂತೆ ಆಗಬೇಕು.

ಅಶ್ವಿನ್ ಮಹೇಶ್, ನಗರ ಯೋಜನಾ ತಜ್ಞ

ಕಿಡಿನುಡಿ

ಮದ್ಯವನ್ನು ಖರೀದಿಸುವ ಮತ್ತು ಸೇವಿಸುವ ಕನಿಷ್ಠ ವಯೋಮಿತಿಯನ್ನು ಸರ್ಕಾರವು ಉನ್ನತ ಮಟ್ಟದ ತಜ್ಞರ ಸಮಿತಿಯ ಶಿಫಾರಸಿನ ಮೇರೆಗೆ 18 ವರ್ಷಗಳಿಗೆ ಇಳಿಸುವ ಬದಲು 25 ವರ್ಷಗಳಿಗೆ ಏರಿಸಿದರೆ ನನಗೆ ಸಂತಸವಾಗುತ್ತದೆ. ಸಮಿತಿಯ ಸದಸ್ಯರು 'ಅತ್ಯುತ್ಸಾಹ'ದಲ್ಲಿ ಇದ್ದರೆಂದು ಭಾಸವಾಗುತ್ತಿದೆ.

ಡಾ. ಶ್ರೀವತ್ಸ ನಾಡಿಗ್, ವೈದ್ಯ

25 ವರ್ಷಗಳ ಹಿಂದೆ

ಬುಧವಾರ, 25-2-1998

- **ಸದನದಲ್ಲಿ ನಾಳೆ ಬಲಾಬಲ ಪರೀಕ್ಷೆಗೆ ಸುಪ್ರೀಂ ಕೋರ್ಟ್ ಆದೇಶ**

ನವದೆಹಲಿ, ಫೆ. 24 (ಪಿಟಿಐ, ಯುಎನ್‌ಐ)– ಉತ್ತರಪ್ರದೇಶದ ವಿಧಾನಸಭೆಯ ಅಧಿವೇಶನವನ್ನು ಗುರುವಾರ ಬೆಳಿಗ್ಗೆ ಕರೆದು, ಸದನದಲ್ಲಿ ಕಲ್ಯಾಣ್ ಸಿಂಗ್ ಅಥವಾ ಜಗದಾಂಬಿಕ ಪಾಲ್ ಅವರಲ್ಲಿ ಯಾರಿಗೆ ಬಹುಮತ ಇದೆ ಎಂಬುದನ್ನು ಪರೀಕ್ಷಿಸಬೇಕು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಂ.ಎಂ.ಪುಂಛಿ ನೇತೃತ್ವದ ಮೂವರು ನ್ಯಾಯಮೂರ್ತಿಗಳ ವಿಭಾಗೀಯ ಪೀಠವು ಇಂದು ಆದೇಶ ನೀಡಿದೆ.

ಕಲ್ಯಾಣ್ ಸಿಂಗ್ ನೇತೃತ್ವದ ಸರ್ಕಾರವನ್ನು ವಜಾ ಮಾಡಿದ್ದ ರಾಜ್ಯಪಾಲ ರೊಮೇಶ್ ಭಂಡಾರಿ ಅವರ ಕ್ರಮವನ್ನು ಅಸಿಂಧುಗೊಳಿಸಿದ ಅಲಹಾಬಾದ್ ಹೈಕೋರ್ಟ್ ವಿಭಾಗೀಯ ಪೀಠದ ತೀರ್ಪಿಗೆ ತಡೆ ನೀಡಬೇಕೆಂಬ ಜಗದಾಂಬಿಕ ಪಾಲ್ ಅವರ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ. ಆದರೆ ಸರ್ಕಾರ ಯಾವುದೇ ನೀತಿ ನಿಯಮಕ್ಕೆ ಸಂಬಂಧಿಸಿದ ಹಾಗೂ ಪ್ರಮುಖವಾದ ನಿರ್ಧಾರ ಕೈಗೊಳ್ಳದಂತೆ ನಿರ್ಬಂಧ ಹೇರಿದೆ.

- **ರೊಮೇಶ್ ಭಂಡಾರಿ ವಜಾ ಮಾಡಲು ಪ್ರಧಾನಿ ಗುಜ್ರಾಲ್‌ಗೆ ರಾಷ್ಟ್ರಪತಿ ಪತ್ರ**

ನವದೆಹಲಿ, ಫೆ. 24 (ಪಿಟಿಐ)– ಇಂದು ನಡೆದ ಅನಿರೀಕ್ಷಿತ ಬೆಳವಣಿಗೆಯಲ್ಲಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರು ಉತ್ತರಪ್ರದೇಶದ ರಾಜ್ಯಪಾಲ ರೊಮೇಶ್ ಭಂಡಾರಿ ಅವರನ್ನು ವಜಾ ಮಾಡುವ ಬಗ್ಗೆ ಪ್ರಧಾನಿ ಐ.ಕೆ.ಗುಜ್ರಾಲ್ ಅವರಿಗೆ ಪತ್ರವನ್ನು ಬರೆದಿದ್ದಾರೆಂದು ಬಲ್ಲ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಭಾನುವಾರ, 25-2-1973

- **ಮತ್ತೆ ರಾಜ್ಯ ಮರು ವಿಂಗಡಣಾ ಆಯೋಗಕ್ಕೆ ಕೇಂದ್ರ ಸರ್ಕಾರ ವಿರೋಧ**

ನವದೆಹಲಿ, ಫೆ. 24 – ಜನಸಂಘ ಸಲಹೆ ಮಾಡಿರುವಂತೆ ಮತ್ತೊಂದು ರಾಜ್ಯ ಪುನರ್ ವಿಂಗಡಣಾ ಆಯೋಗ ರಚನೆಗೆ ಕೇಂದ್ರ ಗೃಹ ಸಚಿವ ಉಮಾಶಂಕರ ದೀಕ್ಷಿತ್ ಅವರು ಇಂದು ಇಲ್ಲಿ ಸಂಪೂರ್ಣ ವಿರೋಧ ವ್ಯಕ್ತಪಡಿಸಿದರು.

ರಾಜ್ಯಗಳ ಮರುವಿಂಗಡಣೆಯನ್ನು ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿರೋಧಿಸುವುದೆಂದು ಅವರು ತಿಳಿಸಿದರು.

- **ಭಿಕ್ಷಾಟನೆ ನಿಷೇಧ ಶಾಸನ ನಿಷ್ಠೆಯಿಂದ ಜಾರಿಗೆ ತರಲು ಆಗ್ರಹ**

ಬೆಂಗಳೂರು, ಫೆ. 24 – ರಾಜ್ಯದ ಕೆಲವು ಭಾಗಗಳಲ್ಲಿ ಜಾರಿಯಲ್ಲಿರುವ ಭಿಕ್ಷಾಟನೆಯನ್ನು ನಿಷೇಧಿಸುವುದಕ್ಕೆ ಸಂಬಂಧಪಟ್ಟ ಶಾಸನವನ್ನು ರಾಜ್ಯದಾದ್ಯಂತ ವಿಸ್ತರಿಸಿ, ಅದನ್ನು ಕಡ್ಡಾಯವಾಗಿ ನಿಷ್ಠೆಯಿಂದ ಜಾರಿಗೆ ತರಬೇಕೆಂದು ಇಂದು ವಿಧಾನ ಪರಿಷತ್ತಿನಲ್ಲಿ ಸದಸ್ಯರು ಆಗ್ರಹಪಡಿಸಿದರು.

ಇ– ವಾಹನ ಖರೀದಿಗೆ ಜನರನ್ನು ಉತ್ತೇಜಿಸುವಂತಹ ಕ್ರಮಗಳ ಅಗತ್ಯವಿದೆ

ಇ–ವಾಹನ: ಉತ್ಸಾಹಕ್ಕೆ ತಣ್ಣೀರು?

ವಿಶ್ಲೇಷಣೆ
ಗುರುರಾಜ್ ಎಸ್. ದಾವಣಗೆರೆ

ದೇಶದಾದ್ಯಂತ ಈಗ ಎಲೆಕ್ಟ್ರಿಕ್ ವಾಹನಗಳದ್ದೇ ಸುದ್ದಿ. ಎರಡು ಹಾಗೂ ಮೂರು ಚಕ್ರದ ವಾಹನಗಳ ಮಾರುಕಟ್ಟೆಯನ್ನು ಎಲೆಕ್ಟ್ರಿಕ್ ವಾಹನಗಳಿಂದ ತುಂಬಿ ತುಳುಕುವಂತೆ ಮಾಡುವುದರ ಮೂಲಕ ಮಾಲಿನ್ಯ ಮತ್ತು ವಾತಾವರಣದ ಬಿಸಿಯನ್ನು ನಿಯಂತ್ರಿಸುವ ಇರಾದೆ ನಮ್ಮ ಆಡಳಿತದ್ದು.

ಇಪ್ಪತ್ತೊಂದಕ್ಕೂ ಹೆಚ್ಚು ರಾಜ್ಯಗಳು ಎಲೆಕ್ಟ್ರಿಕ್ ವಾಹನ ನೀತಿ ರೂಪಿಸಿದ್ದು, ಹೊಗೆ ಉಗುಳುವ ದ್ವಿಚಕ್ರ, ತ್ರಿಚಕ್ರ ವಾಹನಗಳನ್ನು ರಸ್ತೆಯಿಂದ ಹೊರಹಾಕುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿವೆ. ಗ್ಲಾಸ್ಗೊ ಒಪ್ಪಂದಕ್ಕೆ ಸಹಿ ಹಾಕಿರುವ ನಾವು, 2030ರ ವೇಳೆಗೆ ನೂರು ಕೋಟಿ ಟನ್ ಇಂಗಾಲದ ಹೊಮ್ಮುವಿಕೆಯನ್ನು ಕಡಿಮೆ ಮಾಡುತ್ತೇವೆ ಎಂದು ಪ್ರತಿಜ್ಞೆ ಮಾಡಿದ್ದೇವೆ. ದೇಶದ ಪ್ರತೀ ನಗರಕ್ಕೂ ತನ್ನದೇ ಆದ ಶುದ್ಧ ಗಾಳಿ ಕ್ರಿಯಾ ಯೋಜನೆ ರೂಪಿಸಿದ್ದೇವೆ. ಆ ದಿಸೆಯಲ್ಲಿ 132 ನಗರಗಳು ಈಗಾಗಲೇ ಕಾರ್ಯಪ್ರವೃತ್ತವಾಗಿವೆ.

ಆಂಧ್ರಪ್ರದೇಶ, ಕೇರಳ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು ಈ ದಶಕದ ಕೊನೆಯ ವೇಳೆಗೆ ತಲಾ ಹತ್ತು ಲಕ್ಷ ಎಲೆಕ್ಟ್ರಿಕ್ ವಾಹನಗಳನ್ನು ರಸ್ತೆಗಿಳಿಸುವ ಯೋಜನೆ ತಯಾರಿಸಿವೆ. ಮೇಘಾಲಯ, ಗೋವಾ, ಹರಿಯಾಣ, ದೆಹಲಿ, ಒಡಿಶಾ, ಅಸ್ಸಾಂ, ಪಂಜಾಬ್ ಮತ್ತು ಮಹಾರಾಷ್ಟ್ರ ಇನ್ನೈದು ವರ್ಷಗಳಲ್ಲಿ ತಮ್ಮ ರಾಜ್ಯದ ರಸ್ತೆಗಳ ಮೇಲೆ ಶೇ 30ರಷ್ಟು ಎಲೆಕ್ಟ್ರಿಕ್ ವಾಹನಗಳು ಸಂಚರಿಸಲಿವೆ ಎಂದಿವೆ.

ಕೇಂದ್ರ ಸರ್ಕಾರ ಇದಕ್ಕಾಗಿ ₹ 10 ಸಾವಿರ ಕೋಟಿ ಬಂಡವಾಳ ಮೀಸಲಿಟ್ಟಿದೆ. ಇದರಿಂದ 10 ಲಕ್ಷ ದ್ವಿಚಕ್ರ, 5 ಲಕ್ಷ ತ್ರಿಚಕ್ರ ವಾಹನಗಳು, 55 ಸಾವಿರ ಕಾರು ಹಾಗೂ 70,000 ಎಲೆಕ್ಟ್ರಿಕ್ ಬಸ್‌ಗಳು ರಸ್ತೆಗೆ ಇಳಿಯಲಿವೆ. ದೆಹಲಿ ಸರ್ಕಾರ ಮುಂದಿನ ವರ್ಷದ ಕೊನೆಯ ವೇಳೆಗೆ 5 ಲಕ್ಷ ಎಲೆಕ್ಟ್ರಿಕ್ ವಾಹನಗಳನ್ನು ರಸ್ತೆಗಿಳಿಸುವ ಗುರಿ ಇಟ್ಟುಕೊಂಡಿದ್ದು, ಈ ವರ್ಷಾಂತ್ಯಕ್ಕೆ, ಡೀಸೆಲ್‌ನಿಂದ ಓಡುವ ಎಲ್ಲ ತ್ರಿಚಕ್ರ ವಾಹನಗಳ ಓಡಾಟವನ್ನು ಸ್ಥಗಿತಗೊಳಿಸುವ ತೀರ್ಮಾನ ಮಾಡಿದೆ.

ಒಡಿಶಾ ತನ್ನ ರಾಜ್ಯದ ಪೆಟ್ರೋಲ್, ಡೀಸೆಲ್, ಗ್ಯಾಸ್‌ನಿಂದ ಓಡುವ ಆಟೊರಿಕ್ಷಾಗಳನ್ನು ಎಲೆಕ್ಟ್ರಿಕ್‌ಗೆ ಬದಲಾಯಿಸುವ ಕೆಲಸಕ್ಕೆ ಕೈ ಹಾಕಿದೆ. ಕೊಚ್ಚಿನ್ ನಗರದಲ್ಲಿ ಚಾಲಕರು ಕೈನೆಟಿಕ್ ಗ್ರೀನ್ ಕಂಪನಿಯಿಂದ ಇ-ಆಟೊರಿಕ್ಷಾಗಳನ್ನು ಬಾಡಿಗೆಗೆ ಪಡೆದು ಓಡಿಸುತ್ತಿದ್ದಾರೆ.

ನಮ್ಮ ರಾಜ್ಯದಲ್ಲಿ ಒಂದೂವರೆ ಲಕ್ಷ ಇ-ವಾಹನಗಳಿವೆ. ಇವುಗಳಿಗಾಗಿ 2016ರಲ್ಲೇ ನೀತಿ ರೂಪಿಸಿದ್ದ ದೇಶದ ಪ್ರಥಮ ರಾಜ್ಯ ನಮ್ಮದು. ಸರ್ಕಾರ ಅಂದಿನಿಂದಲೇ ಇ-ವಾಹನಗಳ ರಸ್ತೆ ತೆರಿಗೆಯನ್ನು ಸಂಪೂರ್ಣ ತೆಗೆದುಹಾಕಿತ್ತು. ಇತರ ರಾಜ್ಯಗಳು ಶೂನ್ಯ ರಸ್ತೆ ತೆರಿಗೆಯ ಜೊತೆ ಹಲವು ರಿಯಾಯಿತಿಗಳನ್ನೂ ನೀಡುತ್ತಿವೆ. ರಾಷ್ಟ್ರೀಯ ಹೆದ್ದಾರಿ ಮತ್ತು ಸಾರಿಗೆ ಸಚಿವಾಲಯವು 2021ರ ಆಗಸ್ಟ್‌ನಲ್ಲಿ ಇ-ವಾಹನಗಳ ನೋಂದಣಿ ಹಾಗೂ ನವೀಕರಣ ಶುಲ್ಕ ಎರಡನ್ನೂ ತೆಗೆದುಹಾಕಿದೆ.

ಆದರೆ ಇದುವರೆಗೆ ನೀಡುತ್ತಿದ್ದ ಶೂನ್ಯ ರಸ್ತೆ ತೆರಿಗೆ ರಿಯಾಯಿತಿಯನ್ನು ತೆಗೆದುಹಾಕುವ ಯೋಚನೆ ನಮ್ಮ ರಾಜ್ಯ ಸರ್ಕಾರಕ್ಕೆ ಬಂದಿದೆ. ಸಾಮಾನ್ಯ ವಾಹನಗಳಿಗೆ ವಿಧಿಸುವಂಥ ತೆರಿಗೆ ಪದ್ಧತಿ ಇ-ವಾಹನಗಳಿಗೂ ಬರಲಿದೆ. ಕರ್ನಾಟಕದಲ್ಲಿ ಎರಡು ಕೋಟಿಗೂ ಹೆಚ್ಚು ಮೋಟಾರು ವಾಹನಗಳು ನೋಂದಣಿಗೊಂಡಿವೆ. ಇ-ವಾಹನಗಳ ಸಂಖ್ಯೆ ಕನಿಷ್ಠ ಸಂಖ್ಯೆಯಲ್ಲಿದೆ. ಈ ಸಂಖ್ಯೆ 40 ಲಕ್ಷ ತಲುಪುವವರೆಗೆ ಈಗಿರುವ ಶೂನ್ಯ ರಸ್ತೆ ತೆರಿಗೆ ಪದ್ಧತಿಯನ್ನು ಮುಂದುವರಿಸಿದರೆ ಒಳ್ಳೆಯದು, ಇಲ್ಲದಿದ್ದರೆ ಇ-ವಾಹನಗಳ ಖರೀದಿಗೆ ಜನ ಮುಂದಾಗುವುದಿಲ್ಲ ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿದೆ.

ರಾಜ್ಯ ಸರ್ಕಾರಗಳಿಗೆ ಅತಿ ಹೆಚ್ಚಿನ ಆದಾಯ ತರುವ ಮೂಲಗಳಲ್ಲಿ ಮೋಟಾರು ವಾಹನಗಳ ತೆರಿಗೆಯೂ ಒಂದು. ದೇಶದ ಇತರ ರಾಜ್ಯಗಳಿಗೆ ಹೋಲಿಸಿದರೆ ಸಾಧಾರಣ ವಾಹನಗಳ ಮೇಲೆ ಅತಿ ಹೆಚ್ಚು ತೆರಿಗೆ ಇರುವುದು ನಮ್ಮ ರಾಜ್ಯದಲ್ಲಿಯೆ. ದೇಶದಾದ್ಯಂತ ನೋಂದಣಿಯಾಗಿರುವ ಇ–ವಾಹನಗಳ ಸಂಖ್ಯೆ ಕೇವಲ 18 ಲಕ್ಷ. ಉತ್ತರಪ್ರದೇಶದಲ್ಲಿ ಅತಿ ಹೆಚ್ಚು 4.1 ಲಕ್ಷ, ದೆಹಲಿ 1.8 ಲಕ್ಷ, ಮಹಾರಾಷ್ಟ್ರ 1.7 ಲಕ್ಷ, ಕರ್ನಾಟಕ 1.5 ಲಕ್ಷ, ರಾಜಸ್ಥಾನ 1.2 ಲಕ್ಷ, ಬಿಹಾರ 1.1 ಲಕ್ಷ ಮತ್ತು ತಮಿಳುನಾಡಿನಲ್ಲಿ 1 ಲಕ್ಷ ಇ– ವಾಹನಗಳಿವೆ.

ಬ್ಯಾಟರಿ ಚಾರ್ಜಿಂಗ್ ಕೇಂದ್ರಗಳ ಕೊರತೆಯೂ ಇ-ವಾಹನಗಳ ಖರೀದಿಗೆ ಹಿನ್ನಡೆಯುಂಟು ಮಾಡುತ್ತಿದೆ. ದಾಖಲೆಗಳ ಪ್ರಕಾರ, ದೇಶದಲ್ಲಿ 6,000 ಸಾರ್ವಜನಿಕ ಇ-ಚಾರ್ಜಿಂಗ್ ಘಟಕಗಳಿವೆ. ನಮ್ಮಂಥ ದೊಡ್ಡ ದೇಶಕ್ಕೆ ಇದು ಅತ್ಯಂತ ಕಡಿಮೆ. ಚಿಕ್ಕ ದೇಶ ನೆದರ್ಲೆಂಡ್ಸ್‌ನಲ್ಲಿ 75,000 ಸಾರ್ವಜನಿಕ ಇ-ಚಾರ್ಜಿಂಗ್ ಕೇಂದ್ರಗಳಿವೆ. ನಾರ್ವೆ ದೇಶದ ಇ-ಕಾರುಗಳ ಪ್ರಮಾಣ ಶೇ 81ರಷ್ಟು. ಈ ವರ್ಷದ ಕೊನೆಯ ವೇಳೆಗೆ ರಸ್ತೆಯ ಮೇಲೆ ಸಂಚರಿಸುವ ಎಲ್ಲ ವಾಹನಗಳೂ ಇ-ವಾಹನಗಳಾಗಲಿವೆ ಎಂದು ನಾರ್ವೆ ಹೇಳಿದೆ. ವಿಶ್ವ ಆರ್ಥಿಕ ವೇದಿಕೆಯ ಪ್ರಕಾರ, ಹಿಂದಿನ ದಶಕದಲ್ಲಿ ಇ-ವಾಹನಗಳ ಮಾರಾಟದಲ್ಲಿ ಶೇ 30ರಷ್ಟು ವೃದ್ಧಿಯಾಗಿದೆ. ವಾಹನಗಳ ಸಂಖ್ಯೆಯ ದೃಷ್ಟಿಯಿಂದ ಒಂದು ಕೋಟಿಗೂ ಹೆಚ್ಚು ಇ-ವಾಹನಗಳಿರುವ ಚೀನಾ ಇ-ವಾಹನ ಬಳಕೆಯ ದೇಶಗಳ ಪೈಕಿ ನಂಬರ್ ಒನ್ ಆಗಿದೆ.

ಬ್ಯಾಟರಿ ಚಾರ್ಜ್ ಮಾಡಲು ಒಂದು ಯುನಿಟ್ ವಿದ್ಯುತ್‌ಗೆ ಮನೆಯಲ್ಲಿ ₹ 8 ಖರ್ಚಾದರೆ, ಸಾರ್ವಜನಿಕ ಘಟಕಗಳಲ್ಲಿ ₹ 20 ವ್ಯಯಿಸಬೇಕಾಗುತ್ತದೆ. ಎರಡು ಹಾಗೂ ಮೂರು ಚಕ್ರದ ಇ-ವಾಹನಗಳ ಬಳಕೆ ಹೆಚ್ಚಾಗಿರುವುದರಿಂದ ಚಾರ್ಜಿಂಗ್ ಬೇಡಿಕೆಯೂ ಅದೇ ಪ್ರಮಾಣದಲ್ಲಿದೆ. ದೆಹಲಿಯಲ್ಲಿ ಆ್ಯಸಿಡ್ ಬ್ಯಾಟರಿಗಳಿಂದ ಚಲಿಸುವ ಒಂದು ಲಕ್ಷ ರಿಕ್ಷಾಗಳಿವೆ. ಲೀಥಿಯಂ ಬ್ಯಾಟರಿಯಿಂದ ಓಡುವ ವಾಹನಗಳ ಬೆಲೆ ಜಾಸ್ತಿಯಾದ್ದರಿಂದ ಚಾಲಕರ ಒಲವು ಅತ್ತ ಕಡೆ ಹೆಚ್ಚಾಗಿಲ್ಲ. ಸಾಲ ಮಾಡಿ ತೆಗೆದುಕೊಳ್ಳುವವರಿಗೆ ಬ್ಯಾಂಕುಗಳು ಎರಡು ವರ್ಷಕ್ಕಿಂತ ಹೆಚ್ಚಿನ ಮರುಪಾವತಿ ಸಮಯ ನೀಡುತ್ತಿಲ್ಲ. ಇ-ಆಟೊ ರಿಕ್ಷಾಗಳಿಗೆ ಕಂಪನಿ ಕೊಡುವ ಗ್ಯಾರಂಟಿ ಎರಡು ವರ್ಷ ಮಾತ್ರ. ಬ್ಯಾಂಕ್‌ಗಳೂ ಎರಡೇ ವರ್ಷಗಳ ಸಾಲ ಮರುಪಾವತಿ ಅವಧಿ ನೀಡುವುದನ್ನು ರೂಢಿಸಿಕೊಂಡಿವೆ. ಇದು ಇ-ವಾಹನ ಕೊಳ್ಳುವವರ ಉತ್ಸಾಹಕ್ಕೆ ತಣ್ಣೀರೆರಚುತ್ತಿದೆ.

ದೇಶದಲ್ಲಿ ಮಾರಾಟವಾಗುತ್ತಿರುವ ಇ-ವಾಹನಗಳ ಪ್ರಮಾಣ ಶೇ 1ಕ್ಕಿಂತ ಕಡಿಮೆ ಇದೆ. ದುಬಾರಿ ಬೆಲೆ, ಕಡಿಮೆ ಸಂಖ್ಯೆಯ ಚಾರ್ಜಿಂಗ್ ಘಟಕಗಳು, ಸರಕುಸಾಗಣೆ ವಾಹನಗಳಲ್ಲಿ ಹೆಚ್ಚಿನ ಮಾದರಿಗಳಿಲ್ಲದಿರುವುದು ಕೊಳ್ಳುಗರಲ್ಲಿ ನಿರುತ್ಸಾಹ ಮೂಡಿಸಿದೆ. ಕ್ಯಾಲಿಫೋರ್ನಿಯಾದಲ್ಲಿ 35 ವಿವಿಧ ಬಗೆಯ ಇ-ಕಾರುಗಳು ಲಭ್ಯವಿವೆ. ನಮ್ಮಲ್ಲಿ ಇ-ವಾಹನಗಳ ಭರಾಟೆ ಏನಿದ್ದರೂ 2-3 ಚಕ್ರದ ವಾಹನಗಳಿಗೆ ಸೀಮಿತವಾದಂತೆ ತೋರುತ್ತಿದೆ. ಇ-ವಾಹನಗಳ ಬಿಡಿಭಾಗಗಳ ತಯಾರಕರು ಹೇಳುವಂತೆ, ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳ ಮಾರಾಟ ವಿಭಾಗ ಸದ್ಯಕ್ಕೆ ಏರುಗತಿಯಲ್ಲಿದೆ, ನಂತರದ ಸ್ಥಾನ ಬಸ್‌ಗಳದ್ದಾಗಿದೆ. ಇ-ಕಾರುಗಳ ಮಾರಾಟ ವೃದ್ಧಿಯಾಗುವ ಕಾಲವಿನ್ನೂ ನಮ್ಮಲ್ಲಿ ಪಕ್ವವಾಗಿಲ್ಲ ಎಂಬ ಅಭಿಪ್ರಾಯ ಮಾರುಕಟ್ಟೆಯಲ್ಲಿದೆ.

ವಿಶ್ವದ ಅನೇಕ ಕಾರು ಕಂಪನಿಗಳು ಡೀಸೆಲ್ ಎಂಜಿನ್ ಅಭಿವೃದ್ಧಿಯನ್ನು ನಿಲ್ಲಿಸಿ ಇ ಮತ್ತು ಹೈಬ್ರಿಡ್ ಕಾರುಗಳನ್ನು ನಿರ್ಮಿಸುತ್ತಿವೆ. ಬೆಂಗಳೂರಿನ ನವೋದ್ಯಮ ಏಥರ್ ಎನರ್ಜಿ ದೇಶದ ಆಯ್ದ ನಗರಗಳಲ್ಲಿ ಇ-ಸ್ಕೂಟರ್ ಬಿಡುಗಡೆ ಮಾಡಿದೆ. ರಾವಿನ್, ಮಹೀಂದ್ರ, ಟಾಟಾ ಕಾರು ಕಂಪನಿಗಳು ಇ-ಕಾರುಗಳನ್ನು ಪರಿಚಯಿಸಿ ದಶಕಗಳೇ ಕಳೆದಿವೆ. ಹಿಂದೆಲ್ಲಾ ಕಾರಿನ ಬ್ಯಾಟರಿ ಚಾರ್ಜ್ ಆಗಲು 8-10 ತಾಸು ಸಮಯ ಹಿಡಿಯುತ್ತಿತ್ತು. ಟೆಸ್ಲಾ ಕಂಪನಿಯ ಕಾರುಗಳು ಮಾರುಕಟ್ಟೆಗೆ ಬಂದ ನಂತರ ಒಂದೇ ತಾಸಿನಲ್ಲಿ ಕಾರಿನ ಬ್ಯಾಟರಿಯನ್ನು ಶೇ 80ರಷ್ಟು ವೇಗವಾಗಿ ಚಾರ್ಜ್ ಮಾಡುವ ತಂತ್ರಜ್ಞಾನವೂ ಬಂತು. ಲೀಥಿಯಂ ಅಯಾನ್ ಬ್ಯಾಟರಿ ಉತ್ಪಾದನೆಯ ಖರ್ಚು ಜಾಸ್ತಿಯಾದ್ದರಿಂದ ಆಮದು ಮಾಡಿಕೊಳ್ಳುವುದೇ ಸೂಕ್ತ ಎನ್ನುವುದು ತಜ್ಞರ ಮಾತು.

ಚುರುಮುರಿ

ಅಸೆಂಬ್ಲಿ ಆಟ

• ಮಣ್ಣೆರಾಜು

'ಐದು ವರ್ಷದ ಅಸೆಂಬ್ಲಿ ಆಟ ಐದು ದಿನದ ಟೆಸ್ಟ್ ಕ್ರಿಕೆಟ್ ಪಂದ್ಯದಂತೆ ಇಷ್ಟು ಬೇಗ ಮುಗಿದು ಹೋಗ್ತಾ ಇದೆಯಲ್ರೀ...' ಶಂಕ್ರಿಗೂ ಬೇಸರ.

'ಅಸೆಂಬ್ಲಿ ಆಟಗಾರರಿಗೂ ಹೀಗೇ ಅನಿಸಿರಬಹುದು. ಕೆಲವರಿಗೆ ಇದು ಕಡೇ ಆಟ. ಮರು ಆಯ್ಕೆ ಬಗ್ಗೆ ಅನುಮಾನ ಇರುವವರಿಗೆ ಇದು ಬೀಳ್ಕೊಡುಗೆ ಪಂದ್ಯವಾಗಬಹುದು' ಅಂದಳು ಸುಮಿ.

'ಸ್ಟಾರ್ ಪ್ಲೇಯರ್ ಯಡಿಯೂರಪ್ಪನವರು ಇನ್ನುಮುಂದೆ ಅಸೆಂಬ್ಲಿ ಆಟ ಆಡುವುದಿಲ್ಲವಂತೆ. ಜೊತೆಗೆ, ಎಲ್ಲಾ ರೂಪದ ಟಿಕೆಟ್ ಟೂರ್ನಿಗಳಿಂದ ನಿವೃತ್ತಿಯಾಗುವುದಾಗಿ ಘೋಷಿಸಿದ್ದಾರೆ'.

'ತಾವು ಆಟ ನಿಲ್ಲಿಸಿದರೂ ಎದುರಾಳಿಗಳನ್ನು ಆಟ ಆಡಿಸದೇ ಸುಮ್ಮನಿರುವುದಿಲ್ಲ ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ. ಮುಂದೆ ಕಮಲ ಪಡೆಯ ಕೋಚ್ ಆಗಿ ಸಮರ್ಥ ತಂಡ ಕಟ್ಟಿ ಮುಂದಿನ ಪಂದ್ಯ ಗೆಲ್ಲಿಸುವ ಸಂಕಲ್ಪ ಮಾಡಿದ್ದಾರೆ'.

'ಸುದೀರ್ಘ ಕಾಲ ಅಸೆಂಬ್ಲಿ ಆಟವಾಡಿದ ಯಡಿಯೂರಪ್ಪನವರು ಬೌಂಡರಿ, ಸಿಕ್ಸರ್‌ಗಳನ್ನು ಬಾರಿಸಿ ಅಂಗಳದಲ್ಲಿ ಅಬ್ಬರಿಸಿದ್ದರು. ಕಮಲ ಪಡೆಯ ನಾಯಕತ್ವ ವಹಿಸಿಕೊಂಡು ತಮ್ಮ ತಂಡವನ್ನು ಮುನ್ನಡೆಸಿ ಹಲವು ಗೆಲುವಿಗೆ ಕಾರಣರಾಗಿದ್ದರು. ಬ್ಯಾಟಿಂಗ್, ಬೌಲಿಂಗ್, ಫೀಲ್ಡಿಂಗ್ ಹೀಗೆ ಎಲ್ಲ ವಿಭಾಗಗಳಲ್ಲೂ ಸಮರ್ಥವಾಗಿ ಆಲ್‌ರೌಂಡ್ ಆಟವಾಡಿ ಉತ್ತಮ ಪ್ರದರ್ಶನ ನೀಡಿ ಎದುರಾಳಿ ಆಟಗಾರರನ್ನು ಬೆಚ್ಚಿಬೀಳಿಸಿದ್ದರು. ಬೆಂಬಲಿಗರನ್ನು ಮೆಚ್ಚಿಸಿ ಬೆರಗಾಗಿಸಿದ್ದರು'.

'ತಾವು ಮತ್ತೊಮ್ಮೆ ಆಯ್ಕೆಯಾಗಿ ಅಸೆಂಬ್ಲಿ ಅಂಗಳಕ್ಕೆ ವಾಪಸ್ ಬರ್ತೀವೋ ಇಲ್ವೋ ಎಂಬ ಆತಂಕದಲ್ಲಿ ಕೆಲವು ಆಟಗಾರರು ಭಯಭೀತರಾಗಿದ್ದಾರೆ. ಅಂತಹವರು ಅವರವರ ಕ್ಷೇತ್ರ ಕಣದಲ್ಲಿ ನೆಟ್‌ಪ್ರಾಕ್ಟೀಸ್ ಮಾಡಿ ಶಕ್ತಿ, ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ತಂಡದ ಹೈಕಮಾಂಡ್ ಅವಕಾಶ ನೀಡಬೇಕು'.

'ಕಣ ಕ್ಷೇತ್ರದಲ್ಲಿ ಆಟಗಾರರು ತೋರುವ ಪ್ರದರ್ಶನದ ಆಧಾರದ ಮೇಲೆ ಅವರನ್ನು ಔಟ್ ಮಾಡಬೇಕೋ ಇನ್ ಮಾಡಬೇಕೋ ಅನ್ನೋದ್ರ ಬಗ್ಗೆ ಥರ್ಡ್ ಅಂಪೈರ್ 'ಮತದಾರ ಪ್ರಭು' ತೀರ್ಪು ನೀಡುತ್ತಾನೆ...' ಎಂದ ಶಂಕ್ರಿ.

ಸಂಗತ

ಸರಿಯಾಗಿ ತಿನ್ನುವುದೆಂದರೆ...

ತಿನ್ನುವಿಕೆಗೆ ಸಂಬಂಧಿಸಿದ ಕಾಯಿಲೆಗಳು ಬರೀ ದೇಹಕ್ಕಲ್ಲ, ಮನಸ್ಸಿಗೂ ನೇರ ಸಂಬಂಧ ಹೊಂದಿರುತ್ತವೆ

• ಡಾ. ಕೆ.ಎಸ್.ಚೈತ್ರಾ

ನಾವು ಸೇವಿಸುವ ಆಹಾರವು ದೇಹಕ್ಕೆ ಪುಷ್ಟಿಯನ್ನು ಮನಸ್ಸಿಗೆ ಸಂತೃಪ್ತಿಯನ್ನು ನೀಡಬೇಕು. ಆಹಾರದ ಮಹತ್ವವನ್ನು ಅರಿತೇ 'ಊಟ ಬಲ್ಲವನಿಗೆ ರೋಗವಿಲ್ಲ' ಎಂಬ ಗಾದೆ ಮಾತು! ಆದರೆ ಬದಲಾದ ಆಧುನಿಕ ಜೀವನಶೈಲಿಯಲ್ಲಿ ಆಹಾರ ಸೇವನೆಯು ಹೊತ್ತು ಗೊತ್ತಿಲ್ಲದೆ, ಕೈಗೆ ಸಿಕ್ಕಿದ್ದನ್ನು ನುಂಗುವ ಯಾಂತ್ರಿಕ ಕ್ರಿಯೆಯಾಗಿದೆ. ಇದರೊಂದಿಗೇ ತಿನ್ನುವಿಕೆಗೆ ಸಂಬಂಧಿಸಿದ ಕಾಯಿಲೆಗಳಿಂದ ಬಳಲುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ!

ತಿನ್ನುವಿಕೆಯ ಕಾಯಿಲೆಗಳು ಎಂದರೆ ನಮ್ಮ ನಿತ್ಯದ ಆಹಾರ ಸೇವನೆ ದೋಷಪೂರಿತವಾಗಿದ್ದು, ದೇಹ, ಮನಸ್ಸುಗಳ ಮೇಲೆ ದುಷ್ಪರಿಣಾಮ ಬೀರಿ ನಮ್ಮ ಕಾರ್ಯಕ್ಷಮತೆಯನ್ನು ಕುಂದಿಸುವಂಥದ್ದು. ಮಹಿಳೆಯರು ಮತ್ತು ಹದಿಹರೆಯದ ಹುಡುಗಿಯರಲ್ಲಿ ಹೆಚ್ಚಾಗಿ ಕಂಡುಬರುವ ಈ ಕಾಯಿಲೆಗಳು ಬರೀ ದೇಹಕ್ಕೆ ಸಂಬಂಧಿಸಿದವುಗಳಲ್ಲ, ಮನಸ್ಸಿಗೂ ನೇರ ಸಂಬಂಧ ಹೊಂದಿವೆ. ಹಾಗಾಗಿಯೇ ಇವು ಮನೋದೈಹಿಕ ಕಾಯಿಲೆಗಳು!

ತಿನ್ನುವಿಕೆಯ ಕಾಯಿಲೆ ಎಂದೊಡನೆ 'ಅದೆಂಥ ಕಾಯಿಲೆ, ಅವೆಲ್ಲಾ ಫಾರಿನ್ ಕಾಯಿಲೆಗಳು, ತಿನ್ನಲು ಹೆಚ್ಚು ಸಿಕ್ರೆ ಹೀಗೇ ಆಗೋದು' ಎಂದು ಲಘುವಾಗಿ ಮಾತನಾಡಿ, ಅವುಗಳ ಇರುವಿಕೆಯನ್ನೇ ನಿರ್ಲಕ್ಷಿಸಲಾಗುತ್ತದೆ. ಪರಿಣಾಮವಾಗಿ ಸುಸ್ತು, ಋತುಚಕ್ರದ ಏರುಪೇರು, ಹಲ್ಲಿನ ಸಮಸ್ಯೆ, ಹೃದಯದ ತೊಂದರೆ, ಖಿನ್ನತೆ, ದುಃಖ, ಗೊಂದಲ ಹೀಗೆ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ಮೌನವಾಗಿ ಅನುಭವಿಸುತ್ತಾ ನರಳುತ್ತಿರುವವರು ಸಾವಿರಾರು ಜನ! ಈ ಕಾಯಿಲೆ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಸಲುವಾಗಿ ಫೆಬ್ರುವರಿ ತಿಂಗಳಲ್ಲಿ ಸಪ್ತಾಹವನ್ನಾಗಿ ಆಚರಿಸಲಾಗುತ್ತದೆ.

ಅನೋರೆಕ್ಸಿಯಾ ನರ್ವೋಸ ಮತ್ತು ಬುಲಿಮಿಯಾ ಎಂಬುವು ತಿನ್ನುವಿಕೆಯ ಎರಡು ಪ್ರಮುಖ ಕಾಯಿಲೆಗಳು. ಅನೋರೆಕ್ಸಿಯಾದಲ್ಲಿ ನೋಡಲು ಸರಿಯಾಗೇ ಇದ್ದರೂ ದಪ್ಪವಾಗಿಬಿಟ್ಟರೆ ಎನ್ನುವ ಭಯ ಕಾಡುತ್ತದೆ. ತೆಳ್ಳಗೆ ಇದ್ದರೂ ತೂಕ ಹೆಚ್ಚಿದೆ ಎನ್ನುವಂತಹ ಅಸಮಾಧಾನ ಹೊಂದಿದ್ದು, ಕಡಿಮೆ ತಿಂದು ಸದಾ ತೂಕ ಕಳೆದುಕೊಳ್ಳುವ ಪ್ರಯತ್ನ ನಡೆಸುತ್ತಾರೆ. ಬುಲಿಮಿಯಾದಲ್ಲಿ ಮಿತಿಮೀರಿ ತಿನ್ನುವುದು, ನಂತರ ನಾಚಿಕೆ, ತಪ್ಪಿತಸ್ಥ ಭಾವನೆಯಿಂದ ತೂಕ ಹೆಚ್ಚುವುದನ್ನು ತಡೆಯಲು ಬೇರೆ ಬೇರೆ ರೀತಿಯಲ್ಲಿ ಪ್ರಯತ್ನಿಸುವುದು. ಉದಾಹರಣೆಗೆ, ತಿಂದ ನಂತರ ವಾಂತಿ ಮಾಡುವುದು, ಸಿಕ್ಕಾಪಟ್ಟೆ ವ್ಯಾಯಾಮದಲ್ಲಿ ತೊಡಗುವುದು ಇವೆಲ್ಲವೂ ಕಂಡುಬರುತ್ತವೆ.

ಈ ಕಾಯಿಲೆಗೆ ಆನುವಂಶೀಯತೆ, ಕೌಟುಂಬಿಕ ಸಮಸ್ಯೆಗಳ ಹಿನ್ನೆಲೆ ಇದ್ದರೂ ಮಾನಸಿಕ ಹಾಗೂ ಭಾವನಾತ್ಮಕ ಆರೋಗ್ಯ ಪ್ರಮುಖ ಪಾತ್ರ ವಹಿಸುತ್ತದೆ. ಹದಿಹರೆಯದಲ್ಲಂತೂ ಸಾಮಾಜಿಕ ಮಾಧ್ಯಮಗಳ ಪಾತ್ರ ಬಹಳ ದೊಡ್ಡದು. ಹರೆಯಕ್ಕೆ ಕಾಲಿಟ್ಟ ಮಕ್ಕಳಿಗೆ ಬದಲಾದ ದೈಹಿಕ ಸ್ವರೂಪದ ಬಗ್ಗೆ ಕುತೂಹಲ, ಆಕರ್ಷಣೆ ಜತೆ ತಮಗಿರುವ ಕೊರತೆಗಳ ಬಗ್ಗೆ ಅಸಮಾಧಾನವೂ ಹೆಚ್ಚು. ಇದರೊಂದಿಗೇ ಇತರರ ಕಣ್ಣಿಗೆ ತಾವು ಸುಂದರವಾಗಿ ಕಾಣಬೇಕು ಎನ್ನುವುದು ಸಹಜ ಬಯಕೆ. ಹೀಗಾಗಿ ತಮ್ಮ ನೆಚ್ಚಿನ ನಟ-ನಟಿಯರನ್ನು ಅನುಕರಿಸುವುದು, ಹೊಸ ಹೊಸ ಟ್ರೆಂಡ್ ಗಮನಿಸುವುದು ಎಲ್ಲವೂ ಸಾಮಾನ್ಯ.

ನಮ್ಮಲ್ಲಿ ಹೆಣ್ಣುಮಕ್ಕಳ ಸೌಂದರ್ಯದ ಪರಿಕಲ್ಪನೆಯನ್ನು ಝೀರೊ ಸೈಜ್, ಬೆನ್ನಿಗಂಟಿದ ಹೊಟ್ಟೆ, ಕಡ್ಡಿಯಂಥ ಕೈ ಕಾಲು ಎಂದು ಸಾಮಾಜಿಕ ಮಾಧ್ಯಮಗಳಲ್ಲಿ ಬಿಂಬಿಸಲಾಗುತ್ತದೆ. ವಾಸ್ತವವನ್ನು ಮರೆಮಾಚಿ, ರಮ್ಯ ಲೋಕದಲ್ಲಿ ಹುಡುಗಿಯರು ವಿಹರಿಸುತ್ತಾರೆ.

ಆ ಭ್ರಮಾಲೋಕದತ್ತ ಆಕರ್ಷಿತರಾಗಿ ಈ ಎಲ್ಲಾ ಸರ್ಕಸ್ ಮೂಲಕ ತಾವೂ ಮೆಚ್ಚುಗೆ, ಮನ್ನಣೆ, ಆತ್ಮವಿಶ್ವಾಸ ಗಳಿಸುವ ಹಂಬಲ. ಇಂಥವರು ದಿಢೀರ್ ಡಯೆಟ್, ತೂಕ ಇಳಿಸುವ ಕ್ರ್ಯಾಶ್ ಕೋರ್ಸ್‌ಗಳಿಗೆ ಮುಗಿಬೀಳುತ್ತಾರೆ. ಇದರೊಂದಿಗೇ ಕಡಿಮೆ ತಿಂದಷ್ಟು ಐಡಿಯಲ್ ಸೈಜ್ ಆಗುವ ಗುರಿಗೆ ಹತ್ತಿರ ಎಂಬ ಆಸೆ. ಇದೆಲ್ಲದರ ಪರಿಣಾಮವಾಗಿ ಆರೋಗ್ಯವನ್ನು ನಿರ್ಲಕ್ಷಿಸಿ ಸೌಂದರ್ಯಸಿದ್ಧಿಗಾಗಿ ಸತತ ಸಾಧನೆಯಿಂದ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ!

ಇದರೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಫೋಟೊ ಹಾಕುವುದು, ಅವುಗಳಿಗೆ ಬಂದ ಕಮೆಂಟ್ ಗಮನಿಸುವುದು, ನಿರೀಕ್ಷಿಸಿದ ಮೆಚ್ಚುಗೆ ಸಿಗದಿದ್ದಾಗ ತನ್ನ ಬಗ್ಗೆ ಅನುಮಾನ, ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ ಕೂಡಲೇ ತನ್ನ ದೈಹಿಕ ಲಕ್ಷಣ, ತೂಕದ ಬಗ್ಗೆ ಸ್ವವಿಮರ್ಶೆ, ಇತರರೊಂದಿಗೆ ಹೋಲಿಕೆ ಇವೆಲ್ಲವೂ ಸಾಮಾನ್ಯ. ಇತರರ ಮೆಚ್ಚುಗೆಗಾಗಿ ಸತತ ಹುಡುಕಾಟ, ಸಾಧಿಸಿ ತೋರಿಸುವ ಹಟ ಇವೆಲ್ಲವೂ ಯುವಜನರ ಆಹಾರ ಸೇವನೆಯ ಕ್ರಮವನ್ನು ಬದಲಿಸಬಹುದು.

ಈ ಕಾಯಿಲೆಗಳಿಗೆ ಪರಿಣಾಮಕಾರಿ ಚಿಕಿತ್ಸೆ ಲಭ್ಯವಿದೆ. ಆದರೆ ಅವುಗಳನ್ನು ಆರಂಭಿಕ ಹಂತದಲ್ಲಿ ಗುರುತಿಸುವುದು ಮುಖ್ಯ. ಸರಿಯಾದ ಆಹಾರಕ್ರಮ ಮತ್ತು ಭಾವನೆಗಳ ನಿಯಂತ್ರಣವೂ ಚಿಕಿತ್ಸೆಯಲ್ಲಿ ಮುಖ್ಯವಾಗುತ್ತದೆ. ದೇಹದ ಎತ್ತರಕ್ಕೆ ತಕ್ಕನಾದ ತೂಕವನ್ನು ಹೊಂದಿರುವುದು, ಅದಕ್ಕೆ ಸರಿಯಾದ ಪ್ರಮಾಣದಲ್ಲಿ ಆಹಾರವನ್ನು ಸೇವಿಸುವುದು ಆರೋಗ್ಯಕರ ಅಭ್ಯಾಸ. ದೇಹ-ಮನಸ್ಸನ್ನು ಚಟುವಟಿಕೆಯಿಂದ ಇಡಲು ವ್ಯಾಯಾಮ ಬೇಕು. ಸರಿಯಾದ ಆಹಾರ, ಉತ್ತಮ ಆರೋಗ್ಯ, ಆತ್ಮವಿಶ್ವಾಸ ಮತ್ತು ಆನಂದ ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿವೆ ಎಂಬುದನ್ನು ಅರಿಯೋಣ.

ವಾಚಕರ ವಾಣಿ

ಶಿಕ್ಷಣ: ಇರಲಿ ರಾಜ್ಯ ಸರ್ಕಾರದ ಸುಪರ್ದಿ

ಮಗುವಿನ ಮುಂದಿನ ವರ್ಷದ ಶಾಲಾ ಸಾರಿಗೆಗಾಗಿ ತಕ್ಷಣ ಹಣ ತುಂಬಬೇಕು, ವರ್ಷದ ಶಾಲಾ ಫೀ ಕೂಡಲೇ ಪಾವತಿಸಬೇಕು ಎಂಬಂಥ ಎಚ್ಚರಿಕೆ ಪತ್ರಗಳು ಶಾಲೆಗಳಿಂದ ಬರತೊಡಗಿವೆ. 'ಸುಶಿಕ್ಷಿತ' ಅಪ್ಪ-ಅಮ್ಮ, 'ಜೀ, ಹುಜೂರ್' ಎಂದು ಶಿರಸಾವಹಿಸುತ್ತಿದ್ದಾರೆ! ನಮ್ಮ ಕಾಲದಲ್ಲಾದರೋ ಮಧ್ಯಮ ವರ್ಗದ ನಮ್ಮ ಕಲಿಕೆಗೆ ಒಂದೇ ಗುರಿ-ಆಯಾಮ ಇರುತ್ತಿತ್ತು. ಅದು ಕಲಿಕೆ. ಆ ಕಲಿಕೆಯ ಉದ್ದೇಶವು ಜೀವನದ ಗುಣಮಟ್ಟ ಸುಧಾರಿಸುವುದಾಗಿತ್ತು. ಜೀವನಮಟ್ಟ ಎಂಬ ವ್ಯಸನ ಮಧ್ಯಮ ವರ್ಗದವರನ್ನು ಆವರಿಸಿಕೊಂಡಾಗ, ಅದನ್ನು ಜೀವನವೆಚ್ಚದಿಂದ ಅಳೆಯಬಹುದೆಂಬ ಭ್ರಮೆ ಕವಿದುಕೊಂಡಾಗ, ಜೀವನಮೌಲ್ಯ ಕಳೆದುಹೋಯಿತು!

ಶಿಕ್ಷಣ ಎನ್ನುವುದು, ಮಕ್ಕಳನ್ನು ಮನುಷ್ಯರನ್ನಾಗಿ ಪರಿವರ್ತಿಸುವ ತಂತ್ರಜ್ಞಾನ. ನಮ್ಮಲ್ಲಿ ಪ್ರಾಥಮಿಕ ಹಂತದ ಶಿಕ್ಷಣ ಕಡ್ಡಾಯ ಮತ್ತು ಉಚಿತ. ಶಿಕ್ಷಣವು ಸಂವಿಧಾನದ 'ಉಭಯತ್ರ' ಪಟ್ಟಿಯಲ್ಲಿ ಬರುವುದಾದರೂ, ಈ ಹಂತದ ಶಿಕ್ಷಣವು ರಾಜ್ಯ ಸರ್ಕಾರಗಳ ಜವಾಬ್ದಾರಿಯಾದರೆ ಒಳಿತು. ಖಾಸಗಿ ಬಂಡವಾಳಗಾರರು ನಿರ್ಮಿಸಿಕೊಂಡಿರುವ ಮೂಲಸೌಕರ್ಯಗಳನ್ನು ರಾಷ್ಟ್ರೀಕರಣಗೊಳಿಸಿ, ರಾಜ್ಯಗಳಿಗೆ ವಹಿಸಿಕೊಟ್ಟು, ಒಂದರಿಂದ ಹತ್ತನೇ ತರಗತಿವರೆಗಿನ ಶಿಕ್ಷಣವು ಪ್ರಾದೇಶಿಕ ಅಥವಾ ಇಂಗ್ಲಿಷ್ ಭಾಷಾ ಮಾಧ್ಯಮದಲ್ಲಿ, ರಾಜ್ಯ ಸರ್ಕಾರಗಳ ಸ್ವಾಮ್ಯದಲ್ಲೇ ನಡೆಯುವಂತಾಗಬೇಕು. ಬೇಕಾದರೆ, ಕೇಂದ್ರ ಸರ್ಕಾರವು ಮಾರ್ಗದರ್ಶಿ ಸೂತ್ರಗಳನ್ನು ರೂಪಿಸಬಹುದು. ಸುಶಿಕ್ಷಿತರ ಪ್ರಜಾಪ್ರಭುತ್ವದಲ್ಲಿ ಇದು ಸಾಧ್ಯ, ಜ್ಞಾನಗೆಟ್ಟ ಅಕ್ಷರಸ್ಥರ ಸಮುದಾಯದಲ್ಲಿ ಅಸಾಧ್ಯ!

ಆರ್.ಕೆ.ದಿವಾಕರ, ಎಚ್.ಕೆ.ವಿವೇಕಾನಂದ, ಬೆಂಗಳೂರು

ಮುಳುಗೇಳಿಸೋ ಮಾದಪ್ಪಾ...!

ವಧು ಭಾಗ್ಯಕ್ಕಾಗಿ ಪ್ರಾರ್ಥಿಸಿ
ನಿನ್ನ ಸನ್ನಿಧಿಗೆ ಪಾದಯಾತ್ರೆ
ಬರುತ್ತಿದ್ದಾರಪ್ಪಾ...
ಸಂಸಾರ ಸಾಗರದಲಿ ಅವರನು
ಮುಳುಗೇಳಿಸೋ ಮಲೆಮಾದಪ್ಪಾ...
ಕುಟುಂಬ ಕಟ್ಟಿಕೊಳ್ಳಲು ಬಯಸಿ
ಬರಿಗಾಲಲೇ ಬೆಟ್ಟ ಹತ್ತಿ ಬರುತಿರುವವರಿಗೆ
ಬಾಳಸಂಗಾತಿಯನು ಕರುಣಿಸಪ್ಪಾ...
ಆಮೇಲೆ ಇದ್ದೇ ಇದೆ ವರ್ಷವರ್ಷ
ಮಕ್ಕಳು ಮರಿಗಳೊಂದಿಗೆ ಬಂದು
ಮುಡಿ ಕೊಡುವುದು,
ಅವರಿಗೆ ಅದುಬೇಕು ಇದುಬೇಕೆಂದು
ನುಡಿಕೇಳುವುದು! ಸಂಸಾರದ ಸಾರಸ್ವರ
ಇಳಿಯತೊಡಗಿದಂತೆಲ್ಲಾ
ಈ ಸಂಸಾರ ತಾಪತ್ರಯದಿಂದ
ಬಿಡುಗಡೆ ನೀಡಪ್ಪಾ
ಎಂದು ನಿನ್ನನೇ ಬೇಡುವುದು!
ನಿನಗೆ ತಿಳಿಯದುದು ಏನುಂಟಪ್ಪಾ
ಸದ್ಯಕ್ಕೆ ವಧು ಭಾಗ್ಯ ನೀಡಪ್ಪಾ...

ಜೆ.ಬಿ.ಮಂಜುನಾಥ, ಪಾಂಡವಪುರ

ಇದೇನು 'ಮಾರ್ಜಾಲ ನೀತಿ'ಯೇ?

'ಪ್ರಧಾನಿ ನರೇಂದ್ರ ಮೋದಿ ಮತ್ತು ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಮೇಲೆ ಒಂದು ಸಲ ವಿಶ್ವಾಸವಿಟ್ಟು ಬಿಜೆಪಿಗೆ ಬಹುಮತ ಕೊಡಿ. ಕರ್ನಾಟಕದಲ್ಲಿ ಭ್ರಷ್ಟಾಚಾರಮುಕ್ತ ಆಡಳಿತ ಕೊಡುತ್ತೇವೆ' ಎಂದು ಗೃಹ ಸಚಿವ ಅಮಿತ್ ಶಾ ಅವರು ಭರವಸೆ ನೀಡಿರುವುದು ವರದಿಯಾಗಿದೆ (ಪ್ರ.ವಾ., ಫೆ. 24). 'ನಮಗೆ ಬಹುಮತ ಕೊಡಿ, ಭ್ರಷ್ಟಾಚಾರರಹಿತ ಆಡಳಿತ ಕೊಡುತ್ತೇವೆ' ಎಂದು ವಿರೋಧ ಪಕ್ಷಗಳು ಹೇಳಬಹುದಾದ ಮಾತನ್ನು ಆಡಳಿತ ಪಕ್ಷವೇ ಹೇಳಿದರೆ, ಈ ಮಾತಿನ ಅರ್ಥ ಏನು? ರಾಜ್ಯದ ಜನತೆ ಈ ಹಿಂದೆ ಬಿಜೆಪಿಗೆ ಹೆಚ್ಚು ಸ್ಥಾನ ನೀಡಿ, ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಆಡಳಿತ ಏನಾಗಿತ್ತು? ಈಗಿನ ಅವಧಿಯಲ್ಲಿ ಬಹುಮತ ಕೊಟ್ಟಿದ್ದಿದ್ದರೆ, ಆಪರೇಷನ್ ಕಮಲ ಆಗುತ್ತಿರಲಿಲ್ಲ, ಭ್ರಷ್ಟಾಚಾರವೂ ನಡೆಯುತ್ತಿರಲಿಲ್ಲ ಎಂಬುದು ಈ ಮಾತಿನ ಪರೋಕ್ಷ ಅರ್ಥವೇ? ಅಥವಾ ಭ್ರಷ್ಟಾಚಾರಮುಕ್ತ ಆಡಳಿತ ನಡೆಸಲು ಈಗಿನ ಮತ್ತು ಈ ಹಿಂದಿನ ಅವಧಿಗಳಲ್ಲಿ ಆಗಲಿಲ್ಲ, ಬಹುಮತದೊಂದಿಗೆ ಮತ್ತೆ ಅವಕಾಶ ಕೊಡಿ, ಮುಂದಿನ ದಿನಗಳಲ್ಲಿ ಭ್ರಷ್ಟಾಚಾರರಹಿತ ಆಡಳಿತ ನಡೆಸುತ್ತೇವೆ ಎನ್ನುವುದೇ?

ಯಡಿಯೂರಪ್ಪನವರು ತಾವು ಚುನಾವಣೆಗೆ ಸ್ಪರ್ಧಿಸುವುದಿಲ್ಲವೆಂದು ಹೇಳಿದ ಮೇಲೂ ಅವರ ಮೇಲೆ ನಂಬಿಕೆ ಇಡುವುದು ಏನಿದೆ? ಜ್ಞಾನೋದಯವಾಯಿತೆಂದು ತನಗೆ ತಾನೇ ನಿರ್ಧರಿಸಿಕೊಂಡ ಬೆಕ್ಕು, ಇನ್ನು ಮುಂದೆ ಹಿಂಸಾ ಮಾರ್ಗವನ್ನು ತ್ಯಜಿಸಿ ಕಾಶಿ ಯಾತ್ರೆ ಮಾಡುತ್ತೇನೆಂದು ತೀರ್ಮಾನಕ್ಕೆ ಬಂದ 'ಮಾರ್ಜಾಲ ನೀತಿ' ಇದಾಗಿದೆಯೇ?

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮೌಲ್ಯಾಂಕನ ಪರೀಕ್ಷೆ ಮತ್ತು ಸಮಯಾವಕಾಶ

ಐದು ಮತ್ತು ಎಂಟನೇ ತರಗತಿಯ ವಿದ್ಯಾರ್ಥಿಗಳಲ್ಲಿ ಈಗ ಮೌಲ್ಯಾಂಕನ ಪರೀಕ್ಷೆಯ ಹವಾ. ಕೆಲ ದಿನಗಳ ಹಿಂದಿನವರೆಗೂ ಮಾದರಿ ಪ್ರಶ್ನೆಪತ್ರಿಕೆಗಾಗಿ ಭಾರಿ ನಿರೀಕ್ಷೆಯಿಂದ ಕಾಯುತ್ತಿದ್ದ ಮಕ್ಕಳ ಕೈಗೆ ಅಂತೂ ಇಂತೂ ಅವು ಸೇರಿವೆ. ಆದರೆ ಅದರಲ್ಲಿರುವ ಪ್ರಶ್ನೆಗಳನ್ನು ನೋಡಿದರೆ, ಅವನ್ನು ಮಕ್ಕಳು ಅರ್ಥೈಸಿಕೊಂಡು ಬರೆಯಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ಎಂಟನೇ ತರಗತಿಯ ಮಕ್ಕಳು ಹೇಗೋ ಬರೆದಾರು ಎಂದುಕೊಳ್ಳೋಣ. ಐದನೇ ತರಗತಿಯ ಮಕ್ಕಳಲ್ಲಿ ಕೆಲವರು ಬರೆದರೂ ಎಲ್ಲ ಮಕ್ಕಳಿಗೂ ಇದು ಸಾಧ್ಯವೇ ಎನಿಸದೇ ಇರದು. ಏಕೆಂದರೆ ಪಠ್ಯಪುಸ್ತಕದಲ್ಲಿರುವ ಪ್ರಶ್ನೆಗಳಿಗಿಂತ ಹೆಚ್ಚಾಗಿ ಯೋಚಿಸಿ ಬರೆಯುವಂತಹ ಪ್ರಶ್ನೆಗಳೇ ಅದರಲ್ಲಿ ಹೆಚ್ಚಾಗಿವೆ. ಕನ್ನಡ ಪ್ರಶ್ನೆಪತ್ರಿಕೆಯನ್ನು ನೋಡಿದಾಗ, ಒಬ್ಬ ಕನ್ನಡ ಶಿಕ್ಷಕಿಯಾಗಿ ನನಗೆ ಖುಷಿಯಾಯಿತು. ಆದರೆ ಎಲ್ಲ ಮಕ್ಕಳೂ ಅಷ್ಟರಮಟ್ಟಿಗೆ ಯೋಚಿಸಿ ಬರೆಯಬಲ್ಲರೇ ಅನಿಸಿತು. ಅದರಲ್ಲೂ ಇಂಗ್ಲಿಷ್ ಮಾಧ್ಯಮ ಶಾಲೆಯ ಮಕ್ಕಳಂತೂ ಕನ್ನಡವನ್ನು ಮೊದಲೇ ಕಬ್ಬಿಣದ ಕಡಲೆ ಎಂದುಕೊಂಡುಬಿಟ್ಟಿರುತ್ತಾರೆ. ಕೆಲವು ಮಕ್ಕಳು ಅಕ್ಷರಗಳನ್ನು ಗುರುತಿಸುವುದಕ್ಕೇ ಒದ್ದಾಡುತ್ತಾರೆ. ಇಂತಹವರು ಪ್ರಶ್ನೆಯನ್ನು ಓದಿಕೊಂಡು ಯೋಚಿಸಿ ಸ್ವಂತ ವಾಕ್ಯಗಳಲ್ಲಿ ಬರೆಯುವುದು ಸುಲಭವೇನಲ್ಲ. ಜೂನ್, ಜುಲೈ ತಿಂಗಳಿನಲ್ಲೇ ಈ ಬಗ್ಗೆ ಮಾಹಿತಿ ನೀಡಿದ್ದರೆ ಮಕ್ಕಳಿಗೆ ಅದೇ ಪ್ರಕಾರ ಅಭ್ಯಾಸ ಮಾಡಿಸಬಹುದಿತ್ತೇನೊ.

ಒಟ್ಟಾರೆ, ಪೂರ್ವಸಿದ್ಧತೆ ಮಾಡಿಕೊಳ್ಳಲು, ಪೂರ್ವಸಿದ್ಧತಾ ಪರೀಕ್ಷೆಗಳನ್ನು ನಡೆಸಲು ಇನ್ನೂ ಹೆಚ್ಚಿನ ಸಮಯಾವಕಾಶದ ಅಗತ್ಯವಿತ್ತು. ಇದರ ನಡುವೆಯೂ ಮಕ್ಕಳು ಎದೆಗುಂದದೆ ಪರೀಕ್ಷೆಯನ್ನು ಎದುರಿಸಬೇಕು. ಶಾಲೆಗಳಲ್ಲಿ ಮಾಡುವ ಕೊನೆಯ ಹಂತದ ಪೂರ್ವಸಿದ್ಧತಾ ಪರೀಕ್ಷೆಗಳಲ್ಲಿ ತಪ್ಪದೇ ಪಾಲ್ಗೊಳ್ಳಬೇಕು. ಬರೆದು ಅಭ್ಯಾಸ ಮಾಡಿದರೆ ತಪ್ಪುಗಳನ್ನು ತಿದ್ದಿಕೊಳ್ಳಲು, ನಿಗದಿತ ಸಮಯದಲ್ಲಿ ಪರೀಕ್ಷೆ ಬರೆಯುವ ಕ್ರಮ ಅರಿಯಲು ಸಾಧ್ಯವಾಗುತ್ತದೆ.

ರೇಖಾ, ಹೊಸಪೇಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಚುನಾವಣೆ ಘೋಷಣೆಗೂ ಮುನ್ನ ಆಮಿಷ ತಡೆ ಕಷ್ಟ’

ಪ್ರಜಾವಾಣಿ ಸಂದರ್ಶನ

ಮನೋಜ್ ಕುಮಾರ್ ಮೀನಾ

ರಾಜ್ಯ ವಿಧಾನಸಭಾ ಚುನಾವಣಾ ಪ್ರಕ್ರಿಯೆ ಆರಂಭಕ್ಕೆ ಇನ್ನು ಕೆಲವೇ ದಿನಗಳು ಉಳಿದಿವೆ. ಈ ಸಂದರ್ಭದಲ್ಲಿ ಚುನಾವಣಾ ಸಿದ್ಧತೆ ಹೇಗೆ ನಡೆದಿದೆ? ಮತದಾರರಿಗೆ ಆಮಿಷ ಒಡ್ಡುವುದನ್ನು ನಿಯಂತ್ರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮದ ಕುರಿತ ಆರೋಪಗಳು ನಿಜವೇ ಎಂಬ ಪ್ರಶ್ನೆಗಳಿಗೆ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಪ್ರಜಾವಾಣಿ ಸಂದರ್ಶನದಲ್ಲಿ ಉತ್ತರಿಸಿದ್ದಾರೆ

• ವಿ.ಎಸ್. ಸುಬ್ರಹ್ಮಣ್ಯ

• ರಾಜ್ಯ ವಿಧಾನಸಭಾ ಚುನಾವಣೆ ನಡೆಸಲು ಏನೆಲ್ಲಾ ತಯಾರಿಗಳು ಆಗಿವೆ?

ಚುನಾವಣೆ ನಡೆಸಲು ಮತದಾರರ ಪಟ್ಟಿ, ವಿದ್ಯುನ್ಮಾನ ಮತಯಂತ್ರ ಮತ್ತು ಮತಗಟ್ಟೆಗಳನ್ನು ಸಜ್ಜುಗೊಳಿಸಬೇಕಾಗಿರುವುದು ಪ್ರಾಥಮಿಕ ಹಂತದ ಪ್ರಮುಖ ಕೆಲಸ. 221 ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಜನವರಿ 5ಕ್ಕೆ ಮತ್ತು ಮೂರು ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಜ.15ಕ್ಕೆ ಪ್ರಕಟಿಸಲಾಗಿದೆ. ಈಗ ನಿರಂತರ ಪರಿಷ್ಕರಣೆ ನಡೆಯುತ್ತಲೇ ಇದೆ. ಮತದಾರರ ಪಟ್ಟಿ ತಯಾರಿಸುವ ಕೆಲಸ ಬಹುತೇಕ ಅಂತಿಮ ಹಂತ ತಲುಪಿದೆ.

• ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಕುರಿತ ತನಿಖೆ ಯಾವ ಹಂತದಲ್ಲಿದೆ?

ಪ್ರಾದೇಶಿಕ ಆಯುಕ್ತರು ತನಿಖೆ ಪೂರ್ಣಗೊಳಿಸಿ ಜನವರಿ ಅಂತ್ಯದಲ್ಲಿ ವರದಿ ನೀಡಿದ್ದಾರೆ. ಮತದಾರರ ಪಟ್ಟಿಯಲ್ಲಿ ಯಾವುದೇ ಲೋಪ ಆಗಿಲ್ಲ ಎಂದು ಅವರ ವರದಿ ಹೇಳಿದೆ. ಆದರೆ, ಮತದಾರರ ಜಾಗೃತಿ ಕಾರ್ಯಕ್ರಮ (ಸ್ವೀಪ್) ಆಯೋಜನೆಯಲ್ಲಿ ಚುನಾವಣಾ ಆಯೋಗದ ಮಾರ್ಗಸೂಚಿ ಉಲ್ಲಂಘನೆ ಕಂಡುಬಂದಿದೆ ಎಂದು ತಿಳಿಸಿದ್ದಾರೆ. ‘ಚಿಲುಮೆ’ ಸಂಸ್ಥೆಯವರು ‘ಸ್ವೀಪ್’ ಹೆಸರಿನಲ್ಲಿ ಮತದಾರರ ಮಾಹಿತಿ ಸಂಗ್ರಹಿಸಿರುವುದು ಕಂಡುಬಂದಿದೆ. ಅದನ್ನು ಅವರು ಹೇಗೆ ಬಳಸುತ್ತಾರೆ ಎಂಬುದರ ಕುರಿತು ಪೊಲೀಸರು ಹೆಚ್ಚಿನ ತನಿಖೆ ನಡೆಸಬೇಕೆಂಬ ಶಿಫಾರಸು ವರದಿಯಲ್ಲಿದೆ.

• ಈ ಚುನಾವಣೆಗೆ ಇವಿಎಂಗಳನ್ನು ಯಾವ ರಾಜ್ಯಗಳಿಂದ ತರಲಾಗುತ್ತಿದೆ?

ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಇಸಿಐಎಲ್) ತಯಾರಿಸಿರುವ ಎಂ–3 ಹೊಸ ವಿದ್ಯುನ್ಮಾನ ಮತಯಂತ್ರಗಳನ್ನು ಈ ಚುನಾವಣೆಗೆ ಬಳಸಲಾಗುತ್ತಿದೆ. ರಾಜ್ಯದಲ್ಲಿ ಒಟ್ಟು 58,282 ಮತಗಟ್ಟೆಗಳಿವೆ. ಶೇಕಡ 125ರಷ್ಟು ಕಂಟ್ರೋಲ್ ಯೂನಿಟ್ ಮತ್ತು ಬ್ಯಾಲೆಟ್ ಯೂನಿಟ್ ಹಾಗೂ ಶೇ 150ರಷ್ಟು ವಿವಿಪ್ಯಾಟ್‌ಗಳನ್ನು ತರಿಸಲಾಗಿದೆ. 22 ಜಿಲ್ಲೆಗಳಲ್ಲಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಎದುರಿನಲ್ಲೇ ಮತಯಂತ್ರಗಳ ಮೊದಲ ಹಂತದ ಪರಿಶೀಲನೆಯೂ ಪೂರ್ಣಗೊಂಡಿದೆ. ಆರು ಜಿಲ್ಲೆಗಳಲ್ಲಿ ಈ ಪ್ರಕ್ರಿಯೆ ನಡೆಯುತ್ತಿದೆ. ಮೂರು ಜಿಲ್ಲೆಗಳಲ್ಲಿ ಇದೇ 26ರಿಂದ ಆರಂಭವಾಗಲಿದೆ.

• ಮತಗಟ್ಟೆಗಳ ಹಂತದಲ್ಲಿ ಯಾವ ರೀತಿಯ ಸಿದ್ಧತೆಗಳು ಆಗುತ್ತಿವೆ?

ರಾಜ್ಯದ ಎಲ್ಲ ಮತಗಟ್ಟೆಗಳಿಗೂ ಸ್ಥಳೀಯ ಅಧಿಕಾರಿಗಳು ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ. ಕುಡಿಯುವ ನೀರು, ಶೌಚಾಲಯ, ರ‍್ಯಾಂಪ್ ಮತ್ತು ವಿದ್ಯುತ್ ಸಂಪರ್ಕ ಇಲ್ಲದ ಮತಗಟ್ಟೆಗಳನ್ನು ಗುರುತಿಸಿ, ಅಲ್ಲಿಗೆ ಆ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

• ಚುನಾವಣಾ ಆಯೋಗ ಪಕ್ಷಪಾತಿಯಾಗಿರುತ್ತದೆ ಎಂಬ ಆರೋಪವನ್ನು ಹೇಗೆ ಮೀರುತ್ತೀರಿ?

ಚುನಾವಣಾ ಆಯೋಗ ಸ್ವತಂತ್ರ ಸಾಂವಿಧಾನಿಕ ಸಂಸ್ಥೆ. ಮುಕ್ತ ಮತ್ತು ನಿಷ್ಪಕ್ಷಪಾತ ರೀತಿಯಲ್ಲಿ ಚುನಾವಣೆ ನಡೆಸುವುದು ಆಯೋಗದ ಗುರಿ. ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಪಾರದರ್ಶಕ ಮತ್ತು ತಟಸ್ಥವಾಗಿ ಕಾರ್ಯನಿರ್ವಹಿಸಬೇಕು ಎಂಬುದು ಕೇಂದ್ರ ಚುನಾವಣಾ ಆಯೋಗದ ಸ್ಪಷ್ಟ ಸೂಚನೆ. ಅದಕ್ಕೆ ವಿರುದ್ಧವಾಗಿ ಯಾರಾದರೂ ಕೆಲಸ ಮಾಡಿದರೆ ಕ್ರಮ ನಿಶ್ಚಿತ. ಆಯೋಗ ಈಗಾಗಲೇ ಎಲ್ಲ ಅಧಿಕಾರಿ, ಸಿಬ್ಬಂದಿಗೆ ಅಂತಹ ಎಚ್ಚರಿಕೆಯನ್ನು ನೀಡಿದೆ.

• ಭ್ರಷ್ಟಾಚಾರದ ಆರೋಪವಿರುವ ಅಧಿಕಾರಿಗಳನ್ನು ಚುನಾವಣಾ ಪ್ರಕ್ರಿಯೆಯಿಂದ ದೂರ ಇಡಬೇಕು ಎಂಬ ಆಗ್ರಹಕ್ಕೆ ಆಯೋಗ ಹೇಗೆ ಸ್ಪಂದಿಸಲಿದೆ?

ಚುನಾವಣಾ ಅಕ್ರಮದಲ್ಲಿ ಭಾಗಿಯಾದರೆ ಅಥವಾ ಪಕ್ಷಪಾತದಿಂದ ಕೂಡಿದ ದೂರುಗಳಿದ್ದರೆ ಆಯೋಗ ಕ್ರಮ ಜರುಗಿಸುತ್ತದೆ. ಇತರ ಸ್ವರೂಪದ ಆರೋಪಗಳಿದ್ದರೆ ಅದನ್ನು ಸರ್ಕಾರದ ಹಂತದಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕಾಗುತ್ತದೆ.

• ಭದ್ರತೆಯ ದೃಷ್ಟಿಯಿಂದ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಹಿಂದಿನ ಘಟನೆಗಳು, ಸದ್ಯದ ಬೆಳವಣಿಗೆಗಳು, ಮತದಾರರ ಮೇಲೆ ದಬ್ಬಾಳಿಕೆ ನಡೆಸಬಹುದಾದ ವ್ಯಕ್ತಿಗಳಿರುವ ಪ್ರದೇಶಗಳನ್ನು ಗುರುತಿಸಲಾಗುತ್ತಿದೆ. ಅಂತಹ ಪ್ರದೇಶಗಳಲ್ಲಿ ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆಗಳನ್ನು ಗುರುತಿಸಲಾಗಿದೆ. ಅಲ್ಲಿಗೆ ವಿಶೇಷ ಭದ್ರತೆ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಮತದಾರರನ್ನು ಸೆಳೆಯಲು ಹೆಚ್ಚು ವೆಚ್ಚ ಮಾಡುವ ಸಾಧ್ಯತೆ ಇರುವ ಪ್ರದೇಶಗಳನ್ನೂ ಗುರುತಿಸಲಾಗಿದೆ. ಅಂತಹ ಪ್ರದೇಶಗಳಲ್ಲಿ ವಿಶೇಷ ಕಣ್ಗಾವಲು ವ್ಯವಸ್ಥೆ ಮಾಡಲಾಗುವುದು.

• ಚುನಾವಣೆಗೆ ಭದ್ರತೆ ಒದಗಿಸಲು ಕೇಂದ್ರೀಯ ಪಡೆಗಳನ್ನು ನಿಯೋಜಿಸಲು ಬೇಡಿಕೆ ಸಲ್ಲಿಸಲಾಗಿದೆಯೆ?

ಸಹಜವಾಗಿಯೇ ಚುನಾವಣಾ ಭದ್ರತೆಗೆ ಕೇಂದ್ರೀಯ ಭದ್ರತಾ ಪಡೆಗಳ ಸೇವೆಯನ್ನು ಪಡೆಯಲಾಗುತ್ತದೆ. ಈ ಬಾರಿಯೂ ಬೇಡಿಕೆ ಸಲ್ಲಿಸಿದ್ದೇವೆ. ಅದರ ಪೂರ್ಣ ವಿವರವನ್ನು ಬಹಿರಂಗಪಡಿಸುವಂತಿಲ್ಲ. ನಾವು ಸಲ್ಲಿಸಿದ ಬೇಡಿಕೆಯನ್ನು ಕೇಂದ್ರ ಗೃಹ ಸಚಿವಾಲಯ ಪರಿಶೀಲಿಸುತ್ತದೆ. ನಂತರ ರಾಜ್ಯದಲ್ಲಿ ಚುನಾವಣೆ ಅವಧಿಯಲ್ಲಿ ಭದ್ರತೆ ಒದಗಿಸಲು ಎಷ್ಟು ಪಡೆಗಳನ್ನು ನಿಯೋಜಿಸಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ.

• ಮತದಾರರನ್ನು ಸೆಳೆಯಲು ಟಿ.ವಿ, ಕುಕ್ಕರ್, ಸೀರೆ ಹಂಚುವುದು, ತೀರ್ಥಯಾತ್ರೆಗೆ ಕಳಿಸುವುದು, ಹಣದ ಆಮಿಷ ಒಡ್ಡುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೆ?

ಚುನಾವಣೆ ಘೋಷಣೆ ಆಗುವವರೆಗೂ ನಾವು ನೇರವಾಗಿ ಕ್ರಮ ಕೈಗೊಳ್ಳಲು ಅಧಿಕಾರ ವಿಲ್ಲ. ಆದರೂ, ಆಗಸ್ಟ್ ತಿಂಗಳಲ್ಲೇ ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ, ಸರಕು ಮತ್ತು ಸೇವಾ ತೆರಿಗೆ, ವಾಣಿಜ್ಯ ತೆರಿಗೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳ ಜತೆ ಸಭೆ ನಡೆಸಲಾಗಿದೆ. ಮತದಾರರಿಗೆ ಆಮಿಷ ಒಡ್ಡುತ್ತಿರುವ ಪ್ರಕರಣಗಳ ಮಾಹಿತಿಯನ್ನು ಪರಸ್ಪರ ಹಂಚಿಕೊಳ್ಳಲು ಕೋರಲಾಗಿದೆ. ದೊಡ್ಡ ಪ್ರಮಾಣದಲ್ಲಿ ಅಂತಹ ವಸ್ತುಗಳ ಖರೀದಿ, ಸಾಗಣೆ ಮೇಲೆ ನಿಗಾ ಇಡಲು ಸೂಚಿಸಲಾಗಿದೆ. ಕಾನೂನು ಉಲ್ಲಂಘನೆಯ ಪ್ರಕರಣಗಳು ಕಂಡುಬಂದಲ್ಲಿ ದಂಡ ಸೇರಿದಂತೆ ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿದೆ. ಕೆಲವು ಕಡೆಗಳಲ್ಲಿ ಕ್ರಮಗಳೂ ಆಗಿವೆ. ಚುನಾವಣಾ ನೀತಿ ಸಂಹಿತೆ ಜಾರಿಯಾದ ಬಳಿಕವಷ್ಟೇ ಆಯೋಗವು ನೇರವಾಗಿ ಕ್ರಮ ಜರುಗಿಸಲು ಅವಕಾಶವಿದೆ.

• ಮತದಾರರಿಗೆ ಆಮಿಷ ಒಡ್ಡುವುದನ್ನು ತಡೆಯಲು ನಿಗಾ ವ್ಯವಸ್ಥೆ ಇದೆಯೆ?

ವಿವಿಧ ವಸ್ತುಗಳನ್ನು ಮತದಾರರಿಗೆ ಹಂಚುವುದನ್ನು ತಡೆಯಲು ಸರಕು ಸಾಗಣೆ ಮೇಲೆ ನಿಗಾ ಇಡಲು ಸೂಚಿಸಲಾಗಿದೆ. ರೈಲು, ವಿಮಾನ ನಿಲ್ದಾಣ, ಬಂದರುಗಳಲ್ಲಿ ಕಣ್ಗಾವಲು ಮತ್ತು ಗುಪ್ತಚರ ವ್ಯವಸ್ಥೆ ಬಲಪಡಿಸುವಂತೆ ನಿರ್ದೇಶನ ನೀಡಲಾಗಿದೆ. ದುಬಾರಿ ಬೆಲೆಯ ಲೋಹದ ಆಮದು ಹಾಗೂ ಮಾದಕ ವಸ್ತುಗಳ ಸಾಗಣೆ ಕುರಿತೂ ಕಟ್ಟೆಚ್ಚರಕ್ಕೆ ಸೂಚಿಸಲಾಗಿದೆ.

• ಅಧಿಕಾರಿಗಳು ಚುನಾವಣೆಯಲ್ಲಿ ನಿರ್ದಿಷ್ಟ ಪಕ್ಷ ಅಥವಾ ವ್ಯಕ್ತಿಯ ಪರ ಕೆಲಸ ಮಾಡುವುದನ್ನು ನಿಯಂತ್ರಿಸಲು ಏನು ಕ್ರಮ ಕೈಗೊಳ್ಳಲಾಗಿದೆ?

ನೇರವಾಗಿ ಚುನಾವಣಾ ಕರ್ತವ್ಯದಲ್ಲಿ ಭಾಗವಹಿಸುವ ಕಂದಾಯ, ಪೊಲೀಸ್ ಮತ್ತಿತರ ಇಲಾಖೆಗಳ ಅಧಿಕಾರಿಗಳ ಮೇಲೆ ನಿಗಾ ವಹಿಸಲಾಗಿದೆ. ಅಧಿಕಾರಿಗಳು ಸ್ವಂತ ಜಿಲ್ಲೆಯಲ್ಲಿರಬಾರದು ಹಾಗೂ ಕಳೆದ ನಾಲ್ಕು ವರ್ಷಗಳ ಅವಧಿಯಲ್ಲಿ ಮೂರು ವರ್ಷ ಒಂದೇ ಜಿಲ್ಲೆಯಲ್ಲಿರಬಾರದು ಎಂಬ ಮಾರ್ಗಸೂಚಿ ಇದೆ. ಅದರ ಪ್ರಕಾರ ಈಗಾಗಲೇ ವರ್ಗಾವಣೆಗಳನ್ನು ಮಾಡಲಾಗಿದೆ. ವೈಯಕ್ತಿಕವಾಗಿ ಯಾವುದಾದರೂ ಅಧಿಕಾರಿಯು ಒಂದು ಪಕ್ಷ ಅಥವಾ ವ್ಯಕ್ತಿಯ ಪರ ಕೆಲಸ ಮಾಡುತ್ತಿರುವ ಕುರಿತು ದೂರುಗಳು ಬಂದರೆ ಜಿಲ್ಲಾಧಿಕಾರಿಗಳಿಂದ ವರದಿ ಪಡೆಯಲಾಗುವುದು. ಪಕ್ಷಪಾತ ಮಾಡುತ್ತಿರುವುದು ದೃಢಪಟ್ಟರೆ ಸಂಬಂಧಿಸಿದ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆದು, ಕ್ರಮ ಕೈಗೊಳ್ಳುವಂತೆ ಕೋರಲಾಗುವುದು. ಚುನಾವಣೆ ಘೋಷಣೆಯಾದ ಬಳಿಕ ಅಂತಹ ಪ್ರಕರಣಗಳು ಕಂಡುಬಂದರೆ ಪ್ರಜಾ ಪ್ರಾತಿನಿಧ್ಯ ಕಾಯ್ದೆಯಡಿ ಕ್ರಮಕ್ಕೆ ಆದೇಶಿಸಲಾಗುವುದು.

• ಈ ಬಾರಿ ಹೊಸ ಮತದಾರರ ಸಂಖ್ಯೆ ಎಷ್ಟಿದೆ? ಅವರನ್ನು ಮತಗಟ್ಟೆಗೆ ಕರೆತರಲು ಯಾವ ಯೋಜನೆ ರೂಪಿಸಲಾಗಿದೆ?

ಈವರೆಗೆ ಹೊಸದಾಗಿ ನೋಂದಣಿಯಾದ 18ರಿಂದ 19 ವರ್ಷ ವಯೋಮಾನದ ಏಳು ಲಕ್ಷ ಮತದಾರರಿದ್ದಾರೆ. 18 ವರ್ಷ ಸಮೀಪಿಸುತ್ತಿರುವವರು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಲು ಮುಂಗಡವಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅಂತಹ 40,000 ಅರ್ಜಿಗಳು ವಿಲೇವಾರಿಗೆ ಬಾಕಿ ಇವೆ. ಹೊಸ ಮತದಾರರ ಸಂಖ್ಯೆ ಇನ್ನೂ ಹೆಚ್ಚಾಗಬಹುದು.

• ಮತದಾನದ ಪ್ರಮಾಣ ಹೆಚ್ಚಿಸಲು ಯಾವ ಯೋಜನೆ ಇದೆ?

2018ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಸರಾಸರಿ ಶೇಕಡ 72ರಷ್ಟು ಮತದಾನ ನಡೆದಿತ್ತು. ಆದರೆ, ಬಿಬಿಎಂಪಿ ವ್ಯಾಪ್ತಿಯ 28 ಕ್ಷೇತ್ರಗಳೂ ಸೇರಿದಂತೆ 90 ಕ್ಷೇತ್ರಗಳಲ್ಲಿ ರಾಜ್ಯದ ಸರಾಸರಿಗಿಂತ ಕಡಿಮೆ ಮತದಾನ ಆಗಿತ್ತು. ಅಂತಹ ಕ್ಷೇತ್ರಗಳಲ್ಲಿ ಮತದಾರರನ್ನು ಮತಗಟ್ಟೆಯತ್ತ ಆಕರ್ಷಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗುವುದು. ಕಡಿಮೆ ಮತದಾನಕ್ಕೆ ಕಾರಣ ಏನು ಎಂಬುದನ್ನು ತಿಳಿಯಲು ಮತಗಟ್ಟೆ ಹಂತದಲ್ಲಿ ವಿಶ್ಲೇಷಣೆ ಮಾಡಲಾಗುತ್ತಿದೆ. ಕಾರಣ ಹುಡುಕಿ, ಪರಿಹಾರ ಕ್ರಮ ಕೈಗೊಳ್ಳಲಾಗುವುದು. ಎಲ್ಲ ಮತದಾರರಿಗೂ ‘ವೋಟರ್ ಸ್ಲಿಪ್’ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು. ಮೊಬೈಲ್ ಅಪ್ಲಿಕೇಷನ್‌ನಲ್ಲಿ ಮತಗಟ್ಟೆಯ ಸ್ಥಳದ ಮಾಹಿತಿ ಒದಗಿಸಲಾಗುವುದು. ನಗರ ಪ್ರದೇಶಗಳಲ್ಲಿ ಹೆಚ್ಚು ಮತದಾರರಿರುವ ಕಡೆ ವಾಹನ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸುವ ಯೋಚನೆ ಇದೆ. ಮತಗಟ್ಟೆಯಲ್ಲಿ ಸರದಿಯಲ್ಲಿ ಎಷ್ಟು ಮಂದಿ ಇದ್ದಾರೆ ಎಂಬುದನ್ನು ಆ್ಯಪ್ ಮೂಲಕ ಮಾಹಿತಿ ಒದಗಿಸಲಾಗುವುದು.

ವಿಧಾನಸಭಾ ಚುನಾವಣೆ ಫಲಿತಾಂಶ - 2018

ರಾಜ್ಯದಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ

ರಾಜ್ಯ ವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಕಡಿಮೆ ಪ್ರಮಾಣದಲ್ಲಿ ಇದೆ. 2018ರಲ್ಲಿ 223 ಕ್ಷೇತ್ರಗಳಿಗೆ ನಡೆದಿದ್ದ ಚುನಾವಣೆಯಲ್ಲಿ ಒಟ್ಟು 2,636 ಅಭ್ಯರ್ಥಿಗಳು ಕಣಕ್ಕೆ ಇಳಿದಿದ್ದರು. ಆದರೆ ಇವರಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ 219 ಮಾತ್ರ. ಕಣದಲ್ಲಿದ್ದ ಒಟ್ಟು ಅಭ್ಯರ್ಥಿಗಳಲ್ಲಿ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ 10ಕ್ಕಿಂತಲೂ ಕಡಿಮೆ ಇತ್ತು. ಇನ್ನು ವಿಧಾನಸಭೆಗೆ ಆಯ್ಕೆಯಾದ ಅಭ್ಯರ್ಥಿಗಳಲ್ಲೂ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ 4ಕ್ಕಿಂತಲೂ ಕಡಿಮೆ. ಒಟ್ಟಿನಲ್ಲಿ ರಾಜ್ಯವಿಧಾನಸಭೆಯಲ್ಲಿ ಮಹಿಳಾ ಪ್ರಾತಿನಿಧ್ಯ ಅತ್ಯಂತ ಕಡಿಮೆ ಪ್ರಮಾಣದಲ್ಲಿ ಇದೆ.



ಪುರುಷ ಅಭ್ಯರ್ಥಿಗಳು

- ಕಣದಲ್ಲಿದ್ದ 2,417 ಅಭ್ಯರ್ಥಿಗಳಲ್ಲಿ 215 ಮಂದಿ ವಿಧಾನಸಭೆಗೆ ಚುನಾಯಿತರಾಗುವಲ್ಲಿ ಯಶಸ್ವಿಯಾಗಿದ್ದರು. ಕಣದಲ್ಲಿದ್ದ ಒಟ್ಟು ಪುರುಷ ಅಭ್ಯರ್ಥಿಗಳಲ್ಲಿ ವಿಧಾನಸಭೆಗೆ ಆಯ್ಕೆಯಾದ ಅಭ್ಯರ್ಥಿಗಳ ಪ್ರಮಾಣ ಶೇ 8.93ರಷ್ಟು ಮಾತ್ರ
- ಒಟ್ಟು 1,925 ಪುರುಷ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದರು. ಕಣದಲ್ಲಿದ್ದ ಒಟ್ಟು ಪುರುಷ ಅಭ್ಯರ್ಥಿಗಳಲ್ಲಿ ಠೇವಣಿ ಕಳೆದುಕೊಂಡವರ ಪ್ರಮಾಣ ಶೇ 79.6ರಷ್ಟು
- ಆ ಚುನಾವಣೆಯಲ್ಲಿ ಪಕ್ಷಗಳ ಮೂಲಕ ಮತ್ತು ಪಕ್ಷೇತರ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿದಿದ್ದ ಒಟ್ಟು ಪುರುಷ ಅಭ್ಯರ್ಥಿಗಳಲ್ಲಿ ವಿಧಾನಸಭೆಗೆ ಆಯ್ಕೆಯಾದವರನ್ನು ಹೊರತುಪಡಿಸಿ, 277 ಅಭ್ಯರ್ಥಿಗಳು ಠೇವಣಿ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ

ಮಹಿಳಾ ಅಭ್ಯರ್ಥಿಗಳು

- ಕಣದಲ್ಲಿದ್ದ 219 ಅಭ್ಯರ್ಥಿಗಳಲ್ಲಿ 7 ಮಂದಿ ಮಾತ್ರ ವಿಧಾನಸಭೆಗೆ ಚುನಾಯಿತರಾಗುವಲ್ಲಿ ಯಶಸ್ವಿಯಾಗಿದ್ದರು. ಕಣದಲ್ಲಿದ್ದ ಒಟ್ಟು ಮಹಿಳಾ ಅಭ್ಯರ್ಥಿಗಳಲ್ಲಿ ವಿಧಾನಸಭೆಗೆ ಆಯ್ಕೆಯಾದ ಅಭ್ಯರ್ಥಿಗಳ ಪ್ರಮಾಣ ಶೇ 3.1ರಷ್ಟು ಮಾತ್ರ
- ಒಟ್ಟು 200 ಮಹಿಳಾ ಅಭ್ಯರ್ಥಿಗಳು ಠೇವಣಿ ಕಳೆದುಕೊಂಡಿದ್ದರು. ಕಣದಲ್ಲಿದ್ದ ಒಟ್ಟು ಮಹಿಳಾ ಅಭ್ಯರ್ಥಿಗಳಲ್ಲಿ ಠೇವಣಿ ಕಳೆದುಕೊಂಡವರ ಪ್ರಮಾಣ ಶೇ 91.2ರಷ್ಟು
- ಆ ಚುನಾವಣೆಯಲ್ಲಿ ಪಕ್ಷಗಳ ಮೂಲಕ ಮತ್ತು ಪಕ್ಷೇತರ ಅಭ್ಯರ್ಥಿಗಳಾಗಿ ಕಣಕ್ಕೆ ಇಳಿದಿದ್ದ ಒಟ್ಟು ಮಹಿಳಾ ಅಭ್ಯರ್ಥಿಗಳಲ್ಲಿ ವಿಧಾನಸಭೆಗೆ ಆಯ್ಕೆಯಾದವರನ್ನು ಹೊರತುಪಡಿಸಿ, 12 ಅಭ್ಯರ್ಥಿಗಳು ಮಾತ್ರ ಠೇವಣಿ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ

ಗೆದ್ದ ಮಹಿಳೆಯರು

ಶಶಿಕಲಾ ಜೊಲ್ಲೆ

ಲಕ್ಷ್ಮಿ ಹೆಬ್ಬಾಳ್ಕರ್

ಅಂಜಲಿ ನಿಂಬಾಳ್ಕರ್

ಖನೀಜ್ ಫಾತಿಮಾ

ರೂಪಾಲಿ ನಾಯ್ಕ

ಕೆ.ಪೂರ್ಣಿಮಾ

ಎಂ.ರೂಪಕಲಾ

ಕಾಂಗ್ರೆಸ್‌ಗೇ ಹೆಚ್ಚು ಮತ. ಆದರೆ...

ರಾಜ್ಯ ವಿಧಾನಸಭೆಗೆ 2004ರಿಂದ ನಡೆದ ಒಟ್ಟು ನಾಲ್ಕು ಚುನಾವಣೆಗಳಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಹೆಚ್ಚು ಮತಗಳನ್ನು ಪಡೆದದ್ದು ಕಾಂಗ್ರೆಸ್. ಹೆಚ್ಚು ಮತ ಪಡೆದ ಪಕ್ಷಗಳ ಸ್ಥಾನದಲ್ಲಿ ಕಾಂಗ್ರೆಸ್‌ನ ನಂತರದ ಸ್ಥಾನದಲ್ಲಿ ಇರುವುದು ಬಿಜೆಪಿ. ಮೂರನೇ ಸ್ಥಾನದಲ್ಲಿ ಜೆಡಿಎಸ್ ಇದೆ. ಇಷ್ಟೂ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಮತಗಳನ್ನು ಪಡೆದುಕೊಂಡಿದ್ದರೂ, ಆ ಮತಗಳೆಲ್ಲವೂ ಗೆಲುವಾಗಿ ಮಾರ್ಪಾಡಾಗಿಲ್ಲ. 2004ರಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಶೇ 35.27ರಷ್ಟು ಮತಗಳನ್ನು ಪಡೆದುಕೊಂಡಿದ್ದರೂ, ಕಾಂಗ್ರೆಸ್ ಗೆದ್ದಿದ್ದು 65 ಕ್ಷೇತ್ರಗಳಲ್ಲಿ. ಆದರೆ, ಶೇ 28.33ರಷ್ಟು ಮತಗಳನ್ನು ಪಡೆದಿದ್ದ ಬಿಜೆಪಿ 79 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಇನ್ನು ಶೇ 20.19ರಷ್ಟು ಮತಗಳನ್ನು ಪಡೆದಿದ್ದ ಜೆಡಿಎಸ್ 58 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಇಷ್ಟೂ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಮತ ಪ್ರಮಾಣದಲ್ಲಿ ಗಣನೀಯ ಬದಲಾವಣೆ ಏನೂ ಆಗಿಲ್ಲ. ಆದರೆ, ಪಕ್ಷವು ಗೆದ್ದ ಕ್ಷೇತ್ರಗಳ ಸಂಖ್ಯೆಯಲ್ಲಿ ಮಾತ್ರ ಭಾರಿ ಏರಿಳಿತವಾಗಿದೆ. ಅಂತೆಯೇ ಬಿಜೆಪಿ ಪಡೆದ ಮತಪ್ರಮಾಣ ಕಡಿಮೆಯಾದರೂ ಹೆಚ್ಚು ಕ್ಷೇತ್ರಗಳು ಸಿಕ್ಕಿವೆ. ಬಿಜೆಪಿಯ ಮತ ಪ್ರಮಾಣ ಇಳಿಕೆಯಾದಾಗ, ಅದು ಗೆದ್ದ ಕ್ಷೇತ್ರಗಳ ಸಂಖ್ಯೆಯೂ ಇಳಿಕೆಯಾಗಿದೆ. ಮತ ಪ್ರಮಾಣ ಏರಿಕೆಯಾದಾಗ, ಅದು ಗೆದ್ದ ಕ್ಷೇತ್ರಗಳ ಸಂಖ್ಯೆಯೂ ಏರಿಕೆಯಾಗಿದೆ. 2018ರ ಚುನಾವಣೆಯಲ್ಲಿ ಚಲಾವಣೆಯಾದ ಒಟ್ಟು ಮತಗಳಲ್ಲಿ ಕಾಂಗ್ರೆಸ್‌ಗೆ ದೊರೆತ ಮತಗಳ ಪ್ರಮಾಣ ಶೇ 38.08. ಆದರೆ, ಕಾಂಗ್ರೆಸ್ ಗೆದ್ದಿದ್ದು 78 ಕ್ಷೇತ್ರಗಳಲ್ಲಿ ಮಾತ್ರ. ಆದರೆ ಆ ಚುನಾವಣೆಯಲ್ಲಿ ಬಿಜೆಪಿ ಶೇ 36.22ರಷ್ಟು ಮತಗಳನ್ನು ಪಡೆದಿದ್ದರೂ, 104 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಇನ್ನು ಶೇ 18.36ರಷ್ಟು ಮತಗಳನ್ನು ಪಡೆದಿದ್ದರೂ ಜೆಡಿಎಸ್ 37 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು.



ಮತ ಪ್ರಮಾಣ



ಕಡಿಮೆ ಅಂತರದ ಗೆಲುವು

ಕ್ಷೇತ್ರ	ಗೆದ್ದ ಅಭ್ಯರ್ಥಿ	ಗೆಲುವಿನ ಅಂತರ
ಅಳಂದ	ಸುಭಾಷ್ ಗುತ್ತೇದಾರ (ಬಿಜೆಪಿ)	697
ಮಸ್ಕಿ	ಪ್ರತಾಪಗೌಡ ಪಾಟೀಲ್ (ಕಾಂಗ್ರೆಸ್)	213
ಕುಂದಗೋಳ	ಸಿ.ಎಸ್.ಶಿವಳ್ಳಿ (ಕಾಂಗ್ರೆಸ್)	634
ಹಿರೇಕೆರೂರು	ಬಿ.ಸಿ.ಪಾಟೀಲ್ (ಕಾಂಗ್ರೆಸ್)	555
ಪಾವಗಡ	ವೆಂಕಟರಮಣಪ್ಪ (ಕಾಂಗ್ರೆಸ್)	409

ಸಿ.ಎಸ್.ಶಿವಳ್ಳಿಯವರು 2019ರಲ್ಲಿ ನಿಧನರಾಗಿದ್ದಾರೆ.

ಪದಬಂಧ 5241

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಚರ್ಚೆಗೆ ಗ್ರಾಸವಾದ ವಾದ (3)
3.ಪ್ರಯಾಸವಾಗದ ಪಯಣ (3)
5.ಅಭಿವ್ಯಕ್ತಿಗೊಳಿಸುತ್ತಿರುವ ಮನುಷ್ಯ (2)
6.ಇದೇ ಎಲ್ಲವೂ (3)
7.ವಿಕಸನದಲ್ಲಿರುವ ಗಲೀಜು! (2)
9.ನಗರದಿಂದ ತಂದಿರುವ ಆಭರಣ (2)
11.ಪುಷ್ಪಗಳನ್ನು ಜೋಡಿಸಿಡುವ ಕರಂಡ (3)
13.ಜವಾನನ ಸುತ್ತ ನೆರೆದಿರುವ ಮಂದಿ (2)
14.ಒಳ್ಳೆಯ ಸ್ವಭಾವವಿದು (3)
15.ನೃತ್ಯವನ್ನು ಈ ರೀತಿಯೂ ಹೇಳುವರು (3)

ಮೇಲಿಂದ ಕೆಳಕ್ಕೆ

1.ಮೋಕ್ಷಕ್ಕೊಂದು ಪರ್ಯಾಯ ಪದ (3)
2.ಆ ದಿವಸ ತಂದಿಟ್ಟಿರುವ ಕಾಲುಕಡಿ! (3)
3.ಇದು ಶ್ರೇಷ್ಠವಾದುದು (3)
4.ಈತ ಸರಿ ಸಮಾನನಾದವನು (3)
5.ಕಳೆಯುವ ಲೆಕ್ಕವಿದು (5)
8.ಕಡಲಿನ ಮೇಲೆ ಕೈಗೊಳ್ಳುವಪಯಣ (5)
10.ಕತ್ತಿಯನ್ನು ಇಡುವ ಕೋಶ (3)
11.ಪುಷ್ಪದ ಶರ ಇಲ್ಲಿದೆ (3)
12.ತಡವೆಂದು ಹೀಗೆನ್ನಿ (3)
13.ಜನರ ನಡುವೆ ನುಸುಳಿದ ಆಳು (3)



5240ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಲಪಾತ 3.ಪ್ರಸಂಗ
5.ನವದಂಪತಿ
7.ಕೆರಳು 9.ತಾಕತ್ತು
11.ಉಗುರು
13.ವ್ಯವಕಲನ 15.ವನಿತೆ
16.ನಡುಪ್ರಾಯ

ಮೇಲಿಂದ ಕೆಳಕ್ಕೆ:
1.ಜವನಿಕೆ 2.ತಲ್ಲೀನ
4.ಸಂಪ್ರತಿ 6.ದಂಡೆತ್ತು
8.ರಕ್ತ 9.ತಾರಕ
10.ಹಂಗು
12.ರುಗ್ಣಾಲಯ
13.ವ್ಯಸನಿ 14.ನಯನ

ಸುಡೊಕು 5627

	6			2		5		
5		4			7		2	3
	2		5			6		7
8		1		3				9
			9		8			4
9		2		5		3		6
7		3		9				
	8		7		5	9	3	
		9		8			7	5

5626 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 25, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುದ್ಧ ಷಷ್ಠಿ ಗಂ. 24-21 **ನಕ್ಷತ್ರ:** ಭರಣಿ ಗಂ. 27-59 **ಯೋಗ:** ಬ್ರಹ್ಮ ಗಂ. 17-17, **ಕರಣ:** ಕೌಲವ ಗಂ. 12-20, ಕುಂಭ ಮಾಸದ 12 ನೇ ದಿನ.
ರಾಹುಕಾಲ: ಬೆಳಿಗ್ಗೆ 09-00–10-30
ಸೂರ್ಯೋದಯ: 06-52 **ಸೂರ್ಯಾಸ್ತ:** 06-35
ಮುಸ್ಲಿಂ ದಿನಾಂಕ: 04 ಶಬನ್
ಅದೃಷ್ಟ ಸಂಖ್ಯೆ: 3, 7

ಮೇಷ: ವ್ಯವಹಾರದಲ್ಲಿ ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರೆಯಿರಿ. ಕಾರ್ಮಿಕ ವರ್ಗದವರಿಗೆ ಹೆಚ್ಚಿನ ಸವಲತ್ತುಗಳು ಒದಗುವುವು. ಕಾಗದ ಪತ್ರಗಳ ನಿರ್ವಹಣೆಯಲ್ಲಿ ಎಚ್ಚರ ವಹಿಸಿ.

ವೃಷಭ: ಖರ್ಚು ವೆಚ್ಚಗಳು ಹೆಚ್ಚಿರುವ ಸಂಭವನೀಯತೆ ಇದೆ. ವ್ಯವಹಾರಗಳ ಮೇಲೆ ನಿಗಾ ಇರಲಿ, ಹಿತಶತ್ರುಗಳ ಬಾಧೆ ಬರಬಹುದು. ಹಣ್ಣುತರಕಾರಿ ಮಾರಾಟಗಾರರಿಗೆ ಲಾಭ ನಷ್ಟಗಳ ಮಿಶ್ರ ಫಲ ಅನುಭವವಾಗಬಹುದು.

ಮಿಥುನ: ಪರಿಶ್ರಮಕ್ಕೆ ತಕ್ಕ ಫಲವನ್ನು ನಿರೀಕ್ಷಿಸಬಹುದು. ವಾಹನ ಚಾಲಕರಿಗೆ ಎಚ್ಚರವಿರಲಿ. ಕಾನೂನು ವಿದ್ಯಾರ್ಥಿಗಳು ತಮ್ಮ ಮುಂಬರುವ ಪರೀಕ್ಷೆಗಾಗಿ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಲು ಉತ್ತಮ ದಿನ.

ಕರ್ಕಾಟಕ: ಸಿಮೆಂಟ್ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ಉಸಿರಾಟ ಸಮಸ್ಯೆಯಂತಹ ತೊಂದರೆಗಳು ಎದುರಾಗಬಹುದು ಉದ್ಯೋಗದಲ್ಲಿ ವ್ಯಾಪಾರ ವ್ಯವಹಾರದ ಅಭಿವೃದ್ಧಿಯಲ್ಲಿ ಹಿನ್ನಡೆ ಕಾಡಬಹುದು.

ಸಿಂಹ: ಕುಟುಂಬದವರೊಂದಿಗೆ ಸಂತೋಷದಿಂದ ಧಾರ್ಮಿಕ ಸ್ಥಳಗಳಿಗೆ ಭೇಟಿ ನೀಡುವಿರಿ. ಚಿನ್ನ ಬೆಳ್ಳಿ ಮಾರಾಟಗಾರರಿಗೆ ಲಾಭ ಇರುತ್ತದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವಂತವರಿಗೆ ಸಮಸ್ಯೆಗಳಿಗೆ ಸಮಾಧಾನ ದೊರೆಯಲಿದೆ.

ಕನ್ಯಾ: ಉತ್ತಮ ವ್ಯವಹಾರಗಳ ಫಲದಿಂದ ಕೈಬಿಟ್ಟ ಹಳೆಯ ಆಸ್ತಿಯು ನಿಮ್ಮ ಕೈಸೇರುವ ಯೋಗವಿದೆ. ಉನ್ನತ ಅಧಿಕಾರಿಗಳ ಜೊತೆಗಿನ ಸಂಬಂಧವನ್ನು ಉತ್ತಮವಾಗಿ ಇಟ್ಟುಕೊಳ್ಳುವುದರಿಂದ ಲಾಭವಾಗುತ್ತದೆ.

ತುಲಾ: ಅತ್ತೆ-ಸೊಸೆ, ತಾಯಿ-ಮಗಳು ಸಣ್ಣ ಪುಟ್ಟ ವಿಚಾರಗಳಿಗೆ ಮನಸ್ತಾಪ ಮಾಡಿಕೊಳ್ಳದೆ ಸಾಮರಸ್ಯದ ಜೀವನ ನಡೆಸುವುದು ಒಳ್ಳೆಯದು. ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವಿರಿ.

ವೃಶ್ಚಿಕ: ಅವಿವೇಕಿಗಳ ನಡುವೆ ವಾದಿಸಬೇಡಿ. ವಿವೇಕಯುತ ನಡವಳಿಕೆಯು ಪ್ರಯೋಜನಗಳನ್ನು ನೀಡುತ್ತದೆ. ಅಸಹಾಯಕರಿಗೆ ಸಹಾಯ ಮಾಡುವುದರಿಂದ ಪುಣ್ಯ ಸಂಪಾದಿಸಬಹುದು.

ಧನು: ಬೇರೆಯವರ ಮನಸ್ಸಿಗೆ ನೋವಾಗುವಂಥ ಮಾತುಗಳು ಬಾಯಿಂದ ಹೊರಡದೆ ಇರುವುದು ಉತ್ತಮ. ಹೆಸರಾಂತ ವ್ಯಕ್ತಿಗಳ ಜತೆ ಭೇಟಿ ಮಾಡುವ ಅವಶ್ಯಕತೆ ಇದ್ದಲ್ಲಿ ಪ್ರಯತ್ನ ಪಟ್ಟರೆ ಈ ದಿನ ಫಲಿಸುವ ಸಾಧ್ಯತೆಗಳಿವೆ.

ಮಕರ: ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆಂದು ತೀರ್ಮಾನಿಸಿದ್ದರೂ, ಅಷ್ಟು ಸುಲಭವಾಗಿ ನಡೆಯುವುದಿಲ್ಲ. ತಪ್ಪು ಮಾಡುವುದು ಮಕ್ಕಳ ಸ್ವಾಭಾವಿಕ ಗುಣವೆಂಬುವುದು ಅರಿತು ಕ್ಷಮಿಸಿ, ತಿದ್ದುವುದನ್ನು ಮೈಗೂಡಿಸಿಕೊಳ್ಳಿ.

ಕುಂಭ: ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಸ್ವಯಂ ನಿವೃತ್ತಿ ಯೋಚನೆಯನ್ನು ಕೈ ಬಿಡಬೇಕಾಗುವುದು. ಚಿತ್ರಕಲೆಯಲ್ಲಿರುವ ಅಥವಾ ಪಠ್ಯೇತರ ವಿಷಯದಲ್ಲಿ ಉತ್ಸಾಹ ಮಗ್ನರಾಗುವಂತೆ ಪ್ರೇರೇಪಿಸುವುದು.

ಮೀನ: ಗೃಹ ಹಾಗೂ ಕಟ್ಟಡ ನಿರ್ಮಾಣ ಕಾರ್ಯಗಳಂಥ ದೊಡ್ಡ ದೊಡ್ಡ ಕಾರ್ಯಗಳ ಮೇಲೆ ಸ್ವಲ್ಪ ಹೆಚ್ಚಿನ ಗಮನ ಹರಿಸಿದರೆ ಕೆಲಸವು ಬೇಗ ಪೂರ್ಣವಾಗುವ ಸಾಧ್ಯತೆಗಳಿವೆ. ಉತ್ಸಾಹದ ಕೊರತೆ ಕಾಣಿಸುವುದು.

ಮುಂಬೈ ಧಾರಣೆ

ಶೇಂಗಾ

24–02–2023

ಜಾವಾ 70/80(ಹೊಸ)	12250-12300
ಜಾವಾ 80/90(ಹೊಸ)	11250-11300
ದಪ್ಪ ಮಧ್ಯಪ್ರದೇಶ(ಹೊಸ)	11000-11100
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (1700)
ಒಂದು ವಾರದ ಡೆಲಿವರಿ	1695 (1695)
ಸೋಯಾ ಕಚ್ಚಾ	1045 (1045)
ಪಾಮ್ ವಾರದ ಡೆಲಿವರಿ	972 (975)
ಸೂರ್ಯಕಾಂತಿ ಎಣ್ಣೆ ಕಚ್ಚಾ	1040 (1040)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 55,750 (55,800)

ಬೆಳ್ಳಿ ಕೆ.ಜಿ 64,300 (65,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಷೇರುಪೇಟೆ ವಹಿವಾಟು

142

ಹಿಂದಿನ ಅಂತ್ಯ 59,605

ಇಂದಿನ ಅಂತ್ಯ 59,463

10:00 12:00 14:00 16:00

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,511
ಇಂದಿನ ಅಂತ್ಯ	17,466
▼	45
ದಿನದ ಕನಿಷ್ಠ	17,421

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ ₹440

12 ಮೊಟ್ಟೆಗೆ ₹60

ಮೈಸೂರು

100 ಮೊಟ್ಟೆಗೆ ₹442

ಖಾದ್ಯ ತೈಲ ಮುಂಬೈ

ಶೇಂಗಾ (ರಿಫೈನ್ಡ್)	₹1690 (1690)
ಸೋಯಾ (ರಿಫೈನ್ಡ್)	₹1135 (1130)
ಸೂರ್ಯಕಾಂತಿ (ರಿಫೈನ್ಡ್)	₹1165 (1160)
ಪಾಮೋಲಿನ್	₹970 (972)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹435-635

ದ್ವಿತಳಿ (ಬಿ.ವಿ) ₹411-725

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹140

ಆರ್‌ಎಸ್‌ಎಸ್-5 ₹134.50

ಗುಡ್ ಲಾಟ್ ₹129.50

(ಪ್ರತಿ ಕೆ.ಜಿಗೆ)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ಪ್ರಾವಿಡೆಂಟ್‌ನಿಂದ 'ಬೆಂಗಳೂರು ಹೋಮ್ ಹಬ್ಬ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾವಿಡೆಂಟ್ ಹೌಸಿಂಗ್ ಸಂಸ್ಥೆಯು ಜೆ.ಪಿ. ನಗರದಲ್ಲಿ ಆಯೋಜಿಸಿರುವ ಮೂರು ದಿನಗಳ 'ಪ್ರಾವಿಡೆಂಟ್ ಬೆಂಗಳೂರು ಹೋಮ್ ಹಬ್ಬ'ಕ್ಕೆ ಶುಕ್ರವಾರ ಚಾಲನೆ ದೊರೆತಿದೆ.

ಈ ಹಬ್ಬದ ಕೊಡುಗೆಯಲ್ಲಿ ಹಲವು ಹೆಚ್ಚುವರಿ ಶುಲ್ಕಗಳನ್ನು ಮನ್ನಾ ಮಾಡಲಿದ್ದು, ಇದರಿಂದಾಗಿ ಮನೆ ಖರೀದಿಸುವವರು ₹9 ಲಕ್ಷದವರೆಗೆ ಉಳಿತಾಯ ಮಾಡಬಹುದು ಎಂದು ಸಂಸ್ಥೆಯು ಪ್ರಕಟಣೆಯಲ್ಲಿ ತಿಳಿಸಿದೆ. ಕಾರ್ ಪಾರ್ಕಿಂಗ್ ಶುಲ್ಕವೂ ಇರುವುದಿಲ್ಲ ಎಂದು ಹೇಳಿದೆ.

ಈ ಹಬ್ಬಕ್ಕೆ ಭೇಟಿ ನೀಡುವವರು, ಬೆಂಗಳೂರು, ಗೋವಾ, ಹೈದರಾಬಾದ್, ಕೊಚ್ಚಿ, ಮುಂಬೈ ಮತ್ತು ಮಂಗಳೂರು ನಗರಗಳಲ್ಲಿನ ಸಂಸ್ಥೆಯ 11 ಯೋಜನೆಗಳ ಬಗ್ಗೆ ಸಂಪೂರ್ಣ ಮಾಹಿತಿ ಪಡೆಯಬಹುದು.

ವೆಚ್ಚ ಮಾಡುವ ಪ್ರತಿಯೊಂದು ರೂಪಾಯಿಗೂ ಹೆಚ್ಚಿನ ಮೌಲ್ಯ ಒದಗಿಸುವ ಸುಸ್ಥಿರ, ಉತ್ತಮ ವಿನ್ಯಾಸದ ಮನೆಗಳನ್ನು ಖರೀದಿಸುವುದಕ್ಕೆ ಗ್ರಾಹಕರು ಹೆಚ್ಚು ಒಲವು ತೋರುತ್ತಾರೆ. ಈ ನಿಟ್ಟಿನಲ್ಲಿ ಯೋಜನೆಗಳನ್ನು ಸಿದ್ದ-ಪಡಿಸಲಾಗಿದೆ ಎಂದು ಪ್ರಾವಿಡೆಂಟ್ ಹೌಸಿಂಗ್ ಲಿಮಿಟೆಡ್‌ನ ಸಿಒಒ ಮಲ್ಲಣ್ಣ ಸಾಸಲು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

SAD DEMISE
With profound grief and sorrow, we inform the demise of
SRI. S. KASHINATH
Advocate
(Srinivasan & Kashinath Associates)
on 23 February 2023.
In grief :
Smt. Sunita Kashinath, Charulata Kashinath & family, Banashankari, Blore. M: 8971228584, 9341220565

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 080-47106868

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree - Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000 -56,000/- ವಸತಿಯೂಟದೊಂದಿಗೆ 9035520339/ 9036125229

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611225344

Wanted

ಡೊಮಿನೋಸ್ ಪಿಜ್ಜಾ ನೇಮಕಾತಿ. ಪಿಜ್ಜಾ ಮೇಕರ್, ಆರ್ಡರ್ ಟೇಕರ್. ಪ್ರತಿ ಗಂಟೆಗೆ ಸಂಬಳ (CTC ರೂ .92 ಪ್ರತಿ ಗಂಟೆಗೆ) ಇಎಸ್‌ಐ, ಪಿಎಫ್, ಬೋನಸ್, ಅಪಘಾತ ವಿಮೆ. ಡೆಲಿವರಿ ಹುಡುಗರು-20,000 ವರೆಗೆ ಸಂಬಳ ಗಳಿಸುತ್ತಾರೆ. T&C ಅನ್ವಯಿಸುತ್ತದೆ. ಅಪಘಾತ ವಿಮೆ. ಸಂಪರ್ಕಕ್ಕೆ:7019460722 / 9738089466 ಅಥವಾ ಹತ್ತಿರದ ಡೊಮಿನೋಸ್ ಸ್ಟೋರ್‌ಗಳಿಗೆ ಹೋಗಿ

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 17,800-68,000/-. 9844503222/ 9035022290

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರವಾಸ

Travel

10.04.2023 16.05.2023 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 08.03.2023 ದುಬೈ ಅಬುಧಾಬಿ 5 ದಿನಗಳು. 18.04.2023 09.05.2023 ನೇಪಾಳ 9 ದಿನಗಳು. 12.04.2023 20.05.2023 ಭೂತಾನ್ 8 ದಿನಗಳು. 02.04.2023. 08.05.2023 ಗ್ಯಾಂಗ್‌ಟಾಕ್,ಡಾರ್ಜಿಲಿಂಗ್ 6 ದಿನಗಳು. 12.04.2023. 16.05.2023 ಕಾಶ್ಮೀರ್ 6 ದಿನಗಳು. 05.04.2023 27.04.2023 ಶಿಮ್ಲಾ,ಮನಾಲಿ 8 ದಿನಗಳು. 17.03.2023 ರಾಜಸ್ಥಾನ್ 9 ದಿನಗಳು. 05.04.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. ಜೈನ್ ಟ್ರಾವಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248, 7022547922

27/03/2023ರಿಂದ 13/16ದಿನಗಳ ವಿಮಾನ ಮತ್ತು AC ಬಸ್ಸಿನಲ್ಲಿ ಅಖಂಡನೇಪಾಳ ಮತ್ತು ಮುಕ್ತಿನಾಥ್,ಕಾಶಿ, ಗಯಾ,ನೈಮಿಷಾರಣ್ಯ,ಪುರಿ 27/04/2023ರಿಂದ ಚಾರುಧಾಮ್ ಸಮೇತ ಮಸ್ಸೂರಿ,ಹರಿದ್ವಾರ,ಮಾನ, ಋಷಿಕೇಶ್ ಹಾಗೂ ದಕ್ಷಿಣಭಾರತ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್ 9480182865/ 8105657052 (ಷಣ್ಮುಗಾನಂದ)

27/04/2023ರಿಂದ 13ದಿನಗಳ ದೆಹಲಿ,ಆಗ್ರಾ,ಕಾಶಿ, ಅಲಹಾಬಾದ್ ಹಾಗೂ ಚಾರಧಾಮ್ ಯಾತ್ರೆಗಳು 30/06/2023ರಿಂದ 12ದಿನಗಳ ಅಮರನಾಥ್ ವೈಷ್ಣೋದೇವಿ,ವಾಘಬಾರ್ಡರ್. ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್: 8105657052/ 9480182865. (ಷಣ್ಮುಗಾನಂದ)

ಮಾರುತಿ ಟ್ರಾವೆಲ್ಸ್ ಆಂಧ್ರ ತೆಲಂಗಾಣ-4ದಿನ -25.03.23 ತಮಿಳುನಾಡು -ರಾಮೇಶ್ವರಂ -ಕೇರಳ-5ದಿನ -02.04.23 ಗುಜರಾತ್-ಮಹಾರಾಷ್ಟ್ರ-7ದಿನ 09.04.23 ಕಾಶಿ ಯಾತ್ರಾ-ನೇಪಾಳ -16ದಿನ-01.05.23 ವೈಷ್ಣೋದೇವಿ ಪ್ರವಾಸ 15ದಿನ -21.05.23 ಸಂಪರ್ಕಿಸಿ: 9916688569, 9019744707

★11.04.2023 9ದಿನಗಳು★ ಕಾಶಿ,ಗಯಾ ಪ್ರಯಾಗಾ ಪ್ರವಾಸ., 27.04.2023 16/13ದಿನಗಳು ಕಾಶಿ,ನೇಪಾಳ,ಮುಕ್ತಿನಾಥ, ಗಜೇಂದ್ರಮೋಕ್ಷಾ,ಜನಕಪುರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367

8 ದಿನಗಳ ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ ಪ್ರವಾಸ. 12 ದಿನಗಳ ಚಾರ್‌ಧಾಮ್ ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ ಬೆಂಗಳೂರು. 9980270467, 9740228186

EDUCATION CORNER

ತಿರುಮಲ ಅಕಾಡೆಮಿ, ವಿಜಯನಗರ ಬೆಂಗಳೂರು
KAS / PSI / PDO / FDA / PC
ಉಚಿತ Test Series ಮತ್ತು ಕಾರ್ಯಾಗಾರ
ದಿನಾಂಕ 26-02-2023, ಭಾನುವಾರ
Test ಬೆಳಗ್ಗೆ 10-00ಕ್ಕೆ ಕಾರ್ಯಾಗಾರ 11.30ಕ್ಕೆ
ಒಟ್ಟು 18 ವಿಷಯಗಳ ತರಬೇತಿಯ ಶುಲ್ಕ ರೂ.15,000/-
ಬಂಪರ್ ಆಫರ್ ಶೇ.50ರಷ್ಟು ರಿಯಾಯತಿ ರೂ.7,500/-
ದಾಖಲಾತಿಗೆ ಕೊನೆಯ ದಿನಾಂಕ ಫೆಬ್ರವರಿ 28, 2023
ತರಬೇತಿಯು ಮಾರ್ಚ್ 6 ರಿಂದ ಪ್ರಾರಂಭ
ಶಾಖೆಗಳು : ವಿಜಯನಗರ ಬೆಂಗಳೂರು & ಕೋಲಾರ
ಮೊ. : 8197895511 / 8123443479

PROPERTY CORNER

Rs. 3.3 Lakhs only
100% FREE REGISTRATION
ನೋಂದಣಿಗೆ ಮತ್ತು ಮನೆ ಕಟ್ಟಲು ಸಿದ್ಧವಿರುವ ಸೈಟುಗಳು ಮಾರಾಟಕ್ಕಿವೆ.
JUST PAY 10,000/- FOR BOOKING
ನೆಲಮಂಗಲ ರೈಲ್ವೆ ಗೊಲ್ಲಹಳ್ಳಿ ಹತ್ತಿರ
8884055599

ಶಿಕ್ಷಣ

Training

ಹಿರಿಯ ನಾಗರೀಕರ ಆರೈಕೆ GERIATRIC CARE GIVERS ಭಾರತ ಸರ್ಕಾರದ ಮೂರು ತಿಂಗಳ ಸರ್ಟಿಫಿಕೇಟ್ ಉಚಿತತರಭೇತಿಗೆ ಎಸ್ ಎಸ್ ಎಲ್ ಸಿ ಉತ್ತೀರ್ಣರಾದ 18 ವರ್ಷ ಮೇಲ್ಪಟ್ಟವರಿಂದ ಅರ್ಜಿ ಆಹ್ವಾನಿಸಲಾಗಿದೆ. ಉಚಿತ ಊಟ ವಾಸ್ತವ್ಯ ಕಲ್ಪಿಸಲಾಗುವುದು, ಮಾರ್ಚ್ 1 ಕಡೆ ದಿನಾಂಕ ಸಂಪರ್ಕಿಸಿ: ಶ್ರೀ ಶತಶೃಂಗ ವಿಧ್ಯಾಸಂಸ್ಥೆ(ರಿ). ಮೇಟಿಪಾಳ್ಯ, ಬೆಂಗಳೂರು. 9945250111. www.saissvs.org

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಭವಿಷ್ಯ

Astrology

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ವೈವಾಹಿಕ

Grooms Wanted

Telugu

ALLIANCE INVITED from qualified, employed, unmarried bangalore settled boy for telugu yadava bangalore girl 42 yrs/ 5'4' MCA unmarried, nw, nv. whatsapp 9380397152.

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ಎನ್‌ಸಿಎಲ್‌ಎಟಿಗೆ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಪುನೀತ್ ಮೇಲ್ಮನವಿ

ಜೀ: ದಿವಾಳಿ ಪ್ರಕ್ರಿಯೆಗೆ ತಡೆ

ನವದೆಹಲಿ (ಪಿಟಿಐ): ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಲಿಮಿಟೆಡ್ ವಿರುದ್ಧದ ದಿವಾಳಿ ಪ್ರಕ್ರಿಯೆಗೆ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯು (ಎನ್‌ಸಿಎಲ್‌ಎಟಿ) ಶುಕ್ರವಾರ ತಡೆಯಾಜ್ಞೆ ನೀಡಿದೆ.

ಇಂಡಸ್‌ಇಂಡ್ ಬ್ಯಾಂಕ್ ಮನವಿಯಂತೆ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಮುಂಬೈ ಪೀಠವು ದಿವಾಳಿ ಪ್ರಕ್ರಿಯೆ ಜಾರಿಗೊಳಿಸಲು ಒಪ್ಪಿಗೆ ನೀಡಿತ್ತು. ಅಲ್ಲದೆ, ದಿವಾಳಿ ಪ್ರಕ್ರಿಯೆ ಪೂರ್ಣಗೊಳಿಸಲು ಸಂಜೀವ್ ಕುಮಾರ್ ಜಲನ್ ಅವರನ್ನು ನೇಮಕ ಮಾಡಿತ್ತು. ಇದಕ್ಕೆ ತಡೆ ನೀಡುವಂತೆ ಕೋರಿ ಜೀ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಪುನೀತ್ ಗೋಯೆಂಕಾ ಅವರು ಎನ್‌ಸಿಎಲ್‌ಎಟಿಗೆ ಮನವಿ ಮಾಡಿದ್ದರು.

ಈ ಸಂಬಂಧ ಮೇಲ್ಮನವಿ ಪ್ರಾಧಿಕಾರವು ಇಂಡಸ್‌ಇಂಡ್ ಬ್ಯಾಂಕ್ ಮತ್ತು ದಿವಾಳಿ ಪ್ರಕ್ರಿಯೆಯನ್ನು ನಿರ್ವಹಣೆ ಮಾಡುವ ಅಧಿಕಾರಿಗೆ ನೋಟಿಸ್ ನೀಡಿದ್ದು, ಎರಡು ವಾರಗಳ ಒಳಗಾಗಿ ಪ್ರಕ್ರಿಯೆ ನೀಡುವಂತೆ ಸೂಚನೆ ನೀಡಿದೆ. ಎರಡೂ ಪಕ್ಷದವರ ಪ್ರಕ್ರಿಯೆಯ ಕುರಿತು ಸಮಗ್ರವಾದ ವಿಚಾರಣೆ ನಡೆಸುವ ಅಗತ್ಯ ಇದೆ ಎಂದು ಪ್ರಾಧಿಕಾರವು ಅಭಿಪ್ರಾಯಪಟ್ಟಿದೆ.

ಮಾರ್ಚ್ 29ರಂದು ಅಂತಿಮ ವಿಚಾರಣೆ ನಡೆಸಲಾಗುವುದು. ಇದೇ ವೇಳೆ, ಫೆಬ್ರುವರಿ 22ರಂದು ಎನ್‌ಸಿಎಲ್‌ಟಿ ನೀಡಿರುವ ಆದೇಶಕ್ಕೆ ತಡೆ ಇರಲಿದೆ ಎಂದು ಎನ್‌ಸಿಎಲ್‌ಎಟಿ ತಿಳಿಸಿದೆ.

ಮೇಲ್ಮನವಿ ಪ್ರಾಧಿಕಾರವು ತೆಗೆದುಕೊಂಡಿರುವ ನಿರ್ಧಾರವನ್ನು ನಾವು ಗೌರವಿಸುತ್ತೇವೆ. ನಮ್ಮೆಲ್ಲಾ ಷೇರುದಾರರ ಹಿತರಕ್ಷಣೆ ಮಾಡಲು ಬದ್ಧರಾಗಿದ್ದೇವೆ ಎಂದು ಗೋಯೆಂಕಾ ಪ್ರತಿಕ್ರಿಯೆ ನೀಡಿದ್ದಾರೆ.

ಎಸ್ಸೆಲ್ ಸಮೂಹದ ಸಿಟಿ ನೆಟ್‌ವರ್ಕ್ಸ್ ಕಂಪನಿಯು ಇಂಡಸ್‌ಇಂಡ್ ಬ್ಯಾಂಕ್‌ಗೆ ₹89 ಕೋಟಿ ಸಾಲ ಬಾಕಿ ಉಳಿಸಿಕೊಂಡಿದೆ. ಈ ಸಾಲಕ್ಕೆ ಜೀ ಕಂಪನಿಯು ಜಾಮೀನುದಾರ ಆಗಿದೆ. ಆದರೆ, ಸಾಲಕ್ಕೆ ಸಂಬಂಧಿಸಿದಂತೆ ಯಾವುದೇ ವಿಶೇಷ ಖಾತರಿ ನೀಡಿಲ್ಲ. ಒಂದೊಮ್ಮೆ ಸಿಟಿ ನೆಟ್‌ವರ್ಕ್ಸ್ ಒಂದು ಕಂತಿನ ಬಡ್ಡಿಯನ್ನು ಪಾವತಿಸಲು ವಿಫಲವಾದರೆ ಮಾತ್ರ ಅದಕ್ಕೆ ಹೊಣೆಗಾರ ಆಗಲು ಒಪ್ಪಿಗೆ ನೀಡಿರುವುದಾಗಿ ಜೀ ಹೇಳಿದೆ.

ಸೋನಿ ಪಿಕ್ಚರ್ಸ್ ನೆಟ್‌ವರ್ಕ್ಸ್ ಇಂಡಿಯಾದೊಂದಿಗೆ ವಿಲೀನ ಆಗುತ್ತಿರುವ ಜೀ ಕಂಪನಿಗೆ ಮೇಲ್ಮನವಿ ಪ್ರಾಧಿಕಾರದ ಆದೇಶವು ತಾತ್ಕಾಲಿಕವಾಗಿ ನೆಮ್ಮದಿ ನೀಡಿದಂತಾಗಿದೆ.

ಏಷ್ಯಾದಲ್ಲಿ ರೋಡ್ ಷೋ ನಡೆಸಲಿರುವ ಅದಾನಿ ಸಮೂಹ

ನ್ಯೂಯಾರ್ಕ್ (ರಾಯಿಟರ್ಸ್): ಅದಾನಿ ಸಮೂಹವು ನಿಗದಿತ ಅವಧಿಗೆ ನಿಶ್ಚಿತ ಮೊತ್ತ ಪಾವತಿಸುವ ಭರವಸೆಯನ್ನು ನೀಡಲು ಏಷ್ಯಾದಲ್ಲಿ ಮುಂದಿನ ವಾರ ರೋಡ್ ಷೋ ನಡೆಸಲಿದೆ.

ಅಮೆರಿಕದ ಸಂಶೋಧನಾ ಸಂಸ್ಥೆ ಹಿಂಡನ್‌ಬರ್ಗ್ ವರದಿಯ ಪರಿಣಾಮಗಳ ಬಳಿಕ ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸುವ ಉದ್ದೇಶದಿಂದ ಸಮೂಹವು ಈ ಕ್ರಮಕ್ಕೆ ಮುಂದಾಗಿದೆ.

ಫೆಬ್ರುವರಿ 27ರಂದು ಸಿಂಗಪುರ, 28ರಂದು ಹಾಂಗ್‌ಕಾಂಗ್ ಮತ್ತು ಮಾರ್ಚ್ 1ರಂದು ರೋಡ್ ಷೋ ನಡೆಸಲು ನಿರ್ಧರಿಸಲಾಗಿದ್ದು, ಸಮೂಹದ ಮುಖ್ಯ ಹಣಕಾಸು ಅಧಿಕಾರಿ ಜುಗೇಶಿಂದರ್ ಸಿಂಗ್ ಅವರನ್ನೂ ಒಳಗೊಂಡು ಕಾರ್ಯನಿರ್ವಾಹಕ ಅಧಿಕಾರಿಗಳು ಇದರಲ್ಲಿ ಭಾಗವಹಿಸಲಿದ್ದಾರೆ.

ಹಿಂಡನ್‌ಬರ್ಗ್ ವರದಿ ಪ್ರಕಟವಾದ ನಂತರದಲ್ಲಿ ಅದಾನಿ ಸಮೂಹದ ಏಳು ಕಂಪನಿಗಳ ಮಾರುಕಟ್ಟೆ ಮೌಲ್ಯವು ಜನವರಿ 24 ರಿಂದ ಈವರೆಗೆ ₹11.62 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.

ಅದಾನಿ ಸಮೂಹದ ಬಾಂಡ್ ಹೊಂದಿರುವ ಹೂಡಿಕೆದಾರರ ಆತಂಕ ನಿವಾರಿಸುವ ನಿಟ್ಟಿನಲ್ಲಿ ಈಗಾಗಲೇ ಮಾತುಕತೆ ನಡೆಸಿದೆ.

ಎಲ್ಲಾ ಸಾಲಗಳನ್ನು ಅವಧಿಗೂ ಮೊದಲೇ ತೀರಿಸುವ ಮತ್ತು ಹಣಕಾಸು ಯೋಜನೆಯನ್ನು ಕಾರ್ಯನಿರ್ವಾಹಕ ಅಧಿಕಾರಿಗಳ ತಂಡವು ಹೂಡಿಕೆದಾರರ ಮುಂದಿಟ್ಟಿದ್ದಾರೆ.

ಬರ್ಕ್ಲೇಸ್, ಬಿಎನ್‌ಪಿ ಪಾರಿಬಾಸ್, ಡಿಬಿಎಸ್ ಬ್ಯಾಂಕ್, ಡಾಯಿಷ್ ಬ್ಯಾಂಕ್, ಎಮಿರೈಟ್ಸ್ ಎನ್‌ಬಿಡಿ ಕ್ಯಾಪಿಟಲ್, ಐಎನ್‌ಜಿ, ಐಎಂಐ–ಇಂಟೆಸಾ ಸಾನ್‌ಪೋಲೊ, ಎಂಯುಎಫ್‌ಜಿ, ಮಿಜುವಾ, ಎಸ್‌ಎಂಬಿಸಿ ನಿಕೊ ಮತ್ತು ಸ್ಟ್ಯಾಂಡರ್ಡ್ ಚಾರ್ಟರ್ಡ್ ಬ್ಯಾಂಕ್‌ಗಳು ಈ ರೋಡ್ ಷೋ ಆಯೋಜಿಸುತ್ತಿವೆ.

ಐಸಿಐಸಿಐ ಬ್ಯಾಂಕಿನಲ್ಲಿ ಅವ್ಯವಹಾರ: ಸಹಾಯಕ ವ್ಯವಸ್ಥಾಪಕ ಬಂಧನ

ಪ್ರಜಾವಾಣಿ ವಾರ್ತೆ

ಹಾವೇರಿ: ನಗರದ ವಿದ್ಯಾನಗರದ ಹಳೆ ಪಿ.ಬಿ. ರಸ್ತೆಯಲ್ಲಿರುವ ಐಸಿಐಸಿಐ ಬ್ಯಾಂಕಿನ ಶಾಖೆಯಲ್ಲಿ ₹2.36 ಕೋಟಿ ಅವ್ಯವಹಾರ ಆಗಿದೆ ಎಂದು ಆರೋಪಿಸಲಾಗಿದ್ದು, ಬ್ಯಾಂಕಿನ ಸಹಾಯಕ ವ್ಯವಸ್ಥಾಪಕ ವೀರೇಶ ಕಾಶಿಮಠ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಗ್ರಾಹಕರು ಠೇವಣಿ ಇಟ್ಟಿದ್ದ ಹಣವನ್ನು ಸಹಾಯಕ ವ್ಯವಸ್ಥಾಪಕ ವೀರೇಶ ತನ್ನ ಸ್ನೇಹಿತನ ಬ್ಯಾಂಕ್ ಖಾತೆಗೆ ಕಳೆದ ವರ್ಷ ಆಗಸ್ಟ್ 20ರಿಂದ ಇಲ್ಲಿಯವರೆಗೆ ಹಂತಹಂತವಾಗಿ ಒಟ್ಟು ₹2.36 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆ. ನಂತರ ಆ ಹಣವನ್ನು ಬಳಸಿಕೊಂಡು ಆನ್‌ಲೈನ್ ಗೇಮ್ ಆಡುತ್ತಿದ್ದರು' ಎಂದು ಹೇಳಲಾಗುತ್ತಿದೆ.

ಕೋಟ್ಯಂತರ ರೂಪಾಯಿ ಅಕ್ರಮವಾಗಿ ವರ್ಗಾವಣೆಯಾಗಿರುವುದು ಗಮನಕ್ಕೆ ಬರುತ್ತಿದ್ದಂತೆ ಬ್ಯಾಂಕ್ ಆಡಳಿತ ಮಂಡಳಿ ಇಲ್ಲಿನ ಶಹರ ಠಾಣೆ ಪೊಲೀಸರಿಗೆ ದೂರು ನೀಡಿತ್ತು.

ಸಿಐಡಿ ತನಿಖೆ: '₹2 ಕೋಟಿಗೂ ಹೆಚ್ಚಿನ ಮೊತ್ತ ಅವ್ಯವಹಾರ ಆರೋಪದ ಪ್ರಕರಣವಾದ್ದರಿಂದ ಈ ಕುರಿತು ಸಿಐಡಿ ತನಿಖೆ ಮಾಡುತ್ತದೆ. ಒಂದೆರಡು ದಿನಗಳಲ್ಲಿ ಪ್ರಕರಣ ಸಿಐಡಿಗೆ ವರ್ಗಾವಣೆಯಾಗಲಿದೆ' ಎಂದು ಎಸ್‌ಪಿ ಡಾ.ಶಿವಕುಮಾರ ಗುಣಾರೆ ತಿಳಿಸಿದರು.

ಮದ್ದೂರಿನ ಶಿಂಷಾ ಸಹಕಾರ ಬ್ಯಾಂಕ್‌ಗೆ ಆರ್‌ಬಿಐ ನಿರ್ಬಂಧ

ಮುಂಬೈ (ಪಿಟಿಐ): ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಮದ್ದೂರಿನ ಶಿಂಷಾ ಸಹಕಾರ ಬ್ಯಾಂಕ್ ನಿಯಮಿತದ ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ಬಂಧ ಹೇರಿದೆ.

ಬ್ಯಾಂಕ್‌ನ ಹಣಕಾಸು ಸ್ಥಿತಿ ಹದಗೆ-ಡುತ್ತಿರುವ ಕಾರಣ ಆರ್‌ಬಿಐ ಈ ತೀರ್ಮಾನ ಕೈಗೊಂಡಿದೆ. ಆರ್‌ಬಿಐ ಅನುಮತಿ ಇಲ್ಲದೆ ಈ ಹೊಸದಾಗಿ ಸಾಲ ಕೊಡು ವಂತಿಲ್ಲ, ಹೊಸದಾಗಿ ಹೂಡಿಕೆ ಮಾಡುವಂತಿಲ್ಲ, ಹೊಸದಾಗಿ ಠೇವಣಿ ಸ್ವೀಕರಿಸುವಂತೆಯೂ ಇಲ್ಲ.

ಈ ನಿರ್ಬಂಧಗಳು ಆರು ತಿಂಗಳವರೆಗೆ ಜಾರಿಯಲ್ಲಿ ಇರಲಿವೆ ಎಂದು ಆರ್‌ಬಿಐ ಪ್ರತ್ಯೇಕ ಹೇಳಿಕೆಯಲ್ಲಿ ತಿಳಿಸಿದೆ.

ಬ್ಯಾಂಕ್‌ನ ಅರ್ಹ ಠೇವಣಿದಾರರು ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮವು (ಡಿಐಸಿಜಿಸಿ) ನೀಡುವ ವಿಮಾ ಸೌಲಭ್ಯಕ್ಕೆ ಅರ್ಹರಾಗುತ್ತಾರೆ ಎಂದು ಆರ್‌ಬಿಐ ಹೇಳಿದೆ. ಅಂದರೆ, ಇಷ್ಟು ಪ್ರಮಾಣದ ಗ್ರಾಹಕರಿಗೆ ₹ 5 ಲಕ್ಷದವರೆಗಿನ ಠೇವಣಿಗೆ ವಿಮೆಯ ರಕ್ಷೆ ಇರಲಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	650-700
ಜರಡಿ	800 - 900
ಹರಕಿದ್ದು	1250-1300
ಹಸಿರು ಸಾಧಾರಣ	900-1,000
ಹಸಿರು ಉತ್ತಮ	1300-1400
ಹಸಿರು ಅತಿ ಉತ್ತಮ	1500-1550
ಕಾಳು ಮೆಣಸು	480
ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಹೊಸನಗರ	
ಬಿಳಿಗೋಟು	22699-24199
ಚಾಲಿ	30699-34389
ಕೆಂಪುಗೋಟು	31899-34569
ರಾಶಿ	41309-46879
ಸಿಪ್ಪೆಗೋಟು	16099-16099
ಕುಮಟ	
ಚಿಪ್ಪು	27509-31789
ಕೋಕ	18089-29999
ಹಳೆಚಾಲಿ	36019-39119
ಹೊಸಚಾಲಿ	34569-36409
ಪುತ್ತೂರು	
ಹೊಸತು	32000-38000
ಶಿವಮೊಗ್ಗ	
ಬೆಟ್ಟೆ	46499-52559
ಗೊರಬಲು	17009-33650
ರಾಶಿ	37799-45909
ಸರಕು	53900-82906
ಸಿದ್ದಾಪುರ	
ಬಿಳಿಗೋಟು	26789-31799
ಚಾಲಿ	35799-38269
ಕೋಕ	26099-31399
ಹೊಸಚಾಲಿ	32299-36899
ಕೆಂಪುಗೋಟು	27869-38389
ರಾಶಿ	42899-45749
ತಟ್ಟಿಬೆಟ್ಟೆ	37689-42929
ಶಿರಸಿ	
ಬೆಟ್ಟೆ	32199-42918
ಬಿಳಿಗೋಟು	22159-33009
ಚಾಲಿ	30599-40701
ಕೆಂಪುಗೋಟು	26296-36599
ರಾಶಿ	31299-45699
ಯಲ್ಲಾಪುರ	
ಬಿಳಿಗೋಟು	24212-32769
ಹಳೆಚಾಲಿ	36399-40869
ಹೊಸಚಾಲಿ	34169-37659
ಕೋಕ	18099-31212
ಕೆಂಪುಗೋಟು	28899-34969
ರಾಶಿ	42899-49735
ತಟ್ಟಿಬೆಟ್ಟೆ	38320-44202

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	16000	15850	193.35 ಸೆಂಟ್ಸ್
ಎಸಿ	7900	7700	7000	
ಆರ್‌ಪಿ	11250	11300	10900	ಲಂಡನ್
ಆರ್‌ಸಿ	5430	208 on OT	5225	2205 ಡಾಲರ್ಸ್

ಏರ್ ಇಂಡಿಯಾ: 5,100 ನೇಮಕ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯು ಈ ವರ್ಷದಲ್ಲಿ 4,200 ಸಿಬ್ಬಂದಿ ಮತ್ತು 900 ಪೈಲಟ್‌ಗಳನ್ನು ನೇಮಿಸಿಕೊಳ್ಳಲಿದೆ.

ಟಾಟಾ ಸಮೂಹದ ಒಡೆತನದಲ್ಲಿ ಇರುವ ಕಂಪನಿಯು ತನ್ನ ಕಾರ್ಯಾ-ಚರಣೆಯನ್ನು ವಿಸ್ತರಿಸುತ್ತಿದ್ದು, ಇದರ ಭಾಗವಾಗಿ ಈ ನೇಮಕ ಮಾಡಿಕೊಳ್ಳು-ತ್ತಿದೆ.

ಹೊಸ ವಿಮಾನಗಳನ್ನು ಖರೀದಿ ಮಾಡಿರುವುದು, ದೇಶಿ ಮತ್ತು ಅಂತ-ರರಾಷ್ಟ್ರೀಯ ಕಾರ್ಯಾಚರಣೆಯನ್ನು ವಿಸ್ತರಣೆ ಮಾಡುತ್ತಿರುವುದರಿಂ-ದಾಗಿ ಈ ನೇಮಕಾತಿಗೆ ಯೋಜನೆ ರೂಪಿಸಿರುವುದಾಗಿ ಕಂಪನಿಯು ಶುಕ್ರವಾರ ಪ್ರಕಟಣೆಯಲ್ಲಿ ತಿಳಿಸಿದೆ.

2022ರ ಮೇ ನಿಂದ 2023ರ ಫೆಬ್ರುವರಿ ಅವಧಿಯಲ್ಲಿ ಕಂಪನಿಯು 1,900 ಸಿಬ್ಬಂದಿಯನ್ನು ನೇಮಿಸಿಕೊಂಡಿದೆ. ಇವರಲ್ಲಿ 1,100 ಸಿಬ್ಬಂದಿಗೆ ತರಬೇತಿ ನೀಡಲಾಗಿದೆ ಎಂದು ಅದು ಹೇಳಿದೆ.

ಮಾರುತಿ ಇಗ್ನಿಸ್ ಬೆಲೆ ₹27 ಸಾವಿರದವರೆಗೆ ಹೆಚ್ಚಳ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ತನ್ನ ಪ್ರೀಮಿಯಂ ಕಾಂಪ್ಯಾಕ್ಟ್ ಮಾದರಿ ಇಗ್ನಿಸ್ ಮೇಲಿನ ಎಕ್ಸ್ ಷೋರೂಂ ಬೆಲೆಯನ್ನು ₹27 ಸಾವಿರದವರೆಗೆ ಹೆಚ್ಚಳ ಮಾಡಿರುವುದಾಗಿ ಶುಕ್ರವಾರ ಹೇಳಿದೆ.

ಹೊಸ ಬೆಲೆಯು ತಕ್ಷಣದಿಂದ ಜಾರಿಗೆ ಬರಲಿದೆ ಎಂದು ತಿಳಿಸಿದೆ.

ಎಲ್ಲಾ ಅವತರಣಿಕೆಗಳಲ್ಲಿಯೂ ಎಲೆಕ್ಟ್ರಾನಿಕ್ ಮೊಬಿಲಿಟಿ ಪ್ರೊಗ್ರಾಂ (ಇಎಸ್‌ಪಿ) ಮತ್ತು ಹಿಲ್ ಹೋಲ್ಡ್ ಅಸಿಸ್ಟ್ ಸೌಲಭ್ಯಗಳನ್ನು ನೀಡಲಾಗಿದೆ. ಇದರಿಂದಾಗಿ ಗ್ರಾಹಕರಿಗೆ ಹೆಚ್ಚಿನ ಸುರಕ್ಷತೆ ಸಿಗಲಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಸ್ಪೈಸ್ ಜೆಟ್ ಲಾಭ ₹107 ಕೋಟಿ

ನವದೆಹಲಿ (ಪಿಟಿಐ): ಸ್ಪೈಸ್ ಜೆಟ್ ವಿಮಾನಯಾನ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈ-ಮಾಸಿಕದಲ್ಲಿ ₹107 ಕೋಟಿ ನಿವ್ವಳ ಲಾಭ ಗಳಿಸಿದೆ.

ಪ್ರಯಾಣಿಕ ಮತ್ತು ಸರಕು ಸಾಗಣೆ ವಹಿವಾಟಿನಲ್ಲಿ ಉತ್ತಮ ಬೆಳವಣಿಗೆ ಕಂಡಿರುವುದೇ ಲಾಭದಲ್ಲಿ ಹೆಚ್ಚಳಕ್ಕೆ ಕಾರಣ ಎಂದು ಹೇಳಿದೆ. ಕಂಪನಿಯು ಹಿಂದಿನ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ₹23.28 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಇಂಧನ ದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ರೂಪಾಯಿ ಮೌಲ್ಯ ಇಳಿಕೆ ಆಗಿರುವುದು ವಹಿವಾಟಿನ ಮೇಲೆ ಪರಿಣಾಮ ಉಂಟುಮಾಡುತ್ತಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ವಿಶ್ವಸಂಸ್ಥೆ: ಪಾಕಿಸ್ತಾನವನ್ನು ತರಾಟೆಗೆ ತೆಗೆದುಕೊಂಡ ಭಾರತ

ವಿಶ್ವಸಂಸ್ಥೆ (ಪಿಟಿಐ): ಉಕ್ರೇನ್‌ನಲ್ಲಿ ನಡೆಯುತ್ತಿರುವ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ವಿಶೇಷ ಅಧಿವೇಶನದಲ್ಲಿ ಜಮ್ಮು ಮತ್ತು ಕಾಶ್ಮೀರದ ಹೆಸರನ್ನು ಉಲ್ಲೇಖಿಸಿದ್ದಕ್ಕೆ ಭಾರತವು ಪಾಕಿಸ್ತಾನ-ವನ್ನು ತರಾಟೆಗೆ ತೆಗೆದುಕೊಂಡಿದೆ.

'ಪಾಕಿಸ್ತಾನದ ಪ್ರಚೋದನೆ ವಿಷಾದದ ಸಂಗತಿಯಾಗಿದೆ. ಅಲ್ಲದೆ ತಪ್ಪಾದ ನಡೆಯೂ ಆಗಿದೆ' ಎಂದು ಪ್ರತಿಪಾದಿಸಿರುವ ಭಾರತ, 'ಇಸ್ಲಾಮಾಬಾದ್, ಭಯೋತ್ಪಾದಕರಿಗೆ ಸುರಕ್ಷಿತ ಮತ್ತು ನಿರ್ಭೀತ ಆಶ್ರಯ ಒದಗಿಸಿದೆ' ಎಂದು ಟೀಕಿಸಿದೆ.

'ಪಾಕಿಸ್ತಾನದ ಕುಚೇಷ್ಟೆಯ ಪ್ರಚೋದನೆಗಳಿಗೆ ಪ್ರತಿಕ್ರಿಯಿಸದಿರಲು ಭಾರತ ಈ ಬಾರಿ ನಿರ್ಧರಿಸಿದೆ ಎಂಬುದನ್ನು ತಿಳಿಸುವುದಕ್ಕಾಗಿ ನಾನು ಇಂದು ಮಾತನಾಡುತ್ತಿದ್ದೇನೆ. ಈ ಹಿಂದೆ ನಾವು ನೀಡಿರುವ ಹಲವಾರು ಪ್ರತ್ಯುತ್ತರದ ಹಕ್ಕುಗಳನ್ನು ಉಲ್ಲೇಖಿಸುವಂತೆ ಪಾಕಿಸ್ತಾನದ ಪ್ರತಿನಿಧಿಗೆ ಸಲಹೆ ನೀಡುತ್ತೇವೆ' ಎಂದು ವಿಶ್ವಸಂಸ್ಥೆಯ ಭಾರತದ ಕಾಯಂ ಮಿಷನ್ ಕೌನ್ಸಲರ್ ಪ್ರತೀಕ್ ಮಾಥೂರ್ ಅವರು ಹೇಳಿದರು.

ಗುರುವಾರ ನಡೆದ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯ ತುರ್ತು ವಿಶೇಷ ಅಧಿವೇಶನದಲ್ಲಿ ಉಕ್ರೇನ್ ಕುರಿತ ನಿರ್ಣಯದ ಮೇಲೆ ಮತದ ವಿವರಣೆಯನ್ನು ನೀಡುವಾಗ ಪಾಕಿಸ್ತಾನದ ರಾಯಭಾರಿ ಮುನೀರ್ ಅಕ್ರಮ್ ಅವರು ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಉಲ್ಲೇಖಿಸಿದ ನಂತರ ಮಾಥುರ್ ಅವರು ಭಾರತದ ಪ್ರತ್ಯುತ್ತರ ಹಕ್ಕನ್ನು ಚಲಾಯಿಸಿದರು.

ಸಂಕ್ಷಿಪ್ತ ಸುದ್ದಿ

ಭಾರತದಲ್ಲಿದ್ದ ಪ್ರೇಮಿಗಾಗಿ ಚಿನ್ನ ಮಾರಿದ್ದ ಇಕ್ರಾ

ಕರಾಚಿ (ಪಿಟಿಐ): ಪ್ರೇಮಿಗಾಗಿ ನೇಪಾಳದ ಗಡಿ ಮೂಲಕ ಭಾರತದೊಳಗೆ ನುಸುಳಿದ್ದ 16 ವರ್ಷದ ಇಕ್ರಾ ಜೀವನಿ, ಅದಕ್ಕಾಗಿ ಸ್ನೇಹಿತರ ಬಳಿ ಸಾಲ ಪಡೆದಿದ್ದರು ಮತ್ತು ತಮ್ಮ ಬಳಿ ಇದ್ದ ಚಿನ್ನಾಭರಣವನ್ನು ಮಾರಿದ್ದರು ಎಂದು ಆಕೆಯ ಚಿಕ್ಕಪ್ಪ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಪ್ರೇಮಿ ಮುಲಾಯಂ ಸಿಂಗ್ ಜೊತೆ ಅಕ್ರಮವಾಗಿ ನೆಲೆಸಿದ್ದ ಆಕೆಯನ್ನು ಕಳೆದ ತಿಂಗಳು ಬಂಧಿಸಲಾಗಿತ್ತು. ಬಳಿಕ ಭಾನುವಾರ ಗಡಿಪಾರು ಮಾಡಿ ಪಾಕಿಸ್ತಾನ ಸೇನೆಯ ಸುಪರ್ದಿಗೆ ಒಪ್ಪಿಸಲಾಗಿತ್ತು.

'ಇಕ್ರಾ ಅವರ ತಂದೆ, ತಾಯಿ ಮತ್ತು ಚಿಕ್ಕಪ್ಪ ಲಾಹೋರ್‌ಗೆ ಬಂದು ಆಕೆಯನ್ನು ಮನೆಗೆ ಕರೆದುಕೊಂಡು ಹೋಗಿದ್ದಾರೆ. ಮುಲಾಯಂ ಸಿಂಗ್ ತನ್ನ ಹೆಸರನ್ನು ಸಮೀರ್ ಅನ್ಸಾರಿ ಎಂದು ಪರಿಚಯ ಮಾಡಿಕೊಂಡಿದ್ದ. ಅಲ್ಲದೆ ತಾನು ಸಾಫ್ಟ್‌ವೇರ್ ಎಂಜಿನಿಯರ್ ಎಂದು ಇಕ್ರಾ ಬಳಿ ಹೇಳಿಕೊಂಡಿದ್ದ' ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ರಾಮಸ್ವಾಮಿ ಅಸಾಧಾರಣ ಶಕ್ತಿ ಹೊಂದಿದ್ದಾರೆ'

ವಾಷಿಂಗ್ಟನ್ (ಪಿಟಿಐ): 'ವಿವೇಕ್ ರಾಮಸ್ವಾಮಿ ಅವರು ಅಸಾಧಾರಣ ಶಕ್ತಿ ಹೊಂದಿದ್ದು, ಪ್ರತಿಸ್ಪರ್ಧಿಗಳೊಂದಿಗೆ ಅತ್ಯುತ್ತಮವಾಗಿ ವಾದ ಮಾಡಬಲ್ಲ ವಾಗ್ಮಿ ಆಗಿದ್ದಾರೆ' ಎಂದು 'ದಿ ವಾಲ್ ಸ್ಟ್ರೀಟ್ ಜರ್ನಲ್' ಸಂಪಾದಕೀಯ ಮಂಡಳಿ ಹೇಳಿದೆ.

'ಚುನಾವಣೆ ವೇಳೆ ಬೆಂಬಲಯಾಚಿಸಿ ವೇದಿಕೆಯಲ್ಲಿ ಚರ್ಚೆಗಿಳಿದರೆ ಅವರು, ಅದ್ಭುತವಾಗಿ ತಮ್ಮ ಯೋಚನೆಗಳನ್ನು ಅಭಿವ್ಯಕ್ತಗೊ-ಳಿಸುವರು. ಅವರು ತಮ್ಮ 'ವೋಕ್, ಐಎನ್‌ಸಿ.' ಪುಸ್ತಕದ ಮೂಲಕ ಈಗಾಗಲೇ ಪ್ರಚಾರದಲ್ಲಿ ತೊಡಗಿದ್ದಾರೆ' ಎಂದು ಅದು ತಿಳಿಸಿದೆ.

ಭಾರತ ಮೂಲದ ಅಮೆರಿಕ ನಿವಾಸಿ, ಉದ್ಯಮಿ ವಿವೇಕ್ ರಾಮಸ್ವಾಮಿ ಅವರು 2024ರ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸುವುದಾಗಿ ಇತ್ತೀಚೆಗೆ ಘೋಷಿಸಿದ್ದರು.

ಇಂಡೋನೇಷ್ಯಾ: 6.3ರ ತೀವ್ರತೆಯ ಪ್ರಬಲ ಭೂಕಂಪ

ಜಕಾರ್ತ: ಶುಕ್ರವಾರ ಬೆಳಗ್ಗೆ ಪೂರ್ವ ಇಂಡೋನೇಷ್ಯಾದ ಉತ್ತರ ಮಲುಕು ಎಂಬಲ್ಲಿ 6.3 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ, ಆದರೆ ಯಾವುದೇ ಸಾವು– ನೋವು ಅಥವಾ ಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂಕಂಪವು ಶುಕ್ರವಾರ ನಸುಕಿನ 3 ಗಂಟೆ 2 ನಿಮಿಷದ ಸಂದರ್ಭದಲ್ಲಿ ಸಂಭವಿಸಿದೆ. ಭೂಕಂಪದಿಂದಾಗಿ ಉತ್ತರ ಸುಲವೆಸಿ ಪ್ರಾಂತ್ಯದಲ್ಲಿಯೂ ಭೂಮಿ ಕಂಪಿಸಿದ ಅನುಭವವಾಗಿದೆ.

ಉಕ್ರೇನ್: ವರ್ಷ ಕಳೆದರೂ ನಿಲ್ಲದ ಸಮರ

ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು 2022ರ ಫೆಬ್ರುವರಿ 24ರಂದು ಉಕ್ರೇನ್ ಮೇಲೆ ದಾಳಿ ಆರಂಭಿಸಿದಾಗ ಯುದ್ಧವು ಒಂದು ವರ್ಷ ಕಳೆದರೂ ನಿಲ್ಲದು ಎಂಬುದರ ಕಲ್ಪನೆ ಯಾರಿಗೂ ಇರಲಿಲ್ಲ. ಉಕ್ರೇನ್‌ಗೆ ಹೋಲಿಸಿದರೆ ರಷ್ಯಾ ಬಹುದೊಡ್ಡ ಸೇನಾ ಶಕ್ತಿ. ರಷ್ಯಾ ಮುಂದೆ ಅಲ್ಪ ಕಾಲ ಹಿಡಿದು ನಿಲ್ಲುವುದೂ ಉಕ್ರೇನ್‌ಗೆ ಕಷ್ಟವಾಗಬಹುದು ಎಂದೇ ಜಗತ್ತು ಭಾವಿಸಿತ್ತು. ಆದರೆ, ಎಲ್ಲ ಲೆಕ್ಕಾಚಾರಗಳನ್ನೂ ತಲೆ ಕೆಳಗೆ ಮಾಡಿ ಉಕ್ರೇನ್ ಯುದ್ಧವನ್ನು ಎದುರಿಸಿದೆ. ಆದರೆ, ಅಪಾರ ಕಷ್ಟ ನಷ್ಟವನ್ನು ಅನುಭವಿಸಿದೆ. ರಷ್ಯಾ ಭಾಗದಲ್ಲಿಯೂ ನಷ್ಟ ಉಂಟಾಗಿದೆ.

ಯುದ್ಧ ಕೊನೆಯಾಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಸಾವಿರಾರು ಮಂದಿ ಯುದ್ಧದಲ್ಲಿ ಬಲಿಯಾಗಿದ್ದಾರೆ. ಲಕ್ಷಾಂತರ ಮಂದಿ ಮನೆ ತೊರೆದು ನಿರಾಶ್ರಿತರಾಗಿದ್ದಾರೆ. ಕೋಟ್ಯಂತರ ಡಾಲರ್ ಮೌಲ್ಯದ ಆಸ್ತಿ ನಷ್ಟವಾಗಿದೆ.

ಉಕ್ರೇನ್‌ನ ಹಲವು ಪ್ರದೇಶಗಳನ್ನು ರಷ್ಯಾ ಸೇನೆಯು ವಶಕ್ಕೆ ಪಡೆದಿದೆ. ಆದರೆ ಅವುಗಳಲ್ಲಿ ಕೆಲವು ಪ್ರದೇಶಗಳನ್ನು ಮರಳಿ ವಶಕ್ಕೆ ಪಡೆಯುವಲ್ಲಿ ಉಕ್ರೇನ್ ಯಶಸ್ವಿಯಾಗಿದೆ. ಅಮೆರಿಕ ಮತ್ತು ಪಶ್ಚಿಮದ ದೇಶಗಳು ಉಕ್ರೇನ್‌ಗೆ ನಿರಂತರವಾಗಿ ನೆರವು ನೀಡಿವೆ ಮತ್ತು ಶಸ್ತ್ರಾಸ್ತ್ರ ಪೂರೈಸಿವೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ರಷ್ಯಾ ಆಕ್ರಮಣದ ನಡುವೆಯೂ ದೇಶ ತೊರೆಯಲು ನಿರಾಕರಿಸಿದ್ದಾರೆ. ಹೋರಾಟಕ್ಕೆ ಜನರನ್ನು ಸಂಘಟಿಸುವಲ್ಲಿ ಅವರು ಮುಂಚೂಣಿಯಲ್ಲಿ ನಿಂತು ಮಹತ್ವದ ಪಾತ್ರ ವಹಿಸಿದ್ದಾರೆ. ಮಿತ್ರ ದೇಶಗಳು ಸದಾ ಸೇನಾ ನೆರವು ನೀಡುವಂತೆಯೂ ನೋಡಿಕೊಂಡಿದ್ದಾರೆ.

ಯುದ್ಧದ ಪರಿಣಾಮಗಳು ಜಾಗತಿಕ ಮಟ್ಟದಲ್ಲಿ ಪ್ರತಿಧ್ವನಿಸಿವೆ. ಮೈತ್ರಿಕೂಟಗಳು ಮರುರೂಪಿತವಾಗಿವೆ ಮತ್ತು ಬಲಗೊಂಡಿವೆ. ಧಾನ್ಯಗಳಿಂದ ಹಿಡಿದು ಪೆಟ್ರೋಲಿಯಂ ಉತ್ಪನ್ನಗಳ ವರೆಗೆ ಎಲ್ಲದರ ಮೇಲೆಯೂ ಯುದ್ಧದ ಪ್ರತಿಕೂಲ ಪರಿಣಾಮ ಉಂಟಾಗಿದೆ. ಯುರೋಪ್‌ನ ದೇಶಗಳು ರಷ್ಯಾದಿಂದ ಪೆಟ್ರೋಲಿಯಂ ಉತ್ಪನ್ನ ಆಮದು ಮಾಡಿಕೊಳ್ಳುವುದನ್ನು ನಿಲ್ಲಿಸಿವೆ. ನ್ಯಾಟೊ ಸಂಘಟನೆಯು ಹೆಚ್ಚು ಸಕ್ರಿಯಗೊಂಡಿದೆ. ಸ್ವೀಡನ್ ಮತ್ತು ಫಿನ್ಲೆಂಡ್ ದೇಶಗಳು ನ್ಯಾಟೊ ಸದಸ್ಯತ್ವ ಪಡೆದುಕೊಳ್ಳುವ ಸಾಧ್ಯತೆ ಇದೆ. ಚೀನಾವು ಯುದ್ಧಕ್ಕೆ ಸಂಬಂಧಿಸಿ ಹೆಚ್ಚು ಎಚ್ಚರಿಕೆಯ ಹೆಜ್ಜೆ ಇರಿಸಿದೆ. ರಷ್ಯಾ ಜೊತೆಗಿನ ಸಂಬಂಧಕ್ಕೆ ಹಾನಿ ಆಗದಂತೆ ನೋಡಿಕೊಂಡಿದ್ದರೂ ಶಾಂತಿ ಸ್ಥಾಪನೆಯಾಗಬೇಕು ಎಂದು ಕರೆ ಕೊಟ್ಟಿದೆ.

ರಷ್ಯಾ ಹೆಚ್ಚು ಹೆಚ್ಚು ಏಕಾಂಗಿಯಾಗುತ್ತಾ ಸಾಗಿದೆ. ರಷ್ಯಾ ಸೇನೆಯು ಯುದ್ಧ ರಂಗದಲ್ಲಿ ಹಲವು ಬಾರಿ ಭಾರಿ ಸಂಕಷ್ಟಕ್ಕೆ ಒಳಗಾಗಿದೆ. ಆದರೆ, ರಷ್ಯಾ ಸಾಮ್ರಾಜ್ಯವನ್ನು ಮರಳಿ ಕಟ್ಟುವ ಇಚ್ಛೆ ಹೊಂದಿರುವ ಪುಟಿನ್ ಅವರು ಯುದ್ಧದಿಂದ ದೂರ ಸರಿಯುವ ಲಕ್ಷಣಗಳು ಕಾಣಿಸುತ್ತಿಲ್ಲ. ಪುಟಿನ್ ಅವರು ಈ ಯುದ್ಧವನ್ನು ಪಶ್ಚಿಮದ ದೇಶಗಳ ಜೊತೆಗಿನ ಸಂಘರ್ಷ ಎಂಬಂತೆ ನೋಡುತ್ತಿದ್ದಾರೆ.

ರಷ್ಯಾ–ಉಕ್ರೇನ್ ಯುದ್ಧ ಆರಂಭವಾಗಿ ವರ್ಷವಾದ ಸಂದರ್ಭದಲ್ಲಿ, ಟೋಕಿಯೊದ ಯುಎನ್ ವಿಶ್ವವಿದ್ಯಾಲಯದ ಹೊರಭಾಗದಲ್ಲಿ ಜನರು ಶುಕ್ರವಾರ ಮೊಂಬತ್ತಿ ಹಚ್ಚಿ, ಯುದ್ಧದಲ್ಲಿ ಮೃತರಾದವರಿಗೆ ನಮನ ಸಲ್ಲಿಸಿದರು –ಎಎಫ್‌ಪಿ ಚಿತ್ರ

ಅಪ್ರಚೋದಿತವಾದ ಪೂರ್ಣ ಪ್ರಮಾಣದ ದಾಳಿಯಿಂದಾಗಿ ಉಕ್ರೇನ್‌ನ ಜನರು ಊಹಿಸಲೂ ಆಗದ ರೀತಿಯ ಸಂಕಷ್ಟ ಅನುಭವಿಸಲು ಆರಂಭವಾಗಿ ವರ್ಷವಾಯಿತು
ಮೂರನೇ ಚಾರ್ಲ್ಸ್, ಬ್ರಿಟನ್‌ನ ರಾಜ

ಒಂದೇ ಒಂದು ಗುರಿಯನ್ನೂ ಸಾಧಿಸಲು ಪುಟಿನ್‌ಗೆ ಸಾಧ್ಯವಾಗಿಲ್ಲ. ಉಕ್ರೇನ್ ಅನ್ನು ನಾಶ ಮಾಡಲು ಬಯಸಿದ್ದರು. ದಿಟ್ಟ ದೇಶವನ್ನು ಎದುರಿಸಬೇಕಾಯಿತು
ಉರ್ಸುಲಾ ವೊನ್ ಡೆರ್ ಲೆಯೆನ್, ಐರೋಪ್ಯ ಆಯೋಗದ ಅಧ್ಯಕ್ಷೆ

ಸ್ವಾತಂತ್ರ್ಯವು ಸುಮ್ಮನೆ ಬರುವುದಿಲ್ಲ. ಅದಕ್ಕಾಗಿ ಹೋರಾಡಬೇಕು. ಉಕ್ರೇನ್‌ನ ಜನರು ಸ್ವಾತಂತ್ರ್ಯಕ್ಕಾಗಿ ಇಂದು ಅತ್ಯಂತ ದಿಟ್ಟವಾಗಿ ಹೋರಾಡುತ್ತಿದ್ದಾರೆ
ಜೆನ್ಸ್ ಸ್ಟಾಲ್ಟೆನ್‌ಬರ್ಗ್, ನ್ಯಾಟೊ ಪ್ರಧಾನ ಕಾರ್ಯದರ್ಶಿ

ಯುದ್ಧಕ್ಕೇನು ಕಾರಣ?

ಉಕ್ರೇನ್ ಮೇಲೆ 'ಸೇನಾ ಕಾರ್ಯಾಚರಣೆ' ನಡೆಸುವುದಕ್ಕೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ನೀಡಿದ ಕಾರಣಗಳು ಹೀಗಿವೆ: ಉಕ್ರೇನ್ ಅನ್ನು 'ನಾಜಿ ಹಿಡಿತ'ದಿಂದ ಬಿಡಿಸುವುದು, ಆ ದೇಶವನ್ನು ಸೈನ್ಯ ರಹಿತವನ್ನಾಗಿ ಮಾಡುವುದು.

ಉಕ್ರೇನ್‌ನಿಂದ ಬೇರ್ಪಟ್ಟ ಡೊನೆಟ್ಸ್ಕ ಮತ್ತು ಲುಗಾನ್ಸ್ಕ ಎಂಬ ಪ್ರದೇಶಗಳನ್ನು ಸಾರ್ವಭೌಮ ದೇಶಗಳು ಎಂದು ರಷ್ಯಾ ಮಾನ್ಯ ಮಾಡಿದೆ. ಈ ದೇಶಗಳ ಮೇಲೆ ಉಕ್ರೇನ್ ನಿರಂತರವಾಗಿ ದಾಳಿ ನಡೆಸುತ್ತಿದೆ ಎಂದು ಪುಟಿನ್ ಆರೋಪಿಸಿದ್ದಾರೆ.

ಉಕ್ರೇನ್‌ನ ತೀವ್ರ ಬಲಪಂಥೀಯ ಸರ್ಕಾರವು ರಷ್ಯಾ ಮೇಲೆ ದಾಳಿ ನಡೆಸುವ ಅಪಾಯ ಇದೆ. ಜೊತೆಗೆ, ಉಕ್ರೇನ್‌ಗೆ ಪಾಶ್ಚಾತ್ಯ ರಾಷ್ಟ್ರಗಳು ಶಸ್ತ್ರಾಸ್ತ್ರ ಪೂರೈಸುತ್ತಿವೆ. ಈ ಎಲ್ಲವನ್ನು ತಡೆಯಲು 'ಸೇನಾ ಕಾರ್ಯಾಚರಣೆ' ಅಗತ್ಯ ಎಂದು ಪುಟಿನ್ ಪ್ರತಿಪಾದಿಸಿದ್ದಾರೆ.

71 ಸಾವಿರ ಯುದ್ಧಾಪರಾಧ

ರಷ್ಯಾ–ಉಕ್ರೇನ್ ಯುದ್ಧಕ್ಕೆ ಸಂಬಂಧಿಸಿ 71 ಸಾವಿರಕ್ಕೂ ಹೆಚ್ಚು ಯುದ್ಧಾಪರಾಧಗಳು ವರದಿಯಾಗಿವೆ. ಇವುಗಳನ್ನು ವಿಚಾರಣೆಗೆ ಒಳಪಡಿಸುವುದು ಸುಲಭದ ಕೆಲಸವಲ್ಲ. ಹತ್ಯೆ ಮತ್ತು ಗಲ್ಲು ಶಿಕ್ಷೆ, ಶೆಲ್ ದಾಳಿ, ಗಡೀಪಾರು, ಮಕ್ಕಳ ಅಪಹರಣ, ಹಿಂಸೆ, ಲೈಂಗಿಕ ದೌರ್ಜನ್ಯ ಮತ್ತು ಅಕ್ರಮ ಬಂಧನದಂತಹ ಹಲವು ಪ್ರಕರಣಗಳು ನಡೆದಿವೆ ಎಂದು ಉಕ್ರೇನ್ ಮತ್ತು ಪಶ್ಚಿಮದ ದೇಶಗಳು ಹೇಳಿವೆ. ಆದರೆ, ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸಿಲ್ಲ ಎಂದು ರಷ್ಯಾ ಹೇಳಿಕೊಂಡಿದೆ.

ಸಾವಿರಾರು ದಾಳಿಗಳು

ಉಕ್ರೇನ್ ಮೇಲೆ ರಷ್ಯಾವು ಐದು ಸಾವಿರಕ್ಕೂ ಹೆಚ್ಚು ಕ್ಷಿಪಣಿ ದಾಳಿ, 3,500ಕ್ಕೂ ಹೆಚ್ಚು ವಾಯು ದಾಳಿ, ಒಂದು ಸಾವಿರಕ್ಕೂ ಹೆಚ್ಚು ಡ್ರೋನ್ ದಾಳಿಗಳನ್ನು ನಡೆಸಿದೆ ಎಂದು ವರದಿಯಾಗಿದೆ. ಇನ್‌ಸ್ಟಿಟ್ಯೂಟ್ ಆಫ್ ಸ್ಟಡಿ ಆಫ್ ವಾರ್ ಎಂಬ ಸಂಸ್ಥೆಯ ಪ್ರಕಾರ, ಉಕ್ರೇನ್‌ನ ಶೇ 18ರಷ್ಟು ಪ್ರದೇಶವು ರಷ್ಯಾ ನಿಯಂತ್ರಣದಲ್ಲಿದೆ. ಕಳೆದ ವರ್ಷ ಮಾರ್ಚ್ 23ರ ಹೊತ್ತಿಗೆ ಶೇ 27ರಷ್ಟು ಪ್ರದೇಶವು ರಷ್ಯಾ ವಶದಲ್ಲಿ ಇತ್ತು. ನಂತರದ ದಿನಗಳಲ್ಲಿ ಹಲವು ಪ್ರದೇಶಗಳನ್ನು ಉಕ್ರೇನ್ ಮರಳಿ ವಶಕ್ಕೆ ಪಡೆದಿದೆ.

8,006
ಫೆಬ್ರುವರಿ 15ರವರೆಗೆ ಉಕ್ರೇನ್‌ನಲ್ಲಿ ಯುದ್ಧಕ್ಕೆ ಬಲಿಯಾದ ನಾಗರಿಕರ ಸಂಖ್ಯೆ. ಇದು ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಕಚೇರಿ ನೀಡಿದ ಮಾಹಿತಿ. ಈ ಕಚೇರಿಯು ಅತ್ಯಂತ ನಿಖರವಾದ ವಿಧಾನದ ಮೂಲಕ ಸಾವು ನೋವಿನ ಸಂಖ್ಯೆಯನ್ನು ದೃಢಪಡಿಸಿಕೊಳ್ಳುತ್ತದೆ. ರಷ್ಯಾ ವಶದಲ್ಲಿರುವ ಮರಿಯುಪೋಲ್, ಲಿಸಿಚಾನ್ಸ್ಕ, ಸಿವಿರೊಡೊನೆಟ್ಸ್ಕ್‌ನಲ್ಲಿ ಸಾವಿರಾರು ಜನರು ನಾಪತ್ತೆಯಾಗಿರುವುದು ವರದಿಯಾಗಿದೆ. ಈ ಪ್ರಕರಣಗಳು ಇನ್ನಷ್ಟೇ ದೃಢವಾಗಬೇಕಿದೆ

3,382
2022ರ ಮಾರ್ಚ್‌ನಲ್ಲಿ ಮೃತಪಟ್ಟವರ ಸಂಖ್ಯೆ. ಇದು ಒಂದು ತಿಂಗಳಲ್ಲಿ ಮೃತಪಟ್ಟ ಜನರ ಗರಿಷ್ಠ ಸಂಖ್ಯೆ

13,287
ಯುದ್ಧದಿಂದಾಗಿ ಗಾಯಗೊಂಡವರ ಸಂಖ್ಯೆ

2,00,000
ಯುದ್ಧದಲ್ಲಿ ಗಾಯಗೊಂಡ ಅಥವಾ ಮೃತಪಟ್ಟ ರಷ್ಯಾದ ಸೈನಿಕರ ಸಂಖ್ಯೆ (ಪಶ್ಚಿಮದ ದೇಶಗಳು ನೀಡಿದ ಮಾಹಿತಿ)

1,00,000
ಯುದ್ಧದಲ್ಲಿ ಗಾಯಗೊಂಡ ಅಥವಾ ಮೃತಪಟ್ಟ ಉಕ್ರೇನ್ ಸೈನಿಕರ ಸಂಖ್ಯೆ (ಪಶ್ಚಿಮದ ದೇಶಗಳು ನೀಡಿದ ಮಾಹಿತಿ)

81 ಲಕ್ಷ
ದೇಶ ತೊರೆದು ನಿರಾಶ್ರಿತರಾದ ಉಕ್ರೇನ್ ಜನರ ಸಂಖ್ಯೆ

52 ಲಕ್ಷ
ಯುರೋಪ್ ಮತ್ತು ಮಧ್ಯ ಏಷ್ಯಾದ 40 ದೇಶಗಳಲ್ಲಿ ಆಶ್ರಯ ಪಡೆದವರ ಸಂಖ್ಯೆ

54 ಲಕ್ಷ
ಜನರು ತಮ್ಮ ಮನೆಯನ್ನು ತೊರೆದಿದ್ದರೂ ಉಕ್ರೇನ್‌ನಲ್ಲಿಯೇ ನಿರಾಶ್ರಿತರಾಗಿ ಉಳಿದಿದ್ದಾರೆ

1.76 ಕೋಟಿ
ಜನರಿಗೆ ಉಕ್ರೇನ್‌ನಲ್ಲಿ ಮಾನವೀಯ ನೆರವು ಬೇಕಾಗಿದೆ

13,800 ಕೋಟಿ ಡಾಲರ್
(ಸುಮಾರು ₹11.45 ಲಕ್ಷ ಕೋಟಿ) ಮೂಲಸೌಕರ್ಯ ನಾಶದಿಂದ ಉಕ್ರೇನ್‌ಗೆ ಆಗಿರುವ ನಷ್ಟ

ಆಧಾರ: ರಾಯಿಟರ್ಸ್, ಎಪಿ, ಎಎಫ್‌ಪಿ

ಈ ವರ್ಷ ಜಯ ನಮ್ಮದೇ: ಝೆಲೆನ್‌ಸ್ಕಿ

ಕೀವ್, ಉಕ್ರೇನ್ (ಎಎಫ್‌ಪಿ): 'ರಷ್ಯಾ ವಿರುದ್ಧ ಪ್ರತಿ ದಾಳಿಗೆ ಎಲ್ಲ ಸಿದ್ಧತೆಗಳು ನಡೆದಿವೆ. ರಷ್ಯಾವನ್ನು ಈ ವರ್ಷ (2023) ಸೋಲಿಸಲು ಸಕಲವನ್ನೂ ಮಾಡುತ್ತೇವೆ' ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಶುಕ್ರವಾರ ಪ್ರತಿಜ್ಞೆ ಮಾಡಿದರು.

ಎರಡನೇ ಮಹಾಯುದ್ಧದ ನಂತರ ಯುರೋಪಿನ ಅತಿದೊಡ್ಡ ಸಂಘರ್ಷವೆನಿಸಿರುವ ಉಕ್ರೇನ್– ರಷ್ಯಾ ನಡುವಿನ ಯುದ್ಧವು ಶುಕ್ರವಾರ (ಫೆ.24) ಒಂದು ವರ್ಷ ಪೂರೈಸಿ, ಎರಡನೇ ವರ್ಷಕ್ಕೆ ಕಾಲಿಟ್ಟಾಗ 'ರಷ್ಯಾ ಮೇಲೆ ಪ್ರತಿ ಆಕ್ರಮಣ ಮಾಡುತ್ತೇವೆ. ಮುಂದಿನ ತಿಂಗಳೊಳಗೆ ಆಕ್ರಮಣಕಾರರನ್ನು ಮಣಿಸುತ್ತೇವೆ' ಎಂದು ಝೆಲೆನ್‌ಸ್ಕಿ ಘೋಷಿಸಿದರು.

'ನಾವು ಸಹಿಸಿಕೊಂಡಿದ್ದೇವೆ. ನಾವು ಸೋತಿಲ್ಲ. ಗೆಲುವು ಸಾಧಿಸಲು ಈ ವರ್ಷ ಎಲ್ಲವನ್ನೂ ಮಾಡುತ್ತೇವೆ' ಎಂದು ಝೆಲೆನ್‌ಸ್ಕಿ ಸಾಮಾಜಿಕ ಜಾಲತಾಣದಲ್ಲಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಬುಕಾ, ಇರ್ಪಿನ್, ಮರಿಯುಪೊಲ್‌ನಲ್ಲಿ ರಷ್ಯಾ ಎಸಗಿರುವ ಯುದ್ಧಾಪರಾಧಗಳಿಗೆ ತಕ್ಕ ಶಾಸ್ತಿ ಮಾಡುವವರೆಗೂ ವಿರಮಿಸುವುದಿಲ್ಲ' ಎಂದು ಝೆಲೆನ್‌ಸ್ಕಿ ಗುಡುಗಿದ್ದಾರೆ.

ಶಾಂತಿ ಮಾತುಕತೆಗೆ ಚೀನಾ ಒತ್ತಾಯ: ಉಕ್ರೇನ್ ಮೇಲಿನ ಯುದ್ಧದ ವೇಳೆ ರಷ್ಯಾಕ್ಕೆ ನಿಕಟವಾಗಿರುವ ಚೀನಾ, ಇದೇ ವೇಳೆ 12 ಅಂಶಗಳ ಪತ್ರ ಬಿಡುಗಡೆ ಮಾಡಿದ್ದು, ಉಕ್ರೇನ್ ಮತ್ತು ರಷ್ಯಾ ಆದಷ್ಟು ಶೀಘ್ರ ಶಾಂತಿ ಮಾತುಕತೆ ಮರಳಬೇಕೆಂದು ಒತ್ತಾಯಿಸಿದೆ. ಆದರೆ, ಚೀನಾದ ಬದ್ಧತೆಯ ಬಗ್ಗೆ ಜರ್ಮನಿ ಸಂಶಯ ವ್ಯಕ್ತಪಡಿಸಿದೆ.

'ಭದ್ರತಾ ಮಂಡಳಿಗೆ ಬೇಕು ಭಾರತದ ಪ್ರಾತಿನಿಧ್ಯ' (ಮುಂಬೈ ವರದಿ–ಪಿಟಿಐ): 'ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸದ್ಯದ ವ್ಯವಸ್ಥೆ ನಿಷ್ಕ್ರಿಯವಾಗಿದೆ. ಭದ್ರತಾ ಮಂಡಳಿಯ ಪುನರ್ ರಚನೆ ಅತ್ಯಗತ್ಯ. ಇದರಲ್ಲಿ ಭಾರತಕ್ಕೆ ಹೆಚ್ಚಿನ ಪಾತ್ರವಿರಬೇಕು' ಎಂದು ಬ್ರಿಟನ್ ಮಾಜಿ ಪ್ರಧಾನಿ ಲಿಜ್ ಟ್ರಸ್ ಶುಕ್ರವಾರ ಅಭಿಪ್ರಾಯಪಟ್ಟರು.

ಎಬಿಪಿ ನೆಟ್‌ವರ್ಕ್‌ನ ಐಡಿಯಾಸ್ ಆಫ್ ಇಂಡಿಯಾ ಶೃಂಗಸಭೆಯಲ್ಲಿ ಮಾತನಾಡಿದ ಅವರು, ಭದ್ರತಾ ಮಂಡಳಿಯಲ್ಲಿ ಭಾರತದ ಕಾಯಂ ಸದಸ್ಯತ್ವ ಸ್ಥಾನ ಮುಂದುವರಿಸಬೇಕೆ ಎನ್ನುವ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

'ಭದ್ರತಾ ಮಂಡಳಿಯನ್ನು ಪುನರ್ ರಚಿಸುವುದು ಅಗತ್ಯವಾಗಿದೆ. ಭದ್ರತಾ ಮಂಡಳಿಯ ಐದು ಸದಸ್ಯ ರಾಷ್ಟ್ರಗಳಲ್ಲಿ ಈಗ ಒಂದು ರಾಷ್ಟ್ರ ಉಕ್ರೇನ್‌ನಲ್ಲಿ ಅಕ್ರಮ ಯುದ್ಧದಲ್ಲಿ ತೊಡಗಿದೆ. ಹೀಗಿರುವಾಗ ನಾವು ಏನನ್ನು ಅನುಸರಿಸುತ್ತಿದ್ದೇವೆ, ಈ ಮಂಡಳಿ ಹೇಗೆ ಕಾರ್ಯನಿರ್ವಹಿಸುತ್ತಿದೆ? ಎಂದು ಪ್ರಶ್ನಿಸುವುದು ಸಹಜ. ಜಾಗತಿಕ ಮಟ್ಟದಲ್ಲಿ ಭಾರತ ಪ್ರಮುಖ ಪಾಲುದಾರ, ವಿಶ್ವಸಂಸ್ಥೆಯಲ್ಲಿ ಭಾರತ ಹೆಚ್ಚಿನ ಪಾತ್ರ ವಹಿಸಬೇಕೆನ್ನುವುದನ್ನು ನಾನು ಖಂಡಿತವಾಗಿಯೂ ಬೆಂಬಲಿಸುತ್ತೇನೆ' ಎಂದು ಅವರು ಹೇಳಿದರು.

ಉಕ್ರೇನ್ ಯುದ್ಧದ ಮೇಲೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಯಾವುದೇ ನಿರ್ಣಾಯಕ ಪರಿಣಾಮ ಬೀರುವುದಿಲ್ಲ. ಹಾಗಾಗಿ, ನಾವು ತ್ವರಿತಗತಿಯಲ್ಲಿ ಉಕ್ರೇನ್‌ಗೆ ನ್ಯಾಟೊ ಸದಸ್ಯತ್ವ ನೀಡಬೇಕಾಗಿತ್ತು ಎಂದು ಟ್ರಸ್ ಹೇಳಿದರು.

ಜೋಶಿಮಠ: ಆಹಾರಧಾನ್ಯ ಗೋದಾಮಿನಲ್ಲಿ ಬಿರುಕು

ಗೋಪೇಶ್ವರ್ (ಉತ್ತರಾಖಂಡ): ಭೂಕುಸಿತದಿಂದ ನಲುಗಿರುವ ಉತ್ತರಾಖಂಡದ ಜೋಶಿಮಠದಲ್ಲಿ ಆಹಾರಧಾನ್ಯಗಳನ್ನು ಸಂಗ್ರಹಿಸಿದ್ದ ಗೋದಾಮೊಂದರಲ್ಲಿ ಭಾರಿ ಬಿರುಕು ಕಾಣಿಸಿಕೊಂಡಿದ್ದು, ಅದನ್ನು ಖಾಲಿ ಮಾಡಲು ಮತ್ತು ಗ್ರಾಹಕರಿಗೆ ಮುಂಚಿತವಾಗಿ ಆಹಾರಧಾನ್ಯ ಗಳನ್ನು ವಿತರಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮೂಲಗಳು ಶುಕ್ರವಾರ ತಿಳಿಸಿವೆ.

ಗುಲಾಬ್‌ಕೋಟಿ ಎಂಬಲ್ಲಿರುವ ಇನ್ನೊಂದು ಗೋದಾಮನ್ನು ಪರ್ಯಾಯವಾಗಿ ಬಳಸಲು ಚಿಂತನೆ ನಡೆಸಲಾಗಿದೆ ಎಂದೂ ಹೇಳಿವೆ.

ಜೋಶಿಮಠದ ಸಿಂಗ್‌ಧಾರ್‌ನ ವಾರ್ಡ್‌ನಲ್ಲಿರುವ ಗೋದಾಮಿನಲ್ಲಿ ಜ. 2ರಂದೇ ಬಿರುಕು ಕಾಣಿಸಿಕೊಂಡಿತ್ತು. ಈಗ ಗೋದಾಮಿನ ಕೆಲವು ಕೊಠಡಿಗಳು ಕುಸಿದಿರುವುದರಿಂದ ಅದನ್ನು ಬಳಸಲು ಕಷ್ಟವಾಗುತ್ತಿದೆ. ಈ ಕಾರಣಕ್ಕೆ ಗೋದಾಮನ್ನು ಖಾಲಿ ಮಾಡಲು ನಿರ್ಧರಿಸಿದ್ದೇವೆ ಎಂದು ಜಿಲ್ಲಾ ವಿತರಣಾಧಿಕಾರಿ ಜಸ್ವಂತ್ ಸಿಂಗ್ ಕಂದಾರಿ ಅವರು ತಿಳಿಸಿದ್ದಾರೆ.

ಸುಕೇಶ್ ಮತ್ತೆ 3 ದಿನ ಇ.ಡಿ ವಶಕ್ಕೆ

ನವದೆಹಲಿ (ಪಿಟಿಐ): ಖ್ಯಾತ ಉದ್ಯಮಿ ಮಲ್ವಿಂದರ್ ಸಿಂಗ್ ಅವರ ಪತ್ನಿ ಜಪ್ನಾ ಎಂ.ಸಿಂಗ್ ಅವರಿಗೆ ಸುಮಾರು ₹4 ಕೋಟಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಂಚಕ ಸುಕೇಶ್ ಚಂದ್ರಶೇಖರ್ ಅವರನ್ನು ಇನ್ನೂ ಮೂರು ದಿನ ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಿ ದೆಹಲಿ ಹೈಕೋರ್ಟ್ ಶುಕ್ರವಾರ ಆದೇಶ ನೀಡಿದೆ.

ಇ.ಡಿ ವಶಕ್ಕೆ ನೀಡಿದ್ದ 9 ದಿನಗಳ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಚಂದ್ರಶೇಖರ್ ಅವರನ್ನು ಕೋರ್ಟ್ ಎದುರು ಹಾಜರುಪಡಿಸಲಾಗಿತ್ತು.

ಅದಾನಿ: ವರದಿ ಪ್ರಕಟಿಸದಂತೆ ಮಾಧ್ಯಮಗಳಿಗೆ ತಡೆ ನೀಡಲು ಸುಪ್ರಿಂ ಕೋರ್ಟ್ ನಕಾರ

ನವದೆಹಲಿ(ಪಿಟಿಐ) : ಅದಾನಿ ಸಮೂಹ ಹಾಗೂ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಗೆ ಸಂಬಂಧಿಸಿ ವರದಿಗಳನ್ನು ಪ್ರಕಟಿಸದಂತೆ ಮಾಧ್ಯಮಗಳಿಗೆ ತಡೆಯಾಜ್ಞೆ ನೀಡಲು ಸುಪ್ರೀಂಕೋರ್ಟ್ ಶುಕ್ರವಾರ ನಿರಾಕರಿಸಿತು.

ಹಿಂಡನ್‌ಬರ್ಗ್ ವರದಿಯ ಹಿಂದೆ ಪಿತೂರಿ ಇದೆ ಎಂದು ಆರೋಪಿಸಿ ವಕೀಲ ಎಂ.ಎಲ್. ಶರ್ಮಾ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ. ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಮತ್ತು ಜೆ.ಬಿ.ಪಾರ್ದೀವಾಲಾ ಅವರಿದ್ದ ನ್ಯಾಯಪೀಠ ನಡೆಸಿತು.

'ಮಾಧ್ಯಮಗಳಿಗೆ ಯಾವುದೇ ತಡೆಯಾಜ್ಞೆ ನೀಡುವುದಿಲ್ಲ' ಎಂದು ಹೇಳಿದ ಪೀಠ, ಪಿಐಎಲ್‌ಅನ್ನು ವಜಾಗೊಳಿಸಿತು.

ಅದಾನಿ ಸಮೂಹದ ಕಂಪನಿಗಳ ಕುರಿತು ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ವರದಿ ಪ್ರಕಟಿಸಿದ ಬೆನ್ನಲ್ಲೇ, ಸಮೂಹದ ಷೇರುಗಳ ಬೆಲೆಗಳಲ್ಲಿ ಭಾರಿ ಕುಸಿತ ಉಂಟಾಗಿತ್ತು.

ಈ ಹಿನ್ನೆಲೆಯಲ್ಲಿ, ಸಲ್ಲಿಕೆಯಾಗಿದ್ದ ಪಿಐಎಲ್‌ಗಳ ವಿಚಾರಣೆ ನಡೆಸಿದ್ದ ನ್ಯಾಯಪೀಠ, ಫೆ. 20ರಂದು ತೀರ್ಪು ಕಾಯ್ದಿರಿಸಿತ್ತು. ಈ ವಿಷಯಕ್ಕೆ ಸಂಬಂಧಿಸಿ ಈ ವರೆಗೆ ನಾಲ್ಕು ಪಿಐಎಲ್‌ಗಳು ಸಲ್ಲಿಕೆಯಾಗಿವೆ. ವಕೀಲರಾದ ಎಂ.ಎಲ್.ಶರ್ಮಾ, ವಿಶಾಲ್ ತಿವಾರಿ, ಕಾಂಗ್ರೆಸ್ ನಾಯಕಿ ಜಯಾ ಠಾಕೂರ್ ಹಾಗೂ ಸಾಮಾಜಿಕ ಕಾರ್ಯಕರ್ತ ಮುಕೇಶ್ ಕುಮಾರ್ ಪಿಐಎಲ್ ಸಲ್ಲಿಸಿದ್ದಾರೆ.

ಸಿಡಬ್ಲ್ಯುಸಿ: ನಾಮನಿರ್ದೇಶನ ಅಧಿಕಾರ ಖರ್ಗೆಗೆ

ಪಕ್ಷದ ಎಲ್ಲಾ ಹಂತಗಳಲ್ಲೂ ಪರಿಶಿಷ್ಟರು, ಮಹಿಳೆ, ಇತರ ಹಿಂದುಳಿದ ಜಾತಿಗಳು, ಯುವಜನರಿಗೆ ಶೇ 50 ಸ್ಥಾನ

ಪ್ರಜಾವಾಣಿ ವಾರ್ತೆ

ನವ ರಾಯ್‌ಪುರ (ಛತ್ತೀಸಗಢ):- ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಗೆ (ಸಿಡಬ್ಲ್ಯುಸಿ) ಚುನಾವಣೆಯನ್ನು ನಡೆಸದಿರಲು ಹಾಗೂ ಸಮಿತಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡುವ ಸಂಪೂರ್ಣ ಅಧಿಕಾರವನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೀಡುವ ಕುರಿತು ಕಾಂಗ್ರೆಸ್ ಚಾಲನಾ ಸಮಿತಿಯು ಶುಕ್ರವಾರ ಸರ್ವಾನುಮತದಿಂದ ನಿರ್ಧರಿಸಿದೆ.

ನವರಾಯ್‌ಪುರದಲ್ಲಿ ಶುಕ್ರವಾರದ ನಡೆದ ಪಕ್ಷದ 85ನೇ ಮಹಾ ಅಧಿವೇಶನದ ಭಾಗವಾಗಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಒಟ್ಟು 150 ನಿಮಿಷಗಳ ಕಾಲ ನಡೆದ ಸಭೆಯಲ್ಲಿ ಪಕ್ಷದ ಮುಖಂಡರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಭಾಗವಹಿಸಿರಲಿಲ್ಲ.

'ಸಿಡಬ್ಲ್ಯುಸಿ ಸದಸ್ಯರ ನೇಮಕಾತಿ ಸೇರಿದಂತೆ ಪಕ್ಷದ ಎಲ್ಲಾ ಹಂತಗಳಲ್ಲೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ಜಾತಿಗಳು, ಮಹಿಳೆಯರು, ಯುವಜನರು ಮತ್ತು ಅಲ್ಪಸಂಖ್ಯಾತರಿಗೆ ಶೇ 50ರಷ್ಟು ಮೀಸಲಾತಿ ನೀಡುವ ನಿಟ್ಟಿನಲ್ಲಿ ಪಕ್ಷದ ಸಂವಿಧಾನದ ತಿದ್ದುಪಡಿ ಮಾಡಲು ಸಿದ್ಧವಾಗಿದೆ. ಸದ್ಯಕ್ಕೆ ಸದಸ್ಯರ ಆಯ್ಕೆಯನ್ನು ಘೋಷಿಸಲಾಗುವುದಿಲ್ಲ. ಆಯ್ಕೆಯ ಕುರಿತು ಸಮಾಲೋಚನೆಯ ನಂತರ ಘೋಷಿಸಲಾಗುವುದು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

'ಪ್ರಸ್ತುತ ರಾಜಕೀಯ ಸನ್ನಿವೇಶದಲ್ಲಿ ಸಿಡಬ್ಲ್ಯುಸಿಗೆ ಚುನಾವಣೆ ಮಾಡುವುದನ್ನು ಕೈಬಿಡಲು ದೊಡ್ಡ ಕಾರಣಗಳಿವೆ' ಎಂದೂ ಹೇಳಿದ್ದಾರೆ.

'ಚಾಲನಾ ಸಮಿತಿಯ ನಿರ್ಧಾರವನ್ನು ಸಭೆಯಲ್ಲಿ ಹಾಜರಿದ್ದ 45 ಸದಸ್ಯರು ಸರ್ವಾನುಮತದಿಂದ ಸಮ್ಮತಿಸಿದರು. ಕೆಲವರು ವಿರೋಧಿಸಿದರೆ, ಮತ್ತೆ ಕೆಲವರು ಚುನಾವಣೆಗೆ ಒಲವು ತೋರಿದ್ದಾರೆ. ನಾವು ಚುನಾವಣೆ ನಡೆಸಿದರೆ ಆಗುವ ಪರಿಣಾಮಗಳ ಬಗ್ಗೆಯೂ, ಚುನಾವಣೆ ನಡೆಸದಿದ್ದರೆ ಪರಿಣಾಮ ಏನಾಗಬಹುದು ಎನ್ನುವ ಕುರಿತೂ ಚರ್ಚಿಸಿದ್ದೇವೆ. ಕೂಲಂಕಷ ಚರ್ಚೆಯ ನಂತರವೇ ಈ ನಿರ್ಧಾರಕ್ಕೆ ಬಂದಿದ್ದೇವೆ. ಎಐಸಿಸಿ ಮತ್ತು ಪಿಸಿಸಿ ಪ್ರತಿನಿಧಿಗಳು ಈ ಸರ್ವಾನುಮತದ ನಿರ್ಧಾರವನ್ನು ಬೆಂಬಲಿಸುತ್ತಾರೆ ಎಂದು ನಮಗೆ ಸಂಪೂರ್ಣ ವಿಶ್ವಾಸವಿದೆ' ಎಂದರು.

ಕಾಂಗ್ರೆಸ್‌ನ ಮಾಜಿ ಪ್ರಧಾನಿಗಳು ಮತ್ತು ಎಐಸಿಸಿ ಮಾಜಿ ಮುಖ್ಯಸ್ಥರನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಕಾಯಂ ಸದಸ್ಯರನ್ನಾಗಿ ನೇಮಿಸುವ ಸಲುವಾಗಿ ಪಕ್ಷವು ತನ್ನ ಸಂವಿಧಾನಕ್ಕೆ ತಿದ್ದುಪಡಿ ಮಾಡುವ ಕುರಿತೂ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ಒಂದು ವೇಳೆ ತಿದ್ದುಪಡಿಗೆ ಅನುಮೋದನೆ ದೊರೆತರೆ ಮಾಜಿ ಪ್ರಧಾನಿ ಮನಮೋಹನ ಸಿಂಗ್, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು ಸಿಡಬ್ಲ್ಯುಸಿಯ ಕಾಯಂ ಸದಸ್ಯರಾಗಲಿದ್ದಾರೆ. ಅಷ್ಟೇ ಅಲ್ಲ, ರಾಜ್ಯಸಭೆ ಮತ್ತು ಲೋಕಸಭೆಯಲ್ಲಿನ ಕಾಂಗ್ರೆಸ್ ನಾಯಕರನ್ನೂ ಸಿಡಬ್ಲ್ಯುಸಿಯಲ್ಲಿ ಒಳಗೊಳ್ಳುವ ಕುರಿತು ಪ್ರಸ್ತಾಪಿಸಲಾಗಿದೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಮಹಾ ಅಧಿವೇಶನದಲ್ಲಿ ತಮ್ಮ ಅಧ್ಯಕ್ಷೀಯ ಭಾಷಣ ಮಾಡಲಿದ್ದಾರೆ. ಈ ವೇಳೆ ಅವರು,ಬಿಜೆಪಿಯ ವಿರುದ್ಧ ಪಕ್ಷವು ಯಾವ ರೀತಿಯಾಗಿ ಹೋರಾಟ ಮಾಡಬೇಕು ಎನ್ನುವ ಕುರಿತು 15 ಸಾವಿರ ಪ್ರತಿನಿಧಿಗಳು ಹಾಗೂ 1,825 ಎಐಸಿಸಿ ಪ್ರತಿನಿಧಿಗಳ ಮುಂದೆ ಯೋಜನೆಯನ್ನು ಮುಂದಿಡುವ ನಿರೀಕ್ಷೆ ಇದೆ.

ಖರ್ಗೆಯವರ ಭಾಷಣದ ನಂತರ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರು ಮಾತನಾಡುವರು. ರಾಜಕೀಯ, ಆರ್ಥಿಕ ಮತ್ತು ಅಂತರರಾಷ್ಟ್ರೀಯ ವಿಷಯಕ್ಕೆ ಸಂಬಂಧಿಸಿದಂತೆ ಮೂರು ನಿರ್ಣಯಗಳನ್ನು ಮಂಡಿಸಲಾಗುವುದು. ಈ ವಿಚಾರಗಳ ಕುರಿತು ಮಧ್ಯಾಹ್ನ 1ರಿಂದ ಸಂಜೆ 6ರವರೆಗೆ ಚರ್ಚೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಭಾನುವಾರದ ಮಹಾಅಧಿವೇಶನದ ಸಮಾರೋಪದಲ್ಲಿ ರಾಹುಲ್ ಗಾಂಧಿ ಹಾಗೂ ಖರ್ಗೆ ಮಾತನಾಡಲಿದ್ದಾರೆ. ಸಮಾರೋಪದ ಬಳಿಕ ನಡೆಯುವ ಸಾರ್ವಜನಿಕ ರ‍್ಯಾಲಿಯಲ್ಲಿ ಖರ್ಗೆ, ರಾಹುಲ್ ಮತ್ತು ಛತ್ತೀಸಗಢದ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಪಾಲ್ಗೊಳ್ಳಲಿದ್ದಾರೆ.

ರಾಯ್‌ಪುರದಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಚಾಲನಾ ಸಮಿತಿ ಸಭೆಯಲ್ಲಿ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪಕ್ಷದ ಮುಖಂಡರಾದ ಅಂಬಿಕಾ ಸೋನಿ, ಕೆ.ಸಿ. ವೇಣುಗೋಪಾಲ್, ಪವನ್ ಕುಮಾರ್ ಬನ್ಸಲ್ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಡ್ರಗ್ಸ್ ಸೇವನೆಗೆ ನಿರ್ಬಂಧ

ಪಕ್ಷದ ಸಂವಿಧಾನದಲ್ಲಿನ ಪ್ರಮುಖ ತಿದ್ದುಪಡಿಯು ಸದಸ್ಯರು ಯಾವುದೇ ರೀತಿಯ ಮಾನಸಿಕ ಕಾಯಿಲೆಗಳಿಗೆ ನೀಡುವ ಔಷಧಿಯ ಸೇವನೆ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ದೂರವಿರುವುದನ್ನು ಖಚಿತಪಡಿಸಿಕೊಳ್ಳಲು ಪ್ರಸ್ತಾಪಿಸಿದೆ. ಅಂತೆಯೇ ಮದ್ಯಪಾನ ನಿಷೇಧಿಸುವ ಕುರಿತೂ ತಿದ್ದುಪಡಿ ತರಬೇಕೆಂದು ಕೆಲವು ನಾಯಕರು ಬಯಸಿದ್ದಾರೆ ಎಂದೂ ಪಕ್ಷದ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಸಭೆಗೆ ಸೋನಿಯಾ, ರಾಹುಲ್, ಪ್ರಿಯಾಂಕಾ ಗೈರು
- 2.30 ತಾಸು ನಡೆದ ಸಭೆ
- ಚಾಲನಾ ಸಮಿತಿಯ ನಿರ್ಧಾರಕ್ಕೆ 45 ಸದಸ್ಯರ ಸಮ್ಮತಿ

ಜೋಯಾಲುಕ್ಕಾಸ್‌ನ ₹305 ಕೋಟಿ ಆಸ್ತಿ ಜಪ್ತಿ

ನವದೆಹಲಿ (ಪಿಟಿಐ): ಹವಾಲಾ ಮೂಲಕ ಭಾರಿ ಹಣವನ್ನು ದುಬೈಗೆ ವರ್ಗಾಯಿಸಿದ ಆರೋಪಕ್ಕೆ ಸಂಬಂಧಿಸಿದ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಪ್ರಕರಣದಲ್ಲಿ ಕೇರಳದ ಆಭರಣ ಸಮೂಹ ಜೋಯಾಲುಕ್ಕಾಸ್ ಮಾಲೀಕ ಜಾಯ್ ಅಲುಕ್ಕಾಸ್ ವರ್ಗೀಸ್ ಅವರ ₹ 305 ಕೋಟಿಗೂ ಹೆಚ್ಚು ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಶುಕ್ರವಾರ ತಿಳಿಸಿದೆ.

ತನಿಖಾ ಸಂಸ್ಥೆಯು ಫೆ. 22 ರಂದು ತ್ರಿಶೂರ್ ನ ಅನೇಕ ಸ್ಥಳಗಳಲ್ಲಿ ಶೋಧ ನಡೆಸಿತ್ತು. ಮುಟ್ಟುಗೋಲು ಹಾಕಿಕೊಳ್ಳಲಾದ ಈ ಸ್ವತ್ತುಗಳ ಒಟ್ಟು ಮೌಲ್ಯ ₹305.84 ಕೋಟಿ.

ತ್ರಿಶ್ಯೂರ್‌ನ ಶೋಭಾ ನಗರದಲ್ಲಿ ಭೂಮಿ ಮತ್ತು ವಸತಿ ಕಟ್ಟಡ ಸೇರಿದಂತೆ 33 ಸ್ಥಿರಾಸ್ತಿಗಳು (ಮೌಲ್ಯ ₹81.54 ಕೋಟಿ), ಮೂರು ಬ್ಯಾಂಕ್ ಖಾತೆಗಳು (₹91.22 ಲಕ್ಷ ಠೇವಣಿ), ₹ 5.58 ಕೋಟಿ ಮೂರು ಸ್ಥಿರ | ಠೇವಣಿಗಳು ಮತ್ತು ಜೋಯಾಲುಕ್ಕಾಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಷೇರುಗಳು (₹217.81 ಕೋಟಿ) ಜಪ್ತಿ ಮಾಡಲಾಗಿದೆ ಎಂದು ಇ.ಡಿ ಹೇಳಿಕೆಯಲ್ಲಿ ತಿಳಿಸಿದೆ.

ಭಾರತದಿಂದ ದುಬೈಗೆ ಹವಾಲಾ (ಹಣ ಅಕ್ರಮ ವರ್ಗಾವಣೆ) ಮೂಲಕ ಭಾರಿ ಪ್ರಮಾಣದ ಹಣವನ್ನು ವರ್ಗಾಯಿಸಲಾಗಿದೆ ಮತ್ತು ನಂತರ ಜಾಯ್ ಅಲುಕ್ಕಾಸ್ ವರ್ಗೀಸ್ ಅವರ ಮಾಲೀಕತ್ವದ ಕಂಪನಿಯಾದ ದುಬೈನ ಜೋಯಾಲುಕ್ಕಾಸ್ ಜ್ಯುವೆಲ್ಲರಿ ಎಲ್‌ಎಲ್‌ಸಿ ಯಲ್ಲಿ ಹೂಡಿಕೆ ಮಾಡಲಾಗಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

ಶೋಧ ವೇಳೆ ಸಂಗ್ರಹಿಸಿದ ಪುರಾವೆಗಳು, ಅಧಿಕೃತ ದಾಖಲೆಗಳು ಮತ್ತು ಇಮೇಲ್‌ಗಳು ಹವಾಲಾ ವ್ಯವಹಾರಗಳಲ್ಲಿ ಜಾಯ್ ಅಲುಕ್ಕಾಸ್ ಸಕ್ರಿಯವಾಗಿ ಭಾಗಿಯಾಗಿರುವುದನ್ನು ಸ್ಪಷ್ಟವಾಗಿ ಸಾಬೀತುಪಡಿಸಿದೆ ಎಂದು ಸಂಸ್ಥೆ ಹೇಳಿದೆ.

ಜರ್ಮನಿಯ ಚಾನ್ಸಲರ್ ಇಂದು ಭಾರತಕ್ಕೆ

ನವದೆಹಲಿ (ಪಿಟಿಐ): ಜರ್ಮನಿಯ ಚಾನ್ಸಲರ್ ಓಲಾಫ್ ಸ್ಕೋಲ್ಜ್ 2 ದಿನಗಳ ಕಾಲ ಭಾರತಕ್ಕೆ ಭೇಟಿ ನೀಡಲಿದ್ದು. ಶನಿವಾರ (ಫೆ.25) ಬೆಳಿಗ್ಗೆ ಅವರು ದೆಹಲಿಗೆ ಆಗಮಿಸಲಿದ್ದಾರೆ.

ಉಕ್ರೇನ್ ಸಂಘರ್ಷ, ಇಂಡೊ-ಪೆಸಿಫಿಕ್‌ನಲ್ಲಿನ ಪರಿಸ್ಥಿತಿ ಮತ್ತು ಶುದ್ಧ ಇಂಧನ, ವ್ಯಾಪಾರ ಮತ್ತು ಹೊಸ ತಂತ್ರಜ್ಞಾನಗಳ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಹೆಚ್ಚಿಸುವ ಮಾರ್ಗಗಳ ಕುರಿತು ಪ್ರಧಾನಿ ಮೋದಿ ಅವರೊಂದಿಗೆ ಸಮಗ್ರ ಮಾತುಕತೆ ನಡೆಸಲಿದ್ದಾರೆ.

ಚಾನ್ಸಲರ್ ಆಗಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿಗೆ ಅವರು ಭಾರತ ಪ್ರವಾಸ ಕೈಗೊಂಡಿದ್ದಾರೆ. ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ಮಾಡಿ ಒಂದು ವರ್ಷ ತುಂಬಿದ ಒಂದು ದಿನದ ನಂತರ ಅವರು ಭಾರತಕ್ಕೆ ಪ್ರಯಾಣ ಬೆಳೆಸುತ್ತಿದ್ದಾರೆ.

'ಸ್ಕೋಲ್ಜ್ ಮತ್ತು ಪ್ರಧಾನಿ ಮೋದಿ ನಡುವಿನ ಸಭೆಯಲ್ಲಿ ರಷ್ಯಾ ಮತ್ತು ಉಕ್ರೇನ್ (ಸಂಘರ್ಷ) ಅಜೆಂಡಾದಲ್ಲಿ ಹೆಚ್ಚಿನ ನಿರೀಕ್ಷೆಯನ್ನು ಇರಿಸಿಕೊಂಡಿದ್ದೇವೆ' ಎಂದು ಜರ್ಮನ್ ರಾಯಭಾರಿ ಫಿಲಿಪ್ ಆಕರ್ಮನ್ ಬುಧವಾರ ಹೇಳಿದ್ದಾರೆ.

ಭಾನುವಾರ ಓಲಾಫ್ ಅವರು ಬೆಂಗಳೂರಿಗೆ ಭೇಟಿ ನೀಡಿ ನಂತರ ಜರ್ಮನಿಗೆ ವಾಪಸ್ಸಾಗಲಿದ್ದಾರೆ.

ಎಎಪಿ- ಬಿಜೆಪಿ ಸದಸ್ಯರ ಕೈ ಕೈ ಮಿಲಾವಣೆ; ಸಭೆ ಸೋಮವಾರಕ್ಕೆ ಮುಂದೂಡಿಕೆ

ಎಂಸಿಡಿ: ಸ್ಥಾಯಿ ಸಮಿತಿ ಚುನಾವಣೆಯಲ್ಲಿ ಹೊಡೆದಾಟ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಮಹಾನಗರ ಪಾಲಿಕೆಯ (ಎಂಸಿಡಿ) ಆರು ಸದಸ್ಯರ ಸ್ಥಾಯಿ ಸಮಿತಿ ಆಯ್ಕೆಯ ಚುನಾವಣೆಗೆ ಶುಕ್ರವಾರ ಆಡಳಿತ ಪಕ್ಷ ಎಎಪಿ ಮತ್ತು ವಿರೋಧ ಪಕ್ಷ ಬಿಜೆಪಿ ಸದಸ್ಯರ ನಡುವೆ ಭಾರಿ ಹೊಡೆದಾಟ, ನೂಕಾಟ, ಗದ್ದಲದ ನಡುವೆ ಮತದಾನ ನಡೆಯಿತು.

ಆರು ಸದಸ್ಯರ ಸ್ಥಾಯಿ ಸಮಿತಿ ಚುನಾವಣೆಯಲ್ಲಿ ಒಂದು ಮತವನ್ನು ಅಮಾನ್ಯವೆಂದು ಮೇಯರ್ ಶೆಲ್ಲಿ ಒಬೆರಾಯ್ ಘೋಷಿಸಿದ ನಂತರ, ಸಭೆಯಲ್ಲಿ ಗಲಾಟೆ ಶುರುವಾಯಿತು. ಬಿಜೆಪಿ ಸದಸ್ಯರು ಮೇಜಿನ ಮೇಲೆ ಹತ್ತಿ ಘೋಷಣೆಗಳನ್ನು ಕೂಗಿದರು.

ಪರಿಸ್ಥಿತಿ ಮತ್ತಷ್ಟು ವಿಕೋಪಕ್ಕೆ ಹೋಗಿ, ಎರಡೂ ಪಕ್ಷಗಳ ಸದಸ್ಯರು ಪರಸ್ಪರ ಕೂಗಾಟ, ತಳ್ಳಾಟ, ಕಪಾಳ ಮೋಕ್ಷ, ಕೈ ಕೈ ಮಿಲಾವಣೆ ನಡೆಸಿದರು. ಒಬ್ಬರನ್ನೊಬ್ಬರು ನೆಲಕ್ಕೆ ಕೆಡವಿಕೊಂಡು ಒದ್ದರು. ಕೆಲ ಸದಸ್ಯರು ಕುಸಿದು ಬಿದ್ದರು. ಕೆಲ ಸದಸ್ಯರ ಬಟ್ಟೆಗಳು ಹರಿದು ಹೋದವು. ಇಡೀ ಸಭೆ ಕ್ಷಣಾರ್ಧದಲ್ಲಿ ಸಮರಾಂಗಣವಾಗಿ ಮಾರ್ಪಟ್ಟಿತು.

ಬಿಜೆಪಿ ಸದಸ್ಯರು, ಮತ ಎಣಿಕೆಗೆ ಅಡ್ಡಿಪಡಿಸಿದರು. ಅಮಾನ್ಯ ಮತ ಪರಿಗಣಿಸದೇ, ಫಲಿತಾಂಶ ಘೋಷಿಸುವುದಾಗಿ ಪ್ರಕಟಿಸಿದ ಮೇಯರ್, 250 ಸದಸ್ಯರ ಪೈಕಿ 242 ಸದಸ್ಯರು ಮತದಾನ ಮಾಡಿದರು. ಎಂಟು ಮಂದಿ ಸದಸ್ಯರು ಮತದಾನ ಮಾಡಿಲ್ಲ ಎಂದರು.

ಸದಸ್ಯರಾದ ಮಂದೀಪ್ ಸಿಂಗ್, ಅರಿಬಾ ಖಾನ್, ನಾಜಿಯಾ ಡ್ಯಾನಿಶ್, ಸಮೀರ್ ಅಹಮ್ಮದ್, ಶಗುಫ್ತಾ ಚೌಧರಿ ಜುಬೇರ್, ಸಬಿಲಾ ಬೇಗಂ, ನಾಜಿಯಾ ಖಾತೂನ್ ಮತ್ತು ಜರೀಫ್ ಅವರು ಮತದಾನ ಮಾಡಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.

'ಮತ ಮಾನ್ಯವಾಗಿದೆ. ಅದು ಅಮಾನ್ಯವಾಗಿದ್ದರೆ, ನಮ್ಮ ಲೆಕ್ಕಾಚಾರದ ಪ್ರಕಾರ, ಎಎಪಿಯ ಅಭ್ಯರ್ಥಿ ಗೆಲ್ಲುತ್ತಾರೆ' ಎಂದು ಅಂಗಿಯ ಗುಂಡಿ ತೆರೆದಿದ್ದ, ಬಿಜೆಪಿಯ ಕೌನ್ಸಿಲರ್ ಒಬ್ಬರು ಹೇಳಿದರೆ, ಮತ್ತೊಬ್ಬ ಬಿಜೆಪಿಯ ಸದಸ್ಯರು, ಚುನಾವಣಾ ಆಯೋಗವು ನಿಗದಿಪಡಿಸಿದಂತೆ ಮತ ಎಣಿಕೆ ನಡೆಯಲಿಲ್ಲ. ಮೇಯರ್ ನಿಯಮ ಉಲ್ಲಂಘಿಸಿದರು' ಎಂದು ಆರೋಪಿಸಿರುವುದಾಗಿ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಎಂಸಿಡಿ ಸಭೆಯನ್ನು ನಂತರ ಮುಂದೂಡಲಾಯಿತು. ಸೋಮವಾರ ಮತ್ತೆ ಸಭೆ ಸೇರಲಿದೆ. ಆರು ಸ್ಥಾನಗಳಿಗೆ ಏಳು ಅಭ್ಯರ್ಥಿಗಳು ಸ್ಪರ್ಧಿಸಿದ್ದಾರೆ.

ಮರು ಎಣಿಕೆಗೆ ಅನುಮತಿ ನೀಡುವುದಿಲ್ಲವೆಂದು ಬಿಜೆಪಿ ಸದಸ್ಯರು ಹೇಳಿದ್ದಾರೆ.

'ಎಂಸಿಡಿ ಸಭೆಯಲ್ಲಿನ ಈ ಬೆಳವಣಿಗೆ ಬಿಜೆಪಿ ಗೂಂಡಾಗಳ ಪಕ್ಷವೆನ್ನುವುದನ್ನು ದೇಶಕ್ಕೆ ತೋರಿಸಿದೆ. ಮತ ಕಳೆದುಕೊಳ್ಳುತ್ತೇವೆ ಎಂದು ತಿಳಿದಾಗ ಬಿಜೆಪಿಯವರು ಜನರ ಮೇಲೆ ಆಕ್ರಮಣ ಮಾಡಲು ಪ್ರಾರಂಭಿಸಿದರು. ದೆಹಲಿ ಮಹಿಳಾ ಮೇಯರ್ ತನ್ನ ಜೀವವನ್ನು ತಾನೇ ರಕ್ಷಿಸಿಕೊಳ್ಳಬೇಕಾಯಿತು. ಬಿಜೆಪಿಯಲ್ಲಿರುವ ಪುರುಷರು ಮೇಜಿನ ಮೇಲೆ ಹತ್ತಿದರು ಮತ್ತು ಮೇಯರ್‌ಗೆ ಬೆದರಿಕೆ ಹಾಕಿದರು' ಎಂದು ಎಎಪಿ ಶಾಸಕ ಅತಿಶಿ ಸುದ್ದಿಗಾರರಿಗೆ ತಿಳಿಸಿದರು.

ಹೈಕೋರ್ಟ್ ಮೊರೆ: ಎಂಸಿಡಿಯ ಸ್ಥಾಯಿ ಸಮಿತಿ ಸದಸ್ಯರ ಆಯ್ಕೆಗಾಗಿ ಈಚೆಗೆ ನಡೆದಿದ್ದ ಮತದಾನದ ವೇಳೆ ಮೊಬೈಲ್ ಮತ್ತು ಪೆನ್ನುಗಳ ಬಳಕೆಗೆ ಅನುಮತಿ ನೀಡುವ ಮೂಲಕ ಮೇಯರ್ ಶೆಲ್ಲಿ ಒಬೆರಾಯ್ ಅವರು ಮಾನದಂಡಗಳನ್ನು ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿ ಬಿಜೆಪಿ ಸದಸ್ಯ ಶರದ್ ಕಪೂರ್ ದೆಹಲಿ ಹೈಕೋರ್ಟ್‌ಗೆ ಶುಕ್ರವಾರ ಅರ್ಜಿ ಸಲ್ಲಿಸಿದ್ದಾರೆ.

ಪಾಲಿಕೆಯ ಸ್ಥಾಯಿ ಸಮಿತಿಯ ಸದಸ್ಯರ ಚುನಾವಣೆಯಲ್ಲಿ ಎಎಪಿ ಮತ್ತು ಬಿಜೆಪಿ ಸದಸ್ಯರ ನಡುವೆ ಗಲಾಟೆ ನಡೆಯಿತು

ಬಿಜೆಪಿ ಸೇರಿದ ಎಎಪಿ ಸದಸ್ಯ

ನವದೆಹಲಿ: ದೆಹಲಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಪೊರೇಟರ್ ಪವನ್ ಸೆಹ್ರಾವತ್ ಅವರು ಶುಕ್ರವಾರ ಬಿಜೆಪಿ ಸೇರಿದ್ದಾರೆ.

ಎಂಸಿಡಿ ಸ್ಥಾಯಿ ಸಮಿತಿಯ 6 ಸದಸ್ಯ ಸ್ಥಾನಗಳಿಗೆ ಶುಕ್ರವಾರ ಚುನಾವಣೆ ನಡೆಯಿತು. ಈ ಮಧ್ಯೆ ಪವನ್ ಸೆಹ್ರಾವತ್ ಪಕ್ಷ ತೊರೆದಿರುವುದು ಎಎಪಿಗೆ ಮುಜುಗರ ಸೃಷ್ಟಿ ಮಾಡಿದೆ.

ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ಎಎಪಿಯಲ್ಲಿ ಭ್ರಷ್ಟಾಚಾರದಿಂದಾಗಿ ಉಸಿರುಗಟ್ಟುವಿಕೆಯ ವಾತಾವರಣ ಸೃಷ್ಟಿಯಾಗಿದೆ ಎಂದು ಪವನ್ ಆರೋಪಿಸಿದ್ದಾರೆ.

ಬವಾನಾ ವಾರ್ಡ್‌ನ ಎಎಪಿ ಕಾರ್ಪೊರೇಟರ್ ಪವನ್ ಅವರನ್ನು ಕಾರ್ಯಾಧ್ಯಕ್ಷ ವೀರೇಂದ್ರ ಸಚ್‌ದೇವ ಮತ್ತು ಪ್ರಧಾನ ಕಾರ್ಯದರ್ಶಿ ಹರ್ಷ್ ಮಲ್ಹೋತ್ರಾ ಅವರು ಬಿಜೆಪಿಗೆ ಬರಮಾಡಿಕೊಂಡರು.

ಖೇರಾ ಪ್ರಕರಣ ತಾರ್ಕಿಕ ಅಂತ್ಯ: ಹಿಮಂತ ಬಿಸ್ವಾ

ಗುವಾಹಟಿ (ಪಿಟಿಐ):ಪ್ರಧಾನಿ ಮೋದಿ ವಿರುದ್ಧ ಅನಾಗರಿಕ ಭಾಷೆ ಬಳಸಿರುವ ಕಾಂಗ್ರೆಸ್ ಹಿರಿಯ ನಾಯಕ ಪವನ್ ಖೇರಾ ಮೇಲೆ ದಾಖಲಿಸಿರುವ ಪ್ರಕರಣವನ್ನು ರಾಜ್ಯದ ಪೊಲೀಸರು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಶುಕ್ರವಾರ ಹೇಳಿದ್ದಾರೆ.

ಗೃಹ ಖಾತೆಯನ್ನೂ ಹೊಂದಿರುವ ಶರ್ಮಾ ಅವರು, ಪ್ರಕರಣದ ತಾರ್ಕಿಕ ಅಂತ್ಯದ ಬಗ್ಗೆ ಹೆಚ್ಚು ವಿವರಿಸಿಲ್ಲ. 'ಅಸ್ಸಾಂ ಪೊಲೀಸರು ಇದನ್ನು ತಾರ್ಕಿಕ ಅಂತ್ಯಕ್ಕೆ ಮುಟ್ಟಿಸುವರು. ಇನ್ನು ಮುಂದೆ ರಾಜಕೀಯ ಭಾಷಣದಲ್ಲಿ ಯಾರೂ ಅವಹೇಳನಕಾರಿ ಭಾಷೆ ಬಳಸುವುದಿಲ್ಲ ಮತ್ತು ಸಾರ್ವಜನಿಕ ಸ್ಥಳಗಳ ಪಾವಿತ್ರ್ಯ ಕಾಪಾಡುತ್ತಾರೆಂದು ಭಾವಿಸುತ್ತೇವೆ' ಎಂದು ಟ್ವೀಟ್ ಮಾಡಿದ್ದಾರೆ.

'ಕಾನೂನು ಯಾವಾಗಲೂ ಮೇಲುಗೈ ಸಾಧಿಸಲಿದೆ. ಆರೋಪಿಗಳು ಬೇಷರತ್ ಕ್ಷಮೆಯಾಚಿಸಿದ್ದಾರೆ' ಎಂದು ಶರ್ಮಾ, ಸುಪ್ರೀಂ ಕೋರ್ಟ್ ಹೆಸರು ಉಲ್ಲೇಖಿಸಿ ಟ್ವೀಟ್‌ನಲ್ಲಿ ಹೇಳಿದ್ದಾರೆ.

ಮೋದಿ ವಿರುದ್ಧದ ಅಸಮರ್ಪಕ ಹೇಳಿಕೆಗಳಿಗಾಗಿ ಖೇರಾ ವಿರುದ್ಧ ಪ್ರಕರಣ ದಾಖಲಾಗಿದೆ. ಖೇರಾ ಅವರನ್ನು ಅಸ್ಸಾಂ ಪೊಲೀಸರು ಗುರುವಾರ ಬಂಧಿಸಿದ್ದರು. ನಂತರ ಖೇರಾ ಅವರಿಗೆ ಮಧ್ಯಂತರ ಜಾಮೀನು ಸಿಕ್ಕಿತ್ತು.

ಬೆಂಗಳೂರು ಓಪನ್ ಟೆನಿಸ್: ಡಬಲ್ಸ್ ಫೈನಲ್‌ಗೆ ಅನಿರುದ್ಧ್–ವಿಜಯ್

ಚುನ್‌ಗೆ ಆಘಾತ ನೀಡಿದ ಹಮದ್

• ಮಹಮ್ಮದ್ ನೂಮಾನ್

ಬೆಂಗಳೂರು: ಅಗ್ರಶ್ರೇಯಾಂಕದ ಆಟಗಾರ ಚುನ್ ಸಿನ್ ಸೆಂಗ್ ಅವರಿಗೆ ಆಘಾತ ನೀಡಿದ ಸರ್ಬಿಯದ ಹಮದ್ ಮೆಜೆಡೊವಿಚ್, ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಹಮದ್ 6–1, 6–2 ರಲ್ಲಿ ಚೀನಾ ತೈಪೆಯ ಚುನ್ ವಿರುದ್ಧ ಗೆದ್ದರು.

ವೇಗದ ಸರ್ವ್, ನಿಖರ ರಿಟರ್ನ್‌ಗಳು ಮತ್ತು ಪ್ರಬಲ ಗ್ರೌಂಡ್‌ಶಾಟ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸಿದ ಸರ್ಬಿಯದ ಆಟಗಾರ ಒಂದು ಗಂಟೆ ಎಂಟು ನಿಮಿಷಗಳಲ್ಲಿ ಜಯಿಸಿದರು.

ಎಟಿಪಿ ರ‍್ಯಾಂಕಿಂಗ್‌ನಲ್ಲಿ 255ನೇ ಸ್ಥಾನದಲ್ಲಿರುವ ಹಮದ್, 131ನೇ ರ‍್ಯಾಂಕ್‌ನ ಆಟಗಾರನಿಗೆ ಹೋರಾಟ ನಡೆಸಲೂ ಅವಕಾಶ ನೀಡಲಿಲ್ಲ. ಪಂದ್ಯದಲ್ಲಿ ಕೇವಲ ಮೂರು ಗೇಮ್‌ಗಳನ್ನು ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟರು.

ಹಮದ್ ಅವರು ಶನಿವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾದ ಮ್ಯಾಕ್ಸ್ ಪರ್ಸೆಲ್ ಅವರ ಸವಾಲು ಎದುರಿಸುವರು.

ದಿನದ ಮತ್ತೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಪರ್ಸೆಲ್ 6–2, 6–0 ರಲ್ಲಿ ಇಟಲಿಯ ಲುಕಾ ನಾರ್ಡಿ ವಿರುದ್ಧ ಗೆದ್ದರು. ಪರ್ಸೆಲ್ ಅವರು ಪಂದ್ಯದ ಮೊದಲ ಗೇಮ್‌ನಲ್ಲೇ ಎದುರಾಳಿಯ ಸರ್ವ್ ಬ್ರೇಕ್ ಮಾಡಿ ತಮ್ಮ ಉದ್ದೇಶ ಏನೆಂಬುದನ್ನು ಸ್ಪಷ್ಟಪಡಿಸಿದರು.

ಐದನೇ ಗೇಮ್‌ನಲ್ಲೂ ಎದುರಾಳಿಯ ಸರ್ವ್ ಬ್ರೇಕ್ ಮಾಡಿದರು. ತಮ್ಮ ಎಲ್ಲ ಸರ್ವ್‌ಗಳಲ್ಲಿ ಪಾಯಿಂಟ್ಸ್ ಗಳಿಸಿ ಮುನ್ನಡೆ ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಅವರು ಎದುರಾಳಿಗೆ ಯಾವುದೇ ಗೇಮ್ ಬಿಟ್ಟುಕೊಡಲಿಲ್ಲ.

ಶನಿವಾರ ನಡೆಯಲಿರುವ ಇನ್ನೊಂದು ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾದ ಜೇಮ್ಸ್ ಡಕ್ವರ್ಥ್ ಮತ್ತು ಜೇಮ್ಸ್ ಮೆಕೇಬ್ ಎದುರಾಗುವರು.

ಎರಡನೇ ಶ್ರೇಯಾಂಕದ ಆಟಗಾರ ಡಕ್ವರ್ಥ್ 6–4, 6–1 ರಲ್ಲಿ ಬಲ್ಗೇರಿಯದ ದಿಮಿತರ್ ಕುಜ್ಮನೊವ್ ವಿರುದ್ಧ ಗೆದ್ದರೆ, ಮೆಕೇಬ್ 6–3, 7–6 ರಲ್ಲಿ ಫ್ರಾನ್ಸ್‌ನ ಹರೊಲ್ಡ್ ಮೆಯೊಟ್ ಅವರನ್ನು ಮಣಿಸಿದರು.

ಡಬಲ್ಸ್‌ನಲ್ಲಿ ಭಾರತದ ಭರವಸೆ ಎನಿಸಿರುವ ಅನಿರುದ್ಧ್ ಚಂದ್ರಶೇಖರ್ ಮತ್ತು ಎನ್.ವಿಜಯ್‌ಸುಂದರ್ ಪ್ರಶಾಂತ್ ಜೋಡಿ ಫೈನಲ್ ಪ್ರವೇಶಿಸಿದ್ದು, ಪ್ರಶಸ್ತಿಯ ಭರವಸೆ ಮೂಡಿಸಿದೆ.

ರೋಚಕ ಹೋರಾಟ ನಡೆದ ಸೆಮಿಫೈನಲ್‌ನಲ್ಲಿ ಅವರು 7–6, 4–6, 10–2 ರಲ್ಲಿ ಭಾರತದ ಅರ್ಜುನ್ ಖಾಡೆ ಮತ್ತು ಆಸ್ಟ್ರಿಯದ ಮ್ಯಾಕ್ಸಿಮಿಲಿಯನ್ ನ್ಯುಕ್ರೈಸ್ಟ್ ವಿರುದ್ಧ ಗೆದ್ದರು.

ಇನ್ನೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಕೊರಿಯದ ಯುನ್ ಸಾಂಗ್ ಚುನ್– ಚೀನಾ ತೈಪೆಯ ಯು ಸಿಯು ಸು ಜೋಡಿ 6–4, 6–4 ರಲ್ಲಿ ಆಸ್ಟ್ರೇಲಿಯಾದ ಮಾರ್ಕ್ ಪೊಲ್ಮನ್ಸ್–ಮ್ಯಾಕ್ಸ್ ಪರ್ಸೆಲ್ ಅವರನ್ನು ಮಣಿಸಿತು.

ಆಸ್ಟ್ರೇಲಿಯಾದ ಜೇಮ್ಸ್ ಡಕ್ವರ್ಥ್ ಅವರು ಬಲ್ಗೇರಿಯದ ಕುಜ್ಮನೊವ್ ವಿರುದ್ಧ ಚೆಂಡನ್ನು ರಿಟರ್ನ್ ಮಾಡಿದ ಪರಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ

ಮುಖ್ಯಾಂಶಗಳು

- ಹಮದ್‌ಗೆ 6–1, 6–2 ಸೆಟ್‌ಗಳ ಗೆಲುವು
- ಸೆಮಿಯಲ್ಲಿ ಪರ್ಸೆಲ್ ವಿರುದ್ಧ ಪೈಪೋಟಿ
- ನಾಲ್ಕರಘಟ್ಟಕ್ಕೆ ಡಕ್ವರ್ಥ್, ಮೆಕೇಬ್

ನಾಗಪುರ, ದೆಹಲಿ ಪಿಚ್‌ಗಳು ಸಾಧಾರಣ

ನವದೆಹಲಿ (ಪಿಟಿಐ): ನಾಗಪುರದ ಜಮ್ತಾದ ವಿದರ್ಭ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣ ಹಾಗೂ ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದ ಪಿಚ್‌ಗಳು ಸಾಧಾರಣ ಗುಣಮಟ್ಟದ್ದಾಗಿವೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪಂದ್ಯ ರೆಫರಿ ರೇಟಿಂಗ್ ನೀಡಿದ್ದಾರೆ.

ಆಸ್ಟ್ರೇಲಿಯಾ ಎದುರಿನ ಬಾರ್ಡರ್ ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿ ಮೊದಲ ಪಂದ್ಯವು ನಾಗಪುರದಲ್ಲಿ ಹಾಗೂ ಎರಡನೇಯದ್ದು ದೆಹಲಿಯಲ್ಲಿ ನಡೆದಿದ್ದವು. ಎರಡೂ ಪಂದ್ಯಗಳು ಮೂರನೇ ದಿನವೇ ಮುಕ್ತಾಯವಾಗಿದ್ದವು. ಆಸ್ಟ್ರೇಲಿಯಾದ ಮಾಧ್ಯಮಗಳಲ್ಲಿ ಅಪಾರ ಟೀಕೆಗಳು ವ್ಯಕ್ತವಾಗಿದ್ದವು. ಕೆಲವು ಮಾಜಿ ಕ್ರಿಕೆಟಿಗರೂ ಅಸಮಾಧಾನ ವ್ಯಕ್ತಪಡಿಸಿದ್ದರು.

ಪಂದ್ಯ ರೆಫರಿ ಆ್ಯಂಡಿ ಪೈಕ್ರಾಫ್ಟ್ ಅವರು ಪಿಚ್‌ಗಳ ಗುಣಮಟ್ಟದ ಕುರಿತು ಐಸಿಸಿಯ ಶ್ರೇಯಾಂಕ ಪಟ್ಟಿಯಲ್ಲಿ ದಾಖಲಿಸಿದ್ದಾರೆ.

ಐಸಿಸಿಯಲ್ಲಿ 6 ಬಗೆಯಲ್ಲಿ ರೇಟಿಂಗ್ ನೀಡಲಾಗುತ್ತದೆ. ಅತ್ಯುತ್ತಮ, ಉತ್ತಮ, ಸಾಧಾರಣ, ಸಾಧಾರಣಕ್ಕಿಂತ ಕಡಿಮೆ, ಕಳಪೆ ಮತ್ತು ಅನರ್ಹ ಎಂಬ ರೇಟಿಂಗ್ ನೀಡಲಾಗುತ್ತದೆ. ಸಾಧಾರಣಕ್ಕಿಂತ ಕಡಿಮೆ, ಕಳಪೆ, ಅನರ್ಹ ರೇಟಿಂಗ್‌ಗಳು ಸಿಕ್ಕಾಗ ಡಿಮೆರಿಟ್ ಅಂಕಗಳನ್ನು ನೀಡಲಾಗುತ್ತದೆ. ಈ ಹಿಂದೆಯೂ ನಾಗಪುರದಲ್ಲಿ ನಡೆದಿದ್ದ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಎರಡೇ ದಿನಗಳಲ್ಲಿ ಮುಕ್ತಾಯವಾಗಿತ್ತು.

ಜೋರ್ಡಾನ್‌ಗೆ ಮಣಿದ ಭಾರತ

ಫಿಬಾ ವಿಶ್ವಕಪ್ ಏಷ್ಯನ್ ಅರ್ಹತಾ ಬ್ಯಾಸ್ಕೆಟ್‌ಬಾಲ್ ಟೂರ್ನಿ

• ಬಸವರಾಜ ದಳವಾಯಿ

ಬೆಂಗಳೂರು: ಉತ್ತಮ ಹೋರಾಟದ ಮಧ್ಯೆಯೂ ಭಾರತ ತಂಡದವರು ಫಿಬಾ ವಿಶ್ವಕಪ್ ಏಷ್ಯನ್ ಅರ್ಹತಾ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜೋರ್ಡಾನ್ ತಂಡದ ಎದುರು ನಿರಾಸೆ ಅನುಭವಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಇ ಗುಂಪಿನ ಎರಡನೇ ಸುತ್ತಿನ ಪಂದ್ಯದಲ್ಲಿ ಭಾರತ 63–98ರಿಂದ ಜೋರ್ಡಾನ್ ತಂಡಕ್ಕೆ ಮಣಿಯಿತು. ಜೋರ್ಡಾನ್ ಪರ ಫ್ರೆಡ್ಡಿ ಇಬ್ರಾಹಿಂ 21 ಪಾಯಿಂಟ್ಸ್ ಗಳಿಸಿ ಗೆಲುವಿನ ರೂವಾರಿ ಎನಿಸಿದರು. ಭಾರತದ ಅರವಿಂದ್ ಕುಮಾರ್ ಮುತ್ತುಕೃಷ್ಣನ್ (19 ಪಾಯಿಂಟ್ಸ್) ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ.

ಆರಂಭದಲ್ಲಿ ಉಭಯ ತಂಡಗಳ ಮಧ್ಯೆ ತೀವ್ರ ಪೈಪೋಟಿ ಕಂಡುಬಂತು. ಮುಯಿನ್ ಬೆಕ್ ಹಫೀಜ್ ನಾಯಕತ್ವದ ಆತಿಥೇಯ ತಂಡದವರು ಹಲವು ಬಾರಿ ಎದುರಾಳಿಯ ಬ್ಯಾಸ್ಕೆಟ್ ಕಡೆಗೆ ಚೆಂಡನ್ನು ಕೊಂಡೊಯ್ದರು. ಆದರೆ ಪಾಯಿಂಟ್ಸ್ ಗಳಿಸುವಲ್ಲಿ ಹೆಚ್ಚು ಯಶಸ್ಸು ಕಾಣಲಿಲ್ಲ. ಮೊದಲ ಕ್ವಾರ್ಟರ್‌ನಲ್ಲಿ ಜೋರ್ಡಾನ್ 30–14ರಿಂದ ಮುನ್ನಡೆ ಗಳಿಸಿತು. ಎರಡನೇ ಕ್ವಾರ್ಟರ್‌ನಲ್ಲಿ ಜೋರ್ಡಾನ್ ಮತ್ತಷ್ಟು ಶ್ರೇಷ್ಠ ಸಾಮರ್ಥ್ಯ ತೋರಿತು. ಭಾರತ ತಂಡದವರ ತಪ್ಪುಗಳ ಲಾಭ ಪಡೆದು 33–7 ಪಾಯಿಂಟ್ಸ್‌ನಿಂದ ಮೇಲುಗೈ ಸಾಧಿಸಿತು.

ಮೂರನೇ ಕ್ವಾರ್ಟರ್‌ನಲ್ಲಿ ಭಾರತ ಚುರುಕಿನ ಆಟದ ಮೂಲಕ ತಿರುಗೇಟು ನೀಡಿತು. ಅಸಿಸ್ಟ್‌ಗಳಲ್ಲಿ ಹೆಚ್ಚು ಹೊಂದಾಣಿಕೆ ತೋರಿದ ಆತಿಥೇಯ ತಂಡದವರು 25–20ರಿಂದ ಮುನ್ನಡೆ ಪಡೆದರು. ನಾಲ್ಕನೇ ಕ್ವಾರ್ಟರ್‌ನಲ್ಲೂ ಉಭಯ ತಂಡಗಳ ನಡುವೆ ತೀವ್ರ ಹೋರಾಟ ನಡೆಯಿತು. ಆದರೆ ಜೋರ್ಡಾನ್ 17–15 ಅಲ್ಪ ಅಂತರದಿಂದ ಮುನ್ನಡೆ ತನ್ನದಾಗಿಸಿಕೊಂಡಿತು. ಜೋರ್ಡಾನ್ ಈಗಾಗಲೇ ವಿಶ್ವಕಪ್ ಅರ್ಹತೆ ಗಳಿಸಿದ್ದರಿಂದ ಈ ಪಂದ್ಯ ಔಪಚಾರಿಕವಾಗಿತ್ತು. ಭಾರತ ಅರ್ಹತೆ ಗಳಿಸಲು ವಿಫಲವಾಗಿದೆ.

ಭಾರತ ತಂಡದ ಪಿಯೂಷ್ ಮೀನಾ ಮತ್ತು ಜೋರ್ಡಾನ್‌ನ ಅಮಿನ್ ಅಬು ಹವ್ವಾಸ್ ನಡುವೆ ಚೆಂಡಿಗಾಗಿ ಪೈಪೋಟಿ

ಫುಟ್‌ಬಾಲ್: ಕಿಕ್‌ಸ್ಟಾರ್ಟ್ ಎಫ್‌ಸಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಅವಧಿಯಲ್ಲಿ ಮರುಹೋರಾಟ ನಡೆಸಿದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದವರು ಸ್ಟಾಫರ್ಡ್ ಚಾಲೆಂಜ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡ 3–2 ಗೋಲುಗಳಿಂದ ಕೇರಳ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ವಿರಾಮದ ವೇಳೆಗೆ 0–2 ರಲ್ಲಿ ಹಿನ್ನಡೆಯಲ್ಲಿದ್ದ ಕಿಕ್‌ಸ್ಟಾರ್ಟ್ ಆ ಬಳಿಕ ಪುಟಿದೆದ್ದು ನಿಂತಿತು. ಎಡ್ವಿನ್ ರೊಸಾರಿಯೊ (55ನೇ ನಿ.), ಸತೀಶ್ ಕುಮಾರ್ (61) ಮತ್ತು ಮುಜಾಮಿರ್ ಅಬ್ದುಲ್ಲಾ (84) ಗೋಲು ಗಳಿಸಿ ಗೆಲುವಿಗೆ ಕಾರಣರಾದರು.

ಕೇರಳ ಯುನೈಟೆಡ್ ತಂಡಕ್ಕೆ 12ನೇ ನಿಮಿಷದಲ್ಲಿ ಒಂದು ಗೋಲು 'ಉಡುಗೊರೆ' ರೂಪದಲ್ಲಿ ದೊರೆತರೆ, ಇನ್ನೊಂದು ಗೋಲನ್ನು ಅಕ್ಮಲ್ ಶಾನ್ (42) ಗಳಿಸಿದರು.

ಬಿಎಫ್‌ಸಿ ಮತ್ತು ಶ್ರೀನಿಧಿ ಡೆಕ್ಕನ್ ಎಫ್‌ಸಿ ನಡುವಣ ಪಂದ್ಯ 1–1 ಗೋಲಿನ ಡ್ರಾದಲ್ಲಿ ಕೊನೆಗೊಂಡಿತು. ಬಿಎಫ್‌ಸಿ ಪರ ಹರ್ಮನ್‌ಪ್ರೀತ್ ಸಿಂಗ್ (15) ಮತ್ತು ಶ್ರೀನಿಧಿ ಪರ ಹಾಂಗ್‌ಜೊ ಅವರು ಗೋಲು ಗಳಿಸಿದರು. ಚೆನ್ನೈಯಿನ್ ಎಫ್‌ಸಿ 1–0 ಗೋಲಿನಿಂದ ಅಹಮದಾಬಾದ್‌ನ ಎಆರ್‌ಎ ಎಫ್‌ಸಿ ತಂಡವನ್ನು ಸೋಲಿಸಿತು. ಕೊನೆಯ ಪಂದ್ಯದಲ್ಲಿ ಡೆಲ್ಲಿ ಎಫ್‌ಸಿ 1–0 ಗೋಲಿನಿಂದ ಕೆಂಕ್ರೆ ಎಫ್‌ಸಿ ತಂಡವನ್ನು ಮಣಿಸಿತು.

ಕಿಕ್‌ಸ್ಟಾರ್ಟ್ ತಂಡದ ವಿಜಯ್ ಗೋಲು ಗಳಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಕನ್ನಡ ಚಲನಚಿತ್ರ ಕಪ್ ಮೂರನೇ ಆವೃತ್ತಿ ಆರಂಭ

ಚಿನ್ನಸ್ವಾಮಿಯಲ್ಲಿ ಗೇಲ್, ಆರ್‌ಸಿಬಿ ಪ್ರತಿಧ್ವನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಸ್ಟ್ ಇಂಡೀಸ್ ದಿಗ್ಗಜ ಕ್ರಿಕೆಟಿಗ ಕ್ರಿಸ್ ಗೇಲ್ ಅವರಿಗೆ ಬೆಂಗಳೂರು ಎಂದರೆ ಎರಡನೇ ತವರು. ಅದರಲ್ಲೂ ಅವರಿಗೆ ಚಿನ್ನಸ್ವಾಮಿ ಕ್ರೀಡಾಂಗಣವೆಂದರೆ ಅಚ್ಚುಮೆಚ್ಚು. ಉದ್ಯಾನನಗರಿಯ ಕ್ರಿಕೆಟ್ ಪ್ರೇಮಿಗಳಿಗೂ ಗೇಲ್ ಆಟವನ್ನು ಕಣ್ತುಂಬಿಕೊಳ್ಳುವ ಉಮೇದು ಯಾವಾಗಲೂ ಇರುತ್ತದೆ.

ಏಕೆಂದರೆ; ದೈತ್ಯ ಕ್ರಿಕೆಟಿಗ ಗೇಲ್ ಈ ಹಿಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದು ಐಪಿಎಲ್‌ನಲ್ಲಿ ಮಿಂಚಿದ್ದರು. ಬಹುದಿನಗಳ ನಂತರ ಅವರು ಮತ್ತೊಮ್ಮೆ ತಮ್ಮ ನೆಚ್ಚಿನ ಕ್ರೀಡಾಂಗಣದಲ್ಲಿ ಕಣಕ್ಕಿಳಿದರು. ಹಬ್ಬದ ವಾತಾವರಣ ಸೃಷ್ಟಿಸಿದರು. ಆದರೆ ಈ ಸಲ ಅವರು ಆರ್‌ಸಿಬಿ ಪರವಾಗಿ ಕಣಕ್ಕಿಳಿಯಲಿಲ್ಲ!

ಶುಕ್ರವಾರ ಇಲ್ಲಿ ಆರಂಭವಾದ ಕನ್ನಡ ಚಲನಚಿತ್ರ ಕಪ್ (ಕೆಸಿಸಿ) ಟೂರ್ನಿಯಲ್ಲಿ ಕ್ರಿಸ್ ಗೇಲ್ ಬ್ಯಾಟ್ ಬೀಸಿದರು. ನಟ ಸುದೀಪ್ ಸಾರಥ್ಯದ ಹೊಯ್ಸಳ ಈಗಲ್ಸ್ ತಂಡದಲ್ಲಿ ಆಡಿದ ಗೇಲ್, ಮೈದಾನಕ್ಕೆ ಹೆಜ್ಜೆ ಇಡುತ್ತಿದ್ದಂತೆಯೇ ಆರ್‌ಸಿಬಿ ಘೋಷಣೆ ಮುಗಿಲು ಮುಟ್ಟಿತ್ತು. ಆದರೆ ಅವರು ತಮ್ಮ ನೈಜ ಆಟವಾಡದೇ ತಾಳ್ಮೆಯಿಂದ ಬ್ಯಾಟಿಂಗ್ ಮಾಡಲು ಆರಂಭಿಸಿದಾಗ ಪ್ರೇಕ್ಷಕರ ಗ್ಯಾಲರಿಯಲ್ಲಿ ಬೇಸರದ ವಾತಾವರಣ ನೆಲೆಸಿತ್ತು. ನಂತರ ಒಂದೆರಡು ಸಿಕ್ಸರ್ ಸಿಡಿಸಿ ಬೇಸರ ಮರೆಸಿದರು. ಅವರು ಕ್ರೀಸ್‌ನಲ್ಲಿದ್ದಷ್ಟು ಹೊತ್ತು ಆರ್‌ಸಿಬಿ.. ಆರ್‌ಸಿಬಿ.. ಘೋಷಣೆಗಳು ಪ್ರತಿಧ್ವನಿಸಿದವು.

ನಟ ಧನಂಜಯ್ ನಾಯಕತ್ವದ ಗಂಗಾ ವಾರಿಯರ್ಸ್ ಎದುರಿನ ಈ ಪಂದ್ಯದಲ್ಲಿ ಹೊಯ್ಸಳ ಈಗಲ್ಸ್ 2 ರನ್‌ಗಳಿಂದ ಸೋಲನುಭವಿಸಿತು. ಟಾಸ್ ಗೆದ್ದ ಸುದೀಪ್ ಬಳಗವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಾರಿಯರ್ಸ್ ತಂಡವು ಕರಣ್ ಆರ್ಯನ್ (70; 32ಎ) ಅವರ ಅರ್ಧಶತಕದ ಬಲದಿಂದ 10 ಓವರ್‌ಗಳಲ್ಲಿ 114 ರನ್ ಗಳಿಸಿತು. ಈ ತಂಡದಲ್ಲಿದ್ದ ಸುರೇಶ್ ರೈನಾ 20 ರನ್ ಗಳಿಸಿದರು. ಆದರೆ ಈಗಲ್ಸ್ ತಂಡವು 112 ರನ್ ಗಳಿಸಲಷ್ಟೇ ಶಕ್ತವಾಯಿತು.

ಬೊಮ್ಮಾಯಿ ಚಾಲನೆ: ಎರಡು ದಿನಗಳ ಟೂರ್ನಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಿದರು.

ಕ್ರಿಸ್ ಗೇಲ್

ಗಾಲ್ಫ್: ಅವನಿ ಸಿರಿಕಿಟ್ 'ಕ್ವೀನ್'

ಮನಿಲಾ, ಫಿಲಿಪ್ಪೀನ್ಸ್ (ಪಿಟಿಐ): ಭಾರತದ ಅವನಿ ಪ್ರಶಾಂತ್ ಅವರು ಇಲ್ಲಿ ನಡೆದ ಕ್ವೀನ್ ಸಿರಿಕಿಟ್ ಕಪ್ ಅಮೆಚೂರ್ ಗಾಲ್ಫ್ ಟೂರ್ನಿಯಲ್ಲಿ ಶುಕ್ರವಾರ ಪ್ರಶಸ್ತಿ ಜಯಿಸಿದರು. ಇದರೊಂದಿಗೆ ಈ ಸಾಧನೆ ಮಾಡಿದ ದೇಶದ ಮೊದಲ ಗಾಲ್ಫರ್ ಎನಿಸಿಕೊಂಡರು.

ಇಲ್ಲಿ ಕಿರೀಟ ಧರಿಸುವುದರೊಂದಿಗೆ ಬೆಂಗಳೂರಿನ ಆಟಗಾರ್ತಿ, ತಂಡ ವಿಭಾಗದಲ್ಲಿ ಭಾರತವನ್ನು ಎರಡನೇ ಸ್ಥಾನಕ್ಕೇರಿಸಿದರು. 43 ವರ್ಷಗಳ ಇತಿಹಾಸದಲ್ಲಿ ಭಾರತದ ಶ್ರೇಷ್ಠ ಸಾಧನೆ ಇದು.

ಫಿಲಿಪ್ಪೀನ್ಸ್‌ನ ರಿಯಾನ್ನೆ ಮಿಕೆಲಾ ಮಾಲಿಕ್ಸಿ ಮತ್ತು ಕೊರಿಯಾದ ಹ್ಯುಂಜೊಯೂ ಜಂಟಿ ಮೂರನೇ ಸ್ಥಾನ ಪಡೆದರು.

16 ವರ್ಷದ ಆಟಗಾರ್ತಿ ಅವನಿ ಇತ್ತೀಚೆಗೆ ವಿಶ್ವ ರ‍್ಯಾಂಕಿಂಗ್‌ನಲ್ಲಿ ಅಗ್ರ 100ರೊಳಗೆ ಸ್ಥಾನ ಪಡೆದಿದ್ದರು. ಈ ಟೂರ್ನಿಯ ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡಿದ್ದರು.

'ಬಹು ದಿನಗಳ ಕಾಯುವಿಕೆಯ ಬಳಿಕ ಈ ಗೆಲುವು ಸಿಕ್ಕಿದೆ. ಬಹಳ ಸಂತೋಷವಾಗಿದೆ. ಆದರೆ ಆಗಸ್ಟಾ ಟೂರ್ನಿಗೆ ಅರ್ಹತೆ ಗಳಿಸದಿದ್ದುದು ಸ್ವಲ್ಪ ನಿರಾಸೆ ಉಂಟುಮಾಡಿದೆ. ಮುಂದಿನ ವರ್ಷ ಪ್ರವೇಶ ಪಡೆಯುವ ವಿಶ್ವಾಸವಿದೆ' ಎಂದು ವಿಶ್ವ ಅಮೆಚೂರ್ ಗಾಲ್ಫ್ ರ‍್ಯಾಂಕಿಂಗ್‌ನಲ್ಲಿ 93ನೇ ಸ್ಥಾನದಲ್ಲಿರುವ ಅವನಿ ಹೇಳಿದ್ದಾರೆ.

ಎರಡನೇ ಸ್ಥಾನ ಪಡೆದ ಭಾರತ ತಂಡದಲ್ಲಿ ವಿಧಾತ್ರಿ ಅರಸ್ ಮತ್ತು ನಿಶ್ನಾ ಪಟೇಲ್ ಇದ್ದರು.

ಅವನಿ ಪ್ರಶಾಂತ್, ವಿಧಾತ್ರಿ ಅರಸ್ ಮತ್ತು ನಿಶ್ನಾ ಪಟೇಲ್

ಸಿಂಧು ಕೋಚಿಂಗ್ ಹುದ್ದೆ ತೊರೆದ ಸಾಂಗ್

ನವದೆಹಲಿ (ಪಿಟಿಐ): ಭಾರತ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಅವರಿಗೆ ತರಬೇತಿ ನೀಡುತ್ತಿದ್ದ ಕೊರಿಯಾದ ಪಾರ್ಕ್ ಟೆ ಸಾಂಗ್ ಕೋಚಿಂಗ್‌ನಿಂದ ಹಿಂದೆ ಸರಿದಿದ್ದಾರೆ.

ಇತ್ತೀಚಿನ ಟೂರ್ನಿಗಳಲ್ಲಿ ಸಿಂಧು ಅವರು ನಿರೀಕ್ಷಿತ ಸಾಮರ್ಥ್ಯ ತೋರಿರಲಿಲ್ಲ. ಅದರ ಹೊಣೆ ಹೊತ್ತು ತಾವು ಹುದ್ದೆ ತೊರೆಯುತ್ತಿರುವುದಾಗಿ ಪಾರ್ಕ್ ಶುಕ್ರವಾರ ಹೇಳಿದ್ದಾರೆ.

ಪಾರ್ಕ್ ಅವರ ಮಾರ್ಗದರ್ಶನದಲ್ಲಿ ಸಿಂಧು ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಮತ್ತು ಕಾಮನ್‌ವೆಲ್ತ್ ಕೂಟದಲ್ಲಿ ಚಿನ್ನ ಗೆದ್ದಿದ್ದರು. ಕಾಮನ್‌ವೆಲ್ತ್ ಕೂಟದಲ್ಲಿ ಪಾದದ ಗಾಯದಿಂದ ಬಳಲಿದ್ದ ಅವರು ಐದು ತಿಂಗಳು ವಿಶ್ರಾಂತಿ ಬಳಿಕ ಕಣಕ್ಕೆ ಮರಳಿದ್ದರು.

'ಸಿಂಧು ಹೊಸ ಕೋಚ್ ಹುಡುಕಿಕೊಳ್ಳುವುದಾಗಿ ಹೇಳಿದ್ದಾರೆ. ನಾನು ಅವರ ನಿರ್ಧಾರವನ್ನು ಗೌರವಿಸುವೆ' ಎಂದು ಪಾರ್ಕ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮೂರನೇ ಟೆಸ್ಟ್‌ಗೆ ಕಮಿನ್ಸ್ ಅಲಭ್ಯ

ಕಮಿನ್ಸ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ಭಾರತ ತಂಡದ ವಿರುದ್ಧ ಮಾರ್ಚ್ 1 ರಂದು ಆರಂಭವಾಗಲಿರುವ ಮೂರನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಆಡದಿರಲು ನಿರ್ಧರಿಸಿದ್ದಾರೆ.

ಕುಟುಂಬದ ಸದಸ್ಯರೊಬ್ಬರು ಅನಾರೋಗ್ಯಕ್ಕೆ ತುತ್ತಾದ್ದರಿಂದ ಕಮಿನ್ಸ್ ತವರಿಗೆ ಮರಳಿದ್ದರು. ಕಮಿನ್ಸ್ ಅವರ ತಾಯಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಆಸ್ಟ್ರೇಲಿಯಾದ ಮಾಧ್ಯಮಗಳು ವರದಿ ಮಾಡಿವೆ.

ಇಂದೋರ್‌ನಲ್ಲಿ ನಡೆಯುವ ಮೂರನೇ ಟೆಸ್ಟ್ ವೇಳೆಗೆ ಅವರು ತಂಡವನ್ನು ಸೇರಿಕೊಳ್ಳುವರು ಎಂದು ನಿರೀಕ್ಷಿಸಲಾಗಿತ್ತು. ಅವರ ಅನುಪಸ್ಥಿತಿಯಲ್ಲಿ ಸ್ಟೀವ್ ಸ್ಮಿತ್ ತಂಡವನ್ನು ಮುನ್ನಡೆಸಲಿದ್ದಾರೆ.

ಆಲ್‌ರೌಂಡರ್ ಕೆಮರಾನ್ ಗ್ರೀನ್ ಸಂಪೂರ್ಣ ಫಿಟ್ ಆಗಿದ್ದು, ಮೂರನೇ ಟೆಸ್ಟ್‌ನಲ್ಲಿ ಆಡುವ ಸಾಧ್ಯತೆಯಿದೆ.

ನವದೆಹಲಿಯಲ್ಲೇ ತಂಗಿರುವ ಆಸ್ಟ್ರೇಲಿಯಾ ತಂಡ ಭಾನುವಾರ ಇಂದೋರ್‌ಗೆ ಪ್ರಯಾಣಿಸಲಿದೆ.

3 ರಂದು ಬಿಟಿಸಿಯಲ್ಲಿ ಗಾಲ್ಫ್ ಟೂರ್ನಿ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಆಶ್ರಯದಲ್ಲಿ ಮಾರ್ಚ್ 3 ರಂದು ಇಂಡಿಯನ್ ಟರ್ಫ್ ಇನ್ವಿಟೇಷನ್ ಕಪ್ ಗಾಲ್ಫ್ ಟೂರ್ನಿ ಆಯೋಜಿಸಲಾಗಿದೆ.

ಮಾರ್ಚ್ 4 ಮತ್ತು 5 ರಂದು ಏರ್ಪಡಿಸಿರುವ ಇಂಡಿಯನ್ ಟರ್ಫ್ ಇನ್ವಿಟೇಷನ್ ಕಪ್ ರೇಸ್ ಅಂಗವಾಗಿ ಈ ಟೂರ್ನಿ ನಡೆಯಲಿದೆ.

ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ನಡೆಯಲಿರುವ ಟೂರ್ನಿಯಲ್ಲಿ ಟರ್ಫ್ ಅಥಾರಿಟಿಗಳು, ನ್ಯಾಷನಲ್ ಹಾರ್ಸ್ ಬ್ರೀಡಿಂಗ್ ಸೊಸೈಟಿ ಆಫ್ ಇಂಡಿಯಾ, ದಿ ಇಂಡಿಯನ್ ರೇಸ್‌ಹಾರ್ಸ್ ಓನರ್ಸ್ ಫೆಡರೇಷನ್, ದಿ ಟ್ರೇನರ್ಸ್ ಫೆಡರೇಷನ್ ಆಫ್ ಇಂಡಿಯಾ, ದಿ ಜಾಕಿಸ್ ಅಸೋಸಿಯೇಷನ್ ಆಫ್ ಇಂಡಿಯಾದ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ ಸಂಘಟಕ ಕೆ.ಉದಯ್ ಈಶ್ವರನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರೈಮ್ ವಾಲಿಬಾಲ್: ಕ್ಯಾಲಿಕಟ್‌ಗೆ ಜಯ

ಕೊಚ್ಚಿ: ಕ್ಯಾಲಿಕಟ್ ಹೀರೋಸ್ ತಂಡದವರು ಇಲ್ಲಿ ನಡೆಯುತ್ತಿರುವ ಪ್ರೈಮ್ ವಾಲಿಬಾಲ್ ಲೀಗ್‌ನಲ್ಲಿ ಗೆದ್ದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಹೀರೋಸ್ ತಂಡ 13–15, 15–8, 15–14, 15–13, 8–15 ರಲ್ಲಿ ಚೆನ್ನೈ ಬ್ಲಿಟ್ಜ್ ತಂಡವನ್ನು ಮಣಿಸಿತು.

ಮಹಿಳಾ ಟಿ20 ವಿಶ್ವಕಪ್: ಇಂಗ್ಲೆಂಡ್ ತಂಡಕ್ಕೆ ಆಘಾತ

ಫೈನಲ್‌ಗೆ ದಕ್ಷಿಣ ಆಫ್ರಿಕಾ ವನಿತೆಯರು

ಕೇಪ್‌ಟೌನ್ (ಪಿಟಿಐ): ಶಬ್ನಿಮ್ ಇಸ್ಮಾಯಿಲ್ ಹಾಗೂ ಅಯಾಬೊಂಗಾ ಕಾಕಾ ಅವರ ಅಮೋಘ ಬೌಲಿಂಗ್‌ನಿಂದಾಗಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ಇದೇ ಮೊದಲ ಬಾರಿ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯ ಫೈನಲ್‌ಗೆ ಲಗ್ಗೆಯಿಟ್ಟಿತು.

ನ್ಯೂಲ್ಯಾಂಡ್ಸ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಸೆಮಿಫೈನಲ್‌ನಲ್ಲಿ ಆತಿಥೇಯ ಬಳಗವು 6 ವಿಕೆಟ್‌ಗಳಿಂದ ಇಂಗ್ಲೆಂಡ್ ಎದುರು ಜಯಿಸಿತು. ಶಬ್ನಿಮ್ ಮೂರು ಹಾಗೂ ಅಯಾಬೊಂಗಾ ನಾಲ್ಕು ವಿಕೆಟ್ ಗಳಿಸಿದರು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಜೋಡಿ ವೋಲ್ವಾರ್ಡ್ (53; 44ಎ) ಹಾಗೂ ತಜ್ಮಿನ್ ಬ್ರಿಟ್ಸ್ (68; 55ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 96 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 164 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಡೇನಿಲ್ ವೈಟ್ (34) ಹಾಗೂ ಸೋಫಿ ಡಂಕ್ಲಿ (28) ಅವರು ಉತ್ತಮ ಆರಂಭ ನೀಡಿದರು. ಆದರೆ, ಶಿಸ್ತಿನ ಬೌಲಿಂಗ್ ಮಾಡಿದ ಆತಿಥೇಯ ಬೌಲರ್‌ಗಳು ಸೂಕ್ತ ಸಮಯಕ್ಕೆ ಜೊತೆಯಾಟಗಳನ್ನು ಮುರಿದರು. ಇದರಿಂದಾಗಿ ಇಂಗ್ಲೆಂಡ್ 20 ಓವರ್‌ಗಳಲ್ಲಿ 8ಕ್ಕೆ158 ರನ್ ಮಾತ್ರ ಗಳಿಸಿತು. ಫೈನಲ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವು ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ಸೆಮಿಫೈನಲ್‌ನಲ್ಲಿ ಗೆದ್ದ ದಕ್ಷಿಣ ಆಫ್ರಿಕಾ ಆಟಗಾರ್ತಿಯರ ಸಂಭ್ರಮ–ಎಎಫ್‌ಪಿ ಚಿತ್ರ

ಚೆಸ್: ಇನಿಯನ್ ಚಾಂಪಿಯನ್

ನೊಯಿಸಿಲ್, ಫ್ರಾನ್ಸ್ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಪಿ. ಇನಿಯನ್ ಅವರು ನೊಯಿಸೆಲ್ ಓಪನ್ ಇಂಟರ್‌ನ್ಯಾಷನಲ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಇಲ್ಲಿ ನಡೆದ ಟೂರ್ನಿಯುದ್ದಕ್ಕೂ ಅಜೇಯರಾಗುಳಿದ 20 ವರ್ಷದ ಇನಿಯನ್, ಒಂಬತ್ತು ಸುತ್ತುಗಳಲ್ಲಿ ಏಳು ಪಾಯಿಂಟ್ಸ್ ಗಳಿಸಿ ಅಗ್ರಸ್ಥಾನ ತಮ್ಮದಾಗಿಸಿಕೊಂಡರು. ಐದು ಪಂದ್ಯಗಳಲ್ಲಿ ಜಯ ಮತ್ತು ನಾಲ್ಕರಲ್ಲಿ ಡ್ರಾ ಸಾಧಿಸಿದರು.

ಎಂಟು ಸುತ್ತುಗಳ ಬಳಿಕ ಇನಿಯನ್ ಮತ್ತು ಭಾರತದವರೇ ಆದ ಎನ್.ಆರ್. ವಿಘ್ನೇಶ್ ಸಮಾನ ಅಂಕ ಗಳಿಸಿದ್ದರು. ಕೊನೆಯ ಸುತ್ತಿನಲ್ಲಿ ಇನಿಯನ್ ಅವರು ನಾರ್ತ್ ಮೆಸಿಡೋನಿಯಾದ ಟೋನಿ ಲಾಜೊವ್ ಎದುರು ಡ್ರಾ ಮಾಡಿಕೊಂಡರು. ಆದರೆ 25 ವರ್ಷದ ವಿಘ್ನೇಶ್ ನಾರ್ವೆಯ ಅಲೆಕ್ಸಾಂಡರ್ ಒಯೆ ಸ್ಟ್ರಾಂಬರ್ಗ್ ಎದುರು ಸೋತರು.

ನಾಳೆಯಿಂದ ಐಟಿಎಫ್ ಟೆನಿಸ್ ಕರ್ಮನ್ ಕೌರ್, ಅಂಕಿತಾ ಕಣಕ್ಕೆ

ಬೆಂಗಳೂರು: ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಪ್ರಮುಖ ಆಟಗಾರ್ತಿಯರಾದ ಅಂಕಿತಾ ರೈನಾ ಮತ್ತು ಕರ್ಮನ್‌ಕೌರ್ ಥಂಡಿ ಅವರು ಫೆಬ್ರುವರಿ 26ರಿಂದ ಇಲ್ಲಿ ನಡೆಯಲಿರುವ ಐಟಿಎಫ್ ಮಹಿಳಾ 25ಕೆ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಅಖಿಲ ಭಾರತ ಟೆನಿಸ್ ಸಂಸ್ಥೆ (ಎಐಟಿಎ) ಮತ್ತು ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಗಳ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ಐಸಿಐಸಿಐ ಲೊಂಬಾರ್ಡ್, ರೇವಾ ವಿಶ್ವವಿದ್ಯಾಲಯ ಮತ್ತು ರೆನಾಲ್ಟ್ ಪ್ರಾಯೋಜಕತ್ವದಲ್ಲಿ ಮಾರ್ಚ್ 5ರವರೆಗೆ ಪಡುಕೋಣೆ–ದ್ರಾವಿಡ್ ಸ್ಪೋರ್ಟ್ಸ್ ಎಕ್ಸ್‌ಲೆನ್ಸ್ ಕೇಂದ್ರದಲ್ಲಿ ಟೂರ್ನಿ ನಡೆಯಲಿದೆ.

ಅಂಕಿತಾ, ಕರ್ಮನ್ ಕೌರ್ ಅವರೊಂದಿಗೆ ಸಹಜಾ ಯಮಲಪಲ್ಲಿ ಮತ್ತು ಸೋಹಾ ಸಾದಿಕ್ ಕೂಡ ಸ್ಪರ್ಧಿಸಲಿದ್ದಾರೆ. ಫೆ.26ರಿಂದ ಅರ್ಹತಾ ಸುತ್ತಿನ ಪಂದ್ಯಗಳು ನಡೆಯಲಿದ್ದು, 28ರಿಂದ ಮುಖ್ಯ ಸುತ್ತಿನ ಪಂದ್ಯಗಳು ಆಯೋಜನೆಯಾಗಿವೆ.

'ಪಡುಕೋಣೆ–ದ್ರಾವಿಡ್ ಸ್ಪೋರ್ಟ್ಸ್ ಎಕ್ಸ್‌ಲೆನ್ಸ್ ಕೇಂದ್ರವು ಅತ್ಯುತ್ತಮ ಸೌಲಭ್ಯಗಳನ್ನು ಹೊಂದಿದ್ದು, ಟೂರ್ನಿಯಲ್ಲಿ ಭಾಗಿಯಾದವರಿಗೆ ಉತ್ತಮ ಅನುಭವ ನೀಡಲಿದೆ' ಎಂದು ಕೆಎಸ್‌ಎಲ್‌ಟಿಎ ಗೌರವ ಕಾರ್ಯದರ್ಶಿ ಮಹೇಶ್ವರ ರಾವ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಂಬೈ ರೇಸ್

ಥನ್‌ಬರ್ಗ್ ಗೆಲ್ಲುವ ನಿರೀಕ್ಷೆ

ಕುಮಾರ್ ಆರ್. ದಲಾಲ್ ಗೋಲ್ಡ್ ಟ್ರೋಫಿ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಥನ್‌ಬರ್ಗ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 5.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬಿಯಾಂಡ್ ಟ್ರೆಷರ್ 1, ಮೈಟಿ ವಿಂಗ್ಸ್ 2, ಆಂಬರ್ ನೈಟ್ 3
2ನೇ ರೇಸ್: ಕ್ರಿಸ್ಟೋಫ್ಲ್ 2, ರಷ್ 8, ಯಾವರ್ 6
3ನೇ ರೇಸ್: ಆಲ್ವಾಗಿನಿ 2, ಕೀ ಟು ದಿ ಮಿಂಟ್ 1, ಕ್ಯಾಂಪೇನ್ 6
4ನೇ ರೇಸ್: ಥನ್‌ಬರ್ಗ್ 4, ಗೋಲ್ಡನ್ ನೀಲ್ 2, ರಫೆಲ್ಲೋ 3
5ನೇ ರೇಸ್: ಮ್ಯಾಜಿಲೆಟೊ 1, ಗ್ರೇಟ್ ಗನ್ಸ್ 2, ಸಿಫರ್ 5
6ನೇ ರೇಸ್: ಸಿಂಗರ್ ಸಾರ್ಜೆಂಟ್ 2, ಬ್ಯಾಲೆನ್ಸಿಯಾಗ 4, ಫೆನಮ್ 1
7ನೇ ರೇಸ್: ಜ್ಯೂಕೋರ್ 6, ಪವರ್ ಆಫ್ ನೀತ್ 1, ಪವರ್ ಆಫ್ ಬ್ಲೆಸ್ಸಿಂಗ್ಸ್ 8

ಉತ್ತಮ ಬೆಟ್: ಮ್ಯಾಜಿಲೆಟೊ

ಜಾಕ್‌ಪಾಟ್ 3,4,5,6,7 ಟ್ರಿಬಲ್ 4,5,6